ವಿಷಕನ್ಯೆಯ ವಿಚಾರ ತಮಗೆ ಗೊತ್ತಾಗುತ್ತದೆ. ಆಮೇಲೆ ನೀವು ನನ್ನನ್ನು ನೆನಸಿಕೊಳ್ಳುತ್ತೀರಿ, ನನ್ನ ಮಾತು ಮುಗಿಸುತ್ತೇನೆ.

**ಉಪಾಧ್ಯಕ್ಷರು** : ಈಗ ಸದನವನ್ನು ಮಧ್ಯಾಹ್ನ 3-00 ಗಂಟೆವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2-00 ಗಂಟೆಗೆ ಮುಂದೂಡಲ್ಪಟ್ಟು ಮಧ್ಯಾಹ್ನ 3-00 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಿತು.)**

**ವಿಶ್ವಾಸ ಮತ ಕೋರುವ ಪ್ರಸ್ತಾವ**

**"ಈ ಸದನವು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತ ಪಡಿಸುತ್ತದೆ" (ಚರ್ಚೆಯು ಮುಂ.)**

**(ಸಭೆಯು ಪುನಃ ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)**

**ಅಧ್ಯಕ್ಷರು** : ಮಾನ್ಯ ಈಶ್ವರಪ್ಪನವರು ಇದ್ದಾರೆಯೇ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ನಾನು ಈ ಕಡೆ ಇದ್ದೇನೆ.

**ಅಧ್ಯಕ್ಷರು** : ಮಾನ್ಯ ಈಶ್ವರಪ್ಪನವರೆ, ತಾವು ದಯಮಾಡಿ ಮಾತನಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ತಾವು ಆ ಕಡೆಗೆ ಹುಡುಕುತ್ತಿದ್ದೀರಿ. ನಾನು ಈ ಕಡೆ ಇದ್ದೇನೆ.

**ಅಧ್ಯಕ್ಷರು** : ಆ ತರಹ ಏನೂ ಇಲ್ಲ, ನಾನು ಈ ಕಡೆ ಹುಡುಕಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಸ್ವಲ್ಪ ದಿವಸಗಳಾದ ಮೇಲೆ ಅಭ್ಯಾಸವಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ)** : ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಬಹುಮತವನ್ನು ಸಾಬೀತು ಮಾಡುವಂತಹ ಈ ಸಂದರ್ಭದಲ್ಲಿ ಅವರು ಮಂಡನೆ ಮಾಡಿರುವಂತಹ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ಸೂಚಿಸುತ್ತಾ, ಕರ್ನಾಟಕ ರಾಜ್ಯದಲ್ಲಿ ಬಿಜೆಪಿ-ಜೆಡಿ (ಎಸ್)ನ ಸರ್ಕಾರ ರಾಜ್ಯದ ಜನತೆಗೆ ಸುಖಸಂವೃದ್ಧಿಯನ್ನು ನೀಡಲೆಂದು ಶುಭಾಶಯಗಳನ್ನು ಹೇಳುತ್ತಾ ಸನ್ಮಾನ್ಯ ಕುಮಾರಸ್ವಾಮಿಯವರು ಹಾಗೂ ಸನ್ಮಾನ್ಯ ಯಡಿಯೂರಪ್ಪನವರು ಅನೇಕ ವರ್ಷಗಳಿಂದ ಈ ರಾಜ್ಯದ ರೈತರು, ಕೃಷಿ ಕಾರ್ಮಿಕರು ಬಡವರು ಹಿಂದುಳಿದ ವರ್ಗದವರು ಪರಿಶಿಷ್ಟ ಜಾತಿಯವರು ಇವರೆಲ್ಲರ ಏಳಿಗೆಯಾಗಬೇಕೆಂದು ಏನು ಕನಸನ್ನು ಕಂಡಿದ್ದರೋ ಆ ಕನಸು ನನಸಾಗಲಿ ಎಂದು ಭಗವಂತನಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ವಿಶೇಷವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ರಾಜ್ಯದ ಜನರ ಸೇವೆ ಮಾಡುವುದಕ್ಕೆ ಹೊರಟಿರುವಂತಹ ಸಂದರ್ಭದಲ್ಲಿ ಭಾರತೀಯ ಜನತಾಪಕ್ಷದ ಪರವಾಗಿ ಈ ರಾಜ್ಯದ ಕೋಟಿ ಕೋಟಿ ಬಿಜೆಪಿ ಅಭಿಮಾನಿಗಳ ಕನಸು ಇವತ್ತು ನನಸಾಗುತ್ತಿದೆ ಎಂದು ನಾನು ಭಾವಿಸುತ್ತೇನೆ. ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಅಧಿಕಾರವನ್ನು ಪಡೆಯಬೇಕೆನ್ನುವಂತಹ ಪ್ರಯತ್ನ ಇವತ್ತು ಮತ್ತು ನಿನ್ನೆಯದಲ್ಲ. ಈ ರಾಜ್ಯದ ಬಿಜೆಪಿಯ ಅನೇಕ ಹಿರಿಯರು ಒಂದು ರೀತಿಯ ತಪಸ್ಸನ್ನು ಮಾಡಿದ್ದಾರೆನ್ನುವಂತಹ ಮಾತನ್ನು

ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿರಿಯರಾದ ಸನ್ಮಾನ್ಯ ದಿವಂಗತ ಜಗನ್ನಾಥರಾವ್ ಜೋಷಿಯವರು ಇರಬಹುದು, ದಿವಂಗತ ದೇಶಪಾಂಡೆಯವರು ಇರಬಹುದು.

**ಶ್ರೀ ಬಸವರಾಜ ರಾಯರೆಡ್ಡಿ** : ಮಾನ್ಯ ಈಶ್ವರಪ್ಪನವರೆ, ಬಾಬುರಾವ್ ದೇಶಪಾಂಡೆ ಎಂದು ಹೇಳಿ. ಏಕೆಂದರೆ ನಮ್ಮ ದೇಶಪಾಂಡೆಯವರು ಇದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ** : ನಾನು ದಿವಂಗತ ಎಂದು ಹೇಳಿದೆ. ದಿವಂಗತ ಬಾಬುರಾವ್ ದೇಶಪಾಂಡೆಯವರು ಅನೇಕ ಹಿರಿಯರು ಒಂದು ಗ್ರಾಮಪಂಚಾಯಿತಿ ಸೀಟನ್ನು ನಾವು ಗೆಲ್ಲುವುದಕ್ಕೆ ಸಾಧ್ಯವೇ ಇಲ್ಲವೆಂದು ಗೊತ್ತಿದ್ದರೂ ಕೂಡ ಅಂದಿನಿಂದಲೇ ಈ ಪಕ್ಷದ ವಿಚಾರವನ್ನು ಸಿದ್ಧಾಂತವನ್ನು ಇಟ್ಟು ಕೊಂಡು ಅವರು ಮಾಡಿರುವಂತಹ ತಪಸ್ಸು ನನಗನ್ನಿಸುತ್ತದೆ ಇವತ್ತು ಕೈಗೂಡುತ್ತಿದೆ. ವಿಶೇಷವಾಗಿ ನಮ್ಮನ್ನೆಲ್ಲಾ ಬೆಳೆಸಿದಂತಹ ಸಂಘ ಪರಿವಾರದ ಹಿರಿಯರು ಈ ರಾಜ್ಯದ ಜನತೆಗೆ ತುಂಬಾ ಒಳ್ಳೆಯದನ್ನು ಮಾಡಲಿ, ಎಂಬ ಅಪೇಕ್ಷೆಯನ್ನು ಮಾತ್ರ ಇಟ್ಟುಕೊಂಡು ಅವರೂ ಕೂಡ ತಪಸ್ಸು ಮಾಡಿದ್ದಾರೆ. ಅದರ ಫಲದಿಂದ ನಾವು ಇವತ್ತು ಈ ರಾಜ್ಯದ ಚುಕ್ಕಾಣಿಯನ್ನು ಹಿಡಿಯುತ್ತಿದ್ದೇವೆ. ಈ ವಿಧಾನಸೌಧ ಕೇವಲ ಮಣ್ಣು, ಇಟ್ಟಿಗೆ ಸಿಮೆಂಟ್, ಕಲ್ಲುಗಳ ಒಂದು ಕಟ್ಟಡವಲ್ಲ. ಇದು ಪ್ರಜಾಪ್ರಭುತ್ವದ ದೇವಾಲಯ , ಇಲ್ಲಿಗೆ ಬರುವಂತಹ ಸಂದರ್ಭದಲ್ಲಿ ನಮ್ಮ ಎಲ್ಲಾ ಕೆಟ್ಟನಡತೆಗಳನ್ನು ದೂರವಿಟ್ಟು ಬರಬೇಕಾಗುತ್ತದೆ. ಯಾವ ರೀತಿಯಾಗಿ ದೇವಸ್ಥಾನಕ್ಕೆ ಒಳಗೆ ಹೋಗುವಂತಹ ಸಂದರ್ಭದಲ್ಲಿ ಚಪ್ಪಲಿಯನ್ನು ಹೊರಗಡೆ ಬಿಟ್ಟು ದೇವರದರ್ಶನಕ್ಕೆ ಹೋಗಿ ಈ ಸಮಾಜ, ಈ ನಾಡು ಅಭಿವೃದ್ಧಿಯಾಗಬೇಕೆಂದು ದೇವರಲ್ಲಿ ಯಾವ ರೀತಿಯಾಗಿ ಪ್ರಾರ್ಥನೆಯನ್ನು ಮಾಡುತ್ತೇವೋ, ಆ ಪ್ರಾರ್ಥನೆ ಕಾರ್ಯಗತವಾಗುವುದು ಈ ಒಂದು ಪ್ರಜಾಪ್ರಭುತ್ವದ ದೇವಾಲಯದ ಮುಖಾಂತರ. ಈ ನಾಡಿನ ಜನ ಕರ್ನಾಟಕ ರಾಜ್ಯದಲ್ಲಿ ಇವತ್ತು ಏನು ಆಗುತ್ತಿದೆ ಎಂದು ಬಹು ಕುತೂಹಲದಿಂದ ನೋಡುತ್ತಿದ್ದಾರೆ. ಮೊನ್ನೆ ಸನ್ಮಾನ್ಯ ನಮ್ಮ ಹಿರಿಯ ರಾಜಕಾರಣಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಧರ್ಮಸಿಂಗ್‌ರವರು ವಿಶ್ವಾಸಮತವನ್ನು ಕೇಳುವಂತಹ ದಿವಸ ಕೂಡ ಇಡೀ ರಾಜ್ಯದ ಜನರು ನೋಡಿದರು. ಅವತ್ತು ನಡೆದಂತಹ ಘಟನೆ ಎಲ್ಲರೂ ಟಿ.ವಿ.ಗಳ ಮುಖಾಂತರ ಏನು ನಾವು ಈ ರಾಜ್ಯದಲ್ಲಿ ಮಾಡುತ್ತಿದ್ದೇವೆ. ನಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿದಂತಹ ಮತದಾರರು ನಾವು ಏನು ಮಾಡುತ್ತಿದ್ದೇವೆನ್ನುವಂತಹದ್ದನ್ನು ಬೆಳಿಗ್ಗೆಯಿಂದ ರಾತ್ರಿಯ ತನಕವೂ ಕೂಡ ಜನರು ಕಣ್ತುಂಬ ನೋಡಿದರು. ವಿರೋಧ ಪಕ್ಷದಲ್ಲಿರುವಂತಹ ಸಂದರ್ಭದಲ್ಲಿ ನಡೆದುಕೊಳ್ಳುವಂತಹ ರೀತಿ ಆಡಳಿತ ಪಕ್ಷದಲ್ಲಿರುವಂತಹ ಸಂದರ್ಭದಲ್ಲಿ ನಡೆದುಕೊಳ್ಳುವಂತಹ ರೀತಿಯನ್ನು ಕೂಡ ಈ ರಾಜ್ಯದ ಜನರು ಗಮನಿಸಿದರು. ಹೊಸ ಶಾಸಕರು ವಿಶೇಷವಾಗಿ ಯುವಕರನ್ನು ಈ ರಾಜ್ಯದ ಜನರು ಆರಿಸಿ ಕಳುಹಿಸಿಕೊಟ್ಟಿದ್ದಾರೆ. ಹಿರಿಯರ ಮಾರ್ಗದರ್ಶನ, ಹೊಸ ಯುವಕರ ಉತ್ಸಾಹ ಇದು ಈ ರಾಜ್ಯಕ್ಕೆ ಒಂದು ಒಳ್ಳೆಯ ಸಂಪೃದ್ಧಿಯ ಬಾಳನ್ನು ತರಲಿ ಎಂದು ಆಸೆಯಿಂದ ಕಳುಹಿಸಿಕೊಟ್ಟರು. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಧರ್ಮಸಿಂಗ್‌ರವರು, ವಿಶ್ವಾಸಮತವನ್ನು ಯಾಚಿಸುವಂತಹ ಸಂದರ್ಭದಲ್ಲಿ ಅನೇಕ ಹಿರಿಯ ರಾಜಕಾರಣಿಗಳು ಯಾವ ಯುವಕರು ಇಲ್ಲಿಗೆ ಆರಿಸಿ ಬಂದು ಪ್ರಜಾಪ್ರಭುತ್ವದ ಘನತೆ, ಗೌರವವನ್ನು ಅರ್ಥಮಾಡಿಕೊಂಡು ಅದರ ಮುಖಾಂತರ ತಮ್ಮನ್ನು ಗೆಲ್ಲಿಸಿದಂತಹ ಹಳ್ಳಿಗಾಡಿನ ಜನಗಳಿಗೆ ಅನುಕೂಲ ಮಾಡಿಕೊಡಬೇಕು ಇಲ್ಲಿ ವಿಧಾನಸಭೆಯಲ್ಲಿ ಅನೇಕ ವರ್ಷಗಳಿಂದ ಗೆದ್ದು ಬಂದಿರುವಂತಹವರು ಅವರುಗಳು ಹೇಗೆ

ನಡೆಯುತ್ತಾರೆ, ಅವರು ಯಾವ ರೀತಿಯಾಗಿ ಹೆಜ್ಜೆಯನ್ನು ಹಾಕುತ್ತಾರೆ, ಆ ಹೆಜ್ಜೆಯಲ್ಲಿ ನಾವು ಕೂಡ ಇಡಬೇಕು ರಾಜಕಾರಣಿಗಳಾಗಬೇಕು ಎನ್ನುವಂತಹ ಅಪೇಕ್ಷೆಯಿಂದ ಇಲ್ಲಿಗೆ ಆರಿಸಿ ಬಂದರು. ಮಾನ್ಯ ಅಧ್ಯಕ್ಷರೆ, ನಾನು ತುಂಬಾ ನೊಂದು ಹೇಳುತ್ತೇನೆ, ಯಾವ ಕಾಂಗ್ರೆಸ್ ಈ ದೇಶಕ್ಕೆ ಸ್ವತಂತ್ರವನ್ನು ತಂದುಕೊಟ್ಟಿತೋ ಯಾವ ಕಾಂಗ್ರೆಸ್ಸಿನ ನಾಯಕರೆನಿಸಿಕೊಂಡಂತಹ ಸರ್ದಾರ್ ವಲ್ಲಭಬಾಯಿ ಪಟೇಲ್, ಸ್ವಾತಂತ್ರ್ಯವೀರ ಸಾವರ್‌ಕರ್, ಸುಭಾಷ್ ಚಂದ್ರಬೋಸ್ ಅವರೆಲ್ಲರ ಕನಸು ಏನಿತ್ತು ಅವರು ಮೊನ್ನೆ ಈ ಒಂದು ವಿಧಾನಮಂಡಲದಲ್ಲಿ ನಡೆದಂತಹ ಘಟನೆಗಳನ್ನು ನೋಡಿದ್ದರೆ ಏತಕ್ಕೋಸ್ಕರ ಈ ದೇಶಕ್ಕೆ ಸ್ವತಂತ್ರವನ್ನು ತಂದು ಕೊಟ್ಟೆವೋ ಎಂದು ಹೇಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೇನೋ ಎಂಬ ಅನುಮಾನ ನನಗೆ ಬರುತ್ತಿದೆ. ಬಹುಮತ ಪಡೆದಿರುವಂತಹ ಪಕ್ಷಗಳಿಗೆ ನಿಮಗೆ ಆಡಳಿತ ನಡೆಸುವುದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲವೆನ್ನುವಂತಹ ಒಂದು ತರಹ ಡಿಕ್ಟೇಟರ್‌ಶಿಪ್ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಎನ್ನುವಂತಹ ಭಾವನೆ ಕೇವಲ ಈ ವಿಧಾನಮಂಡಲಕ್ಕೆ ಹೊಸದಾಗಿ ಗೆದ್ದು ಬಂದಿರುವಂತಹ ಶಾಸಕರು ಮಾತ್ರ ಅರ್ಥಮಾಡಿಕೊಂಡಿಲ್ಲ ಇಡೀ ಕರ್ನಾಟಕ ರಾಜ್ಯದ ಜನ ಈ ವ್ಯವಸ್ಥೆಯನ್ನೇ ಗಾಳಿಗೆ ತೂರಿ ಪ್ರಜಾಪ್ರಭುತ್ವಕ್ಕೆ ಅಪಮಾನವಾಗುವಂತಹ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ನಡೆಯಿತಲ್ಲಾ, ಅದು ಕಾಂಗ್ರೆಸ್ಸೋ ಇದು ಕಾಂಗ್ರೆಸ್ಸೋ ಎನ್ನುವಂತಹ ಅನುಮಾನ ಈ ರಾಜ್ಯದ ಜನರಲ್ಲಿ ಮೂಡುವಂತಹ ರೀತಿಯಲ್ಲಿ ವಿಧಾನಮಂಡಲದಲ್ಲಿ ಘಟನೆಯು ನಡೆದುಹೋಯಿತು. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಆಡಳಿತ ನಡೆಸಿರುವಂತಹ ಪಕ್ಷದ ಮಂತ್ರಿಗಳು, ಬಾವಿಗೆ ಬಿದ್ದು ಧರಣಿಗೆ ಹೋಗಿದ್ದು, ಇದು ಮೊದಲನೆಯ ಬಾರಿ. ಇದರ ಬಗ್ಗೆ ನನಗನ್ನಿಸುತ್ತದೆ ಇನ್ನೊಮ್ಮೆ ಈ ವಿಧಾನಸೌಧ ಇರುವ ತನಕವೂ ಕೂಡ ಈ ರೀತಿಯ ಘಟನೆಗಳು ಆಗದೆ ಇರುವಂತಹ ರೀತಿಯಲ್ಲಿ ಈ ಕಾಂಗ್ರೆಸಿಗರು ನಡತೆಯನ್ನು ಬದಲಾವಣೆ ಮಾಡಬೇಕೆಂಬ ಪ್ರಾರ್ಥನೆಯನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಕಾಂಗ್ರೆಸ್ಸಿನ ಆಡಳಿತ ಪಕ್ಷದವರು ಧರಣಿಯನ್ನು ಮಾಡುವುದು ಹೊಸದಲ್ಲ. ಆಡಳಿತವನ್ನು ಯಾವ ರೀತಿಯಾಗಿ ನಡೆಸಿದ್ದಾರೋ, ಆಡಳಿತ ಪಕ್ಷದ ಸದಸ್ಯರು ಮುಖ್ಯಮಂತ್ರಿಗಳ ವಿರುದ್ಧ ಧರಣಿ ಮಾಡುವಂತಹ ಅಭ್ಯಾಸ ಕಾಂಗ್ರೆಸಿನವರಿಗೆ ಮುಂಚೆನಿಂದಲೂ ಇದೆ, ಅದು ಇವತ್ತಿನದಲ್ಲ. ಹಿಂದೆ 77 ಜನ ಶಾಸಕರು ಸನ್ಮಾನ್ಯ ವೀರಪ್ಪಮೊಯ್ಲಿಯವರ ವಿರುದ್ಧ ಧರಣಿಯನ್ನು ಕುಳಿತರು. ಹೀಗಾಗಿ ಇವತ್ತು ಈ ರಾಜ್ಯದ ಪ್ರಜಾಪ್ರಭುತ್ವದ ದೇವಾಲಯದಲ್ಲಿ ಜನತೆಯ ಆಪೇಕ್ಷೆಗೆ ತಕ್ಕಂತೆ ಬರುವಂತಹ ದಿನಗಳಲ್ಲಿ ನಡೆದುಕೊಳ್ಳಬೇಕೆನ್ನುವಂತಹ ಪ್ರಾರ್ಥನೆಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಕಾಂಗ್ರೆಸ್‌ನವರಿಗೆ ಅವರ ಅಪೇಕ್ಷೆಗೆ ತಕ್ಕಂತೆ ಒಂದು ಆಶಯ ಸಿಗಲಿ ಅವರಿಗೆ ಯಶಸ್ವಿಯಾಗಲೆಂದು ಹಾರೈಸುತ್ತೇನೆ. ಕಾಂಗ್ರೆಸ್ ಶಾಸಕರು ಇಷ್ಟು ದಿನಗಳು ಧರಣಿ ಕುಳಿತುಕೊಳ್ಳುವುದು ಮರೆತುಹೋಗಿತ್ತು. ಇನ್ನು ಅಜೀವಪರ್ಯಂತ ನೀವು ಇದೇ ಧರಣಿಯನ್ನು ಮುಂದುವರೆಸುವಂತಹ ವಿರೋಧ ಪಕ್ಷದಲ್ಲಿ ಕೂರುವಂತಹ ಅವಕಾಶವನ್ನು ಭಗವಂತ ನಿಮಗೆ ಕಲ್ಪಿಸಿಕೊಡಲೆಂದು ಪ್ರಾರ್ಥನೆ ಮಾಡುತ್ತೇನೆ. ಏತಕ್ಕಾಗಿ ಧರ್ಮಸಿಂಗ್‌ರವರನ್ನು ಇಳಿಸಿದಿರಿ? ಧರ್ಮಸಿಂಗ್‌ರವರು ಏನು ತಪ್ಪನ್ನು ಮಾಡಿದ್ದರು ಎಂಬ ಮಾತನ್ನು ಹೇಳಿದರು. ನಾವೇ ಧರಂಸಿಂಗ್‌ರವರ ಸರ್ಕಾರವನ್ನು ಇಳಿಸಿದ್ದೇವೆಂದು ಕಾಂಗ್ರೆಸ್ಸಿನ ಯುವ ನಾಯಕರೆಂದು ಹೇಳಿಕೊಂಡಿರುವ ಮಾನ್ಯ ಡಿ.ಕೆ. ಶಿವಕುಮಾರ್ ಅವರು, ಧರಂಸಿಂಗ್‌ರವರನ್ನು ನಾಯಕತ್ವದಿಂದ ಇಳಿಸಿದ್ದರಿಂದ ಇಡೀ ರಾಜ್ಯದ ಕಾಂಗ್ರೆಸ್‌ನವರು

ಯಶಸ್ವಿಯಾಗಿ ಸಂತೋಷಪಟ್ಟಿದ್ದಾರೆಂದು ಹೇಳಿದರು. ನೀವೊಬ್ಬರೇ ಹೇಳಿದ ಮಾತಲ್ಲ ಇದು, ನಿಮ್ಮ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾಗಿ ಹೊಸದಾಗಿ ನೇಮಕವಾದ ಸನ್ಮಾನ್ಯ ಹರಿಪ್ರಸಾದ್‌ರವರು ಹೇಳಿದ್ದಾರೆ.

**ಶ್ರೀ ಡಿ.ಕೆ. ಶಿವಕುಮಾರ್** : ನಿಮ್ಮ ಸಹವಾಸ ಸಾಕು ಎಂದು ನಮ್ಮ ಕಾರ್ಯಕರ್ತರು ಕಾಯುತ್ತಿದ್ದರು, ಅದಕ್ಕೆ ಸಾಕಾಗಿತ್ತು.

**ಶ್ರೀ ಕೆ.ಎಸ್. ಈಶ್ವರಪ್ಪ** : ನಿಮ್ಮ ಕಾರ್ಯಕರ್ತರು ಜೆಡಿ(ಸ್) ಸಹವಾಸ ಸಾಕಾಗಿತ್ತು ಎಂದು ಹೇಳಿದ್ದಕ್ಕೆ ವಾಪಸ್ಸು ತೆಗೆದುಕೊಂಡಿದ್ದೀರಾ?

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಈಶ್ವರಪ್ಪನವರೆ, ಈಗಲೇ ನೀರು ಕುಡಿಯುತ್ತಿದ್ದೀರಿ, ಇನ್ನೂ ಸ್ವಲ್ಪ ಜಾಸ್ತಿ ಕುಡಿಯಿರಿ. ಎರಡು ಗ್ಲಾಸು ಹೆಚ್ಚಿಗೆ ನೀರು ಕುಡಿಯಿರಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ನೀರೂ ಕುಡಿಯುತ್ತೇವೆ. ಅಮೃತವನ್ನು ಕುಡಿಯುತ್ತೇವೆ, ನಿಮಗೆ ವಿಷವನ್ನು ಕುಡಿಸುತ್ತೇವೆ. ಇದರಲ್ಲಿ ಯಾವುದೇ ಅನುಮಾನ ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ** : ನೀವು ಸೋಮರಸವನ್ನು ಕುಡಿಯುತ್ತೀರೆಂಬುದು ನಮಗೆ ಗೊತ್ತು.

**ಶ್ರೀ ಕೆ.ಎಸ್. ಈಶ್ವರಪ್ಪ** : ಖಂಡಿತ ಕುಡಿಯುತ್ತೇವೆ. ನಿಮ್ಮೊಬ್ಬರದೇ ಆಸ್ತಿ ಏನು ಅದು? ಸ್ವಾತಂತ್ರ್ಯ ಬಂದಾಗಿನಿಂದ ನೀವೇ ಕುಡಿದುಕೊಂಡು ಬಂದಿದ್ದೀರಿ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ** : ರೆಸಾರ್ಟ್‌ನಲ್ಲಿ ಸೋಮರಸವನ್ನು ಕುಡಿದಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಶಿವಕುಮಾರ್‌ರವರೇ, ಅವರು ಹೇಳಿದ್ದಕ್ಕೆ ನೀವು ಒಪ್ಪುತ್ತೀರಾ? ಸ್ವಾತಂತ್ರ್ಯ ಬಂದಾಗಿನಿಂದ ನೀವೇ ಕುಡಿದುಕೊಂಡು ಬಂದಿದ್ದೀರಿ.

**ಶ್ರೀ ಡಿ.ಕೆ. ಶಿವಕುಮಾರ್** : ಎದುರಿಗೆ ಮಾನ್ಯ ಚನ್ನಿಗಪ್ಪನವರು ಇದ್ದಾರೆ ಅವರನ್ನೇ ಕೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ಅವರು ಆಗಲೇ ಹೇಳಿದ್ದಾರೆ.

**ಅಧ್ಯಕ್ಷರು** : ಮಾನ್ಯ ಈಶ್ವರಪ್ಪನವರೇ, ಇನ್ನೂ ಬಹಳಷ್ಟು ಜನ ಮಾತನಾಡುವವರಿದ್ದಾರೆ,

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಡಿ.ಕೆ. ಶಿವಕುಮಾರ್ ಮಾತ್ರ ಹೇಳಿದ ಮಾತಲ್ಲ ಇದು, ಇವರ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಯುತ ಹರಿಪ್ರಸಾದ್‌ರವರು ಕೇವಲ ಬಿ.ಜೆ.ಪಿ. ಪಕ್ಷ ಮಾಡಿದ ತಂತ್ರವಲ್ಲ ಇದು, ಕಾಂಗ್ರೆಸ್ ಪಕ್ಷದ ಶಾಸಕರೂ ಕೂಡ ಧರ್ಮಸಿಂಗ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲಿಕ್ಕೆ ಬಹಳ ಪ್ರಯತ್ನವನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಹೀಗಾಗಿ ಈ ಸಂದರ್ಭದಲ್ಲಿ ಧರ್ಮಸಿಂಗ್ ಸರ್ಕಾರವನ್ನು ನೀವು ಏಕೆ ಇಳಿಸುತ್ತೀರಿ ಎಂದು ಕೇಳುವ ನೈತಿಕ ಹಕ್ಕೇ ನಿಮಗಿಲ್ಲ. ನಾವ್ಯಾಕೆ ಸರ್ಕಾರವನ್ನು ಇಳಿಸಿದ್ದೇವೆ. ಮಾನ್ಯ ಅಧ್ಯಕ್ಷರೇ, ನಿಮಗೆ ಗೊತ್ತಿದೆ ಭಾರತೀಯ ವಿಜ್ಞಾನ ಸಂಸ್ಥೆಯ ಜೆ.ಎನ್. ಟಾಟಾ ಸಭಾಂಗಣದಲ್ಲಿ ನಡೆದ ಉಗ್ರಗಾಮಿಗಳ ಧಾಳಿ ಪ್ರಕರಣದಲ್ಲಿ ಉಗ್ರರಿಂದ ಡಾ॥ ಕುರಿಯನ್ ಎಂಬ ವಿಜ್ಞಾನಿಯ ಹತ್ಯೆಯಾಯಿತು, ಹೀಗೆ ಉಗ್ರರಿಂದ ಆಗಿರುವ ಈ ಹತ್ಯೆ ಆಕಸ್ಮಿಕವಲ್ಲ. ಡಿಸೆಂಬರ್ 30ರ ಕನ್ನಡಪ್ರಭ ಹಾಗೂ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ, ಇಷ್ಟೆಲ್ಲಾ ಬೆಳವಣಿಗೆಯ ನಂತರವೂ ಬೆಂಗಳೂರಿನ ಐ.ಐ.ಎಸ್.ಸಿ.ಯ ಮೇಲೆ,

ಅಂತರರಾಷ್ಟ್ರೀಯ ವಿಜ್ಞಾನಿಗಳು ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಉಗ್ರರ ಧಾಳಿ ನಡೆದಿದೆ. ಇದರ ಬಗ್ಗೆ ಕೇಂದ್ರ ಗೃಹ ಸಚಿವಾಲಯ ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ. ಗುಪ್ತಚರ ವೈಫಲ್ಯ ಇಲ್ಲವೆಂದು ರಾಜ್ಯ ಪೊಲೀಸ್ ಇಲಾಖೆ ಬುಧವಾರದಿಂದಲೇ ಹೇಳುತ್ತಾ ಬಂದಿದ್ದರೂ ಐ.ಐ.ಎಸ್.ಸಿ.ಯ ಮೇಲೆ ಭಯೋತ್ಪಾದಕರ ಧಾಳಿ ನಡೆಯಲು ಗುಪ್ತಚರ ಮಾಹಿತಿಯ ಲೋಪವೇ ಕಾರಣವೆಂಬ ತೀರ್ಮಾನಕ್ಕೆ ಕೇಂದ್ರ ಗೃಹಸಚಿವಾಲಯ ಬಂದಿದೆ. ಇಂಟೆಲಿಜೆನ್ಸಿ ಫೇಲ್ಯೂರ್ ಎಷ್ಟರಮಟ್ಟಿಗೆ ಆಗಿದೆಯೆಂಬ ಅಂಶ ಇದರಿಂದ ಕಾಣುತ್ತದೆ. ಕೇವಲ ಮುಖ್ಯಮಂತ್ರಿ ಧರ್ಮಸಿಂಗ್ ಅವರನ್ನು ಇಳಿಸಬೇಕೆಂಬುದರಲ್ಲೇ ಕಾಂಗ್ರೆಸ್ಸಿನವರು ಸಮಯವನ್ನು ವ್ಯರ್ಥ ಮಾಡುತ್ತಾ ಕುಳಿತುಕೊಂಡರು, ತಮ್ಮ ಕುರ್ಚಿಯನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ಪ್ರಯತ್ನದಲ್ಲಿ ಸನ್ಮಾನ್ಯ ಧರ್ಮಸಿಂಗ್ ಅವರು ಒದ್ದಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಗುಪ್ತಚರ ಇಲಾಖೆ ಸಂಪೂರ್ಣವಾಗಿ ವಿಫಲವಾಗಿ ಈ ದೇಶದ ಆಸ್ತಿಯಾದ ವಿಜ್ಞಾನಿಗಳನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ, ಇದನ್ನು ಕಾಂಗ್ರೆಸ್‌ನವರು ಕೊಡುತ್ತಾರೆಯೇ? ಎಷ್ಟರಮಟ್ಟಿಗೆ ಇಂಟೆಲಿಜೆನ್ಸಿ ಫೇಲ್ಯೂರ್ ಆಗುತ್ತದೆನ್ನುವುದಕ್ಕೆ ಇನ್ನೊಂದು ತಾಜಾ ಉದಾಹರಣೆ, ಬಿ.ಜೆ.ಪಿ. ಜೆ.ಡಿ.ಎಸ್. ನಾಯಕರು ಒಟ್ಟೊಟ್ಟಿಗೆ ಮಾತನಾಡಿಕೊಂಡು ಇಲ್ಲಿ ಬಂದು ಸರ್ಕಾರ ರಚನೆ ಮಾಡುತ್ತಿರುವುದು ನಿಮ್ಮ ಇಂಟೆಲಿಜೆನ್ಸ್‌ಗೆ ಗೊತ್ತಿಲ್ಲವಲ್ಲಾ, ಇದನ್ನು ಸರ್ಕಾರವೆಂದು ಕರೆಯಬೇಕೇ? ಏಕೆ ಇಳಿಸಬೇಕೆಂದರೆ ಇದಕ್ಕೇನೆ ರಾಜ್ಯದ ಜನತೆಗೆ ಭದ್ರತೆ ಇಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ** : ಮಧ್ಯಪ್ರದೇಶದ ಗೋದ್ರಾದಲ್ಲಿ.

**ಶ್ರೀ ಕೆ.ಎಸ್. ಈಶ್ವರಪ್ಪ** : XXX

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್‌ನ ಶಾಸಕರು ಎದ್ದು ಒಟ್ಟಿಗೆ ಮಾತನಾಡುತ್ತಿದ್ದರು)

**ಅಧ್ಯಕ್ಷರು** : ಎಲ್ಲರೂ ದಯಮಾಡಿ ಕುಳಿತುಕೊಳ್ಳಿ, ಈ ತರಹವಾದರೆ ನಾನು ಏನೂ ಮಾಡಲಿಕ್ಕಾಗುವುದಿಲ್ಲ. ಈಗ ನಾನು ನಿಂತಿದ್ದೇನೆ. ನೀವೆಲ್ಲಾ ಕುಳಿತುಕೊಳ್ಳುವ ಬದಲು ನಿಂತು ಮಾತನಾಡಿದರೆ ಏನು ಪ್ರಯೋಜನ? ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಈಗ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ ಗಂಭೀರವಾಗಿ ಮಾತನಾಡಿ. ಪಕ್ಷದ ಎಲ್ಲೆಕಟ್ಟು ಮೀರಿ, ಈ ಸಭೆಗೆ ಗೌರವ ಬರುವಂತಹ ರೀತಿಯಲ್ಲಿ ಮಾತನಾಡಿ. ಮಾನ್ಯ ಈಶ್ವರಪ್ಪನವರೇ ನೀವು ಮಾತನಾಡುವಾಗ ನನಗೆ ಅಡ್ರೆಸ್ ಮಾಡಿ ಮಾತನಾಡಿ, ಡೈರೆಕ್ಟಾಗಿ ಮಾತನಾಡಬೇಡಿ, ಭಾಷಣ ಪ್ರಾರಂಭ ಮಾಡಿ ನೀವು ಅವರಿಗೆ ಉತ್ತರ ಕೊಡುವುದು, ಅವರು ನಿಮಗೆ ಉತ್ತರವನ್ನು ಕೊಡುವುದು. ಡೈರೆಕ್ಟಾಗಿ ಪರಸ್ಪರ ಯಾರು ಮಾತನಾಡಬೇಡಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ನನಗೆ ಇರುವ ಸಮಯವೇ ಕಡಿಮೆ, ಅದರಲ್ಲಿ ಇವರು ಅಡ್ಡ ಬಂದರೆ ನಾನು ಹೇಗೆ ಮಾತನಾಡುವುದು.

**ಅಧ್ಯಕ್ಷರು** : ನೋ, ನೀವು ನನಗೆ ಅಡ್ರೆಸ್ ಮಾಡಿ ಮಾತನಾಡಿ, ನೇರವಾಗಿ ನೀವು ಆ ಕಡೆ ನೋಡಿ ಮಾತನಾಡಬೇಡಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಈಶ್ವರಪ್ಪನವರೇ ಮಾತನಾಡಿ.

---

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಈಶ್ವರಪ್ಪನವರು ಈ ಸದನದ ಹಿರಿಯ ಸದಸ್ಯರು, ರಾಜ್ಯದಲ್ಲಿ ಬಿ.ಜೆ.ಪಿ. ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರು ಇಲ್ಲಿಗೆ ಮೂರು ಭಾರಿ ಬಂದಿದ್ದಾರೆ. ಬೇಕಾದಷ್ಟು ಭಾಷಣಗಳನ್ನು ಇಲ್ಲಿ ಮಾಡಿದ್ದಾರೆ. ಅವರು ಈಗ ಇಲ್ಲಿ ಯಾವ ಪದವನ್ನು ಬಳಸಿದ್ದಾರೆ, ಆ ಪದ, ಈ ಅಧಿಕಾರದ ಅಮಲೇನಿದೆಯೆಲ್ಲಾ ಈ ಅಮಲನ್ನು ಕಾಂಗ್ರೆಸ್ಸಿಗರು ತೆಗೆಯುತ್ತಾರೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನೂ ಕೂಡ ಈ ಸವಾಲನ್ನು ಸ್ವೀಕಾರ ಮಾಡುತ್ತೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನೋಡಿ ಈ ಸದನದಲ್ಲಿ ಯಾರು ಏನು ಬೇಕಾದರೂ ಮಾತನಾಡುವಂತಹ ಸದನವಲ್ಲ ಇದು. ಏನು ನಡೆಯುತ್ತಿದೆ ಈ ಸದನದಲ್ಲಿ ಈ ಸದನಕ್ಕೆ ಏನಾದರೂ ಘನತೆ ಗೌರವ ಇದೆಯೋ ಇಲ್ಲವೋ? ಸರ್ ಇದು ಸದನ, ಬಾಯಿಗೆ ಬಂದ ಹಾಗೆ ಯಾರೂ ಮಾತನಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಈ ಸದನದಲ್ಲಿ ಮುಖ್ಯಮಂತ್ರಿಗಳಿದ್ದಾರೆ, ಈ ಮನೆಯ ನಾಯಕರಾಗಿ ಇಂತಹ ಸಂಸ್ಕೃತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಒಪ್ಪುತ್ತಾರೆಯೇ? ಮಾನ್ಯ ಈಶ್ವರಪ್ಪನವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಯಾರೂ ಏನಾದರೂ ಮಾತನಾಡುವಂತಿಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಆ ಪದವನ್ನು ಈಗಾಗಲೇ ಕಡತದಿಂದ ತೆಗೆದುಹಾಕುವಂತೆ ನಾನು ಆದೇಶಿಸಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲು ಆ ಪದವನ್ನು ವಾಪಸ್ಸು ತೆಗೆದುಕೊಳ್ಳುವಂತೆ ಅವರಿಗೆ ನೀವು ಹೇಳಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಈ ತರಹ ಆದರೆ ನಾವೇನೂ ಮಾಡಲಿಕ್ಕಾಗುವುದಿಲ್ಲ. ಈಗ ಪರಸ್ಪರ ನೀವ್ಯಾರೂ ಆ ರೀತಿ ಮಾತನಾಡಬಾರದು, ನೀವು ಸಭಾಧ್ಯಕ್ಷರನ್ನು ಕುರಿತು ಮಾತನಾಡಬೇಕೇ ಹೊರತು ಪರಸ್ಪರ ಆ ತರಹ ಮಾತನಾಡಬಾರದು. ದಯಮಾಡಿ ಎಲ್ಲರೂ ಕುಳಿತು ಸಹಕರಿಸಿ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಶಾಸಕರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಈಗ ಎಲ್ಲಾ ಮಾನ್ಯ ಸದಸ್ಯರು ಸ್ವಲ್ಪ ಕುಳಿತುಕೊಳ್ಳಿ. ಒಂದು ನಿಮಿಷ ಇರಿ.

**ಅಧ್ಯಕ್ಷರು** : ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಸ್ವಲ್ಪ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಸವರಾಜ ರಾಯರೆಡ್ಡಿ** : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದಂತಹ ಈಶ್ವರಪ್ಪನವರು ಮಾತನಾಡಿದ್ದೇನು? ಸಂಪೂರ್ಣವಾಗಿ ಮಾನ್ಯ ಧರಂಸಿಂಗ್ ನಾಯಕತ್ವದ ಸರ್ಕಾರದಲ್ಲಿ ಇಂಟೆಲಿಜೆನ್ಸ್ ವಿಫಲವಾಗಿದೆ, ಇದರಿಂದ ವಿಜ್ಞಾನಿಗಳ ಮೇಲೆ ಹಲ್ಲೆಯಾಯಿತು, ಅದರಿಂದ ಅವರ ಹತ್ಯೆಯಾಯಿತು ಎಂದು ಸರ್ಕಾರದ ಮೇಲೆ ಹೇಳಿದರು, ಅದಕ್ಕೆ ನಾನೇನು ಹೇಳಿದೆ ಎಂದರೆ ಗೋದ್ರಾದಲ್ಲಿ ದೊಡ್ಡ ನರಮೇಧ ಆಯಿತಲ್ಲಾ ಆಗ ಅಲ್ಲಿದ್ದ ಬಿ.ಜೆ.ಪಿ. ಸರ್ಕಾರದ ಇಂಟೆಲಿಜೆನ್ಸಿ ಫೇಲ್ ಆಗಲಿಲ್ಲವೇ ಅಂತ ಹೇಳಿದರೆ ಅದನ್ನು ಅವರು ಸಹಜವಾಗಿ ತೆಗೆದುಕೊಳ್ಳಬೇಕೇ ಹೊರತು ಅದನ್ನು ಬಿಟ್ಟು ಈ ರೀತಿ ಪದಬಳಸಿದರೆ ಏನಿದು ಅನಾಗರೀಕ ವರ್ತನೆ, ಅದಕ್ಕೆ ದಯಮಾಡಿ ಇದನ್ನು ಕೂಲ್ ಆಗಿ ತೆಗೆದುಕೊಳ್ಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)** : ಅವರು ಆವೇಶದಲ್ಲಿ...

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳಿ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ ಮಾನ್ಯ ಈಶ್ವರಪ್ಪನವರು ಹೇಳಿದ್ದನ್ನು ಸರಿಯೆಂದು ಹೇಳುತ್ತಿಲ್ಲ, ಏನೋ ಆ ಶಬ್ದವನ್ನು ಉಪಯೋಗಿಸಿದ್ದಾರೆ, ಅಧ್ಯಕ್ಷರಿಗೆ ಹೇಳಿ ಆ ಶಬ್ದವನ್ನು ಕಡತದಿಂದ ತೆಗೆಸೋಣ. ಅದರ ಅಗತ್ಯವಿಲ್ಲ, ಆವೇಶದಲ್ಲಿ ಇಲ್ಲಿ ಯಾವುದೋ ಶಬ್ದಗಳನ್ನು ಇಲ್ಲಿ ಉಪಯೋಗಿಸಲಿಕ್ಕೆ ಬರುವುದಿಲ್ಲ. ಆ ಶಬ್ದವನ್ನು ಅವರು ವಾಪಸ್ಸು ತೆಗೆದುಕೊಳ್ಳುತ್ತಾರೆ. ಕಡತದಿಂದ ತೆಗೆಸಲಾಗುತ್ತದೆ, ಹಾಗಾಗಿ ಮುಂದುವರಿಸಬಹುದು.

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಈಶ್ವರಪ್ಪನವರು ಅಪಾಲಜಿ ಕೇಳಬೇಕು. ಈಗ ರಾಜ್ಯದ ಜನತೆಯನ್ನು ನೀವು ತಪ್ಪು ಮಾಡಿ, ಅಪಾಲಜಿ ಕೇಳುತ್ತಿಲ್ಲವೇ,

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ : (ಉಪ ಮುಖ್ಯಮಂತ್ರಿಗಳು)** : ಮಾನ್ಯ ಶಿವಕುಮಾರ್‌ರವರೆ, ಮಾನ್ಯ ಶ್ರೀರಾಮರೆಡ್ಡಿಯವರೆ ಒಂದು ನಿಮಿಷ.

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಯಡಿಯೂರಪ್ಪನವರು ಒಂದು ಸಲಹೆಯನ್ನು ಕೊಟ್ಟರು. ಅವರು ಈ ರೀತಿಯ ಭಾಷೆಯನ್ನು ಬಳಸತಕ್ಕಂಥಾದ್ದು ಯಾರಿಗೂ ಶೋಭೆಯನ್ನು ತರತಕ್ಕಂಥ ವಿಚಾರವಲ್ಲ. ದಯವಿಟ್ಟು ಮಾನ್ಯ ಯಡಿಯೂರಪ್ಪನವರು ಏನು ಹೇಳುತ್ತಿದ್ದಾರೆ ಅದನ್ನು ಎಲ್ಲರೂ ಕೇಳಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಇಲ್ಲಿ ಇರುವುದು ಎರಡು ವಿಷಯ. ಮಾನ್ಯ ಈಶ್ವರಪ್ಪನವರು ಮಾತನಾಡತಕ್ಕಂಥ ಕಾಲದಲ್ಲಿ ಅವರು

ಹೇಳಿದಂತಹ ಪದವನ್ನು ಕಡತದಿಂದ ವಾಪಸ್ಸು ತೆಗೆಯಿರಿ ಅಂತ ಅಧ್ಯಕ್ಷರಿಗೆ ಹೇಳುತ್ತೇನೆ. ಎರಡನೆಯದು ನೀವು ಒಂದು ಸವಾಲು ಹಾಕಿದಿರಿ, ಅವರೂ ಒಂದು ಸವಾಲು ಹಾಕಿದರು. ನಾವು ಇದನ್ನು ನೋಡುತ್ತೇವೆಂದು, ಅದಕ್ಕೆ ಅವರು ನಾವೂ ನೋಡುತ್ತೇವೆಂದು ಅದನ್ನೇಕೆ ನೀವು ತಪ್ಪು ತಿಳಿದುಕೊಳ್ಳುತ್ತೀರಿ?

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಅಧ್ಯಕ್ಷರೆ, ನಾನು ಸವಾಲು ಹಾಕಲಿಲ್ಲ. ನೋಡಿ ಈ ಸದನದಲ್ಲಿ ಈ ರೀತಿಯ ಸಂಪ್ರದಾಯ ಬೆಳೆಸಿಕೊಂಡು ಹೋಗುವುದು ಸರಿಯೇ? ಇದು ಫಸ್ಟ್ ಟೈಮ್ ಈ ಮಾತನ್ನು ನೀವು ಈ ಸ್ಥಾನದಲ್ಲಿ ಕುಳಿತುಕೊಂಡಿದ್ದಾಗ ಯಾರಾದರೂ ಆ ಕಡೆಯಿಂದ ಈ ರೀತಿ ಮಾತನಾಡಿದ್ದರೆ ನೀವು ಬಿಡುತ್ತಿದ್ದಿರಾ? ಕ್ಷಮಾಪಣೆ ಕೇಳುವವರೆಗೂ ನೀವು ಬಿಟ್ಟಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಯಾವುದೋ ಒಂದು ಸಂದರ್ಭದಲ್ಲಿ ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಮಾತನಾಡಿದಾಗ ನನಗೆ ಗೊತ್ತಿದೆ ನೀವೆಲ್ಲಾ ಸೇರಿ ಅವರಿಗೆ ಯಾವರೀತಿ ತೊಂದರೆ ಕೊಟ್ಟಿರಿ ಅಂತ. ಕ್ಷಮಾಪಣೆ ಕೇಳುವ ಕೆಲಸ ನಡೆದಿದೆ ಇವತ್ತು ಕ್ಷಮಾಪಣೆ ಕೇಳಿದರೆ ಏನೂ ಅವಮಾನ ಆಗುವುದಿಲ್ಲ. ಅವರು ಇನ್ನೂ ಎತ್ತರಕ್ಕೆ ಏರುತ್ತಾರೆ. ಆದ್ದರಿಂದ ತಾವು ತಮ್ಮ ಸದಸ್ಯರಿಗೆ ಏನು ಅವಮಾನ ಮಾಡಿದ್ದಾರೆ ಏನು ಪದವನ್ನು ಹೇಳಿದ್ದಾರೆ ಆ ಪದವನ್ನು ಗೌರವಾನ್ವಿತವಾಗಿ ವಾಪಸ್ಸು ತೆಗೆದುಕೊಂಡು ಕ್ಷಮಿಸಬೇಕು ಎಂದು ಕೇಳಿದರೆ ಬಹಳ ಉತ್ತಮ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಆವೇಶದಲ್ಲಿ ನಾವೂ ನೀವೂ ಯಾರೂ ಮಾತನಾಡುವ ಅಗತ್ಯವಿಲ್ಲ. ನಿಜ ಸಂಗತಿ ಏನೆಂದರೆ ನೀವು ಇವತ್ತು ಮಾನ್ಯ ಈಶ್ವರಪ್ಪನವರು ಉಪಯೋಗಿಸಿದಂತಹ ಶಬ್ದವನ್ನು ವಾಪಸ್ಸು ತೆಗೆಯಿರಿ ಅಂತ ಸ್ಪೀಕರ್‌ಗೆ ಹೇಳಿದ್ದೇನೆ. ಕ್ಷಮಾಪಣೆ ಕೇಳಬೇಕು ಅಂದರೆ ಬಹುಶಃ ಆ ಕಡೆಯವರು ಈ ಕಡೆಯವರು ನಿತ್ಯ ಅದನ್ನೇ ಮಾಡಬೇಕಾಗುತ್ತದೆ.

**ಶ್ರೀ ಡಿ.ಕೆ. ಶಿವಕುಮಾರ್** : ಈ ಮನೆಯ ಸಂಪ್ರದಾಯದಂತೆ ನಡೆದುಕೊಂಡು ಬಂದಿರುವುದು ಇದು. ತಾವ್ಯಾರೂ ದೊಡ್ಡವರಲ್ಲ. ನಾವೂ ಬೇಕಾದಷ್ಟು ಸಂದರ್ಭದಲ್ಲಿ ಕ್ಷಮಾಪಣೆಯನ್ನು ಕೇಳಿದ್ದೇವೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಆವೇಶಕ್ಕೆ ಒಳಗಾಗುವ ಅಗತ್ಯವಿಲ್ಲ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಯಡಿಯೂರಪ್ಪನವರೆ, ಇದರಲ್ಲಿ ಎರಡು ವಿಷಯಗಳಿವೆ. ಅವರು ಕ್ಷಮಾಪಣೆ ಕೇಳಲಿ ಪರವಾಗಿಲ್ಲ. ಇಂತಹದ್ದೆಲ್ಲಾ ಆಗುತ್ತದೆ. ಸಹಕರಿಸಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಅದನ್ನು ಏಕೆ ಎಳೆದುಕೊಂಡು ಹೋಗುತ್ತೀರಿ? ಈಗ ನನ್ನ ಮತ್ತು ಮಾನ್ಯ ಬಸವರಾಜ ರಾಯರೆಡ್ಡಿಯವರ ಸ್ನೇಹ ನಿನ್ನೆ ಇವತ್ತಿನದಲ್ಲ. ನನಗೂ ಅವರು ಸಿಂಗ್ಯುಲರ್ ಆಗಿ ಬೇಕಾದಷ್ಟು ಸಲ ಕರೆದಿದ್ದಾರೆ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್** : ಅದಕ್ಕೂ ಇದಕ್ಕೂ ಏನು ಸಂಬಂಧ?

(ಗೊಂದಲ)

**ಅಧ್ಯಕ್ಷರು** : ಅವರನ್ನು ಮಾತನಾಡುವುದಕ್ಕೆ ಬಿಡಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ನನ್ನ ಮತ್ತು ಮಾನ್ಯ ಬಸವರಾಜ ರಾಯರೆಡ್ಡಿಯವರ ಸ್ನೇಹ ನಿನ್ನೆ ಇವತ್ತಿನದಲ್ಲ. ಅವರನ್ನೇ ಕೇಳಿ, ಆದರೆ ಆ ಒಂದು ಸ್ನೇಹದ ಸಲಿಗೆಯಲ್ಲಿ ಹೇಳಿದೆ, ಅದರಿಂದ ನಿಮಗೆ ನೋವಾಗಿದೆ ಎನ್ನುವುದು ನನಗೆ ಅರ್ಥವಾಗಿದೆ. ಇದನ್ನು ನಾನು ಖಂಡಿತ ಎಳೆದುಕೊಂಡು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಬಸವರಾಜ ರಾಯರೆಡ್ಡಿಯವರಿಗೆ ಆಗಿರುವಂತಹ ನೋವು ನನ್ನದೇ ನೋವು, ಖಂಡಿತ ನಾನು ಇದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಆದರೆ ಮಾನ್ಯ ಅಧ್ಯಕ್ಷರೆ ಇಲ್ಲಿ ಪ್ರಶ್ನೆ ಬಂದಿರುವುದು ಬೆಳಿಗ್ಗೆಯಿಂದ ಹಿಂದುತ್ವದ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಮಾನ್ಯ ಸಿಂಧ್ಯಾರವರು ಮಾತನಾಡಿದರು. ನಮ್ಮ ಮಾಜಿ ಮುಖ್ಯಮಂತ್ರಿಗಳು ಮಾತನಾಡಿದರು. ಎಲ್ಲರೂ ಮಾತನಾಡುತ್ತಾ ಹೇಳಿದ್ದು ಏನೆಂದರೆ ಹಿಂದುತ್ವ. ಇವರ ವಿಚಾರದಲ್ಲಿ ಹರಿಜನರಿಗೆ ಸ್ಥಾನ ಏನು? ಇವರ ಸರ್ಕಾರದಲ್ಲಿ ಮುಸಲ್ಮಾನರಿಗೆ ಸ್ಥಾನ ಏನು? ಇವರ ಸರ್ಕಾರದಲ್ಲಿ ಕ್ರಿಶ್ಚಿಯನ್‌ರಿಗೆ ಸ್ಥಾನ ಏನು? ಇವರ ಸರ್ಕಾರದಲ್ಲಿ ಹಿಂದುಳಿದವರಿಗೆ ಸ್ಥಾನ ಏನು? ಹೊಸದಾಗಿ ನೋಡುತ್ತಿದ್ದಾರೇನು ಸ್ವಾಮಿ ನಿಮ್ಮ ಸರ್ಕಾರದಲ್ಲಿ ಎಷ್ಟು ಜನಕ್ಕೆ ಏನೇನು ಅನುಕೂಲ ಆಗಿದೆ? ಸನ್ಮಾನ್ಯ ಸಿದ್ದರಾಮಯ್ಯನವರನ್ನು ಈ ರಾಜ್ಯದ ಜನರಿಗೆ ಮುಖ್ಯಮಂತ್ರಿ ಮಾಡುತ್ತೇನೆಂದು ಬೊಂಬೆ ಮಾಡಿ ತೋರಿಸಿಕೊಂಡು ಬಂದಿರಿ, ನೀವು ಅವರೆಲ್ಲಾ ಸೇರಿಕೊಂಡು. ಮೊನ್ನೆ ಜಿಲ್ಲಾ ಪಂಚಾಯತಿ ಚುನಾವಣೆ ಸಂದರ್ಭದಲ್ಲಿ ಕೂಡ ಅವರ ಫೋಟೋ ಹಾಕಿ ಕೊಂಡಿರಿ. ಅವರ ಜೊತೆ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಅವರ ಫೋಟೋ ಹಾಕಿ ಕೊಂಡರು ಕಾಂಗ್ರೆಸ್ಸ್‌ನವರು.

**ಮಾನ್ಯ ಸದಸ್ಯರು** : ಮಾನ್ಯ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಮಾಡುತ್ತೇನೆಂದು ಹೇಳಿದವರು ಜೆ.ಡಿ.(ಎಸ್)ನವರು. ಕಾಂಗ್ರೆಸ್ಸಿನವರಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ** : ಅವರ ಫೋಟೋ ಹಾಕಿಕೊಂಡು ಕಾಂಗ್ರೆಸ್ಸಿನವರು ಅಷ್ಟೊಂದು ಸ್ಥಾನ ನಾವು ಜಿಲ್ಲಾ ಪಂಚಾಯಿತಿಯಲ್ಲಿ ಗೆಲ್ಲುವುದಕ್ಕೆ ಸಿದ್ದರಾಮಯ್ಯನವರು ಕಾರಣ ಅಂತ ಹೇಳಿಕೊಂಡಿರಿ.

(ಗೊಂದಲ)

ಈ ರೀತಿ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡಿದರೆ ನಾನು ಏನು ಮಾಡಲಿ ?

**ಅಧ್ಯಕ್ಷರು** : ಅವರು ಮಾತನಾಡಲಿ ಬಿಡಿಯಪ್ಪ. ಈ ರೀತಿ ಆದರೆ ಹೇಗೆ? ಅವರು ಮಾತನಾಡಲಿ ಕುಳಿತುಕೊಳ್ಳಿ. ಆಮೇಲೆ ಏನಾದರೂ ಹೇಳುವುದಿದ್ದರೆ ನೀವು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಕೇವಲ ಹಿಂದುಳಿದ ವರ್ಗದವರನ್ನು ದಲಿತರನ್ನು, ಕ್ರಿಶ್ಚಿಯನ್ ಮತ್ತು ಮುಸಲ್ಮಾನರನ್ನು ಕೇವಲ ನಾವು ನಾಟಕಕ್ಕೆ ಬಳಸಿದಂತಹ ಪದ ಅಲ್ಲ. ಈ ದೇಶದಲ್ಲಿ ನಾಲ್ಕು ರಾಜ್ಯಗಳಲ್ಲಿ ಬಿ.ಜೆ.ಪಿ. ಮುಖ್ಯಮಂತ್ರಿಗಳು ಹಿಂದುಳಿದ ವರ್ಗದವರು ದಲಿತರು ಇದ್ದಾರೆ. ನಾಲ್ಕು ಜನ ಮುಖ್ಯಮಂತ್ರಿಗಳು, ಮಾನ್ಯ ನರೇಂದ್ರ ಮೋದಿಯವರು ಇರಬಹುದು, ಮಾನ್ಯ ಅರ್ಜುನ್ ಮುಂಡ ಇರಬಹುದು, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಪ್ರಾಕ್ಟಿಕಲ್ ಆಗಿ ಮಾಡುತ್ತಿರುವಂತಹ ಪಕ್ಷ ಭಾರತೀಯ ಜನತಾ ಪಕ್ಷ. ಹಿಂದುಳಿದ ವರ್ಗದವರಿಗೆ ದಲಿತರಿಗೆ, ಪರಿಶಿಷ್ಟರಿಗೆ ಏನು ಮಾಡುತ್ತೀರಿ ಅಂತ ಕೇಳಿದರೆ, ಅದಕ್ಕೆ ಉತ್ತರ ನಮ್ಮ ಹತ್ತಿರ ಇದೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ ಗುಜರಾತಿನಲ್ಲಿ ಎಷ್ಟೋ ಜನರನ್ನು ಕೊಂದರು. ಅದು ಎಷ್ಟು ಎಂದು ಗೊತ್ತಾ?

**ಶ್ರೀ ಕೆ.ಎಸ್. ಈಶ್ವರಪ್ಪ** : ತಾವು ಯಾವಾಗಲೂ ಅದನ್ನೇ ಹೇಳಿಕೊಳ್ಳುತ್ತೀರಿ.

**ಶ್ರೀ ಹೆಚ್.ಡಿ. ಬಸವರಾಜ್** : ಮಾನ್ಯ ಅಧ್ಯಕ್ಷರೆ, ಗುಜರಾತಿನಲ್ಲಿರತಕ್ಕಂಥ ಮುಖ್ಯಮಂತ್ರಿಗಳಿಗೆ ಈ ದೇಶದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಂಬರ್ ಒನ್ ಸ್ಥಾನ ಕೊಟ್ಟಿದ್ದಾರೆ. ಅದನ್ನು ತಾವ್ಯಾರೂ ಮರೆಯಬೇಡಿ. ಅವರ ಆಳ್ವಿಕೆಯನ್ನು ಎಲ್ಲರೂ ಪ್ರಶಂಸೆ ಮಾಡಿದ್ದಾರೆ. ಈ ದೇಶದಲ್ಲಿ ಏನಾದರೂ ಉತ್ತಮ ಆಡಳಿತ ಇದೆ ಅಂದರೆ ಅದು ಗುಜರಾತಿನಲ್ಲಿದೆ, ಅದನ್ನು ಮಾನ್ಯ ನರೇಂದ್ರಮೋದಿಯವರು ಮಾಡುತ್ತಿದ್ದಾರೆ ಎನ್ನುವುದನ್ನು ಎಲ್ಲಾ ಪತ್ರಿಕಾ ಮಾಧ್ಯಮದವರು ನಂಬರ್ ಒನ್ ಪಟ್ಟ ಕೊಟ್ಟು ಸಾಧನೆ ಮಾಡಿದ್ದಾರೆ. ನೀವು ಪ್ರಶಂಸೆ ಮಾಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಈ ದೇಶದ ಗಡಿ ಭಾಗದಲ್ಲಿ ಇಂಚು ಇಂಚು ಕಾಯುವಂತಹ ರಕ್ಷಣೆ ಸಚಿವ ಸ್ಥಾನವನ್ನು ಮಾನ್ಯ ಜಾರ್ಜ್ ಫರ್ನಾಂಡೀಸ್‌ರವರಿಗೆ ಕೊಟ್ಟಿದ್ದು ಭಾರತೀಯ ಜನತಾ ಪಕ್ಷ. ಮಾನ್ಯ ಅಬ್ದುಲ್ ಕಲಾಂ ಅವರನ್ನು ಇಡೀ ಪ್ರಪಂಚ ಇವತ್ತು ಹೊಗಳುತ್ತಿದೆ. ಫೋಕ್ರಾನ್ ಅಣುಬಾಂಬ್‌ನ್ನು ತಯಾರು ಮಾಡಿದಂತಹ ಒಬ್ಬ ಪ್ರಸಿದ್ಧ ವಿಜ್ಞಾನಿ. ದೇಶದ ರಾಷ್ಟ್ರಭಕ್ತ, ಅಬ್ದುಲ್ ಕಲಾಂ ಅವರನ್ನು ಜಾರ್ಜ್ ಫರ್ನಾಂಡೀಸ್ ಅವರನ್ನು ನರೇಂದ್ರಮೋದಿಯಂತಹ ಪ್ರಮುಖರನ್ನು ಹಿಂದುಳಿದವರು, ದಲಿತರು, ಕ್ರಿಶ್ಚಿಯನ್‌ರು ಮುಸಲ್ಮಾನರು ಅಂತ ಬಿ.ಜೆ.ಪಿ ನೋಡುವುದಿಲ್ಲ, ಈ ಮಣ್ಣಿನಲ್ಲಿ ಹುಟ್ಟಿದಂತಹ ರಾಷ್ಟಭಕ್ತರು ಅಂತ ಯೋಚನೆ ಮಾಡಿದಂತಹ ಪಾರ್ಟಿ ಭಾರತೀಯ ಜನತಾ ಪಾರ್ಟಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ಅವರು...

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಇದುವರೆಗೂ ನಾವು ಅವರು ಹೇಳಿದ್ದನ್ನೆಲ್ಲಾ ಕೇಳಿದ್ದೇವೆ. ರಾಷ್ಟ್ರಪತಿಗಳ ಸ್ಥಾನದಂತಹ ಪವಿತ್ರ ಸ್ಥಾನಕ್ಕೆ ಡಾ|| ಎ.ಪಿ.ಜೆ. ಅಬ್ದುಲ್ ಕಲಾಂರನ್ನು ನಾವು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಿದೆವು ಎನ್ನತಕ್ಕಂಥ ಉದ್ದೇಶದಿಂದ ಅವರು ಹೇಳುತ್ತಿದ್ದಾರೆ. ಇದು ಸರಿಯೇ ಎಂದು ತೀರ್ಮಾನ ಮಾಡತಕ್ಕಂಥ ವಿವೇಚನೆಯನ್ನು ನಾವು ನಿಮಗೆ ಬಿಡುತ್ತೇವೆ. ಮಾನ್ಯ ಜಾರ್ಜ್ ಫರ್ನಾಂಡೀಸ್‌ರವರ ಬಗ್ಗೆ ಹೇಳಿದ್ದನ್ನು ನಾವು ಒಪ್ಪುತ್ತೇವೆ. ಆದರೆ ಡಾ|| ಎ.ಪಿ.ಜೆ. ಅಬ್ದುಲ್ ಕಲಾಂರವರ ಬಗ್ಗೆ ಹೇಳಿದಂತಹ ವಿಚಾರ ಅವರು ಹೇಳಿದ್ದು ಸರಿ ಅಂತ ನಿಮ್ಮ ಆತ್ಮಕ್ಕೆ ಅನಿಸಿದರೆ ನೀವು ಅಲೋ ಮಾಡಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಇದು ಯಾವ ರೀತಿಯಾದಂತಹ ಸಂಪ್ರದಾಯಕ್ಕೆ ಈ ಸದನವನ್ನು ಜನ ತೆಗೆದುಕೊಂಡು ಹೋಗುತ್ತಿದ್ದಾರೆ ಎನ್ನುವುದನ್ನು ಆಲೋಚನೆ ಮಾಡಿ ಅಷ್ಟೆ.

**ಶ್ರೀ ಆರಗ ಜ್ಞಾನೇಂದ್ರ** : ಏನಾಗಿದೆ ಈಗ ಇದ್ದಕ್ಕಿದಂತೆ ಬೊಬ್ಬೆ ಹೊಡೆಯುವುದಕ್ಕೆ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಗಳು. ರಾಷ್ಟ್ರಪತಿಗಳು ಬಿ.ಜೆ.ಪಿ. ರಾಷ್ಟ್ರಪತಿಗಳು ಅಲ್ಲ ಅವರು. ಈ ದೇಶದ ರಾಷ್ಟ್ರಪತಿಗಳು ಅವರು. ಅವತ್ತು ಕಾಂಗ್ರೆಸ್ಸ್‌ನವರು ಸಪೋರ್ಟ್ ಮಾಡಿದ್ದಾರೆ. ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ, ನಾವು ಸಪೋರ್ಟ್ ಮಾಡಿಲ್ಲ ಕಂಟೆಸ್ಟ್ ಮಾಡಿದ್ದೇವೆ. ಅವರು ಯಾವುದೇ ಜಾತಿಗೆ, ಯಾವುದೇ ಧರ್ಮಕ್ಕೆ ರಾಷ್ಟ್ರಪತಿಗಳು ಅಲ್ಲ. ಅವರು ಭಾರತದ ರಾಷ್ಟ್ರಪತಿಗಳು.

(ಗೊಂದಲ)

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅವರು ಏನು ಬೇಕಾದರೂ ಮಾತನಾಡಬಹುದಾ?

(ಗೊಂದಲ)

**ಅಧ್ಯಕ್ಷರು** : ನೀವು ಅವರು ಏನು ಮಾತನಾಡಿದ್ದೀರಿ, ಅದಕ್ಕೆ ನೀವು ಉತ್ತರ ಕೊಡುವುದಿದ್ದರೆ ನಿಮಗೆ ಅವಕಾಶ ಕೊಡುತ್ತೇನೆ ಆಗ ಮಾತನಾಡಿ. ಪ್ರತಿಯೊಂದಕ್ಕೂ ನೀವು ಇಂಟರ್‌ಫಿಯರ್ ಆದರೆ ಹೇಗೆ?

(ಗೊಂದಲ)

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ನೀವು ಈ ರೀತಿ ಆಲೋಚನೆ ಮಾಡಿದರೆ ಅದಕ್ಕೆ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಅಧ್ಯಕ್ಷರು** : ದಯಮಾಡಿ ತಾವು ಕುಳಿತುಕೊಳ್ಳಿ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಮಾನ್ಯ ಅಧ್ಯಕ್ಷರೆ, ತಾವು ತಾಳ್ಮೆ ಕಳೆದುಕೊಳ್ಳಬೇಡಿ.

(ಗೊಂದಲ)

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾವು ಎಲ್ಲಿದ್ದೇವೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

**ಅಧ್ಯಕ್ಷರು** : ಮಾನ್ಯ ಈಶ್ವರಪ್ಪನವರೆ ತಾವು ಮಾತನಾಡಿ.

(ಗೊಂದಲ)

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಮಗೆ ಅರ್ಥವಾಗುತ್ತಿಲ್ಲ. ನಾವು ಎಲ್ಲಿಗೆ ಹೋಗುತ್ತಿದ್ದೇವೆಂದು? ಅದೇನು ಆ ರೀತಿ ಮಾತನಾಡಿದರೆ ಅರ್ಥ ಏನು ಸಾರ್ ಅದು.

(ಗೊಂದಲ)

**ಶ್ರೀ ಆರಗ ಜ್ಞಾನೇಂದ್ರ** : ನೀವು ಹೇಳಿದಂತೆ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, ನಾನು ಕ್ರಿಯಾಲೋಪವನ್ನು ಎತ್ತಿದೆ ಈ ಸದನದ ಸದಸ್ಯರಾಗಿ ಕಲಾಪ ನಡೆಯುವ ವೇಳೆಗೆ ನಮ್ಮ ಕಲಾಪಗಳು ಚೌಕಟ್ಟಿನಲ್ಲಿ ಇಲ್ಲವೆಂದು ನಮ್ಮ ಮನಸ್ಸಿಗೆ ಅನಿಸಿದಾಗ ಕ್ರಿಯಾಲೋಪ ಎತ್ತತಕ್ಕದ್ದು, ಅದು ನನ್ನ ಫಂಡಮೆಂಟಲ್ ರೈಟ್. ಅದನ್ನು ಎತ್ತಿ ಹಿಡಿಯತಕ್ಕದ್ದು, ತಳ್ಳಿಹಾಕತಕ್ಕದ್ದು ತಮ್ಮ ವಿವೇಚನೆಗೆ ಬಿಟ್ಟದ್ದು. ಸತ್ಯಕ್ಕೆ ದೂರವಾಗಿರುವ ವಿಚಾರಗಳು ಅಥವಾ ಚರಿತ್ರೆಯನ್ನು ಡಿಸ್ಟಾರ್ಟ್ ಮಾಡತಕ್ಕ ವರ್ಷನ್ಸ್ ಈ ಕಡತಕ್ಕೆ ಹೋಗಬಾರದು ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರು ಒಂದು ಚುನಾವಣೆಯಲ್ಲಿ ಹಲವಾರು ಪಕ್ಷಗಳ ಬೆಂಬಲದಿಂದ ರಾಷ್ಟ್ರಪತಿಗಳಾಗಿ ಆಯ್ಕೆಯಾದವರು. ಅವರು ಈ ದೇಶಕ್ಕೆ ನಮ್ಮ ಪಕ್ಷದ ಕೊಡುಗೆ ಎಂದು ಹೇಳತಕ್ಕ ಮಾತು ಬರುತ್ತಿದೆ, ಅವರು ಎಂದೂ ಭಾರತೀಯ ಜನತಾ ಪಾರ್ಟಿಯ ಸದಸ್ಯರಾಗಿರಲಿಲ್ಲ, ಬಿಜೆಪಿಯ ಕ್ಯಾಂಡಿಡೇಟ್ ಆಗಿ ಅವರು ನಿಂತದ್ದಲ್ಲ, ಅವರನ್ನು ಕಾಂಗ್ರೆಸ್ ಪಕ್ಷ ಎಲ್ಲಾ ಪಕ್ಷಗಳವರು ಸೇರಿ ಸ್ಪಾನ್ಸರ್ ಮಾಡಿದ್ದರು. ಆ ರೀತಿಯ ವರ್ಷನ್ಸ್ ರೆಕಾರ್ಡ್‌ಗೆ ಹೋಗತಕ್ಕಂಥದ್ದು ಸರಿಯಲ್ಲ. ನಾಳೆ ದಿವಸ ಯಾರಾದರೂ ರೆಕಾರ್ಡ್ ತೆಗೆದುಕೊಂಡು ಓದಿದರೆ ಅವರಿಗೆ ಏನು

ಅನಿಸಿಸುತ್ತದೆ? It amounts to distortion of facts. Such a thing is not permissible. I want you to kindly advise the staff to immediately set right the records and advise the members concerned to have restraint.

**(interruptions)**

**ಶ್ರೀ ಅರಗಜ್ಞಾನೇಂದ್ರ** : ಬಿಜೆಪಿ ಸರ್ಕಾರವಿದ್ದಾಗ ರೆಕಮೆಂಡ್ ಮಾಡಿದ್ದೆಂದು ಹೇಳಿದ್ದಾರೆ ಅದರಲ್ಲೇನೂ ತಪ್ಪೇನಿಲ್ಲ.

**Sri K.R. Ramesh Kumar :** I am not entering into arguments with them.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ** : ಬಿಜೆಪಿ ಸರ್ಕಾರವಲ್ಲ ಎನ್‌ಡಿಎ ನೇತೃತ್ವದ ಸರ್ಕಾರ ಅವತ್ತು ಇದ್ದದ್ದು...

**(ಗೊಂದಲ)**

**ಶ್ರೀ ಆರ್. ಅಶೋಕ್** : ಅವರು ನಿಮ್ಮ ಪಾರ್ಟಿಯವರಾ? ಇಲ್ಲಿ ಏತಕ್ಕೆ ಮಾತನಾಡುತ್ತೀರಾ?

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ** : ಅವತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವಿದ್ದಾಗ ಅವರ ಹೆಸರನ್ನು ರೆಕಮೆಂಡ್ ಮಾಡಿರತಕ್ಕದ್ದು, ಕೊಡುಗೆ ಎಂದು ಹೇಳುವುದರಲ್ಲಿ ತಪ್ಪೇನಿದೆ ಸರ್?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಯಾರಾದರೂ ನಾವು ಜೆಡಿಎಸ್‌ನವರು ನಿಮ್ಮನ್ನು ಸ್ಪೀಕರ್ ಮಾಡಿದ್ದೇವೆಂದು ಹೇಳಿದರೆ ಸರಿಯಾ ತಪ್ಪಾ ಎಂದು ಹೇಳಿ?

**ಶ್ರೀ ಆಗರ ಜ್ಞಾನೇಂದ್ರ** : ಕಮ್ಯುನಿಸ್ಟ್‌ರವರು ಆವಾಗ ಕಂಟೆಸ್ಟ್ ಮಾಡಿದ್ದರು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಹಾದು ನಾವು ಇಲ್ಲವೆಂದು ಹೇಳಿದ್ದೇವೆಯೇ ನಾವು ಇಲ್ಲವೆಂದು ಹೇಳಲಿಲ್ಲ.

**(ಗೊಂದಲ)**

**ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ** : ಅವರು ಎಲ್ಲರಿಗೂ ಬೇಕಾದವರು, ಆದರೆ ಚುನಾವಣೆಯ ಕಾಲಕ್ಕೆ, ಅವರು ಅವರ ಪ್ರತಿನಿಧಿಯಾಗಿ ಭಾಗವಹಿಸಿದರು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಹೌದು ನಾವು ವಿರೋಧ ಮಾಡಿದ್ದೇವೆ ನಾವು ಅಭ್ಯರ್ಥಿಯನ್ನು ಹಾಕಿದ್ದೇವೆ ಇಲ್ಲವೆಂದು ಹೇಳಲಿಲ್ಲ.

**(ಗೊಂದಲ)**

**ಶ್ರೀ ಬಸವರಾಜರಾಯರೆಡ್ಡಿ** : ರಾಷ್ಟ್ರಪತಿಗಳನ್ನು ವಿವಾದದ ವ್ಯಕ್ತಿಯನ್ನಾಗಿ ಮಾಡಬಾರದು, ಬಿಜೆಪಿಯವರು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, What is going into the records? ಸರ್ ಇಲ್ಲಿ ಮಾತನಾಡುತ್ತಿರುವುದು ಕಡತಕ್ಕೆ ಹೋಗುತ್ತಿದೆಯೋ ಏನೋ ನಮಗೆ ಗೊತ್ತಾಗುತ್ತಿಲ್ಲ, ಈಗ ಮಾತನಾಡುವಾಗ ಗೆಳೆಯರಾದ ಮಾನ್ಯ ಅಶೋಕ್‌ರವರು ಹೇಳಿದರು, ಆ

ಟೈಂನಲ್ಲಿ ಕಾಂಗ್ರೆಸ್‌ನವರಿಗೆ ಕ್ಯಾಂಡಿಡೇಟ್ ಸಿಗಲಿಲ್ಲ, ಅದಕ್ಕೇ ಮಾಡಿದರು, ಅದೆಲ್ಲಾ ರೆಕಾರ್ಡ್‌ಗೆ ಹೋಗಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ, Where are we leading to? ಏನು ಇದೆಲ್ಲಾ?

**ಶ್ರೀ ಬಸವರಾಜ ರಾಯರೆಡ್ಡಿ** : ಮಾನ್ಯ ಅಧ್ಯಕ್ಷರೆ, ರಾಷ್ಟ್ರಪತಿಗಳ ಹುದ್ದೆ ಅತ್ಯಂತ ಗೌರವಾನ್ವಿತ ಹುದ್ದೆಯಾಗಿದೆ ಅವರು ಹೇಳಿದ್ದನ್ನು ಕಡತದಿಂದ ತೆಗೆಸಿ ಭಾಷಣವನ್ನು ಮುಂದುವರೆಸಿ...

(ಗೊಂದಲ)

**ಶ್ರೀ ಹೆಚ್.ಡಿ. ಬಸವರಾಜು** : ಇಲ್ಲದ್ದನ್ನು ಇಲ್ಲಿ ಉಲ್ಲೇಖ ಮಾಡುತ್ತಿಲ್ಲ, ನಡೆದಂತಹ ಸತ್ಯ ಘಟನೆಗಳನ್ನು ಇಲ್ಲಿ ಉಲ್ಲೇಖ ಮಾಡುತ್ತಿದ್ದೇವೆ, ಇತಿಹಾಸವನ್ನು ತಿರುಚುವಂತಹದ್ದೇನು ಇಲ್ಲಿ ನಾವು ಮಾಡುತ್ತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ** : ಸನ್ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು, ಕಾಂಗ್ರೆಸ್ ಏತಕ್ಕೆ ಜೆಡಿಎಸ್ ಜೊತೆ ಹೋದೆವೆಂಬುದಕ್ಕೆ ಕಾಮನ್ ಮಿನಿಮಂ ಪ್ರೋಗ್ರಾಂ ಎನ್ನುವ ಮಾತನ್ನು ಹೇಳಿದರು, ನಾನು ಹಿರಿಯರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಕ್ಷೇತ್ರ ಸೇರಿ, ಇಡೀ ರಾಜ್ಯದಲ್ಲಿ ಯಾರಾದರೂ ಬಡವ, ದಲಿತ, ಹಿಂದುಳಿದ ವರ್ಗದವರು, ಸೇರಿದಂತೆ ಯಾವುದೇ ಬಡವನಿಗೆ ಒಂದು ಸೈಟನ್ನು ಕೊಟ್ಟಿರಾ ಸ್ವಾಮಿ? ಇದಾ ನಿಮ್ಮ ಕಾಮನ್ ಮಿನಿಮಂ ಪ್ರೋಗ್ರಾಂ ಆರಾಧನಾ ಮುಖಾಂತರ ಮಸೀದಿ, ಚರ್ಚ್‌ಗಳಿಗೆ....

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಜೆಡಿಎಸ್ ಹೊಂದಾಣಿಕೆ ಮೊದಲನೆಯ ಬಾರಿಯದಲ್ಲ, ಇದೇ ಕಾಂಗ್ರೆಸ್‌ನವರು ಈ ಪತ್ರಿಕಾ ಸ್ವಾತಂತ್ರ್ಯವನ್ನು ಹರಣ ಮಾಡಿದಾಗ, ವಾಕ್ ಸ್ವಾತಂತ್ರ್ಯವನ್ನು ಹರಣ ಮಾಡಿದಾಗ ಬಿಜೆಪಿ-ಜೆಡಿಎಸ್ ನಮ್ಮನ್ನು ಕೃಷ್ಣಜನ್ಮಸ್ಥಾನಕ್ಕೆ ಕಳುಹಿಸಿದ್ದರು ಅಲ್ಲಿ ನಾವು ಒಂದಾಗಿ ಬಂದೆವು ಅಲ್ಲಿ ಒಂದಾಗಿ ಬಂದ ನಂತರ ಕೇಂದ್ರದಲ್ಲಿ ಇವರನ್ನು ಪಕ್ಕಕ್ಕೆ ಸರಿಸಿ ಅಧಿಕಾರವನ್ನು ನಡೆಸಿದೆವು, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ, ಈ ರಾಜ್ಯಕ್ಕೆ ಕಾಂಗ್ರೆಸ್ ಸರ್ಕಾರ ಬೇಡವೆನ್ನುವ ಅಂಶವನ್ನು ರಾಜ್ಯದ ಜನ ತೀರ್ಮಾನ ಮಾಡಿದಾಗ, ಆಗ ನಮ್ಮ ಪಕ್ಷದ ಅಧ್ಯಕ್ಷರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಮಾಜಿ ಪ್ರಧಾನ ಮಂತ್ರಿಗಳು, ಕಾಂಗ್ರೆಸ್ ಅನ್ನು ಪಕ್ಕಕ್ಕೆ ಸರಿಸಿ, ಮೊದಲನೆಯದಾಗಿ ಕಾಂಗ್ರೆಸೇತರ ಸರ್ಕಾರವನ್ನು ತರಬೇಕೆಂದು ಬೇಷರತ್ ಬೆಂಬಲವನ್ನು ಕೊಟ್ಟು, ಈ ಕಾಂಗ್ರೆಸ್ ಅನ್ನು ಪಕ್ಕಕ್ಕೆ ಸರಿಸಿದಂಥ ಕೀರ್ತಿ ಭಾರತೀಯ ಜನತಾ ಪಕ್ಷಕ್ಕೆ ಇದೆ.

(ಗೊಂದಲ)

**ಶ್ರೀ ಆರಗ ಜ್ಞಾನೇಂದ್ರ** : ಸರ್, ಅವರೆಲ್ಲಾ ಮಾತನಾಡುವಾಗ ನಾವೆಲ್ಲಾ ಗಂಭೀರವಾಗಿ ಕೇಳಿದ್ದೇವೆ. ಹಿರಿಯರೆಲ್ಲಾ ಮಾತನಾಡುವಾಗ ತುಂಬಾ ಸಹಕಾರ ಕೊಟ್ಟಿದ್ದೇವೆ, ಈ ಸಾಲಿನಲ್ಲಿ ಕುಳಿತಿರುವವರು ಮಾತನಾಡುವಾಗ ಈ ರೀತಿ ಡಿಸ್ಟರ್ಬ್ ಮಾಡುತ್ತಿದ್ದಾರೆ, ಅದೇ ರೀತಿಯಾಗಿ ನಡೆದುಕೊಂಡು ಹೋಗುವುದಾದರೆ ನಾವು ನಡೆಯೋಣ, ಅವರಿಗೆ ತಾವು ಹೇಳಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಇವತ್ತು ಹೊಂದಾಣಿಕೆ ಮಾಡಿಕೊಂಡು ಅಧಿಕಾರಕ್ಕೆ ಬಂದದ್ದು ಆಟವಾಡುತ್ತಾ ಬಂದಿಲ್ಲ. ನಮ್ಮ ನಾಯಕರಾದ ಯಡಿಯೂರಪ್ಪನವರು ವಿಧಾನಸಭೆಯಲ್ಲಿ ಆ ಕಾಲದಲ್ಲಿ ಒಬ್ಬರೇ ಶಾಸಕರು. ರೈತರ ಪರವಾಗಿ ಕೃಷಿ ಕಾರ್ಮಿಕರ ಪರವಾಗಿ

ಇಡೀ ರಾಜ್ಯದ ಕಾರ್ಯಕರ್ತರನ್ನು ಎಬ್ಬಿಸಿ ಸಂಘಟನೆ ಕಟ್ಟಿ, ಯಡಿಯೂರಪ್ಪನವರು ಒಬ್ಬರೇ ಇದ್ದರು ನಾಲ್ಕಾದೆವು. ಈ ರಾಜ್ಯದಲ್ಲಿ ಅದೇ ಹೋರಾಟವನ್ನು ಮುಂದುವರೆಸಿಕೊಂಡು ಬಂದೆವು. ನಾಲ್ಕರಿಂದ ನಲವತ್ತಾದೆವು, ನಲವತ್ತರಿಂದ ನಲವತ್ತ ನಾಲ್ಕು ಆದೆವು, ಈ ಸಾರಿ ಎಪ್ಪತ್ತೊಂಬತ್ತಾಗಿ ರಾಜ್ಯದ ಜನತೆಯ ಆಶೀರ್ವಾದದಿಂದ, ಇವತ್ತು ಸರ್ಕಾರ ರಚನೆ ಮಾಡುತ್ತಿದ್ದೇವೆ. 18 ಜನ ಲೋಕಸಭಾ ಸದಸ್ಯರು ನಿಮಗೂ ನಮಗೂ ಗೊತ್ತು, ಕರ್ನಾಟಕದ ಹಿಂದಿನ ಸರ್ಕಾರದಲ್ಲಿ 165 ಜನ ಕಾಂಗ್ರೆಸ್ ಸದಸ್ಯರಿದ್ದರು, ಇವತ್ತು ಅವರದ್ದು ಎಷ್ಟಿದೆ ಸ್ವಾಮಿ? 65 ಇಟ್ಟು ಕೊಂಡು ನಾವೇ ಸರ್ಕಾರ ರಚನೆ ಮಾಡುತ್ತೇವೆಂದರೆ, ಇದು ಯಾವ ನ್ಯಾಯ? 79 ಜನ ಸದಸ್ಯರು ಗೆದ್ದಿರುವವರು ಸರ್ಕಾರ ರಚನೆ ಮಾಡಬೇಕೋ? ಯಾರು ಮಾಡಬೇಕು? ಅದು ಇವತ್ತು ಆಗಿದೆ. ಬಹಳ ಜನ ಬಹಳ ದಿನ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ, ಇವತ್ತು ಬಿಜೆಪಿ–ಜೆಡಿಎಸ್ ಎರಡೂ ಪಕ್ಷಗಳು ಒಟ್ಟಿಗೆ ಸೇರಿಕೊಂಡು ಈ ಕಾಂಗ್ರೆಸ್ ಸರ್ಕಾರವನ್ನು ಪಕ್ಕಕ್ಕೆ ಸರಿಸಬೇಕೆಂದು ತೀರ್ಮಾನ ಮಾಡಿದ ನಂತರ, ಮಂತ್ರಿಗಳಾದಿಯಾಗಿ ಧರಣಿ ಮಾಡಿ, ನಾವು ವಿರೋಧ ಪಕ್ಷಕ್ಕೆ ಲಾಯಕ್ಕೆಂದು ತೋರಿಸಿ ಕೊಂಡಿರಿ, ಈಗಾಗಲೇ ಧರಣಿ ಮಾಡುವುದನ್ನು ಮುಂದುವರೆಸಿದಿರಿ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ; ಇವತ್ತು ಕೇವಲ ದಲಿತ ವರ್ಗವನ್ನು ನಿಮ್ಮ ಆಸ್ತಿ ಮಾಡಿಕೊಳ್ಳಬೇಡಿ ದಲಿತರು ಕಾಂಗ್ರೆಸ್ಸಿನ ಆಸ್ತಿಯಲ್ಲ. ಸ್ವಾತಂತ್ರ್ಯ ಬಂದಾಗಿನಿಂದಲೂ ಈವರೆವಿಗೂ ಓಟನ್ನು ತೆಗೆದುಕೊಂಡಿದ್ದೀರಿ, ಅವರ ಬಡತನವನ್ನು ದುರುಪಯೋಗ ಮಾಡಿಕೊಂಡಿದ್ದೀರಿ, ಅವರು ಕೇಳುತ್ತಾ ಬಂದರು, ಸ್ವಾತಂತ್ರ್ಯ ಬಂದಾಗಿನಿಂದಲೂ ನಿಮಗೆ ನಾವು ಓಟು ಕೊಡುತ್ತಾ ಬಂದಿದ್ದೇವೆ ನಮ್ಮ ಹಕ್ಕು ಬ್ಯಾಕ್‌ಲಾಗ್ ಹುದ್ದೆ ಅದನ್ನು ತುಂಬಿ ಕೊಡಿ ಎಂದಾಗ ಬ್ಯಾಕ್‌ಲಾಗ್ ಹುದ್ದೆ ತುಂಬಲಿಲ್ಲ. ಈ ಕಾಂಗ್ರೆಸ್‌ನವರು ಆ ಬ್ಯಾಕ್‌ಲಾಗ್ ಹುದ್ದೆಯನ್ನು ಏತಕ್ಕೆ ತುಂಬಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಸುಪ್ರೀಂ ಕೋರ್ಟ್ ತೀರ್ಪನ್ನು ಮೀರಿ, ಸಂವಿಧಾನಕ್ಕೆ ಬಹುಮತದ ಮುಖಾಂತರ ಲೋಕಸಭೆಯಲ್ಲಿ ತಿದ್ದುಪಡಿಯನ್ನು ತಂದು ಬ್ಯಾಕ್‌ಲಾಗ್ ಹುದ್ದೆಗಳಿಗೆ ದಲಿತರನ್ನು ತುಂಬಬೇಕು ಎನ್ನುವ ಬಿಲ್ ಅನ್ನು ಪಾಸ್ ಮಾಡಿದಂತಹ ಕೀರ್ತಿ ಅಟಲ್ ಬಿಹಾರಿ ವಾಜಪೇಯಿಯವರದು ಎನ್ನುವ ಮಾತನ್ನು ಇವತ್ತು ಜ್ಞಾಪಕವಿಟ್ಟುಕೊಳ್ಳಿ. ಇದು ಹಿಂದುಳಿದವರ ಬಗ್ಗೆ ದಲಿತರ ಬಗ್ಗೆ ಬಿಜೆಪಿಯ ಕನಸು, ಅಪೇಕ್ಷೆ. ಇವತ್ತು ರಾಜ್ಯದಲ್ಲಿ ದೇಶದಲ್ಲಿ ಇನ್ನೂ ಕೂಡ ಆ ಎಲ್ಲಾ ದಲಿತರು, ಹಿಂದುಳಿದ ವರ್ಗದವರು ಚರಂಡಿ ನೀರನ್ನು ಕುಡಿಯುವ ಸ್ಥಿತಿ ಅವರಿಗಿದೆ, ಅವರಿಗೆ ಗುಡಿಸಲುಗಳಿಲ್ಲ, ಫುಟ್‌ಪಾತ್‌ಗಳಲ್ಲಿ ಮೈದಾನಗಳಲ್ಲಿ ಎಲ್ಲಂದರಲ್ಲಿ ವಾಸ ಮಾಡುತ್ತಿದ್ದಾರೆ, ಮನುಷ್ಯರ ರೀತಿಯಲ್ಲಿ ವಾಸ ಮಾಡುತ್ತಿಲ್ಲ. ಹೀಗಾಗಿ ನನ್ನ ಕಳಕಳಿಯ ಮನವಿ, ಮಾನ್ಯ ಪರಮೇಶ್ವರ್‌ರವರು ಇದಕ್ಕೆ ನಕ್ಕರೆ ನನ್ನ ಅಭ್ಯಂತರವಿಲ್ಲ. ಒಬ್ಬ ದಲಿತ ನಾಯಕರಾದ ನಿಮಗೆ ದಲಿತರ ಪರಿಸ್ಥಿತಿ ಗೊತ್ತಿದೆ, ಅದಕ್ಕಿಂತ ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ. ದಲಿತರು ಹಿಂದುಳಿದವರು ಎಲ್ಲಾ ಬಡವರುಗಳಿಗೆ ನ್ಯಾಯ ಸಿಗಬೇಕಾಗಿದೆ. ಇಷ್ಟು ವರ್ಷದಲ್ಲಿ ಅವರನ್ನು ಕೇವಲ ವೋಟ್‌ಬ್ಯಾಂಕಾಗಿ ಮಾಡಿಕೊಂಡಿರಿ. ಆ ವೋಟ್‌ಬ್ಯಾಂಕ್ ರಾಜಕಾರಣಕ್ಕೆ ದಯವಿಟ್ಟು ಮಂಗಳ ಹಾಡಿ. ಸನ್ಮಾನ್ಯ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ನೇತೃತ್ವದಲ್ಲಿ ಹೊರಟಂತಹ ಈ ಸರ್ಕಾರಕ್ಕೆ ಅವರು ನಿಜಕ್ಕೂ ಬಡವರಿಗೆ ನ್ಯಾಯ ಒದಗಿಸುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಅಂತ ಅನ್ನಿಸಿದರೆ ಪಕ್ಷಭೇದ ಮರೆತು ಸರ್ಕಾರಕ್ಕೆ ನೀವು ಬೆಂಬಲ ಕೊಡಿ. ಮಾನ್ಯ ಧರ್ಮಸಿಂಗ್‌ರವರಿಗೆ ಮಾಡಿದಂತೆ ಮಾಡಬೇಡಿ.

ನಾನು ನಿಮ್ಮನ್ನು ಕೈಮುಗಿದು ಕೇಳುತ್ತೇನೆ. ನೀವು ಕಾಂಗ್ರೆಸ್‌ನವರೇ ಹೇಳುತ್ತೀರಿ ನಾವೇ ಧರಂಸಿಂಗರನ್ನು ತೆಗೆದೆವು ಅಂತ. ಧರಂಸಿಂಗ್‌ರವರಿಗೆ ಮಾಡಿದಂತೆ ದಯವಿಟ್ಟು ಮಾಡಬೇಡಿ. ಇವತ್ತಿನ ಇಬ್ಬರೂ ಬಹಳ ಕನಸು ಹೊತ್ತು ಬಂದಿದ್ದಾರೆ. ಕುಮಾರಸ್ವಾಮಿಯವರ ಬಗ್ಗೆ ಹೆಚ್ಚು ಗೊತ್ತಿಲ್ಲ. ಸ್ವತಃ ರಕ್ತಹಂಚಿಕೊಂಡು ಹುಟ್ಟಿದ ಅಣ್ಣತಮ್ಮಂದಿರಿಗಿಂತ ಹೆಚ್ಚಿಗೆ ಯಡಿಯೂರಪ್ಪನವರ ಹೋರಾಟ ನಾವು ನೋಡಿದ್ದೇನೆ. ಈ ರಾಜ್ಯದ ರೈತರಿಗೆ ಬಡವರಿಗೆ ಅನ್ಯಾಯವಾದಾಗ ಒಬ್ಬರೇ ಹೋರಾಟ ಮಾಡಿಕೊಂಡು ಬಂದಿರುವುದನ್ನು ನಿಮಗೆ ನೆನಪು ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ದಲಿತರು ಹಿಂದುಳಿದವರಿಗೆ ಅನ್ಯಾಯವಾಗುತ್ತದೆ ಅಂತ, ಒತ್ತುವರಿ ಭೂಮಿ ಬಗ್ಗೆ ಮಾನ್ಯ ರಾಚಯ್ಯನವರು ಈ ಮನೆಯಲ್ಲಿ ಬಿಲ್ ತಂದ ಸಂದರ್ಭದಲ್ಲಿ ಒಬ್ಬರೇ ಯಡಿಯೂರಪ್ಪ ಇಲ್ಲಿ ವಿಧಾನಸಭೆಯಲ್ಲಿ ಕುಳಿತು ಧರಣಿ ಮಾಡಿ ಸನ್ಮಾನ್ಯ ರಾಚಯ್ಯನವರೇ ನೀವು ದಲಿತ ನಾಯಕರು, ನಿಮ್ಮ ಮೂಲಕ ಈ ರಾಜ್ಯದ ದಲಿತರಿಗೆ ಹಿಂದುಳಿದವರಿಗೆ ಅನ್ಯಾಯ ಮಾಡುವುದಕ್ಕೆ ಈ ಸರ್ಕಾರ ಹೊರಟಿದೆ ದಯವಿಟ್ಟು ಈ ಬಿಲ್ ಪಾಸ್ ಮಾಡಬೇಡಿ ಅಂತ ಕಣ್ಣೀರು ಹಾಕಿದರು. ದಿವಂಗತ ರಾಚಯ್ಯನವರನ್ನು ನೆನಪು ಮಾಡಿಕೊಳ್ಳುತ್ತೇನೆ. ಯಡಿಯೂರಪ್ಪನವರು ಬಿಜೆಪಿ ಅಂತ ಅವರು ನೋಡಲಿಲ್ಲ. ರಾಚಯ್ಯನವರು ಯಾವ ಪಕ್ಷ ಅಂತ ಯೋಚನೆ ಮಾಡಲಿಲ್ಲ. ಪಕ್ಷಭೇದ ಮರೆತು ಈ ರಾಜ್ಯದ ಬಡವರಿಗೆ ನ್ಯಾಯ ದೊರಕಿಸಿ ಕೊಡುತ್ತೇನೆ ಅಂತ ಹೇಳಿ ಆ ಬಿಲ್ಲನ್ನು ಪಾಸ್ ಮಾಡದೆ ವಾಪಸ್ ಪಡೆದು ಬಡವರಿಗೆ ನ್ಯಾಯ ದೊರಕಿಸಿಕೊಡಲು ಒಬ್ಬರೇ ಹೋರಾಟ ಮಾಡಿಕೊಂಡು ಬಂದ ಯಡಿಯೂರಪ್ಪ ನವರ ನೇತೃತ್ವದಲ್ಲಿ ನಾವು ಇವತ್ತು ಇಲ್ಲಿ ಕುಳಿತಿದ್ದೇವೆ. ತುರ್ತುಪರಿಸ್ಥಿತಿಯಲ್ಲಿ ಅನೇಕ ಬಾರಿ ಜೈಲಿಗೆ ಹೋಗಿದ್ದೆವು. ಬಸ್‌ಸ್ಟಾಂಡಿನಲ್ಲಿ ಒಬ್ಬ ಹಿಂದಿನ ಕಾಂಗ್ರೆಸ್‌ನವರು ಹೊಡೆದಾಗ ಯಡಿಯೂರಪ್ಪನವರು ಸತ್ತುಹೋದರು, ಹೆಣ ಮಾತ್ರ ಅಲ್ಲಿ ಉಳಿದಿದೆ ಅಂತ ಅಂದುಕೊಂಡು ಬಿಟ್ಟುಹೋದ ಸಂದರ್ಭದಲ್ಲಿ ಎದೆಗುಂದಲಿಲ್ಲ. ಎದ್ದರು, ಚೇತರಿಕೆಯಿಂದ ಇಡೀ ರಾಜ್ಯದ ಬಡವರಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಈ ರೀತಿ ಹೊಡೆತ ಕೊಡುವುದಾದರೆ ಹತ್ತಾರು ಬಾರಿ ಹೊಡೆತ ತಿನ್ನುತ್ತೇನೆ, ಜೈಲಿಗೆ ಹೋಗುತ್ತೇನೆ ಅಂತ ತೀರ್ಮಾನ ಮಾಡಿ ಹೋರಾಟ ಮಾಡಿದರಲ್ಲಾ ಅಂತಹವರ ಹಿರಿಯ ಹೋರಾಟ ಮಾಡಿದ್ದಕ್ಕೋಸ್ಕರ ನಾವಿವತ್ತು ಆಡಳಿತ ಪಕ್ಷದ ಕಡೆ ಕುಳಿತಿದ್ದೇವೆ. ಅದಕ್ಕೋಸ್ಕರ ನಾನು ನಿಮಗೂ ಕೇಳುವುದು ಇಷ್ಟೇ ಇತ್ತೀಚಿನ ಕಾಂಗ್ರೆಸ್ ನಾಯಕರನ್ನು ನೋಡಬೇಡಿ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕಾಂಗ್ರೆಸ್ ನಾಯಕರ ನೆನಪು ಮಾಡಿಕೊಳ್ಳಿ. ಅವರ ಕನಸನ್ನು ನನಸು ಮಾಡಬೇಕಾಗಿದೆ. ಹರಿಜನ ಕೇರಿಗಳಲ್ಲಿ ಕುಂಬಾರ ಕೇರಿಗಳಲ್ಲಿ ಕುರುಬರ ಕೇರಿಗಳಲ್ಲಿ ಲಂಬಾಣಿ ತಾಂಡಗಳಲ್ಲಿ ಅಗಸರ ಓಣಿಗಳಲ್ಲಿ ಬಡವರು ವಾಸ ಮಾಡುತ್ತಿರುವಂತಹ ಜಾಗಗಳಲ್ಲಿ ಅವರ ಮಕ್ಕಳಿಗೆ ಇನ್ನೂ ವಿದ್ಯೆ ಸಿಕ್ಕಿಲ್ಲ. ನಿಮ್ಮ ನಿಮ್ಮ ಕ್ಷೇತ್ರದಲ್ಲೂ ನಿಮಗೆ ಅನುಭವ ಆಗಿರಬಹುದು. ಹೈಸ್ಕೂಲ್ ಓದುತ್ತೇನೆ ಅನ್ನುವವರಿಗೆ ಸೀಟುಗಳಿಲ್ಲ. ಕಾಲೇಜ್ ಓದಲು ಕಾಲೇಜಿಲ್ಲ. ನಾನು ಮಾತನಾಡಿದರೆ ನಿಮಗೆ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ ನಾನು ಏನು ಮಾಡಲಿ ಹೇಳಿ. ಬಹಳ ವರ್ಷಗಳು ಅಧಿಕಾರದಲ್ಲಿ ಕೂತು ಅವರಿಗೆ ಕುರ್ಚಿ ಚುಚ್ಚುತಾ ಇದೆ. ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಹೌದ್ರಿ ನಾನು ಚೆಡ್ಡಿ ಹಾಕುವುದಕ್ಕೆ ಅವಮಾನ ಏನಿಲ್ಲ, ಅದಕ್ಕಾಗೇ ನಾನು ಇವತ್ತು ಈ ಸ್ಥಿತಿಗೆ ಬಂದಿರುವುದು. ಆರ್‌ಎಸ್‌ಎಸ್ ಬಗ್ಗೆ ಚರ್ಚೆ ಬೇಡ. ಬೇಕು ಅಂದರೆ ನಾನು ಸಿದ್ಧ. ಆದರೆ ನಿಮಗೆ ಚೆಡ್ಡಿ ಅಂತ ಹೇಳೋಕೆ ಯೋಗ್ಯತೇನು ಇಲ್ಲ. ಅದಕ್ಕೇ ಅದರ ಸುದ್ದಿ ಬೇಡ. ಹೀಗಾಗಿ

ಕರ್ನಾಟಕದ ಅನೇಕ ಹಿರಿಯರ ತಪಸ್ಸಿನ ಫಲದಿಂದ ಇವತ್ತು ಬಿಜೆಪಿ-ಜೆಡಿಎಸ್ ಅಧಿಕಾರಕ್ಕೆ ಬಂದಿದೆ. ಎಲ್ಲಾ ಬಡವರಿಗೆ ಎಲ್ಲಾ ರೈತರಿಗೆ ಕೃಷಿ ಕಾರ್ಮಿಕರಿಗೆ ನ್ಯಾಯ ದೊರಕಿಸಬೇಕು. ವಿದ್ಯೆ ಸಿಗಬೇಕು, ಮನೆ ಸಿಗಬೇಕು. ಕುಡಿಯುವ ನೀರು ಸಿಗಬೇಕು ಸಾಮಾನ್ಯ ಸವಲತ್ತು ಸಿಗಬೇಕು. ಈ ರಾಜ್ಯ ದೇಶಕ್ಕೇ ಮಾದರಿ ರಾಜ್ಯವಾಗುವ ನಿಟ್ಟಿನಲ್ಲಿ ಈ ರಾಜ್ಯವನ್ನು ಕೊಂಡೊಯ್ಯಬೇಕಾಗಿದೆ. ಹೀಗಾಗಿ ನಮ್ಮ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿಗಳು ಏನು ನಿರ್ಣಯ ಮಂಡನೆ ಮಾಡಿದ್ದಾರೆ ಮನಃ ಪೂರ್ವಕವಾಗಿ ಅದಕ್ಕೆ ಬೆಂಬಲ ಕೊಟ್ಟು, ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಿದ್ದೇನೆ. ಇವತ್ತು ನಮ್ಮ ರಾಜ್ಯ ಒಂದು ಗಂಡಾಂತರಕಾರಿ ಮತ್ತು ಯಾತನಾಮಯವಾದಂಥ ರಾಜಕೀಯ ಪರಿಸ್ಥಿತಿ ಎದುರಿಸುತ್ತಿದೆ. ಆ ಪರಿಸ್ಥಿತಿ ಈ ರಾಜ್ಯಕ್ಕೆ ಏಕೆ ಬಂದಿದೆ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತದ ಯಾಚನೆ ಮಾಡಿದ್ದಾರೆ. ಇಲ್ಲಿ ಭಿನ್ನಭಿನ್ನ ವಿಚಾರಗಳ ಪ್ರಸ್ತಾಪವಾಗುತ್ತಿದೆ. ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮದೆ ಆದ ವಿಚಾರ ಮಂಡಿಸುತ್ತಿರುವಾಗ ಈ ರೀತಿ ಸದನದಲ್ಲಿ ಭಂಗ ಮಾಡುವುದು ಸರಿಯಲ್ಲ.

**ಅಧ್ಯಕ್ಷರು** : ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿ. ದಯಮಾಡಿ ಸದಸ್ಯರು ಏನು ಹೇಳುತ್ತಿದ್ದಾರೆಂದು ಕೇಳಿ, ಅವರ ಕೆಲವು ಮಾತು ನಿಮಗೆ ಅಪಥ್ಯವಾಗಬಹುದು. ಅದಕ್ಕಾಗಿ ಗಲಾಟೆ ಮಾಡುವುದು ಈ ಸಭೆಗೆ ಭೂಷಣವಲ್ಲ. ಜನ ನಿಮ್ಮನ್ನು ಆರಿಸಿ ಕಳುಹಿಸಿ ಟಿವಿಯಲ್ಲಿ ನೋಡುತ್ತಾ ಇದ್ದಾರೆ, ಏನೇನು ಮಾಡುತ್ತಿದ್ದೀರಿ ಹೇಗೆ ಹೇಗೆ ಮಾಡುತ್ತಿದ್ದೀರಿ ಏನು ಮಾತನಾಡುತ್ತಿದ್ದೀರಿ ಅಂತ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿಕೊಳ್ಳಲಿ ಬಿಡಿ, ನನಗೇನೂ ಬೇಸರವಿಲ್ಲ. ಏಕೆಂದರೆ ಬರ್ಟ್ರೆಂಡ್ ರಸೆಲ್ ಒಂದು ಕಡೆ ಹೇಳುತ್ತಾರೆ: I may not agree with your opinion, but I will die to protect your right of speaking ಅದನ್ನು ಯಾರಾದರೂ ಅರ್ಥ ಮಾಡಿಕೊಂಡರೆ ಮಾಡಿಕೊಳ್ಳಲಿ ಇಲ್ಲದಿದ್ದರೆ ಬಿಡಿ ಯಾಕೆಂದರೆ ಅದು ಅವರವರಿಗೆ ಬಿಟ್ಟಂತಹ ವಿಚಾರ. ಆದ್ದರಿಂದ ಇಂತಹ ಒಂದು ರಾಜಕೀಯ ಸನ್ನಿವೇಶಕ್ಕೆ ಯಾರು ಕಾರಣ? ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಇಲ್ಲಿರುವ ನಾವೆಲ್ಲರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಇವರ ಮೇಲೆ ಅವರು ಅಪವಾದ ಹಾಕುವುದು ಅವರ ಮೇಲೆ ಇವರು ಅಪವಾದ ಹಾಕುವುದು ಇದರಲ್ಲಿ ಯಾವುದೇ ಅರ್ಥವಿಲ್ಲ. ಇಂತಹ ಒಂದು ಪರಿಸ್ಥಿತಿಗೆ ಕಾರಣ ಯಾರು? ಜಾತ್ಯಾತೀತವಾದವನ್ನು ಎತ್ತಿಹಿಡಿಯುವುದಕ್ಕಾಗಿ ಸರ್ಕಾರ ಮಾಡಿದೆವು ಅಂತ ಹೇಳಿದ ಜನ ಕಾರಣನಾ? ಅಥವಾ ನಾವು ಜಾತ್ಯಾತೀತರಲ್ಲ ಅಂತ ಹೇಳಿದವರು ಇದಕ್ಕೆ ಕಾರಣನಾ ಅಂತ ಹೇಳುವುದಾದರೆ ನನ್ನ ಅಭಿಪ್ರಾಯದಲ್ಲಿ ಇಂತಹ ಸ್ಥಿತಿಯನ್ನು ಈ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣ ಮಾಡಿರತಕ್ಕಂತಹ ಮೊಟ್ಟಮೊದಲ ಅಪರಾಧಿ ಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ನಿಲ್ಲಬೇಕು. ಬೇರೆ ಯಾರೂ ಅಲ್ಲ ಇದಕ್ಕೆ.

ಇಂತಹ ಒಂದು ಸ್ಥಿತಿಗೆ ಶೇಕಡ 60 ರಷ್ಟು ಕಾಂಗ್ರೆಸ್ ಕಾರಣ. ಜಾತ್ಯಾತೀತವಾದಿ ಶಕ್ತಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದೇವೆ ಅಂತ ಹೇಳಿದರೋ ಅಂತಹವರಿಗೆ ಇವತ್ತು ಕೋಮುವಾದಿಗಳ ಹತ್ತಿರ ಸರ್ಕಾರ ಹೋಗಿದೆ ಅಂತ ಹೇಳಲು ಯಾವುದೇ ನೈತಿಕ ಹಕ್ಕೂ ಉಳಿದಿಲ್ಲ. ಈ ಸ್ಥಿತಿ ನಿರ್ಮಾಣ ಮಾಡಿದಂಥ ಅಪರಾಧವನ್ನು ಅವರು ಹೊರಲೇಬೇಕು. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಅವರಿಗೆ ಹೇಗೆಂದರೆ ನನ್ನ ಹತ್ತಿರ ಹೇಳಿಕೆಗಳೆಲ್ಲಾ ಇವೆ, ಆದರೆ ಅಷ್ಟು ಸಮಯ ಇಲ್ಲ, ನೀವು ಅನುಮತಿ ಕೊಟ್ಟರೆ ಹೇಳುತ್ತೇನೆ. ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಅವರೆಲ್ಲಾ ಏನೆಲ್ಲಾ ಹೇಳಿದ್ದಾರೆ, ಒಂದು ಕಡೆ ಮಾನ್ಯ ದೇವೇಗೌಡರ ಬಗ್ಗೆ ಕಾಂಗ್ರೆಸ್ ಮುಖಂಡರೊಬ್ಬರು ಹೇಳುತ್ತಾರೆ, 'He is the leader of land mafia.' ಎಂದು. ಅಲ್ಲಾ ಸ್ವಾಮಿ, ಲ್ಯಾಂಡ್ ಮಾಫಿಯಾ ಲೀಡರ್ ಜೊತೆ ನೀವು ಸರ್ಕಾರ ರಚನೆ ಮಾಡಿದಿರಲ್ಲಾ; ಮಾನ್ಯ ಅಧ್ಯಕ್ಷರೆ, ಇಲ್ಲೆಲ್ಲಾ ಹಿರಿಯರು ಕುಳಿತಿದ್ದಾರೆ. ನನಗೆ ಬಹಳ ಕಡಿಮೆ ಅನುಭವ ಇದೆ. 2004ನೇ ಇಸವಿ ಮೇ 20ನೇ ತಾರೀಖಿನಿಂದ ಇವತ್ತಿನ ತನಕ ಮೊನ್ನೆ ಅಂದರೆ 19ನೇ ತಾರೀಖಿನವರೆಗೆ ಪತ್ರಿಕೆಗಳನ್ನು ತೆಗೆದುನೋಡಿ. ಕಾಂಗ್ರೆಸ್ ಪಕ್ಷದವರು ಜಾತ್ಯಾತೀತ ಜನತಾದಳದ ಮುಖಂಡರ ಬಗ್ಗೆ ಏನೆಲ್ಲಾ ಮಾತನಾಡಿದ್ದಾರೆ. ಯಾವ ಯಾವ ಭಾಷೆಯನ್ನು ಬಳಸಿದ್ದಾರೆ. ಅದೇ ರೀತಿಯಲ್ಲಿ ಅವರು ಇವರ ಬಗ್ಗೆ ಯಾವ ಯಾವ ಭಾಷೆಯನ್ನು ಬಳಸಿದ್ದಾರೆ. ಆಲೋಚನೆ ಮಾಡಿ ನೋಡಿ. ಇದಕ್ಕೆ ಯಾರು ಕಾರಣ? ಇವತ್ತು ನಮ್ಮ ಪಕ್ಷ ಇದೇ ಸದನದಲ್ಲಿ ಇದ್ದು ದಾಖಲೆ ತೆಗೆದು ನೋಡಬಹುದು. ಈ ಸರ್ಕಾರ ರಚನೆ ಮಾಡತಕ್ಕ ಸಂದರ್ಭದಲ್ಲಿ ಒಂದು ವಿಚಾರದಲ್ಲಿ ನನ್ನ ಪಕ್ಷದ ಪರವಾಗಿ ನಾನು ಹೇಳಿದ್ದೆ. ಏನು ಎಂದರೆ ಆ ಸರ್ಕಾರ ರಚನೆ ಮಾಡತಕ್ಕ ಸಂದರ್ಭದಲ್ಲಿ ಇದು ಅಪವಿತ್ರ ಸರ್ಕಾರ. ಕಾಂಗ್ರೆಸ್‌ಗೆ ಕರ್ನಾಟಕ ರಾಜ್ಯದಲ್ಲಿ ಜನತೆ ತಿರಸ್ಕಾರ ಮಾಡಿದ್ದಾರೆ. ಇವರು ಸರ್ಕಾರದಲ್ಲಿ ಸೇರಬಾರದು. ಇವರಿಗೇನಾದರೂ ಪ್ರಾಮಾಣಿಕವಾಗಿ ಜಾತ್ಯಾತೀತ ಮೌಲ್ಯಗಳನ್ನು ರಚನೆ ಮಾಡಬೇಕೆನ್ನುವ ಉದ್ದೇಶವಿದ್ದರೆ ಹೊರಗಿನಿಂದ ಜೆಡಿ(ಎಸ್)ಗೆ ಬೆಂಬಲವನ್ನು ಕೊಡಬೇಕು. ಇವರು ಸರ್ಕಾರದಲ್ಲಿ ಸೇರಬಾರದು ಎನ್ನತಕ್ಕ ವಿಷಯವನ್ನು ನಾನು ಈ ಸದನದಲ್ಲಿ ನನ್ನ ಪಕ್ಷದ ಪರವಾಗಿ ಹೇಳಿದ್ದೆ. ಏಕೆಂದರೆ 185 ಜನರು ಸದಸ್ಯರು ಇದ್ದಂಥ ಈ ಸದನದಲ್ಲಿ ಅವರು 65ಕ್ಕೆ ಇಳಿದರು. ಪರ್‌ಸೆಂಟೇಜ್ ಆಫ್ ವೋಟ್ ಲೆಕ್ಕ ಇಲ್ಲ. ಅದಕ್ಕೆ ಗೌರವಾನ್ವಿತ ಮೌಲಂಕರ್‌ರವರು ಈ ಅಂಕಿಸಂಖ್ಯೆಗಳ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಹೇಳುತ್ತಾರೆ.

"The real democracy one has to look, not merely the provisions of the Constitution or the rules and regulations made for the conduct of business in the Legislature. but, one has to foster a real democratic spirit in the House who, from the Legislature. If this fundamental is borne in mind, it will be clear that though question would be decided by the majority, parliamentary government will not be possible if it is reduced to a mere counting of heads or hands. If we are to go merely by majority, we shall be fostering the seeds of fascism....

ಇದನ್ನು ನೀವು ತಿಳಿದುಕೊಳ್ಳಬೇಕು. ನಾವು ಬರೀ ಮೆಜಾರಿಟಿ ಅಂಕಿಸಂಖ್ಯೆಗಳಲ್ಲೇ ಮಾತನಾಡುವುದಾದರೆ, it fosters fascism. This is Mavalankar's statement.

"…. Violence and revolt. If, on the other hand, we could help to foster the spirit of tolerance, a spirit of freedom of discussion and spirit of understanding, we shall be fostering the spirit of democracy." ಇದು ಅಂಕಿಸಂಖ್ಯೆಗಳ ಜಾದೂ ಅಲ್ಲ ಈ ಡೆಮಾಕ್ರಸಿ. ನೀವೇ ಹೇಳಿದಿರಿ, ಜಾತ್ಯಾತೀತ ಮೌಲ್ಯಗಳನ್ನು ರಕ್ಷಣೆ ಮಾಡುವುದಕ್ಕೋಸ್ಕರ ಸರ್ಕಾರ ರಚನೆ ಮಾಡಬೇಕೆಂದು ಹೇಳಿ. ಆ ಜಾತ್ಯಾತೀತ ಮೌಲ್ಯಗಳನ್ನು ಇವತ್ತು ಹಾಳು ಮಾಡಿ ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರಲಿಕ್ಕೆ ನಿಮ್ಮದೇ ಕಾಂಟ್ರಿಬ್ಯೂಷನ್ ಇದರಲ್ಲಿರತಕ್ಕದ್ದು. ಬೇರೆ ಯಾರದೂ ಇಲ್ಲ. ಪ್ರಾರಂಭದಿಂದ ನೀವು ನೋಡಿ. ಈ ಕಾಂಗ್ರೆಸ್ ಪಕ್ಷಕ್ಕೆ ಒಂದು ಇತಿಹಾಸ ಇದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. 110 ವರ್ಷಗಳ ಇತಿಹಾಸ ಇದೆ ನಮ್ಮ ಪಕ್ಷಕ್ಕೆ ಎಂದು, ನಿಜ. It is the one party which is having the longest history in the Indian politics. We will respect that party. We will respect not only for that. That party had played a very important role in the freedom of struggle. We will respect for that. Sir, but, ಈ ಕಾಂಗ್ರೆಸ್ ಇತಿಹಾಸದಲ್ಲಿ ಒಂದು ಕ್ಯಾನ್ಸರ್ ರೋಗ ಇದೆ. ಇನ್ನೊಬ್ಬರನ್ನು ಅಧಿಕಾರಕ್ಕೆ ತರತಕ್ಕಂಥದ್ದರಲ್ಲಿ ಅವರು ಯಾವತ್ತೂ ಅದನ್ನು ಇಷ್ಟಪಡುವುದಿಲ್ಲ. ಇನ್ನೊಬ್ಬರ ಜೊತೆಗೆ ಅಧಿಕಾರ ಹಂಚಿಕೊಳ್ಳುವುದಕ್ಕೆ ಅವರು ಯಾವತ್ತೂ ಇಷ್ಟಪಡುವುದಿಲ್ಲ. ಅದಕ್ಕೇನೇ it was called authoritarian Congress. For that authoritarian tendency, Jayaprakashnarayan has fought.ಈ ಟೆಂಡೆನ್ಸಿಯಿಂದಾಗಿ ಇವತ್ತೂ ಅದೇ ಖಾಯಿಲೆ ಇದೆ. ಏನೆಂದರೆ ನಾವು ಯಾರ ಜೊತೆಗೂ ಅಧಿಕಾರ ಹಂಚಿಕೊಳ್ಳುವುದಕ್ಕೆ ತಯಾರು ಇಲ್ಲ. ನಮಗೆ ಸ್ವಂತ ಅಧಿಕಾರ ಬೇಕೆಂದು ಹೇಳುತ್ತಾರೆ. ಆದರೆ ಈ ಭಾರತ ದೇಶಕ್ಕೆ ರಾಜಕೀಯ ಪರಿಸ್ಥಿತಿ ದುರಾದೃಷ್ಟವಶಾತ್ ಅವರ ಅಭಿಪ್ರಾಯಗಳಿಗೆ ಹೊಂದುತ್ತಿಲ್ಲ. ಇವತ್ತು ಕೊಯಿಲಿಷನ್ ಪಾಲಿಟಿಕ್ಸ್‌ನ ಎರಾ ಬಂದಿದೆ. You must learn how to run the coalition government, whether you may be a larger number, and another partner may be a lesser number. But, there is a coalition Dharma. ಆ ಕೊಯಿಲಿಷನ್ ಧರ್ಮವನ್ನು ಯಾವುದಾದರೂ ಒಂದು ಹಂತದಲ್ಲಿ ಮಾನ್ಯ ಧರ್ಮಸಿಂಗ್ ಅವರನ್ನು ಒಬ್ಬರನ್ನು ಬಿಟ್ಟರೆ ಇಡೀ ಕಾಂಗ್ರೆಸ್ ಪಕ್ಷ ಯಾರಾದರೂ ಒಬ್ಬರು ಪ್ರಾಮಾಣಿಕವಾಗಿ ಪಾಲಿಸಿದ್ದರೆ ಅವರ ಆತ್ಮಸಾಕ್ಷಿಯಾಗಿ ಅವರು ಹೇಳಿಬಿಡಲಿ. ಎಕ್ಸೆಪ್ಟ್ ಧರ್ಮಸಿಂಗ್ ಆ ಧರ್ಮಸಿಂಗ್‌ರವರು ಇದ್ದ ಕಾರಣಕ್ಕೋಸ್ಕರವೇ 20 ತಿಂಗಳು ಸರ್ಕಾರ ನಡೆದಿರುವಂಥದ್ದು. ಈ ಕಾಂಗ್ರೆಸ್ ಪಕ್ಷದಿಂದ ಅಲ್ಲ. ಈ ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರುಗಳು ಪ್ರಾರಂಭದಿಂದ ಈ ಸರ್ಕಾರವನ್ನು ಉರುಳಿಸಲೇಬೇಕು ನಮಗೆ ಇಲ್ಲದೇ ಇರುವ ಅಧಿಕಾರ ಇನ್ನೊಬ್ಬರು ಹಿಡಿಯುವುದನ್ನು ನಾವು ಇಷ್ಟಪಡುವುದಿಲ್ಲ ಎಂಬ ಉದ್ದೇಶವೇ ಇದರ ಕಾರಣ. ಧರ್ಮಸಿಂಗ್‌ರಂಥ ಒಬ್ಬ ಅಲ್ಪಸಂಖ್ಯಾತ ಹೋರಾಟದಿಂದ ಬಂದ ಒಬ್ಬ ಮನುಷ್ಯನನ್ನು ಮುಖ್ಯಮಂತ್ರಿಯಾಗಿ ಟಾಲರೇಟ್ ಮಾಡಲಿಕ್ಕೆ ಇವರ ಕೈಯಲ್ಲಿ ಆಗಲಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ** : ನಮ್ಮ ಪಕ್ಷದಿಂದಲೇ ಅಲ್ಲವೇ ಅವರನ್ನು ಮುಖ್ಯಮಂತ್ರಿ ಮಾಡಿದ್ದು.

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಮಗೆ ಗೊತ್ತಿದೆ ಮಾನ್ಯ ರಾಮಲಿಂಗಾರೆಡ್ಡಿಯವರೇ. ಯಾರೂ ಮಾಡಿದರು ಎನ್ನುವ ಸತ್ಯ ನಮಗೆ ಗೊತ್ತಿದೆ. ನೀವು ಕುಳಿತುಕೊಳ್ಳಿ.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ರಾಮಲಿಂಗಾರೆಡ್ಡಿಯವರೆ, ಅವರು ಮಾತನಾಡಲಿ. ಅಭಿಪ್ರಾಯ ಕೇಳಿ. ಆನಂತರ ಏನಾದರೂ ಇದ್ದರೆ ಹೇಳಿ. ಅವರ ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ. ಅವರು ಹೇಳಲಿ.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ಅವರಿಗೆ ಉತ್ತರ ಕೊಡ ಕೂಡದು. ನೇರವಾಗಿ ನೀವು ಮಾತನಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಇಲ್ಲ. ಸಾರಿ ಸಾರ್. ಈಗ ಪ್ರತಿ ಹಂತದಲ್ಲೂ ಆ ಹಿಂಸೆಯನ್ನು ಧರ್ಮಸಿಂಗ್ ಅವರಿಗೆ ಮಾಡಿದ್ದಾರೆ. ಧರ್ಮಸಿಂಗ್ ಅವರಿಗೆ ಮಾತ್ರ ಹಿಂಸೆ ಕೊಡಲಿಲ್ಲ. ಆ ಮನುಷ್ಯ ಆಗಿದ್ದಕ್ಕೆ ತಡೆದುಕೊಂಡಿದ್ದಾರೆ. ಇನ್ಯಾವುದೇ ಮನುಷ್ಯ ಆ ಸ್ಥಾನದಲ್ಲಿದ್ದರೆ ತಡೆಯಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರೊಬ್ಬರಿಗೇ ಇವರು ಹಿಂಸೆ ಕೊಡಲಿಲ್ಲ. ಇವರಿಗೇನೂ ಕಡಿಮೆ ಹಿಂಸೆ ಕೊಡಲಿಲ್ಲ ಅವರು. ದೇವೇಗೌಡರ ಬಗ್ಗೆ ಇವತ್ತು ನಾವೆಲ್ಲರೂ ಮಾತನಾಡುತ್ತೇವೆ. ಅಧಿಕಾರ ಇದೆ, ಮಾತನಾಡಿ. ನಾವು ಏನೂ ಬೇಡ ಎಂದು ಹೇಳುವುದಿಲ್ಲ. ಪ್ರಜಾಪ್ರಭುತ್ವ ದೇವೇಗೌಡರು ಪ್ರಧಾನಮಂತ್ರಿಯಾಗಿ ಇರಲೇಬೇಕು ಎನ್ನುವ ಆಸೆ ಏನಾದರೂ ಅವರಿಗೆ ಇದ್ದಿದ್ದರೆ ಅವತ್ತು ಬಿಜೆಪಿ ಬೆಂಬಲ ಕೊಡುವುದಕ್ಕೆ ತಯಾರು ಇತ್ತು. ಏಕೆ ತೆಗೆದುಕೊಳ್ಳಲಿಲ್ಲ ಅವರು? ಈ ಇತಿಹಾಸ ಸತ್ಯವನ್ನು ಯಾರೂ ಮರೆಯಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿಯೇ ಇವತ್ತು ಮಾನ್ಯ ಕುಮಾರಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಖಂಡಿತವಾಗಿಯೂ ಅವರಿಗೆ ಅಭಿನಂದನೆಯನ್ನು ಮಾಡುತ್ತೇನೆ. ಒಬ್ಬ ಯುವಕ ಮುಖ್ಯಮಂತ್ರಿಯಾಗಿದ್ದಾರೆ. ಆದರೆ ಕುಮಾರಸ್ವಾಮಿಯವರು ಭಾಷಣ ಪ್ರಾರಂಭ ಮಾಡಿದಾಗ ಒಂದು ವಿಚಾರವನ್ನು ಹೇಳಿದರು. ಇವತ್ತು ಬಹಳ ಪುಣ್ಯದ ದಿವಸ. ಮಹಾಮಸ್ತಾಕಾಭಿಷೇಕ ಶ್ರವಣಬೆಳಗೊಳದಲ್ಲಿ ನಡೆಯುತ್ತಿದೆ. ಅಂಥ ದಿವಸದಲ್ಲಿ ನಾನು ಈ ಅಧಿಕಾರ ಚುಕ್ಕಾಣಿಯನ್ನು ಹಿಡಿಯತಕ್ಕಂಥ ಒಂದು ಸದಾವಕಾಶ ನನಗೆ ಸಿಕ್ಕಿದೆ ಎಂದು. ಮಾನ್ಯ ಕುಮಾರಸ್ವಾಮಿಯವರಿಗೆ ನಾನು ಹೇಳುವುದಕ್ಕೆ ಬಯಸುತ್ತೇನೆ. ಬಾಹುಬಲಿ ತ್ಯಾಗದ ಪ್ರತೀಕ. ಬಾಹುಬಲಿ ಹೇಳಿದ್ದು ಆಸೆಯೇ ದುಃಖಕ್ಕೆ ಕಾರಣ ಎಂದು.

**(ಗೊಂದಲ)**

ಗೊತ್ತಿದ್ದರೆ ಹೇಳ್ರಿ. ಸುಮ್ಮನೆ ಏಕೆ ಇಲ್ಲ ಎಂದು ಹೇಳುತ್ತೀರಿ. ನಿಮಗೆ ಜೈನಧರ್ಮ ಬೌದ್ಧಧರ್ಮದ ಬಗ್ಗೆ ವ್ಯತ್ಯಾಸವೇ ಗೊತ್ತಿಲ್ಲ. ಏಕೆ ಮಾತನಾಡುತ್ತೀರಿ ಸುಮ್ಮನೆ ಕೂಡ್ರಿ. ಆಸೆಯೇ ದುಃಖಕ್ಕೆ ಕಾರಣ. ಸ್ವಾರ್ಥವೇ ಹಿಂಸೆಗೆ ಕಾರಣ ಎಂದು ಹೇಳಿದ್ದಾರೆ. ಮಾನ್ಯ ಕುಮಾರಸ್ವಾಮಿಯವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಬಾಹುಬಲಿ ಸರ್ವಸಂಗ ಪರಿತ್ಯಾಗ ಆತ. ಸರ್ವಸಂಗ ಪರಿತ್ಯಾಗಿ. ಅವರಿಗೆ ನಾವು ಹೋಲಿಸಿಕೊಳ್ಳುವುದಾ? ಅದೇ ರೀತಿಯಲ್ಲಿ....

(ಗೊಂದಲ)

**ಶ್ರೀ ಹೆಚ್.ಡಿ. ಬಸವರಾಜ್** : ಅವರು ಹೋಲಿಕೆ ಮಾಡಲಿಲ್ಲ ಸಾರ್. ಇವತ್ತು ಮಹಾಮಸ್ತಾಕಾಭಿಷೇಕ ನಡೆಯುತ್ತಿರುವ ಪುಣ್ಯ ದಿನ ಎಂದು ಅವರು ಹೇಳಿದ್ದಾರೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಬಾಹುಬಲಿ ಸ್ವಾರ್ಥವೇ ಹಿಂಸೆಗೆ ಮೂಲ ಕಾರಣ ಎಂದು ಹೇಳಿದ ಬಾಹುಬಲಿ ಯಾರ್‍ಯಾರಿಗೆ ಅಪ್ಲೈ ಆಗುತ್ತದೋ ಅದು ಎಲ್ಲರಿಗೂ ಆಗುತ್ತದೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳಬೇಡಿ. ಹಾಗಾಗಿ ಬಾಹುಬಲಿಯ ಮಹಾ ಮಸ್ತಕಾಭಿಷೇಕದ ದಿವಸ ಅಧಿಕಾರ ಸ್ವೀಕಾರ ಮಾಡುತ್ತಿರುವುದು ನೀವು ತ್ಯಾಗದ ಬಲದಿಂದಲೂ ಅಲ್ಲ. ಆ ರೀತಿ ನಿಮಗೆ ಏನಾದರೂ ಇದ್ದಿದ್ದೇ ಆಗಿದ್ದರೆ ಮಾನ್ಯ ದೇವೇಗೌಡರಿಗೆ ಬಂದಿರತಕ್ಕಂಥ ಮಾನಸಿಕ ಹಿಂಸೆ ಇವತ್ತು ನೋಡಬೇಕು. ಏಕೆ ಅಂದರೆ ನಾವು ದೇವೇಗೌಡರ ಜೊತೆ 30 ವರ್ಷಗಳ ಕಾಲ ಅವರ ಜೊತೆ ಭುಜಕ್ಕೆ ಭುಜ ಕೊಟ್ಟು ಅವರ ಜೊತೆ ಕೆಲಸ ಮಾಡಿದ್ದೇವೆ. ಮಾನ್ಯ ಕುಮಾರಸ್ವಾಮಿಯವರು ಒಂದು ದಿವಸ ಹೇಳಿಕೆ ಕೊಟ್ಟಿದ್ದರು. ನನಗೆ ಬಾರೀ ನೋವಾಯಿತು ಅವತ್ತು. ಏನೆಂದರೆ ನಮ್ಮಪ್ಪ ಕಷ್ಟದಲ್ಲಿದ್ದಾಗ ಯಾರೂ ಸಹಾಯಕ್ಕೆ ಬರಲಿಲ್ಲ. ಈ ಪಕ್ಷಗಳೆಲ್ಲಾ ಏನು ಮಾಡುತ್ತಿತ್ತು ಎಂದು ಮಾನ್ಯ ಕುಮಾರಸ್ವಾಮಿಯವರು ಹೇಳಿದ್ದರು. ಪಾಪ ಇಷ್ಟು ಬೇಗ ಅವರು ಆ ಮಾತನ್ನು ಮರೆಯುತ್ತಾರೆಂದು ನಮಗೆ ಗೊತ್ತಿರಲಿಲ್ಲ. ಅದೇ ದೇವೇಗೌಡರನ್ನು ಈ ದೇಶದ ಪ್ರಧಾನ ಮಂತ್ರಿ ಸ್ಥಾನಕ್ಕೆ ಸೂಚನೆ ಮಾಡಿದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ. ಅವತ್ತು ನಮಗೆ ಅವಕಾಶ ಸಿಕ್ಕಿತ್ತು. ಜ್ಯೋತಿ ಬಸು ಪ್ರಧಾನ ಮಂತ್ರಿ ಆಗಬೇಕು ಎಂದು ಹೇಳಿ ಇತ್ತು. ನಾವು ಅದನ್ನು ಕೈಬಿಟ್ಟೆವು. ನಮಗೆ ಬೇಡ ಎಂದು ಹೇಳಿದೆವು. ಅದರ ಬದಲಿಗೆ ದೇವೇಗೌಡರು ಪ್ರಧಾನ ಮಂತ್ರಿಗಳಾಗಬೇಕು ಎಂದು ನಾವು ಸೂಚನೆ ಮಾಡಿದೆವು. ದೇವೇಗೌಡರನ್ನು ಇವತ್ತಿನವರೆಗೂ till this day, we have not abandoned him. Till this day, we are not relegating him. ಅವರು ಆತ್ಮಪೂರ್ವಕವಾಗಿ ಸೆಕ್ಯುಲರಿಸ್ಟಾ ಮೇಲು ನೋಟಕ್ಕೆ ಸೆಕ್ಯುಲರಿಸ್ಟಾ ಎಂಬುದು ನಮಗೆ ಬೇಕಾಗಿಲ್ಲ. ಯಾರ ಆತ್ಮವನ್ನು ಯಾರೂ ನೋಡಲಿಕ್ಕೆ ಇಲ್ಲಿ ಸಾಧ್ಯವಿಲ್ಲ. ಆತ್ಮದಲ್ಲಿ ಏನೇನು ಇದೆ ಎಂದು ನೋಡಲಿಕ್ಕೆ ಸಾಧ್ಯವಿಲ್ಲ. ಅದನ್ನು ಹೇಳುವುದೇ ಆದರೆ ಕುಮಾರಸ್ವಾಮಿಯವರು ಹೇಳಿದರು. ನನಗೆ ಬಾರಿ ಬೇಸರದ ವಿಚಾರ ಏನು ಎಂದರೆ "H.D. Kumara Swamy searching for secularism." ಎಂದು ಯಾವತ್ತು ಹೇಳಿರುವುದು ಗೊತ್ತಾ? ಜನವರಿ 30ನೇ ತಾರೀಖಿನ ದಿವಸ. ಜನವರಿ 30ನೇ ತಾರೀಖಿಗೆ ಈ ದೇಶದ ಇತಿಹಾಸದಲ್ಲಿ ಇರತಕ್ಕಂಥ ಪಾವಿತ್ರ್ಯತೆ ಏನು? ಜನವರಿ 30ಕ್ಕೆ ಇತಿಹಾಸ ಏನು? ಅವರಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಜನವರಿ 30ನೇ ತಾರೀಖು ಮಹಾತ್ಮಾ ಗಾಂಧಿಯನ್ನು ನಾಥೂ ರಾಂ ಗೋಡ್ಸೆ ಗುಂಡಿಟ್ಟು ಕೊಂದಿದ್ದು. ಅದನ್ನೇ ನಾವು ಹುತಾತ್ಮರ ದಿನಾಚರಣೆ ಎಂದು ಇಡೀ ದೇಶದಲ್ಲಿ ಜನವರಿ 30ರಂದು ಆಚರಣೆ ಮಾಡುತ್ತಿದ್ದೇವೆ. ಮಹಾತ್ಮಾ ಗಾಂಧಿಯನ್ನು ಕೊಲೆ ಮಾಡಿದ್ದು ಯಾರು? ಕೋಮುವಾದಿ ಶಕ್ತಿ. ಆ ಕೋಮುವಾದಿ ಶಕ್ತಿಗಳ ವಿರುದ್ಧ ಜೀವನದ ಉದ್ದಕ್ಕೂ ಹೋರಾಟ ಮಾಡಿದಂತಹ ಮಹಾತ್ಮ ಗಾಂಧಿಯನ್ನು ಸಾಯಿಸಿದಂತಹ ದಿವಸ ಈ ರಾಜ್ಯದ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರೆ ಮಹಾತ್ಮ ಗಾಂಧಿಯವರ ಬಗ್ಗೆ ಪ್ರಸ್ತಾಪ ಮಾಡಿದರೆ ಮಹಾತ್ಮ ಗಾಂಧಿಯವರಿಗೆ ಗೌರವ ಕೊಟ್ಟ ಹಾಗೆ ಆಗುತ್ತದೆಯೇ? ಮಹಾತ್ಮ ಗಾಂಧಿಯ ಫೋಟೋ ಇಟ್ಟಿದ್ದೇವೆ ಏತಕ್ಕೋಸ್ಕರ ನಾವು ಮಹಾತ್ಮಗಾಂಧಿಯವರ ಫೋಟೋ ಅಲ್ಲಿ ಇಟ್ಟಿರುವುದು? ಮಹಾತ್ಮ

ಗಾಂಧಿಯವರು A religious binded secular man, he is a deep-rooted religious man, but he is a secular. ಆ ಸೆಕ್ಯುಲರಿಸಂಗೋಸ್ಕರ ತನ್ನ ಪ್ರಾಣವನ್ನು ಬಲಿ ಕೊಟ್ಟಂತಹ ರಾಷ್ಟ್ರಪಿತ. ಆ ದಿವಸ ಇವರು ಹೇಳಿಕೆ ಕೊಡುತ್ತಾರೆ. ನನಗೆ ಇನ್ನೊಂದು ನೋವಿನ ವಿಚಾರ. ನಾನು ಎಲ್ಲಾ ಡಿಕ್ಷನರಿಯಲ್ಲಿ ನೋಡಿದೆ. ನನಗೆ ಸೆಕ್ಯುಲರಿಸಂಗೆ ಮೀನಿಂಗೇ ಗೊತ್ತಾಗಲಿಲ್ಲ. ಮೇಧಾವಿಗಳನ್ನು ಕೇಳಿದೆ, ಬುದ್ಧಿಜೀವಿಗಳನ್ನು ಕೇಳಿದೆ ಎಂದು ಹೇಳಿದರು. ಇಷ್ಟೆಲ್ಲಾ ಕಷ್ಟ ಪಡುವುದರ ಬದಲು ಕುಮಾರಸ್ವಾಮಿಯವರು ಯಾರಿಗಾದರೂ ಹೇಳಿ 42ನೇ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಸಂವಿಧಾನದಲ್ಲಿ ಏನೇನು ಸೇರಿಸಿದ್ದಾರೆಂದು ನೋಡಿದರೆ ಗೊತ್ತಾಗಿ ಬಿಡುತ್ತಿತ್ತು. 1976ರ, 42 ಅಮೆಂಡ್‌ಮೆಂಟ್‌ನಲ್ಲಿ ಮೊದಲು ನಮ್ಮ ಪ್ರಿಯಾಂಬಲ್‌ನಲ್ಲಿ ಇದ್ದಂತಹದು 'Sovereign democratic republic' ಎಂದು 1976ರಲ್ಲಿ 42ನೇ ಅಮೆಂಡ್‌ಮೆಂಟ್ ಆದಮೇಲೆ 'Sovereign Socialistic secular democracy' ಎಂದು ಮಾನ್ಯ ಕುಮಾರಸ್ವಾಮಿಯವರು ಪ್ರಮಾಣ ವಚನ ಸ್ವೀಕಾರ ಮಾಡಿದಾಗ ನಾನು ಟಿ.ವಿ.ಯಲ್ಲಿ ನೋಡಿದೆ. ನಾನು ಈ ದೇಶದ ಸಂವಿಧಾನವನ್ನು ಈ ದೇಶದ ಸಮಗ್ರತೆಯನ್ನು ಐಕ್ಯತೆಯನ್ನು ಎತ್ತಿ ಹಿಡಿಯುತ್ತೇನೆ ಎಂದು ಹೇಳಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದಂತಹ ಮಾನ್ಯ ಕುಮಾರ ಸ್ವಾಮಿಯವರು ಈ ಕಾನ್‌ಸ್ಟಿಟ್ಯೂಷನ್ ಬಗ್ಗೆ ಇವತ್ತೇನು ಹೇಳುತ್ತಾರೆ? ಏನು ಹೇಳುತ್ತಾರೆ, ಸಂವಿಧಾನದ ಬಗ್ಗೆ. ನನಗೆ ಅವರ ಬಗ್ಗೆ ವೈಯಕ್ತಿಕವಾದಂತಹ ದ್ವೇಷ ಇಲ್ಲ. ನಾನು ವೈಯಕ್ತಿಕವಾಗಿ ಅವರನ್ನು ಬಹಳ ಇಷ್ಟಪಡುತ್ತೇನೆ. ಅವರು ಅಧಿಕಾರವನ್ನು ಪಡೆದುಕೊಳ್ಳುವಲ್ಲಿ ನನಗೆ ಸಂತೋಷ ಆಗಿದೆ. ಈ ರಾಜ್ಯದ ಒಬ್ಬ ಯುವಕ ಮುಖ್ಯಮಂತ್ರಿ ಆಗುತ್ತಿದ್ದಾರೆ. ಈ ರಾಜ್ಯವನ್ನು ಒಳ್ಳೆಯ ದಾರಿಯಲ್ಲಿ ಮುನ್ನಡೆಸಬೇಕು ಎನ್ನುವ ಭಾವನೆ ಇದೆ. ಆದರೆ ಅವರ ತತ್ವವನ್ನು ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಅವರು ಇನ್ನೊಂದು ಕಡೆ ಹೇಳಿದರು. ನನಗೆ ತತ್ವ ಸಿದ್ಧಾಂತ ಯಾವುದೂ ಇಲ್ಲ ಎಂದು ಹೇಳಿದರು. ನಿಮಗೆ ಇಲ್ಲ. ಆದರೆ ನಿಮ್ಮ ಪಾರ್ಟನರ್‌ಗೆ, ನಿಮ್ಮ ಜೊತೆ ಅಧಿಕಾರವನ್ನು ಹಂಚಿಕೊಂಡಂತಹ ಜನ ಏನು ಹೇಳುತ್ತಿದ್ದಾರೆ? ಬಿಜೆಪಿಯ ಸಿದ್ಧಾಂತ. ಭಾವಿ ಡಿಸಿಎಂ–ಯಡಿಯೂರಪ್ಪ. ಯಾವತ್ತು ಹೇಳಿದರು. ಅದೇ 30ನೇ ತಾರೀಖು ನೀವು ಎಲ್ಲಿದ್ದರೋ ಅದೇ ಜಾಗದಿಂದ ಹೇಳುತ್ತಾರೆ. ಬಜೆಟ್‌ಗೆ ಬಿಜೆಪಿ ಸಿದ್ಧಾಂತ. ಭಾವಿ ಡಿಸಿಎಂ ಯಡಿಯೂರಪ್ಪ. ಹಾಗಾದರೆ ಮಾನ್ಯ ಯಡಿಯೂರಪ್ಪನವರಿಗೆ ಒಂದು ಸಿದ್ಧಾಂತವಿದೆ. ನಿಮಗೆ ಸಿದ್ಧಾಂತ ಇಲ್ಲ. ಅಂದರೆ ನಮ್ಮಂಥ ದಡ್ಡರಿಗೆ ಅರ್ಥ ಆಗುವುದು ಆ ಸಿದ್ಧಾಂತ ನಮ್ಮದೇನು ಅಂತ. ನಮ್ಮಂಥ ದಡ್ಡರಿಗೆ ಬುದ್ಧಿವಂತರಿಗೆ ಏನು ಅನಿಸುತ್ತದೋ ನನಗೆ ಗೊತ್ತಿಲ್ಲ. ಅದೇ ರೀತಿಯಲ್ಲಿ ಇನ್ನೊಂದು ಕಡೆ ಮಾನ್ಯ ಯಡಿಯೂರಪ್ಪನವರು ಹೇಳುತ್ತಾರೆ. ಹಿಂದುತ್ವವಾದವನ್ನು ಬಿಡತಕ್ಕ ಪ್ರಶ್ನೆಯೇ ಇಲ್ಲ– ಬಿಜೆಪಿಯಲ್ಲಿ ಎಂದು ಹೇಳುತ್ತಾರೆ. Right, I will appreciate that. ಏಕೆಂದು ಹೇಳಿದರೆ ಅದು ಸರಿಯೋ ತಪ್ಪೋ? ನೀವು ನಾವು ಒಪ್ಪುತ್ತೇವೋ ಬಿಡುತ್ತೇವೋ ಅವರ ಸಿದ್ಧಾಂತಕ್ಕೆ ಅವರು ಕಟ್ಟು ಬಿದ್ದಿದ್ದಾರೆ. ಅದನ್ನು ತೀರ್ಮಾನ ಮಾಡತಕ್ಕ ಅಧಿಕಾರ ನಿಮಗೂ ನಮಗೂ ಇಲ್ಲ. ಈ ದೇಶದ ಜನತೆಗೆ ಇರತಕ್ಕಂಥದ್ದು ಅಧಿಕಾರ. ಅದು ತಪ್ಪೋ ಸರಿಯೋ ಎಂದು ಅವರಿಗೆ ಇರತಕ್ಕದ್ದು. They are stick on to that principle. But what is your principle?

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಸಾರ್ ಯಾವ ದೇಶದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಲೋಕಸಭಾ ಸದಸ್ಯರು ಇದ್ದರು, ಹಾಲಿ 9 ರಾಜ್ಯಗಳಲ್ಲಿ

ಆಡಳಿತ ನಡೆಸುತ್ತಿರುವುದರಿಂದ, ಲೋಕಸಭೆಯಲ್ಲಿ ಜನಾದೇಶದಂತೆ ಪ್ರತಿಪಕ್ಷದಲ್ಲಿ ಕುಳಿತಿರುವಂತಹ, ಆರು ವರ್ಷ ಈ ಜಗತ್ತೇ ಅಚ್ಚರಿ ಪಟ್ಟಂತಹ 22 ಪಕ್ಷಗಳೊಂದಿಗೆ ಒಂದು ಒಳ್ಳೆಯ ಆಡಳಿತವನ್ನು ಕೊಟ್ಟಂತಹ ಪಕ್ಷವನ್ನು 100 ಬಾರಿ ನೀವೆಲ್ಲಾ ಸೇರಿ ಕೋಮುವಾದಿ ಕೋಮುವಾದಿ ಎಂದು ಹೇಳಿ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವ ಮಾಲೀಕ ಓಟು ಕೊಟ್ಟಿದ್ದಾನೆ, ಅವನಿಗೆ ಅಪಚಾರ ಮಾಡುವಂತಹ ಕೆಲಸ ಮಾಡುತ್ತಿದ್ದೀರಿ. ನೀವು ಚೆನ್ನಾಗಿ ಮಾತನಾಡುತ್ತೀರಿ. ನಾನು ಎರಡನೆಯದಾಗಿ ಹೇಳುತ್ತೇನೆ. ಈ ಮನೆಯಲ್ಲಿ ಭರವಸೆ ಕೊಡುತ್ತೇನೆ. ಈ 40 ತಿಂಗಳುಗಳ ಕಾಲ ನಮ್ಮ ಅಜೆಂಡಾ ಈ ರಾಜ್ಯದ ಪ್ರಗತಿ, ಪ್ರಗತಿ ಡೆವಲಪ್‌ಮೆಂಟ್ ಕಾಮನ್ ಮಿನಿಮಮ್ ಪ್ರೋಗ್ರಾಮ್ ಮಾಡಿಕೊಂಡು ಒಂದು ದಿವಸ ಮುಖ್ಯಮಂತ್ರಿಗಳಿಗೂ ಅಥವಾ ಯಡಿಯೂರಪ್ಪನವರಿಗೂ ಅಥವಾ ಇತರೆ ಯಾವುದೇ ಸದಸ್ಯರಿಗೂ ಭಿನ್ನಾಭಿಪ್ರಾಯಕ್ಕೂ ಅವಕಾಶ ಕೊಡದೇನೇ ಈ ರಾಜ್ಯದ ದಲಿತ, ರೈತ ಕೃಷಿ ಕಾರ್ಮಿಕರಿಗೆ ಬೇಕಾದಂತಹ ಸವಲತ್ತುಗಳನ್ನು ಒದಗಿಸಿಕೊಟ್ಟು, ಮಾನ್ಯ ಯಡಿಯೂರಪ್ಪನವರೇ ನಮ್ಮ ನಿರೀಕ್ಷೆ ಬೇರೆ ಇತ್ತು, ಒಳ್ಳೆಯ ಆಡಳಿತವನ್ನು ಕೊಟ್ಟಿದ್ದೀರಿ ಎಂದು ನೀವೇ ಹೇಳುವಂತಹ ಒಂದು ಒಳ್ಳೆಯ ಆಡಳಿತವನ್ನು ಕೊಡುತ್ತೇವೆ. ಈ ಮಾತನ್ನು ನಿಮಗೆ ಹೇಳುತ್ತಿದ್ದೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಮಾನ್ಯ ಯಡಿಯೂರಪ್ಪನವರ, ವಿಚಾರ ಭಾವನೆ ಬಗ್ಗೆ ನನಗೆ ಗೌರವ ಇದೆ. ನಾನು ಪ್ರಾರಂಭದಲ್ಲಿಯೇ ಹೇಳಿದೆ. ಯು ಆರ್ ರೈಟ್, ಅದು ತಪ್ಪೋ ರೈಟೋ ನಿಮ್ಮ ಸಿದ್ಧಾಂತಕ್ಕೆ ನೀವು ಒಪ್ಪಿದ್ದೀರಿ. ಒಳ್ಳೆಯ ಆಡಳಿತವನ್ನು ಕೊಟ್ಟರೆ ಖಂಡಿತ ಸ್ವಾಗತ ಮಾಡುತ್ತೇವೆ. ನಮಗೇನೂ ಬೇರೆ ವಿಚಾರ ಇಲ್ಲ. ನಾನು ಇಲ್ಲಿ ಇನ್ನೊಂದು ಮನವಿ ಮಾಡಿಕೊಂಡೆ. ದಯವಿಟ್ಟು ವಿಚಾರಗಳನ್ನು ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ವೈಯಕ್ತಿಕ ದ್ವೇಷ: ದೋಷಾರೋಪಗಳನ್ನು ಯಾರೂ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿ ಕೊಡಬೇಡಿ. ಏಕೆಂದು ಹೇಳಿದರೆ ಈ ಸದನದಲ್ಲಿ ಕುಳಿತಿರತಕ್ಕಂಥ ಯಾರಿಗೂ ಕೂಡ ಇನ್ನೊಬ್ಬರ ನೈತಿಕ ಮೌಲ್ಯಗಳನ್ನು ಪ್ರಶ್ನೆ ಮಾಡತಕ್ಕಂಥ ಹಕ್ಕು ನನ್ನ ಪ್ರಕಾರ ಇಲ್ಲ. ಏಕೆಂದು ಹೇಳಿದರೆ ಏಸುಕ್ರಿಸ್ತ ಒಂದು ಕಡೆ ಹೇಳುತ್ತಾರೆ. "ಒಂದು ಹುಡುಗಿ ತನ್ನ ಶೀಲವನ್ನು ಕಳೆದುಕೊಂಡ ಸಂದರ್ಭದಲ್ಲಿ ಊರಿನವರೆಲ್ಲಾ ಸೇರಿ ಕಲ್ಲು ಹೊಡೆಯಲಿಕ್ಕೆ ಬಂದಾಗ ಏಸುಕ್ರಿಸ್ತನ ಹತ್ತಿರ ರಕ್ಷಣೆಗೆ ಓಡಿ ಬರುತ್ತಾಳೆ ಆ ಹುಡುಗಿ. ಆಗ ಏಸು ಕ್ರಿಸ್ತ ಕಲ್ಲು ಹಿಡಿದುಕೊಂಡು ಬಂದಿರುವಂತಹ ಜನಗಳಿಗೆ ಹೇಳುತ್ತಾನೆ, ನೋಡಿ ಪ್ರಜೆಗಳೇ 'ನಿಮ್ಮಲ್ಲಿ ಯಾರಾದರೂ ತಪ್ಪು ಮಾಡದೇ ಇರತಕ್ಕವರು ಒಬ್ಬರು ಇದ್ದರೆ ಅವರು ಮೊದಲು ಕಲ್ಲು ಹೊಡೆಯಿರಿ, ಆಮೇಲೆ ಬೇರೆಯವರು ಹೊಡೆಯಿರಿ ಎಂದು ಹೇಳುತ್ತಾನೆ." ಆಗ ಎಲ್ಲರ ಕೈಯಲ್ಲಿ ಇದ್ದಂತಹ ಕಲ್ಲು ಜಾರಿ ಕೆಳಗಡೆ ಬಿದ್ದು ಹೋಗುತ್ತದೆ. ಅಂದರೆ ಅರ್ಥ ಏನು? ತಪ್ಪು ಮಾಡದೇ ಇರುವವರು ಯಾರೂ ಇಲ್ಲ. ಆದ್ದರಿಂದ ತಪ್ಪುಗಳನ್ನು ಕೆಣಕುತ್ತಾ ಹೋಗುವ ಪ್ರಶ್ನೆ ಅಲ್ಲ. ಸಮಸ್ಯೆಗಳನ್ನು ಹುಡುಕುತ್ತಾ ಹೋಗತಕ್ಕ ಪ್ರಶ್ನೆ, ಆ ಸಮಸ್ಯೆ ಎಲ್ಲಿಂದ ಬಂದಿದೆ ಎನ್ನತಕ್ಕ ಪ್ರಶ್ನೆ ಇರತಕ್ಕದ್ದು. ಆ ಸಮಸ್ಯೆ ಪರಿಹಾರ ಆಗಲಿಕ್ಕೆ ಯಾವ ವಿಧಾನವನ್ನು ಹುಡುಕಬೇಕು ಎನ್ನತಕ್ಕ ಪ್ರಶ್ನೆ ಇರುವುದೇ ಹೊರತು ನೀವು ಸರಿಯಿಲ್ಲ, ನಾವು ಸರಿ ಎನ್ನುವುದಲ್ಲ. ಯಾರು ಸರಿ ಇದ್ದಾರೆ? ಯಾರ್ಯಾರು ಎಲ್ಲೆಲ್ಲಿ ಸರಿ ಇದ್ದಾರೆ ಹೇಳಿ? ಯಾರು ಎಲ್ಲೂ ಸರಿ ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ನಾವೆಲ್ಲರೂ ಕೂಡ ಎಲ್ಲೋ ಒಂದು ಕಡೆ ತಪ್ಪು ಮಾಡಿದ್ದೇವೆ. ಅದಲ್ಲ ಇಲ್ಲಿ ಪ್ರಶ್ನೆ ಚರ್ಚೆ ಆಗಬೇಕಾಗಿ ಇರತಕ್ಕದ್ದು. ಇಲ್ಲಿ ಚರ್ಚೆ ಆಗಬೇಕಾಗಿರತಕ್ಕದ್ದು. ಈ ಪರಿಸ್ಥಿತಿಯ ನಿರ್ಮಾಣಕ್ಕೆ ಯಾರು ಕಾರಣ?

ಈ ಪರಿಸ್ಥಿತಿಯಿಂದ ಹೊರಗಡೆ ಬರಲಿಕ್ಕೆ ಯಾರು ಕಾರಣ ಎಂದಷ್ಟೇ ನಾವು ಆಲೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಇನ್ನೊಂದು ಉದಹರಣೆಯನ್ನು ಮಾನ್ಯ ಕುಮಾರಸ್ವಾಮಿಯವರಿಗೆ ನಾನು ಕೊಡಲು ಇಷ್ಟಪಡುತ್ತೇನೆ. ಸುಪ್ರೀಂ ಕೋರ್ಟ್‌ನಲ್ಲಿ 1978ರಲ್ಲಿ ಒಂದು ಜಡ್ಜ್‌ಮೆಂಟ್ ಆಗಿದೆ. ಸೆಕ್ಯುಲರಿಸಂ ಬಗ್ಗೆ ಜಡ್ಜ್‌ಮೆಂಟ್ ಆಗಿದೆ. ಏನು ಜಡ್ಜ್‌ಮೆಂಟ್ ಆಗಿದೆ ಎಂದು ಹೇಳಿದರೆ. ಅದು ಯಾವ ಕೇಸ್‌ನಲ್ಲಿ ಅಂದರೆ 1978ನೇ ಇಸವಿಯ ಉಷಾ ಬೇನ್ ನವೀನ್ ಚಂದ್ ತ್ರಿವೇಣಿ ವರ್ಸಸ್ ಭಾಗ್ಯಲಕ್ಷ್ಮಿ ಚಿತ್ರಮಂದಿರ. ಮತ್ತು ವಾಸುದೇವ್ ವರ್ಸಸ್ ವಾಮನ್‌ಜಿ ಕೇಸುಗಳಲ್ಲಿ ಸ್ಪಷ್ಟವಾಗಿ ಸುಪ್ರೀಂ ಕೋರ್ಟ್ ಸೆಕ್ಯುಲರಿಸಂ ಬಗ್ಗೆ ವ್ಯಾಖ್ಯಾನ ಮಾಡಿದೆ. ಈ ದೇಶದ ಅತ್ಯುನ್ನತ ನ್ಯಾಯಾಂಗ ಸೆಕ್ಯುಲರಿಸಂ ಎಂದರೆ ಏನು ಎಂದು ಡಿಫೈನ್ ಮಾಡಿದೆ. ಈ ದೇಶದ ಸಂವಿಧಾನ ಗ್ಯಾರಂಟಿ ಮಾಡಿದೆ. It is a mandatory ಎಂದು ಹೇಳಿದೆ. ಅಂತಹ ಸೆಕ್ಯುಲರಿಸಂಗೆ ನನಗೆ ಅರ್ಥ ಗೊತ್ತಿಲ್ಲ ಎಂದು ಹೇಳಿದರೆ ನಾನು ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಅದನ್ನು ಯಾವ ಉದ್ದೇಶದಿಂದ ಅವರು ಹೇಳಿದ್ದಾರೆ? ಅವರೇನಾದರೂ sarcastic ಆಗಿ ಅಥವಾ ಲೇವಡಿ ಮಾಡುವುದಕ್ಕೆ ಹೇಳಿದ್ದಾರೆಯೇ? ಅಥವಾ ಇನ್ನಾವುದಾದರೂ ಕಾರಣಕ್ಕೋಸ್ಕರ ಆ ವಿಚಾರವನ್ನು ಹೇಳಿದ್ದಾರೆಯೇ ಎನ್ನುವುದು ನನಗೆ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಈಗ ತಾನೇ ಮಾತನಾಡುತ್ತಾ, 2004ನೇ ಇಸವಿಯಲ್ಲಿಯೇ ನಮಗೆ ಜನಾದೇಶ ಇತ್ತೆಂದು ಒಂದು ವಿಚಾರ ಹೇಳಿದರು. ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ಒಂದು ವಿಚಾರ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಯಾವ ಪಾರ್ಟಿಗೆ ಎಷ್ಟು ಸಂಖ್ಯೆ ಬಂದಿದೆಯೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಿಮ್ಮನ್ನೇ ವಿರೋಧಿಸಿ ಹಾಕಿರತಕ್ಕಂಥ ಮತಗಳ ಸಂಖ್ಯೆ ಎಷ್ಟು? ನಿಮ್ಮನ್ನು ವಿರೋಧಿಸಿ ಅಂತ ಹೇಳಿದರೆ, ಜಾತ್ಯಾತೀತ ಶಕ್ತಿಗಳಿಗೆ, ಅದು ಕಾಂಗ್ರೆಸ್ ಪಕ್ಷ ಇರಬಹುದು, ಮತ್ತೊಂದು ಪಕ್ಷ ಇರಬಹುದು, ಯಾವುದೇ ಪಾರ್ಟಿ ಇರಬಹುದು. ಅವರಿಗೆ ಹಾಕಿರತಕ್ಕಂಥ ಮತಗಳ ಸಂಖ್ಯೆ ಎಷ್ಟು? ನೋಡಿ, 35.8 ಪರ್ಸೆಂಟ್ ಮತಗಳು ಕಾಂಗ್ರೆಸ್‌ಗೆ ಬಿದ್ದಿದೆ, ಜೆಡಿ(ಎಸ್)ಗೆ 20.59 ಪರ್ಸೆಂಟ್ ಮತ ಬಿದ್ದಿದೆ. ನಿಮಗೆ ಬಿದ್ದಿರುವಂಥಾದ್ದು, 28.49 ಪರ್ಸೆಂಟ್. ಇನ್ನು ಉಳಿದದ್ದು ಇಂಡಿಪೆಂಡೆಂಟ್ಸ್‌ಗೆ ಬಿದ್ದಿದೆ. ಅಂದರೆ, ಟೋಟಲ್ ವೋಟುಗಳ ಸಂಖ್ಯೆ ಜನರ ಅಭಿಪ್ರಾಯ ಲೆಕ್ಕಹಾಕುವುದಾದರೆ, ಜಾತ್ಯಾತೀತವಾದವನ್ನು ಪ್ರತಿಪಾದನೆ ಮಾಡುವವರಿಗೇ ಹೆಚ್ಚು ಜನರು ಮತ ಕೊಟ್ಟಿದ್ದಾರೆಯೇ ಹೊರತು, ಕಾಂಗ್ರೆಸ್‌ಗೆ ಅಷ್ಟು ಇವರಿಗೆ ಇಷ್ಟು ಎನ್ನತಕ್ಕಂಥ ಪ್ರಶ್ನೆಯಲ್ಲ. ಅಂದರೆ, ಕರ್ನಾಟಕದ ಜನರ ಮನೋಭಾವ ಹೇಗಿತ್ತು ಎನ್ನುವುದನ್ನಷ್ಟೇ ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆ ಪಕ್ಷವೋ ಈ ಪಕ್ಷವೋ ಎನ್ನತಕ್ಕಂಥ ಪ್ರಶ್ನೆಯಲ್ಲ. ಅಂದರೆ, ನನ್ನ ಪಾಯಿಂಟ್ ಏನೆಂದರೆ, Karnataka people have never supported communalism. They are for Secularism. ನಮ್ಮಲ್ಲಿರತಕ್ಕಂಥ ಅಸಮರ್ಥತೆಯಿಂದ ಇವೊತ್ತು ಕೋಮುವಾದಿ ಶಕ್ತಿಗಳನ್ನು ಬೆಳೆಸಿದ್ದೇವೆಯೇ ಹೊರತು, ಇದಕ್ಕೆ ಅವರು ಕಾರಣರಲ್ಲ. ಒಂದು ವಿಚಾರವನ್ನು ನಿಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಹಿರಿಯರಾದ ಕಾಂಗ್ರೆಸ್ ಮುಖಂಡರು ಇಲ್ಲಿ ಕೂತಿದ್ದಾರೆ. 1935ನೇ ಇಸವಿಯಲ್ಲಿ ಬಾಂಬೆ ಪ್ರಾವಿನ್ಸ್‌ಗೆ ಎಲೆಕ್ಷನ್ ನಡೆದಂಥ ಸಂದರ್ಭದಲ್ಲಿ ಮೊರಾರ್ಜಿ ದೇಸಾಯಿಯವರು ಸೋತರು. ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಬೇಕೆಂದು ಕಾಂಗ್ರೆಸ್‌ನವರ ಹಠವಾಗಿತ್ತು ಆದರೆ, ಆವೊತ್ತು ನಿಜವಾಗಿಯೂ ಮುಖ್ಯಮಂತ್ರಿಯಾಗುವ ಅರ್ಹತೆ ಇದ್ದಂತಹವರು ನಾರೀಮನ್‌ರವರು. He

was denied. Not only denied ಸೋತಂಥ ಮೊರಾರ್ಜಿ ದೇಸಾಯಿಯವರನ್ನು ತಕ್ಷಣ ಮತ್ತೊಂದು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿಕೊಂಡು ಬಂದು ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರು. Remark of Dr. Ambedkar on that day was, this is a first rape on Indian Democracy. That is their tradition. This is No.1. No.2, Dr. Maulana Abdul Kalam Aajad, a tallest leader of the Indian Freedom Movement and President of Congress Party, ಅವರು ಒಂದು ಪುಸ್ತಕ ಬರೆದಿದ್ದಾರೆ, ಅವರಿಗೇನಾದರೂ ಸಮಯ ಇದ್ದರೆ ಓದಲಿ. 'India wins the Freedom' ಎನ್ನುವ ಪುಸ್ತಕ. ಅದರಲ್ಲಿ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬಾಂಬೆ ಪ್ರಾವಿನ್ಸ್ ಎಲೆಕ್ಷನ್‌ನಲ್ಲಿ ನಾರೀಮನ್ ಅವರನ್ನು ಮುಖ್ಯಮಂತಿ ಸ್ಥಾನಕ್ಕೆ ಬಾರದಂತೆ ತಪ್ಪಿಸುವುದಕ್ಕೆ ಕಾರಣರಾರು? ಏನು ಕಾರಣ? ಬಿಹಾರದಲ್ಲಿ ಗಫೂರ್ ಎನ್ನುವವರನ್ನು ಮುಖ್ಯಮಂತ್ರಿ ಸ್ಥಾನದಿಂದ ಅನರ್ಹರನ್ನಾಗಿ ಮಾಡುವುದಕ್ಕೆ ಕಾರಣರಾರು? ಅದಕ್ಕೇನು ಕಾರಣ? ಇದರ ಬಗ್ಗೆ 1938ನೇ ಇಸವಿಯಲ್ಲಿ ಗಾಂಧೀಜಿಯವರಿಗೆ ನಾರೀಮನ್‌ರವರು ಒಂದು ಕಂಪ್ಲೆಂಟ್ ಕೊಟ್ಟರು. ಅದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ರೆಫರ್ ಮಾಡುತ್ತಾರೆ. What was the decision of the working Committee then? ಅವರು ಹೇಳಲಿ? ಅವರು ಇವತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರನ್ನಾದರೂ disown ಮಾಡಬೇಕು ಅಥವಾ ಅವರು ಹೇಳಿದ್ದನ್ನಾದರು ಒಪ್ಪಿಕೊಳ್ಳಬೇಕು. This is the history of that ಅಂದರೆ, ಅವರು ಆ ಪುಸ್ತಕದ ಕೊನೆಯಲ್ಲಿ ಏನು ಹೇಳಿದ್ದಾರೆಂದರೆ, A Secularist by conviction is different. A Secularist by consideration is different. A Secularist by conviction is a different man, is a different party. Secularism by consideration, it is a different ಕನ್‌ಕ್ಲೂಡ್ ಮಾಡುತ್ತಾ, ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು ಏನು ಹೇಳುತ್ತಾರೆ ಗೊತ್ತೇ?

**Sri K.R. Ramesh Kumar :** Who is a secularist by conviction and who is a secularist by consideration? Can you kindly highlight?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ನಾನು ಅದನ್ನು ವ್ಯಾಖ್ಯಾನ ಮಾಡಿದರೆ, ಇಲ್ಲಿರುವ ಜನರಿಗೆ ಭಾರೀ ಸಿಟ್ಟು ಬರುತ್ತದೆ. ನಾನು ಹೇಳುತ್ತೇನೆ. ಅದಕ್ಕೆ ಕಾಂಗ್ರೆಸ್ ನಂಬರ್ ಒನ್ ಉದಾಹರಣೆಯಾಗಿದೆ. By consideration secularist ಎಂದು ಹೇಳಿದ್ದಾರೆ. ನಂಬರ್ ಟು, ಬೇರೆಯವರೆಲ್ಲಾ. ಉಳಿದವರೆಲ್ಲಾ. ಯಾರ್‍ಯಾರು ಸೆಕ್ಯುಲರಿಸ್ಟ್ ಎಂದು ಬೋರ್ಡ್ ಹಾಕಿಕೊಳ್ಳುತ್ತಿದ್ದಾರೋ, ಎಲ್ಲರೂ ಸೇರಿ ಇರಬಹುದು, ನಾನೇ ಪರಮ ಸತ್ಯವೆಂದು ಹೇಳಲು ನಾನು ತಯಾರಿಲ್ಲ. ಅದರ ಬಗ್ಗೆ ಇತಿಹಾಸ ತೋರಿಸಬೇಕು. ಯಾರು by consideration secularist? ನಾನು ಹೇಳಿದೆನಲ್ಲಾ, ಕಾಂಗ್ರೆಸ್ಸೇ. It is a secularist by consideration, not by conviction. I am not telling this. It is said by Maulana Abdul Kalam Aajad. ಆ ರೀತಿಯಲ್ಲಿ ಇವೊತ್ತು ಸೆಕ್ಯುಲರಿಸಂ ಜೊತೆ ಚೆಲ್ಲಾಟ ಬೇಡ. ಏಕೆಂದರೆ, ಸೆಕ್ಯುಲರಿಸಂ ಎಂದರೆ, 12ನೇ ಶತಮಾನದಲ್ಲಿ ಯುರೋಪ್‌ನಲ್ಲಿ ನಡೆದಂಥ ಮಹಾನ್ ಚಳವಳಿ renaissance movement ಏನಿದೆ, ಚರ್ಚುಗಳ ಅಧಿಕಾರದಿಂದ ಸರ್ಕಾರಗಳು ಹೊರಗೆ ಬರಬೇಕು, ಚರ್ಚುಗಳ ಅಧಿಪತ್ಯದಲ್ಲಿ ಸರ್ಕಾರ ನಡೆಯಬಾರದು ಅಂತ ಹೇಳಿ ಆ ಶತಮಾನದಲ್ಲಿ ನಡೆದ ಹೋರಾಟ

ಇವೊತ್ತು ಕೂಡ ಜಗತ್ತಿಗೇ ಉದಾಹರಣೆಯಾಗಿ ಆದರ್ಶವಾಗಿ ನಿಂತಿದೆ. ಅದರ ಅರ್ಥ, ಧರ್ಮ ರಾಜಕಾರಣದಲ್ಲಿರಬಾರದು, ಧರ್ಮ ಸರ್ಕಾರದಲ್ಲಿರಬಾರದೆಂಬುದು. ಧರ್ಮ ಎನ್ನುವುದು ಅವರ ವೈಯಕ್ತಿಕ ಅಭಿಪ್ರಾಯ. ಅವರು ವೈಯಕ್ತಿಕವಾಗಿ ಯಾವುದೇ ಧರ್ಮವನ್ನು ಅನುಸರಿಸುವುದಕ್ಕೆ ನಮ್ಮ ದೇಶದಲ್ಲಿ ಅವಕಾಶವಿದೆ. ಯಾವುದೇ ದೇವರನ್ನು ಪೂಜಿಸುವುದಕ್ಕೆ ಅಧಿಕಾರವಿದೆ. ಆದರೆ, ಸರ್ಕಾರ ಸೆಕ್ಯುಲರಿಸ್ಟ್ ಆಗಬೇಕೆಂಬುದು ನಮ್ಮ ಆಸೆ ಅಷ್ಟೇ. ಸರ್ಕಾರ ಸೆಕ್ಯುಲರಿಸ್ಟ್ ಆಗಬೇಕು, ಬೇರೇನೂ ಇಲ್ಲ. ನಾನು ಮಾನ್ಯ ಕುಮಾರಸ್ವಾಮಿಯವರಲ್ಲಿ ಬಹಳ ವಿನಯದಿಂದ ಒಂದು ಪ್ರಶ್ನೆ ಕೇಳುತ್ತೇನೆ. ಮೊನ್ನೆ ಅಧಿಕೃತ ನಿವಾಸವಾದ 'ಕೃಷ್ಣಾ'ಗೆ ಪ್ರವೇಶಿಸಿದಾಗ ತಾವು ಯಾವ ದೇವರನ್ನು ಪೂಜೆ ಮಾಡಿದಿರಿ? ಪೂಜೆಯನ್ನು ಅವರ ಮನೆಯಲ್ಲಿ ಮಾಡಿಕೊಳ್ಳಲಿ. "KRISHNA" is the official residence of the Chief Minister. It is not Kumaraswamy's own house. That is my opinion.

**ಡಾ|| ಕೆ. ಅನ್ನದಾನಿ** : ಮಾನ್ಯ ರೆಡ್ಡಿಯವರೆ, ಸರ್ಕಾರದ ಕಚೇರಿಯಲ್ಲಿ ಪೂಜೆ ಮಾಡಬಾರದೆಂಬ ನಿಯಮ ಏನಾದರೂ ಇದೆಯೇ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುವುದನ್ನಾದರೂ ಪೂರ್ತಿ ಕೇಳಿ. ನಾನು ಕುಮಾರಸ್ವಾಮಿಯವರನ್ನು ಒಬ್ಬ ಮುಖ್ಯಮಂತ್ರಿಯನ್ನಾಗಿ ನೋಡುತ್ತಿದ್ದೇನೆಯೇ ಹೊರತು ಒಬ್ಬ ವ್ಯಕ್ತಿಯನ್ನಾಗಿ ಅವರನ್ನು ನೋಡುತ್ತಿಲ್ಲ. 'ಕೃಷ್ಣಾ' ಅದು ಮುಖ್ಯಮಂತ್ರಿಗಳ ಅಧಿಕೃತ ಕಚೇರಿಯೆಂದು ನಾನು ನೋಡುತ್ತಿದ್ದೇನೆಯೇ ಹೊರತು, ಅವರ ಮನೆಯೆಂದು ನಾನು ನೋಡುತ್ತಿಲ್ಲ. ನೀವು ಸರ್ಕಾರ ನಡೆಸುವವರು ಯಾವುದೇ ಒಬ್ಬ ದೇವರನ್ನು ಒಂದು ಸರ್ಕಾರಿ ಕಚೇರಿಯಲ್ಲಿ ಪೂಜೆ ಮಾಡತಕ್ಕಂಥಾದ್ದೇ ಸಂವಿಧಾನ ವಿರುದ್ಧವಾಗಿದೆ. Non secular approach. ನೀವು ನಿಮ್ಮ ಮನೆಗಳಲ್ಲಿ ನಿಮ್ಮಿಷ್ಟ ಬಂದಂತೆ ಯಾವುದೇ ದೇವರನ್ನು ಪೂಜೆ ಮಾಡಿಕೊಳ್ಳಿ, ಅಭ್ಯಂತರವಿಲ್ಲ.

**ಶ್ರೀ ಸಿ. ಚನ್ನಿಗಪ್ಪ** : ಸ್ವಾಮಿ, ದೇವರ ಪೂಜೆ ಮಾಡುವುದು ಅವರ ಮನಸ್ಸು. ಅದನ್ನೇಕೆ ನೀವು ಡೈವರ್ಟ್ ಮಾಡುತ್ತೀರಿ. ಬೇಕಾದರೆ ನೀವು ಮಾಡಿಕೊಳ್ಳಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನನಗೆ ಅದರ ಬಗ್ಗೆ ತಕರಾರು ಇಲ್ಲ. ನನ್ನ ತಕರಾರು ಸರ್ಕಾರಿ ಕಚೇರಿಗಳನ್ನು ಯಾವುದೋ ಒಂದು ಧರ್ಮದ ಪರವಾಗಿ ಉಪಯೋಗಿಸಿಕೊಳ್ಳುವುದು ಸರಿಯಲ್ಲ.

**ಒಬ್ಬ ಮಾನ್ಯ ಸದಸ್ಯರು** : ಮುಖ್ಯಮಂತ್ರಿಗಳಾದ ತಕ್ಷಣ ದೇವರು, ಧರ್ಮ ಬಿಟ್ಟು ಬದುಕುವುದಕ್ಕಾಗುವುದಿಲ್ಲ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಏನು ಭಗವಂತನ ಹೆಸರಿನಲ್ಲಿ ಪ್ರಮಾಣ ಸ್ವೀಕಾರ ಮಾಡುತ್ತೇವೆ, ಸಂವಿಧಾನದಲ್ಲಿ ಏನು ನಮಗೆ ಅವಕಾಶಗಳಿವೆ, ನೀವು ಯಾವ ದೇವರನ್ನು ಪೂಜೆ ಮಾಡಿದಿರೆಂದು ನನ್ನನ್ನು ಈಗ ಕೇಳಿದಿರಿ. ಭಗವಂತನ ಹೆಸರಿನಲ್ಲಿ ಪ್ರಮಾಣ ಸ್ವೀಕಾರ ಮಾಡಿದಂಥ ಆ ಒಂದು ನಂಬಿಕೆ ಮೇಲೆಯೇ ಈ ರಾಜ್ಯದ ಜನರಿಗೆ ಒಳ್ಳೆಯದನ್ನು ಮಾಡುವ ಮನಸ್ಸು ಮತ್ತು ಶಕ್ತಿಯನ್ನು ಕೊಡು ಎಂದು ನಾವು ಹುಟ್ಟಿ ಬಂದಿರುವ ಸಂಸ್ಕೃತಿಯಲ್ಲಿ ಆ ನಂಬಿಕೆ ಏನಿದೆ, ಆ ನಂಬಿಕೆಯಿಂದ ಒಂದು ಪೂಜೆಯನ್ನು ಮಾಡಿದ್ದೇನೆಯೇ ಹೊರತು,

ಬೇರೆ ಇನ್ನಾವುದೇ ರೀತಿಯ ಅಧಿಕಾರ ದುರುಪಯೋಗ ಪಡಿಸಿಕೊಳ್ಳುವಂಥಾದಕ್ಕೆ ಅಲ್ಲ. ಅದು ಸ್ವೇಚ್ಛಾಚಾರಕ್ಕೆ ಮಾಡಿರುವಂಥಾದ್ದು ಅಲ್ಲವೆಂದು ತಮಗೆ ದಯವಿಟ್ಟು ಮನವಿ ಮಾಡಬಯಸುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾನು ನಿಮ್ಮ ಅಭಿಪ್ರಾಯಕ್ಕೆ, ನಂಬಿಕೆಗೆ ಸಂಪೂರ್ಣ ಗೌರವ ಕೊಡುತ್ತೇನೆ. ಅವರವರ ಭಾವನೆಗೆ ಅವರವರ ದೇವರನ್ನು ಪೂಜೆ ಮಾಡಿಕೊಳ್ಳುತ್ತಾರೆ, ನೀವು ಪೂಜೆ ಮಾಡಿ, ನಾನು ಬೇಡವೆಂದು ಹೇಳುವುದಿಲ್ಲ. ಅದು ನಿಮ್ಮ ಹಕ್ಕು. ಅದರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ನಾನು ನನ್ನ ಜೀವಮಾನದಲ್ಲಿ ಇದುವರೆಗೂ ಒಂದೇ ಒಂದು ದೇವಸ್ಥಾನಕ್ಕೆ ಹೋಗಿ ನಮಸ್ಕಾರ ಹಾಕಿಲ್ಲ. ಅದು ಬೇರೆ ವಿಚಾರ. ಆದರೆ, ಅದರ ಅರ್ಥ. ನೀವು ದೇವರ ಪೂಜೆ ಮಾಡುವುದಕ್ಕೆ ನನ್ನ ವಿರೋಧ ಇಲ್ಲ. ನಿಮ್ಮ ಧರ್ಮವನ್ನು ಆಚರಿಸುವುದಕ್ಕೆ ನನ್ನ ವಿರೋಧ ಇಲ್ಲ. ನಿಮ್ಮ ಜಾತಿಯನ್ನು ಆಚರಿಸುವುದಕ್ಕೆ ನನ್ನ ವಿರೋಧ ಇಲ್ಲ. ಆದರೆ, ಅದು ಸಾರ್ವತ್ರಿಕವಾಗಬಾರದು. ಸರ್ಕಾರಿ ಕಲಾಪಗಳಲ್ಲಿ ಅದು ಕಂಡುಬರಬಾರದು ಎಂಬುದಷ್ಟೇ ನಾನು ಹೇಳುತ್ತೇನೇ ಹೊರತು ನಿಮ್ಮ ವೈಯಕ್ತಿಕ ಭಾವನೆಗಳನ್ನು ನೋಯಿಸುವ ಇಚ್ಛೆ ನನಗಿಲ್ಲ. ನಾನು ಆ ಸ್ಥಿತಿಯಲ್ಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಆದುದರಿಂದ ಇವತ್ತು ನಮ್ಮ ರಾಜ್ಯಕ್ಕೆ ಬಂದಿರತಕ್ಕಂಥ ಈ ಒಂದು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹೇಳುವುದಾದರೆ, ನನಗೆ ವೈಯಕ್ತಿಕವಾಗಿ ಮಾನ್ಯ ಯಡಿಯೂರಪ್ಪನವರ ಬಗ್ಗೆ ಗೌರವ ಇದೆ, ಮಾನ್ಯ ಕುಮಾರಸ್ವಾಮಿಯವರ ಬಗ್ಗೆ ಗೌರವ ಇದೆ, ಅವರ ತಂದೆ ಮಾನ್ಯ ದೇವೇಗೌಡರ ಜೊತೆಯಲ್ಲಿ ನಾವು ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದ್ದೇವೆ, ಈಗಲು ನಾವು ಅವರನ್ನು ನಮ್ಮ ಲೀಡರ್ ಎಂದು ಒಪ್ಪಿಕೊಂಡಿದ್ದೇವೆ. ನಿಜವಾಗಿ ಮಾನ್ಯ ದೇವೇಗೌಡರ ಭಾವನೆಗಳನ್ನು ನಾನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ವೈಕಕ್ತಿಕವಾಗಿ ನನಗೆ ಯಾರೂ ಇಲ್ಲಿ ಶತ್ರುಗಳಿಲ್ಲ, ದ್ವೇಷಿಗಳೂ ಇಲ್ಲ, ನನಗೆ ಅದರ ಅವಶ್ಯಕತೆಯೂ ಸಹ ಇಲ್ಲ. ಇಲ್ಲಿ ಕುಳಿತಿರುವ ಮಾನ್ಯ ಮಾಧುಸ್ವಾಮಿಯವರನ್ನು ಬಿಟ್ಟರೆ ನನಗೆ ಬೇರೆ ಮಿತ್ರರೂ ಇಲ್ಲ. ನನಗೆ ಆ ಪ್ರಶ್ನೆಯೇ ಇಲ್ಲ. ನಾನು ಯಾರನ್ನೂ ವೈಯಕ್ತಿಕವಾಗಿ ದ್ವೇಷ ಮಾಡತಕ್ಕಂಥ ಪ್ರಶ್ನೆ ಇಲ್ಲ. ವೈಯಕ್ತಿಕವಾಗಿ ನಿಂದನೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ನನ್ನ ಅಭಿಪ್ರಾಯ, ನನ್ನ ಪಕ್ಷದ ಅಭಿಪ್ರಾಯ ಏನೆಂದರೆ, ಈ ಸರ್ಕಾರ ಖಂಡಿತವಾಗಿಯೂ ಕೂಡ ಜನರ ಭಾವನೆಗಳನ್ನು ಅರ್ಥಮಾಡಿಕೊಂಡಿರತಕ್ಕಂಥ, ಜನರ ಭಾವನೆಗಳಿಗೆ ತಕ್ಕ ರೀತಿಯಲ್ಲಿ ರಚನೆಯಾಗಿರತಕ್ಕಂಥ ಸರ್ಕಾರವಲ್ಲ. ಆದ್ದರಿಂದ ನಮ್ಮ ಪಕ್ಷ ಯಾವುದೇ ಕಾರಣದಿಂದ ಈ ಸರ್ಕಾರವನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ, ಬೆಂಬಲ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್ (ಹೂವಿನ ಹಡಗಲಿ)** : ಸನ್ಮಾನ್ಯ ಅಧ್ಯಕ್ಷರೆ, ಒಂದು ಅಸಾಮಾನ್ಯವಾದಂತಹ ಮತ್ತು ಸಂದಿಗ್ಧವಾದಂತಹ ಸ್ಥಿತಿಯಲ್ಲಿ ನಾವು ಸದನದಲ್ಲಿ ಸೇರಿದ್ದೇವೆ. ಪ್ರಾಯಶಃ ಹಿಂದೆ 2–3 ಬಾರಿ ದಿವಂಗತ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿಯೂ ಕೂಡ ಅವರು ಈ ತರಹದ ವಿಶ್ವಾಸ ಮತವನ್ನು ಯಾಚನೆ ಮಾಡಿದಂತಹ ಉದಾಹರಣೆ ಇದೆ. ಅವಿಶ್ವಾಸ ಗೊತ್ತುವಳಿ ಬರತಕ್ಕಂಥದ್ದು ಸಹಜ. ಆದರೆ ವಿಶ್ವಾಸ ಮತ ಕೇಳತಕ್ಕಂಥ ಪರಿಸ್ಥಿತಿ ಉದ್ಭವವಾಗಿರತಕ್ಕಂಥ ಹಿನ್ನೆಲೆಯಲ್ಲಿ ಇವತ್ತು ನೂತನ ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಯಾಚನೆ ಮಾಡಿದ್ದಾರೆ. ಇದೊಂದು ಅಸಾಮಾನ್ಯವಾದಂತಹ ಸ್ಥಿತಿ ಎಂದು ನಾನೇಕೆ ಹೇಳುತ್ತೇನೆ ಎಂದರೆ, ಈ ತರಹದ ಒಂದು ಸನ್ನಿವೇಶ ಸೃಷ್ಟಿಯಾಗಿರತಕ್ಕಂಥದ್ದೇ ಒಂದು ಅಸಹಜ ಹಾಗೂ ಕೃತಕ ಪ್ರಕ್ರಿಯೆ. ಈ ಅಸಹಜ ಕೃತಕ ಪ್ರಕ್ರಿಯೆಗೆ ಅರ್ಥದಷ್ಟು ಮಟ್ಟಿಗಿನ ಉತ್ತರವನ್ನು

ಅಥವಾ ಬಹುಮಟ್ಟಿನ ಉತ್ತರವನ್ನು ಮಾನ್ಯ ಶ್ರೀರಾಮರೆಡ್ಡಿಯವರು ಕೊಟ್ಟಿದ್ದಾರೆ. ಯಾವುದೇ ಒಂದು ಸಮ್ಮಿಶ್ರ ಸರ್ಕಾರ, ಯಾವುದೇ ಕಾರಣಕ್ಕಾಗಿಯೂ ಕೂಡ ಜೊತೆಗೆ ಬಂದಂತಹ ಸಂದರ್ಭದಲ್ಲಿ, ಅದಕ್ಕೆ ಇರಬೇಕಾಗಿರತಕ್ಕಂಥ ಕನಿಷ್ಠ ಸೌಹಾರ್ದತೆಯನ್ನು ನಾವು ತೆಗೆದುಕೊಂಡು ಹೋಗಬೇಕಾದದ್ದು ಇದೆ. ದುರ್ದೈವದ ಸಂಗತಿ ಏನೆಂದರೆ, ನಮ್ಮ ರಾಜಕೀಯ ಪಕ್ಷಗಳಲ್ಲಿ ಶಿಸ್ತು ಆಗಲಿ, ಸಂಯಮವಾಗಲಿ ಅಥವಾ ಯಾರೊಬ್ಬ ನಾಯಕನನ್ನು ನಾವು ಪರಿಪಾಲಿಸಿಕೊಂಡು ಬರಬೇಕೆನ್ನುವುದಾಗಲಿ ಅಥವಾ ಅನುಸರಿಸಬೇಕೆನ್ನುವಂತಹ ಒಂದು ಮನೋಸ್ಥಿತಿಯಾಗಿ ಇತ್ತೀಚಿನ ದಿನಮಾನಗಳಲ್ಲಿ ಬರುತ್ತಿದೆ. ಆ ಕಾರಣಕ್ಕಾಗಿಯೇ ನಾನು ಆಗಲೇ ಒಂದು ಸಭೆಯಲ್ಲಿಯೇ ಮಾಧ್ಯಮ ಮಿತ್ರರಿಗೆ ಆ ಬಗ್ಗೆ 'ಬಾಂದಳದಲ್ಲಿ ನಕ್ಷತ್ರಗಳಿಲ್ಲ' ಎಂದು ಉತ್ತರ ಕೊಟ್ಟಿದ್ದೆ. ನಕ್ಷತ್ರಗಳು ಇಲ್ಲದಂತಹ ಪರಿಸ್ಥಿತಿಯಲ್ಲಿ ನಾವ್ಯಾರೂ ಕೂಡ ಆದರ್ಶಪ್ರಾಯವಾಗಿರತಕ್ಕಂಥ ರೋಲ್ ಮಾಡೆಲ್‌ಗಳನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಈ ಪರಿಸ್ಥಿತಿ ಬರೇ ಇವತ್ತೇ ಸೃಷ್ಟಿಯಾಗಿದೆ ಎಂದೇನಲ್ಲ. ಅನೇಕ ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಪಕ್ಷಗಳು ಈ ಜವಾಬ್ದಾರಿಯನ್ನು ಹೊರಲೇಬೇಕಾಗಿರತಕ್ಕಂಥದ್ದು ಇದೆ. 1957ರಲ್ಲಿ, ಮಾನ್ಯ ಶ್ರೀರಾಮರೆಡ್ಡಿಯವರು ಅದನ್ನು ಪ್ರಸ್ತಾಪ ಮಾಡಲಿಲ್ಲ, ಅವರು ಯಾವುದೇ ರೀತಿಯ ತತ್ವಗಳಿಗೆ ಅಂಟಿಕೊಂಡಂತಹವರಾಗಿದ್ದರೂ ಕೂಡ ಮಾನ್ಯ ನಂಬೂದರಿ ಪಾದ್‌ರವರು ಜನತೆಯ ಪರವಾಗಿ ನಿಂತುಕೊಂಡು ಮತದಾನದ ಮೂಲಕವಾಗಿಯೇ ಮುಖ್ಯಮಂತ್ರಿಗಳಾದರು. ಪ್ರಥಮ ಬಾರಿಗೆ ಇಡೀ ದೇಶದ ಅಥವಾ ಅಂತರರಾಷ್ಟ್ರೀಯ ಚರಿತ್ರೆಯಲ್ಲಿ ಕಮ್ಯೂನಿಸ್ಟರು ಬ್ಯಾಲೆಟ್ ಬಾಕ್ಸ್‌ಗಳ ಮೂಲಕವಾಗಿ ಅಧಿಕಾರಕ್ಕೆ ಬಂದಂತಹ ಉದಾಹರಣೆ ಮಾನ್ಯ ನಂಬೂದರಿ ಪಾದ್‌ರವರದಾಗಿತ್ತು. ಆದರೆ ಮುಂದೆ ಅವರು ಅಧಿಕಾರವನ್ನು ಕಳೆದುಕೊಂಡರು. ಆ ಅಧಿಕಾರವನ್ನು ಕಳೆದುಕೊಳ್ಳಲಿಕ್ಕೆ ಯಾರು ಕಾರಣರು? ಯಾವ ಕೃತಕ ಸನ್ನಿವೇಶ ಅಲ್ಲಿ ಸೃಷ್ಟಿಯಾಯಿತು? ಆ ಸೃಷ್ಟಿಯ ಮೂಲಕವಾಗಿ ಪ್ರಥಮ ಅಪಚಾರ ಪ್ರಜಾಪ್ರಭುತ್ವಕ್ಕೆ ಆಗಿದ್ದು ಅನ್ನತಕ್ಕಂಥದ್ದನ್ನು ನಾವು ಕಂಡಿದ್ದೇವೆ. ಕಾಲಕಾಲಕ್ಕೆ ನನ್ನಂತಹ ಅನೇಕರನ್ನು ಮರುಳು ಮಾಡುವಂತಹ ರೀತಿಯಲ್ಲಿ, ಇಂತಹ ತತ್ವಗಳನ್ನು ಮೀಮಾಂಸೆಗಳನ್ನು ಹೇರುವುದರ ಮೂಲಕವಾಗಿಯೂ ಕೂಡ ನಿಜವಾದಂತಹ ಅವರ ಹುನ್ನಾರ, ನಿಜವಾದಂತಹ ಅವರ ಮನೋ ಅಭೀಷ್ಟೆಗಳನ್ನು ನಾವು ಅರ್ಥಮಾಡಿಕೊಳ್ಳದೆ ಹೋಗಿರತಕ್ಕಂಥ ಸನ್ನಿವೇಶಗಳೂ ಕೂಡ ಇವೆ. ಇದೇ ರೀತಿಯಾಗಿರತಕ್ಕಂಥ ಮಾತನ್ನು ದಿವಂಗತ ಜೆ.ಹೆಚ್. ಪಟೇಲ್‌ರವರು ಇಲ್ಲಿ, ಇದೇ ಸದನದಲ್ಲಿ, ಅವರು ವಿಶ್ವಾಸ ಮತವನ್ನು ಕೇಳಿದಂತಹ ಸಂದರ್ಭದಲ್ಲಿ ಅಡಿಗರ ಕಾವ್ಯವೊಂದನ್ನು ಹೇಳುವ ಮೂಲಕ ಹೇಳಿದ್ದರು. ಆ ಸಂದರ್ಭದಲ್ಲಿಯ ಬೇರೆ ವಿವರಗಳೂ ಸಹ ಇವೆ. ವಿಶ್ವಾಸ ಮತವನ್ನು ಆಶಿಸಿ, ಸ್ವೀಕಾರ ಮಾಡಬೇಕಾದಂತಹ ಅಗತ್ಯ ಏನಿತ್ತು? ಇದು ಮಾಡಬೇಕಾದಂತಹ ಅಗತ್ಯವಿಲ್ಲ ಎನ್ನುವಂತಹ ಮಾತುಗಳನ್ನು ಮತ್ತು ಚರ್ಚೆಗಳೆಲ್ಲಾ ಆಗುತ್ತವೆ. ಆದರೆ ಆ ಸಂದರ್ಭದಲ್ಲಿ ನಾವೆಲ್ಲಾ ಒಂದು ತರಹದಲ್ಲಿ ದೊಂಬರಾಗಿದ್ದೇವೆ, acrobatics ಆಗಿದ್ದೇವೆ, ದೊಂಬರಾಟವನ್ನು ಮಾಡುತ್ತಿದ್ದೇವೆಂದು ಅವರು ಹೇಳುತ್ತಾರೆ. ಈ ದೊಂಬರಾಟದಲ್ಲಿ ಇರತಕ್ಕಂಥದ್ದು ಏನಿದೆ? 'ಮಹಾಪುರುಷರು ಉಪವಾಸದ ಸಮ್ಮು ಹಿಡಿದು ತೃಪ್ತಿ ತೇಗಿ ಭರಿಸಬಹುದು' ಎಂದು ಆ ಹಿನ್ನೆಲೆಯಲ್ಲಿ ಅಡಿಗರ ಕಾವ್ಯವನ್ನು ಅವರು ಹೇಳಿದ್ದರು. 'ಪಾಪ, ಅವನು ಉಪವಾಸ ಬಿದ್ದು ತೇಗಿದರೆ, ಉಂಡಿದ್ದಾನೆ, ಅದಕ್ಕಾಗಿ ತೇಗುತ್ತಾನೆ ಎಂದು ಹೇಳಿದವರು, ಉಪವಾಸದ ಸಮ್ಮು ಹಿಡಿದು ತೃಪ್ತಿ ತೇಗು ಭರಿಸುವವರು, ಸಾಲ ಮಾಡಿ ತುಪ್ಪ ತಿಂದು ನಿಮ್ಮ ಮೂತಿಗೆ ಒರೆಸುವವರು, ಯೋಜನೆಯ

ಯಜ್ಞದಲ್ಲಿ ಪಳೆಯ ರುಚಿಯ ಕಂಡವರು, ಕಾನೂನು ಗಾಣದಿಂದ ಮರಳಿ ಎಣ್ಣೆ ತೆಗೆದವರು, ಕತ್ತೆ ಕುದುರೆಯಾಗುವಂತೆ, ಹುಲಿಯು ಹೊಟ್ಟನ್ನು ಉಣ್ಣುವಂತೆ, ನೆಲವೇ ನಾಶವಾಗುವಂತೆ, ನಾಯಿ ಬಾಲ ನಿಗುರುವಂತೆ ಮಾಡಬಲ್ಲ ಈ ದೊಂಬರು, ಯಾರು ಇವರು? ಯಾರು ಎಷ್ಟು ವರ್ಷ ಆಳಿದರು?' ಅವರು ಹೇಳುತ್ತಾರೆ. ಇಷ್ಟು ವರ್ಷ ಈ ದೇಶದಲ್ಲಿ ಆಳಿದಂತಹವರು ಯಾರು? ಇಷ್ಟು ವರ್ಷ ಆಳುವಾಗ ಇದನ್ನು ಬಹಳ ಸರಳವಾದಂತಹ ರೀತಿಯಲ್ಲಿ ಮನುಷ್ಯನ ಬದುಕನ್ನು ಅಥವಾ ಸವಾಜದ ಸಂಕೀರ್ಣತೆಯನ್ನು ನಾವು ಜಾತಿವಾದಿಗಳು, ಕೋಮುವಾದಿಗಳು ಎಂದು ವಿಭಜಿಸುವುದರ ಮೂಲಕವಾಗಿ ಅದರ ಸಂಪೂರ್ಣ ಲಾಭವನ್ನು ಪಡೆದಿರತಕ್ಕಂಥವರು ಯಾರು? ಹಾಗೊಮ್ಮೆ ಹಿಗೊಮ್ಮೆ ಇಂತಹ ಮಾತುಗಳ ಮೂಲಕವಾಗಿ ನಾವು ದಾರಿ ತಪ್ಪಿದ್ದೇವೆ ಎನ್ನುವಂತಹ ಮಾತುಗಳು ಬೇರೆ. ಆದರೆ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಮಾಡುತ್ತಾ ಅನೇಕ ಸಂದರ್ಭದಲ್ಲಿ ಇದನ್ನು ಸರಳವಾಗಿ ಇರತಕ್ಕಂಥ ರೀತಿಯಲ್ಲಿ ಯೋಚನೆ ಮಾಡಲಿಕ್ಕೆ ಸಾಧ್ಯತೆ ಆಗುವುದಿಲ್ಲ. ಈಗಾಗಲೇ ಮನುಷ್ಯನ ಬದುಕು ಎಂಬುದು ಯಾವ ರೀತಿ ಇರುತ್ತದೆ ಎಂದರೆ, ಅವನ ಒಳಗೂ ಮತ್ತು ಅವನ ಸುತ್ತಲಿನ ಹೊರಗೂ, ಅವನನ್ನು ಪ್ರತಿಕ್ಷಣವೂ ಹೊಸದಾಗಿ ನಿರ್ಮಾಣ ಮಾಡುತ್ತಿರುತ್ತದೆ. ಪ್ರತಿಕ್ಷಣವೂ ಅವನು ಹೊಸದಾಗಿ ನಿರ್ಮಾಣಕ್ಕೆ ಒಳಗಾಗದೆ ಇದ್ದರೆ, ಅವನು ಏನನ್ನೂ ಜಗತ್ತಿನಿಂದ ಅನುಭವದಿಂದ ಪಡೆಯಲಿಲ್ಲ ಅನ್ನುವಂತಹ ಮಾತಾಗುತ್ತದೆ. ಅನುಭವದ ಮೂಲಕವಾಗಿಯೇ ಪಡೆಯಬೇಕಾಗಿರತಕ್ಕಂಥದ್ದು ಇದೆ. ಜಗತ್ತಿನ ಮತ್ತು ಸುತ್ತಮುತ್ತಲಿನ ಪರಿಸರದ ಒಳಗಿನ ನಮ್ಮ ಪ್ರಕ್ರಿಯೆಗಳ ಹೊರಗಿನ ಆಟಾಟೋಪಗಳನ್ನು ನೋಡಿ ನಾವು ಕಲಿಯಬೇಕಾಗಿರತಕ್ಕಂಥದ್ದು ಇದೆ. ನಾನು ಈ ಮಾತನ್ನು ಒಪ್ಪುತ್ತೇನೆ. ಜಾತ್ಯಾತೀತತೆ ವಿಚಾರ ಮತ್ತು ಕೋಮುವಾದಿ ವಿಚಾರಗಳನ್ನು ನಾನು ಒಪ್ಪುತ್ತೇನೆ. ಆದರೆ ನಾವು ಮತ್ತೊಂದು ಮುಖವನ್ನು ಕೂಡ ನೋಡಬೇಕಾಗಿರತಕ್ಕಂಥದ್ದು ಇದೆ. ಈ ಕೋಮುವಾದಿ ಪ್ರಸ್ತಾಪಗಳನ್ನು ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರೂ ಕೂಡ ಎಚ್ಚರದಿಂದ ಗಮನಿಸಬೇಕಾಗಿರತಕ್ಕಂಥ ಅಂಶಗಳು ಇದರಲ್ಲಿದೆ. ಜಾತೀಯ ವಾದದ ಕಾರಣವಾಗಿ ಅಧಿಕಾರಕ್ಕೆ ಬಂದು, ದುರಾಡಳಿತವನ್ನು ಕೊಡುವುದರ ಮೂಲಕ ಕೋಮುವಾದಕ್ಕೆ ಅದೊಂದು ಪರ್ಯಾಯವಾಗಿರಲಿಕ್ಕೆ ಸಾಧ್ಯವೇ? ನಾನು ಯಾವುದೇ ರಾಜ್ಯದ ಉದಾಹರಣೆಯನ್ನು ಕೊಡಬೇಕಾದಂತಹ ಅಗತ್ಯ ಎಲ್ಲಿದೆ? ಬಿಹಾರದಲ್ಲಿ ಏನಾಗಿದೆ ಎಂದು ನಿಮಗೆ ಗೊತ್ತಿದೆ. ಆಡಳಿತದಲ್ಲಿ ತೆಗೆದುಕೊಳ್ಳಬೇಕಾಗಿರತಕ್ಕಂಥ ನಿಲುವುಗಳೇ ಇಲ್ಲದಂತಹ ಪರಿಸ್ಥಿತಿಯಲ್ಲಿ ಕೋಮುವಾದಿಗಳು ಮತ್ತು ಜಾತಿವಾದಿಗಳು ಎಂದು ಕೃತಕವಾಗಿ ವಿಂಗಡಿಸುವುದರ ಮೂಲಕವಾಗಿ ಒಂದು ದುರಾಡಳಿತವನ್ನು ತಂದಿರತಕ್ಕಂಥ ಸರ್ಕಾರವನ್ನು ತೆಗೆದು ಹಾಕಬೇಕಾಗಿದ್ದರೆ, ಕಡಿಮೆ ಅಪಾಯಕಾರಿ ಯಾವುದು ಎನ್ನುವುದನ್ನು ಗುರುತಿಸಬೇಕಾಗಿರುತ್ತದೆ. ಆ ಸಂದರ್ಭದಲ್ಲಿಯೂ ಕೂಡ ನನ್ನದೇ ಆಗಿರತಕ್ಕಂಥ ಕೆಲವು ಮಾತುಗಳಿವೆ. ಇದರಲ್ಲಿ ಅಸಹಾಯಕತೆ ಅನ್ನತಕ್ಕಂಥದ್ದೂ ಕೂಡ ಬರುತ್ತದೆ. ನೀವು ಹೇಳಿದಿರಿ ಅಥವಾ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದರು. ನನಗೇನಾದರೂ ಗೊಂದಲ ಇರುವುದಾಗಿದ್ದರೆ ನಾನು ಅವಿಶ್ವಾಸ ಗೊತ್ತುವಳಿ ತರುತ್ತಿದ್ದೆ ಎಂದು ಹೇಳಿದರು. ಅದು ಒಂದು ಅಸಹಾಯಕತೆ ಎಂದಲ್ಲ, ಅದು ಒಬ್ಬಂಟಿಗನ ಮಾತಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಕೂಡ ಈ ಅಸಹಾಯಕತೆಗಳು ಇರುತ್ತವೆ. ಅದನ್ನು ನಾನು ನನ್ನದೇ ಆದಂತಹ ರೀತಿಯಲ್ಲಿ ಹೇಳುವುದಾದರೆ, 'ಯಾರನ್ನೂ ಒದೆಯಲಾಗದೆ, ಏನನ್ನೂ

ಸಿಗಿಯಲಾಗದೆ, ಬದುಕಿನ ಅಣಕ ಪೂರಾ ಮೊಗೆಯಲಾರದೆ, ಎಂತಹ ಬದುಕು ನನ್ನದೆಂದು ಒಳಗೊಳಗೇ ಬೆಂದೆ' ಎಂದು. ಎಲ್ಲರೂ ನಾಯಕತ್ವವನ್ನು ನಿರೀಕ್ಷೆ ಮಾಡಬೇಕಾಗಿರತಕ್ಕಂಥದ್ದು ಇಲ್ಲ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ಯಾವುದು? ನಾವು ಸರಳವಾಗಿ ಇದನ್ನು ವಿಭಜನೆ ಮಾಡತಕ್ಕಂಥದ್ದು ಏನಿದೆ, ಇದು ಬಹಳ ತಪ್ಪಾಗಿರತಕ್ಕಂಥ ಕಾರಣವನ್ನು ಕೊಡುತ್ತದೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ನಾನು ಮಾನ್ಯ ಪ್ರಕಾಶ್‌ರವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಮಾನ್ಯ ಪ್ರಕಾಶ್‌ರವರು ತಮ್ಮ next phase ಏನು ಎಂದು ಈಗಾಗಲೇ predictions ಕೊಟ್ಟಿದ್ದಾರೆ. ಅವರು ಅದರ ಪ್ರಾರಂಭವನ್ನೇ ಮಾಡಿಬಿಟ್ಟಿದ್ದಾರೆ.

**ಶ್ರೀ ಎಂ.ಪಿ. ಪ್ರಕಾಶ್** : ನಾನು ಪ್ರಾರಂಭ ಮಾಡಿರತಕ್ಕಂಥ ನಿಮಗೂ ಕೂಡ ಗೊತ್ತಿರತಕ್ಕಂಥದ್ದೇ ಆಗಿದೆ. ನೀವೂ ಕೂಡ ಅಸಹಾಯಕರಾದಂತಹ ಸ್ಥಿತಿಯಿಂದ ಎಲ್ಲಿ ಪ್ರಾರಂಭ ಮಾಡಿ, ಎಲ್ಲಿ ಮುಕ್ತಾಯ ಆಗಿದ್ದೀರಿ ಎಂಬುದು ಕೂಡ ಗೊತ್ತಿದೆ. ಆದ್ದರಿಂದ ನಾವು ಇದನ್ನು ಯಾವುದನ್ನೂ ಕೂಡ ವಿಜೃಂಭಣೆ ಮಾಡಬೇಕಾಗಿರತಕ್ಕಂಥ ಅಗತ್ಯ ಇಲ್ಲ. ಮಾನ್ಯ ಶ್ರೀರಾಮರೆಡ್ಡಿಯವರನ್ನು ನಾನು ಸಂಪೂರ್ಣವಾಗಿ ಏಕೆ ಒಪ್ಪುತ್ತೇನೆ ಎಂದರೆ, ನಾವೆಲ್ಲರೂ ಒಂದರ್ಥದಲ್ಲಿ ಭಾಗಿಗಳಾದಂತಹವರೇ ಆಗಿದ್ದೇವೆ. ದಿವಂಗತ ಜೆ.ಹೆಚ್. ಪಟೇಲ್‌ರವರು ಹಿಂದಿನ ತಾರೀಖಿನ ದಿವಸ ಕ್ಯಾಪಿಟಲ್ ಹೋಟೆಲ್‌ನಲ್ಲಿ ನಾವು ತಯಾರು ಮಾಡಿರತಕ್ಕಂಥ ಒಂದು ಗೊತ್ತುವಳಿಯನ್ನು, ಆ ಗೊತ್ತುವಳಿಯನ್ನು ನಾನೇ ಬರೆದಿದ್ದೆ, ಅವತ್ತು ಅವರು ಏನು ಭಾಷಣ ಮಾಡಿದರು ಅನ್ನುವುದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. 'ಒಂದು ಕ್ಯಾನ್ಸರ್, ಒಂದು curse' ಎಂದು ಅವರು ಆಗ ಹೇಳಿದ್ದರು. ಒಂದು ಶಾಪ, ಮತ್ತೊಂದು ರೋಗ. ಅದು ಗುಣಮುಖವಾಗಲಾರದಂತಹ ರೋಗ ಎನ್ನುವಂತಹ ರೀತಿಯಲ್ಲಿ ಕೂಡ ಅವರು ಅದನ್ನು ಪ್ರಸ್ತಾಪ ಮಾಡಿದ್ದರು. ಆ resolution ಅನ್ನು ನಾನೇ ಬರೆದಿದ್ದೆ. ಆದರೆ ಬೆಳಿಗ್ಗೆ 6 ಗಂಟೆಗೆ ಅವರ ನಿಲುವು ಬದಲಾಯಿತು. ನಿಲುವು ಬದಲಾದಂಥ ಸನ್ನಿವೇಶದಲ್ಲಿ ನಮ್ಮನ್ನೆಲ್ಲಾ ಕರೆಸಿದರು. ಅವರಲ್ಲಿ ನಿಜವಾಗಿಯೂ ವ್ಯತ್ಯಾಸ ಮಾಡಿದವರು ದೇವೇಗೌಡರು ಮತ್ತು ಸಿದ್ಧರಾಮಯ್ಯನವರು. ಅವರು ಹೇಳಿದರು ಇದನ್ನು ನಾವು ಒಪ್ಪುವುದಿಲ್ಲವೆಂದು. ಆದರೆ, ನಾವು ಒಪಿದ್ದೆವು. ನಮ್ಮನ್ನೆಲ್ಲಾ ಕರೆಸಿ ಅವರು ಏನು ಹೇಳಿದರು ಅಂದರೆ, ನನ್ನ ಸ್ನೇಹಿತರಾಗಿ ಇಷ್ಟೆಲ್ಲಾ ಹೋರಾಟ ಮಾಡಿದ ಜಾರ್ಜ್ ಫರ್ನಾಂಡೀಸ್‌ರವರು ಪ್ರಧಾನಮಂತ್ರಿಯಾಗುವ ಒಂದು ಅವಕಾಶ ಸಿಕ್ಕಿದೆ. ಅದು ಸರಿಯೋ ತಪ್ಪೋ ನಿನ್ನೆ ನಾನು ಏನು ಮಾತನಾಡಿದ್ದೇನೆ ಬಿಟ್ಟಿದ್ದೇನೋ ಆ ಮಾತು ಪ್ರಶ್ನೆಯಿಲ್ಲ. ಒಬ್ಬ ನನ್ನ ಸ್ನೇಹಿತ, ಹೋರಾಟಗಾರ ಒಬ್ಬ ಅಲ್ಪಸಂಖ್ಯಾತನಾಗಿರುವವನು ದೇಶದ ಪ್ರಧಾನಮಂತ್ರಿಯಾಗುವ ಅವಕಾಶ ಲಭ್ಯವಾಗಿದೆ. ನಾನು ಆ ನಿಲುವನ್ನು ಬದಲಿಸಿದ್ದೇನೆ. ನನ್ನೊಟ್ಟಿಗಿರುವವರು ಇರಬಹುದು, ಇಲ್ಲದಿದ್ದವರು ಹೋಗಬಹುದು ಎನ್ನತಕ್ಕಂಥ ಮಾತನ್ನು ಹೇಳಿದರು. ಅದು ಆ ಮುಖಂಡತ್ವದ ಲಕ್ಷಣವಿದ್ದ ಕಾರಣಕ್ಕಾಗಿಯೇ ನಾವು ಅವರನ್ನು ಹಿಂಬಾಲಿಸಿದೆವು. ನಮ್ಮ ಊರಿನಲ್ಲಿ ಸುಷ್ಮಾ ಸ್ವರಾಜ್ ಅವರನ್ನು ಕರೆದುಕೊಂಡು ಹೋಗಿ ನಾನೇ ಭಾಷಣ ಮಾಡಿದೆ. ನಾನು ಕೆಳಗಡೆ ವಿಧಾನಸಭೆ ಚುನಾವಣೆಗೆ ನಿಂತಿದ್ದರೆ, ಅವರು ಮೇಲುಗಡೆ ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದರು. ಕೆಳಗೆ ಬಾಣ ಮೇಲೆ ಕಮಲ, ಮೇಲೆ ಕಮಲ ಕೆಳಗೆ ಬಾಣ ಇದನ್ನೆಲ್ಲಾ ಹೇಳಿಕೊಂಡೇ ನಾವು ತಿರುಗಾಡಿದೆವು. ಹೀಗೆ ಇದೆಲ್ಲಾ ಹಾಗಾಗಿದೆ, ಹೀಗಾಗಿದೆ ಎನ್ನತಕ್ಕ ಚರ್ಚೆಯಲ್ಲ. ಈ ವಿಷಯದಲ್ಲಿ ಅದು ವಾಸ್ತವವಾದಂಥ ಸಂಗತಿ. ಆದ್ದರಿಂದ..

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ನೀವು ಬಾಣ ಬಿಟ್ಟಿದ್ದರೆ ಚೆನ್ನಾಗಿತ್ತು!

**ಶ್ರೀ ಎಂ.ಪಿ. ಪ್ರಕಾಶ್** : ಏಕೆಂದರೆ, ಒಂದಲ್ಲ ಒಂದು ದಿವಸ ನಾವೆಲ್ಲಾ ತಪ್ಪು ಮಾಡಿದ್ದೇವೆ. ತಪ್ಪು ಹೆಜ್ಜೆಗಳನ್ನು ಇಟ್ಟಿದ್ದೇವೆ. ಈಗ ಅದನ್ನು ಸರಿಪಡಿಸಿಕೊಳ್ಳುತ್ತೇವೆ ಎನ್ನುವಂಥ ರೀತಿಯಲ್ಲಿ ಜಾತ್ಯಾತೀತರು ಅಥವಾ ನಾವು ಕೋಮುವಾದಿಗಳಲ್ಲ ಎಂದು ಹೇಳತಕ್ಕಂಥ ಒಂದು ಮನೋಸ್ಥಿತಿ, ಜಾತೀಯತೆ ಮತ್ತು ಕೋಮುವಾದ ಒಂದು ಮನೋಸ್ಥಿತಿ, ಆ ಮನೋಸ್ಥಿತಿಗೆ ಒಂದು ಉದಾಹರಣೆಯೆಂದರೆ, ಅಬ್ದುಲ್ ಕಲಾಂ ಆಜಾದ್‌ರವರು 'India wins freedom' ಬಗ್ಗೆ ಮಾತನಾಡತಕ್ಕದ್ದರಲ್ಲಿ ಇನ್ನೊಂದು ಬಹಳ ಮುಖ್ಯವಾದ ಅಂಶವನ್ನು ಪ್ರಸ್ತಾಪ ಮಾಡುತ್ತಾರೆ. ಬಾಬುರಾಜೇಂದ್ರ ಪ್ರಸಾದ್‌ರವರನ್ನು ಬಹಳ ಜನ ಆತ ಒಬ್ಬ ಸನಾತನಿ ಎಂದು ಭಾವಿಸಿಕೊಳ್ಳುತ್ತಾರೆ. ಆತ ಹಿಂದೂ ವಾದಿ ಎಂದು ಭಾವಿಸಿಕೊಳ್ಳುತ್ತಾರೆ. ರಾಷ್ಟ್ರಪತಿಗಳಾದ ತಕ್ಷಣವೇ 300 ಜನ ಬ್ರಾಹ್ಮಣರ ಪಾದಗಳನ್ನು ಕಾಶಿ ವಿಶ್ವನಾಥ ದೇವಾಲಯದಲ್ಲಿ ತೊಳೆಯುತ್ತಾರೆ. ಅದಕ್ಕೆ ಲೋಹಿಯಾರವರೇ ಈ ವಿಚಾರವನ್ನು ಪ್ರಸ್ತಾಪ ಮಾಡಿ, ಇವತ್ತು ಮಾನ್ಯ ಶ್ರೀರಾಮರೆಡ್ಡಿ ಮಾತನಾಡಿದಂತೆ. ಮಾತನಾಡುತ್ತಾರೆ, ನೀವು ಒಬ್ಬ ರಾಷ್ಟ್ರಪತಿ, ನೀವು ಯಾವ ಬ್ರಾಹ್ಮಣರ ಪಾದಕ್ಕೆ ಪೂಜೆ ಮಾಡುತ್ತೀರಿ ಅದು ನನಗೆ ಮುಖ್ಯವಲ್ಲ. ಆದರೆ ಕಾಶಿ ವಿಶ್ವನಾಥ ಸಾರ್ವಜನಿಕ ದೇವಾಲಯದಲ್ಲಿ ನೀವು ಅವರ ಪಾದ ಪೂಜೆ ಮಾಡಿರತಕ್ಕದ್ದು ಜಾತ್ಯಾತೀತವಾದ ಧರ್ಮಕ್ಕೆ ಮತ್ತು ಸಂವಿಧಾನಕ್ಕೆ ವಿರೋಧ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡುತ್ತಾರೆ. ಹಾಗೆ ಬಾಬುರಾಜೇಂದ್ರ ಪ್ರಸಾದ್‌ರವರ ಬಗ್ಗೆ ಅಂಥ ಅಭಿಪ್ರಾಯಗಳು ಇರುತ್ತವೆ. ಆದರೆ ಮುಂದೆ ಸರ್ವಪಲ್ಲಿ ರಾಧಾಕೃಷ್ಣನ್‌ರವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಬೇಕೆಂದು ನೆಹರೂರವರು ಯೋಚನೆ ಮಾಡುತ್ತಾರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಆ ತರಹದ sophistication, elite ಆಗಿ ಮಾತನಾಡತಕ್ಕ ಶಕ್ತಿ ಬಾಬು ರಾಜೇಂದ್ರಪ್ರಸಾದ್‌ರವರಿಗೆ ಇಲ್ಲ, ಒಬ್ಬ ಮಹಾನ್ ವೇದಾಂತಿ, ದೊಡ್ಡ orator ಆ ಕಾರಣಕ್ಕಾಗಿ ಡಾ|| ರಾಧಾಕೃಷ್ಣನ್‌ರವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಬೇಕೆಂದು ಹೇಳಿದಂಥ ಸಂದರ್ಭದಲ್ಲಿ ಹೇಳುತ್ತಾರೆ ಅಬ್ದುಲ್ ಕಲಾಂ ಆಜಾದ್‌ರವರು, ವಿರೋಧ ಮಾಡುತ್ತಿದ್ದರೂ ಕೂಡ ಇಡೀ ರಾತ್ರಿ ನಾನು ದೀಪ ಹಚ್ಚಿ ಹುಡುಕಿದೆ ಭಾರತ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಈ ರಾಧಾಕೃಷ್ಣನ್‌ರವರ ಹೆಸರು ಎಲ್ಲೂ ಬರಲಿಲ್ಲ, ಈತ ಯಾರು ಎಂದು ಕೇಳುತ್ತಾರೆ. ಆಗ ಅವರು ಉತ್ತರ ಕೊಡುತ್ತಾರೆ, 'Look at the irony, look at the fun; I burnt the midnight oil. I never found the name of Radhakrishnan in the annuls of the history of Indian freedom.' ಆ ರೀತಿಯಾದಂಥ ಒಂದು ವ್ಯವಸ್ಥೆ ಇತ್ತು. ಆದರೆ ಆ ವ್ಯವಸ್ಥೆಯ ಮೂಲಕವಾಗಿ ನಾವು ಇವತ್ತು ಏನು ಬಹಳ ದೊಡ್ಡದೊಡ್ಡದಾಗಿ ಮಾತನಾಡಿ ಇದನ್ನು ತಪ್ಪುಮಾಡಿದ್ದೇವೆ, ಅದನ್ನು ತಪ್ಪು ಮಾಡಿದ್ದೇವೆ ಎನ್ನತಕ್ಕದ್ದೇನಿದೆ ಬಹಳ ಸುಲಭವಾಗಿ ಹೇಳಬೇಕಾಗಿರತಕ್ಕದ್ದು. ಮನುಷ್ಯ ನಂಬಿಕೆಯಲ್ಲೇ ಬದುಕುತ್ತಾನೆ, ನಂಬಿಕೆಯ ಜಾಗದಲ್ಲಿ ಮತ್ತೊಂದು ನಂಬಿಕೆಯನ್ನು ಇಡದಿದ್ದರೆ ಏನಾಗುತ್ತದೆ? ಇವತ್ತು ಮಾನ್ಯ ಸಿದ್ದರಾಮಯ್ಯನವರಿಗೆ ಗೊತ್ತಿದೆ, ಮಹದೇವಪ್ಪನವರಿಗೆ ಗೊತ್ತಿದೆ, ದೇವನೂರು ಮಹದೇವ್‌ರವರ ಕೃತಿ ಕುಸುಮ ಬಾಲೆಯಲ್ಲಿದೆ, ಒಬ್ಬ ದಲಿತರ ಹೆಣ್ಣು ಮಗಳು ಬಡತನದಲ್ಲಿದ್ದಾಗ ಅವಳ ಕೂಸು ಸಾಯುತ್ತಿರುತ್ತದೆ, ಆಗ ಕೆಲವೆಲ್ಲಾ ಆ್ಯಕ್ಟಿವಿಸ್ಟ್ ಆಗಿರತಕ್ಕವರೆಲ್ಲಾ ಬರುತ್ತಾರೆ ನೀವೇನು ಮಂತ್ರ, ಮಾಟ ಮಾಡುತ್ತಿದ್ದೀಯಾ, ಬೇವಿನ ಸೊಪ್ಪನ್ನೆಲ್ಲಾ ಹಾಕುತ್ತಿದ್ದೀಯಾ, ಅದರಿಂದ ನಿನ್ನ ಮಗು

ಬದುಕಬೇಕೆಂದು ಏಕೆ ಯೋಚನೆ ಮಾಡುತ್ತಿದ್ದೀಯಾ ಅದರ ಬದಲು ವೈದ್ಯರ ಹತ್ತಿರ ಹೋಗಿ ಉಪಚಾರ ಮಾಡಿಸಿಕೊಳ್ಳಬೇಕು, ಔಷಧಿ ಕೊಡಬೇಕೆಂದು ಹೇಳುತ್ತಾರೆ. ಆಗ ಅವಳು ಹೇಳುತ್ತಾಳೆ, ಹಾಗಾದರೆ ಎಲ್ಲಿದ್ದಾನೆ ಆ ವೈದ್ಯ? ಎಲ್ಲಿದೆ ಔಷಧ? ಔಷಧವೂ ಇಲ್ಲ ವೈದ್ಯರೂ ಇಲ್ಲ ಬಡತನ ತುಂಬಿ ತುಳುಕುತ್ತಿದೆ, ನನ್ನ ಮಗು ಸಾಯುವುದನ್ನು ನೋಡಿ ನಿರ್ಭಾವಕದಿಂದಿರಲು ಸಾಧ್ಯವಿದೆಯೆ? ಭಾವನಾತ್ಮಕವಾಗಿಯೂ ಒಬ್ಬ ಮನುಷ್ಯ ಬದುಕುತ್ತಾನೆ, ಒಂದು ನಂಬಿಕೆಯು ಇದ್ದ ಜಾಗದಲ್ಲಿ ಮತ್ತೊಂದು ನಂಬಿಕೆಯನ್ನು ಇಡದೇ ಹೋದರೆ ಅದು ಒಂದು ವೈಚಾರಿಕತೆಯಾಗುತ್ತದೆ. ಮನುಷ್ಯ ವೈಚಾರಿಕತೆಯಿಂದಲೇ ಬದುಕುವುದಿಲ್ಲ, ಮನುಷ್ಯ ಕೇವಲ ಬಾವುಕತೆಯಿಂದಲೂ ಬದುಕುವುದಿಲ್ಲ, ಬಾವುಕತೆಗೆ ವೈಚಾರಿಕತೆಯ ಒಂದು ಲೇಪನವನ್ನು ಕೊಡಬೇಕಾಗಿರತಕ್ಕ ಕಾರಣ ಇದೆ. ಮಾನ್ಯ ಕುಮಾರಸ್ವಾಮಿಯವರು ಪೂಜೆ ಮಾಡಿದರು ಎನ್ನುವಂಥದ್ದು ಒಂದು ನಂಬಿಕೆ, ಆ ನಂಬಿಕೆಯನ್ನು ಸಾರ್ವತ್ರಿಕವಾದ ಸ್ಥಳದಲ್ಲಿ ತೋರಿಸಬೇಕೋ, ತೋರಿಸಬಾರದೋ ಎಂಬ ಪ್ರಶ್ನೆ ಏನಿದೆ ಅದು ಚರ್ಚೆಗೆ ಸಂಬಂಧಪಡುವಂಥ ವಿಚಾರ. ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ನಂಬಿಕೆಯ ಜಾಗದಲ್ಲಿ ಮತ್ತೊಂದು ನಂಬಿಕೆ ಎನ್ನತಕ್ಕದ್ದು ಬೇಕು, ಇದು ಕೇವಲ ಇವರೇ ಹೇಳುವುದಲ್ಲ, ಎಂ.ಪಿ. ಚಾಗಲಾ ಅವರು ಹೇಳುತ್ತಾರೆ ಈ ಮಾತನ್ನು 'Roses in December' ಎಂದು ಅವರದೊಂದು ಉತ್ತಮವಾಗಿರತಕ್ಕ ಆತ್ಮ ಕತೆ ಇದೆ. ಎಂ.ಸಿ. ಚಾಗಲ ಎಂದೂ ಕೂಡ ಮಸೀದಿಗೆ ಹೋದಂಥವರಲ್ಲ, ಎಂದೂ ಹೋಗಿ ಪ್ರಾರ್ಥನೆ ಮಾಡಿದಂಥವರಲ್ಲ. ಅವರ ಮಕ್ಕಳು ಬೇರೆ ಬೇರೆ ದೇಶದಲ್ಲಿ ಕೆಲಸ ಮಾಡುತ್ತಾರೆ, ಹೆಂಡತಿ ಸತ್ತು ಹೋಗುತ್ತಾಳೆ, ಆಗ ಒಬ್ಬಂಟಿಗನಾಗಿರುತ್ತಾರೆ, ಆ ಸಂದರ್ಭದಲ್ಲಿ ಅವರು ಒಂದು ಮಾತನ್ನು ಹೇಳುತ್ತಾರೆ, 'At the afternoon of my life, my better half is not here. My children are elsewhere. If I had the faith, I would have clinged on to it.' ನನ್ನಿಂದ ನಂಬಿಕೆ ಎನ್ನುವುದಿದ್ದರೆ ಆ ನಂಬಿಕೆ ಮತ್ತೊಂದು ನಂಬಿಕೆ ಎಂಬುದು ಇದ್ದಿದ್ದರೆ ಇವತ್ತು ಮುಸ್ಸಂಜೆಯ ಈ ವಯಸ್ಸಿನಲ್ಲಿ ಅದಕ್ಕೆ ನಾನು ಜೋತುಬೀಳುತ್ತಿದ್ದೆ ಎಂದು, ಮನುಷ್ಯ ಎಲ್ಲೋ ಒಂದು ಕಡೆ ಜೋತುಬೀಳತಕ್ಕ ಸ್ವಭಾವಕ್ಕೆ ಒಳಗಾಗುತ್ತಾನೆ, ಆ ಜೋತುಬೀಳತಕ್ಕದ್ದು ಒಂದು ನಂಬಿಕೆ ಎನ್ನತಕ್ಕದ್ದು, ಆ ನಂಬಿಕೆ ಎನ್ನತಕ್ಕದ್ದೇನಿದೆ ಅದನ್ನೇ ನಾವು ನಾಯಕರು ಎನ್ನತಕ್ಕವರು ದುರುಪಯೋಗ ಪಡಿಸಿಕೊಳ್ಳುತ್ತೇವೆ. ಅದಕ್ಕೆ ನೆಪೋಲಿಯನ್ ಹೇಳುತ್ತಾನೆ, 'Leader is a dealer in hope' ಎನ್ನುವಂತಹ ಮಾತನ್ನು ಹೇಳುತ್ತಾನೆ. We are dealers in hope. ಯಾವುದೋ ಒಂದು ನಂಬಿಕೆ, ಬರುವ ಚುನಾವಣೆಯಲ್ಲಿ ಗೆದ್ದು ಬರಿಸುತ್ತೇವೆಂದು ಹೇಳುವುದು ನನ್ನ ಹಿಂದೆ ಇರಿ ನಿಮ್ಮೆಲ್ಲರನ್ನು ನೋಡಿಕೊಳ್ಳುತ್ತೇನೆಂದು ಹೇಳತಕ್ಕದ್ದು ಇದೆಲ್ಲಾ ಒಂದು ಭ್ರಮೆಯನ್ನು ನಂಬಿಕೆಯನ್ನು ಸೃಷ್ಟಿಮಾಡುತ್ತದೆ, ಆ ಭ್ರಮೆಯ ಸೃಷ್ಟಿಯಲ್ಲಿ ಯಾರು ಬಹಳ ಯಶಸ್ವಿಯಾಗುತ್ತಾರೆ ಅವರು ನಾಯಕರಾಗುತ್ತಾರೆ, ಆ ನಂಬಿಕೆಯನ್ನು ಆ ಆಸೆಯನ್ನು ಹೆಚ್ಚು ಭ್ರಮಾತ್ಮಕವಾಗಿ ಚಿತ್ರಿಸಿಕೊಳ್ಳತಕ್ಕವನೂ ನಾಯಕನಾಗುತ್ತಾನೆ, ನಾಯಕ ಆಗದೆ ಇರತಕ್ಕವನು ದುರಂತ ನಾಯಕನೂ ಕೂಡ ಆಗಿರುತ್ತಾನೆ, ಆದ್ದರಿಂದ ಇವತ್ತೇನು ನಾವು ಮಾತನಾಡುತ್ತಿದ್ದೇವೆ ಇಷ್ಟೆಲ್ಲಾ ದೊಡ್ಡದೊಡ್ಡದಾಗಿ ಜರ್ಮನಿಯ ಉದಾಹರಣೆಯನ್ನು ಕೊಟ್ಟಿರಿ, ನಮ್ಮ ದೇಶದಲ್ಲಿ ನಮ್ಮ ಕನ್ನಡ ನಾಡಿನಲ್ಲಿ ಆದಂಥ ದೊಡ್ಡ ಉದಾಹರಣೆಯನ್ನು ತಾವು ತಿಳಿದುಕೊಳ್ಳಿ. 'ಹಿಂದಣ ಅನಂತವನು, ಮುಂದಣ ಅನಂತವನು ಒಂದು ದಿನ ಒಳಗೊಂಡಿತ್ತು ನೋಡ, ಆ ಒಂದು ದಿನದೊಳಗೊಂಡು

ಮಾತನಾಡುವ ಮಹಂತನ ಕಂಡುಬಲ್ಲವರಾರಯ್ಯ? ಹಿಂದಣ ಅನಂತವನು, ಮುಂದಣ ಅನಂತವನು ಒಂದು ದಿನ ಒಳಗೊಂಡಿತಲ್ಲಾ, ಆ ಒಳಗೊಂಡಂಥ ದಿನವೆ' ಇದು. ನಮ್ಮ ಹಿಂದಣ ಅಂತ ಏನಿದೆ ನಮ್ಮ ಚರಿತ್ರೆ. ಮುಂದೆ ಏನಾಗುತ್ತಿದೆ ಎನ್ನತಕ್ಕ ನನ್ನ ಭವಿಷ್ಯ, ಅದು ಒಳಗೊಂಡಿರತಕ್ಕ ದಿನ ಇವತ್ತು ವಿಶ್ವಾಸ ಮತವನ್ನು ಸ್ವೀಕಾರ ಮಾಡತಕ್ಕ ಒಂದು ದಿನ. ಅವರು ಅದನ್ನು ಇವತ್ತು ಮಾತನಾಡುವ ಆ ಒಂದು ದಿನದೊಳಗೊಂಡು ಮಾತನಾಡುವ ಮಹಂತನ ಕಂಡುಬಲ್ಲವರಾರಯ್ಯ ಎಂದು ಹೇಳಿ, 'ಆಧ್ಯರೂ, ವೇದ್ಯರೂ, ಅನಂತ ಹಿರಿಯರು ಕಾಲದಂತವನ್ನು ಅರಿಯದೆ ಅಂತಹೋದರು ಕಾಣ ಗುಹೇಶ್ವರ' ಎಂದು ಅಲ್ಲಮಪ್ರಭುಗಳು ಹೇಳಿದ್ದಾರೆ. ನಾವೆಲ್ಲಾ ಇಲ್ಲಿ ಮಾತನಾಡುತ್ತೇವೆ, ಇದನ್ನು ನಾನೇನೂ ಜಸ್ಟಿಫಿಕೇಷನ್ ಮಾಡುವುದಕ್ಕಲ್ಲ, ನನ್ನ ನೋವಿನಿಂದಲೂ ನಾನು ಮಾತನಾಡುತ್ತಿದ್ದೇನೆ. ಇದು ಆಗಿರತಕ್ಕದ್ದು ಸಂತೋಷ ಪಡುವ ವಿಚಾರವೇನಲ್ಲ. ಇದು ಆಗಿರತಕ್ಕದ್ದೆಲ್ಲಾ ಮುಂದಿನ ಒಂದು ತಲೆಮಾರಿಗೆ ಆದರ್ಶವೆಂದು ಹೇಳಲು ಸಹ ನಾವೆಲ್ಲಾ ಹೋಗಬಾರದು. ನಾನು ಮಾನ್ಯ ಸಿಂಧ್ಯಾರವರು ಹೇಳಿದ ಮಾತನ್ನು ಒಪ್ಪುತ್ತೇನೆ. ನಾವು ಸದೃಢರಾಗಿರಬೇಕು, ದೃಢಚಿತ್ತರಾಗಿರಬೇಕು, ನಾವು ಎಲ್ಲೆಲ್ಲೋ ಹೋಗಿ ಏನೇನೊ ಮಾಡಿ ಎಲ್ಲೊ ಒಂದು ಕಡೆಗೆ ಆ ಜನಗಳನ್ನು ಇಟ್ಟುಕೊಳ್ಳುತ್ತೇವೆಂದರೆ ನಾಳೆ ಪಂಚಾಯಿತಿ ಬೋರ್ಡ್‌ಗಳಲ್ಲಿ, ತಾಲ್ಲೂಕು ಬೋರ್ಡ್‌ಗಳಲ್ಲಿ ನಮ್ಮ ಗತಿಯೇನಾಗುತ್ತದೆ? ಇವತ್ತು ನಾವು ರೆಸಾರ್ಟ್ಸ್‌ಗೆ ಹೋಗುತ್ತೇವೆ, ಇನ್ನೊಂದು ಕಡೆಗೆ ಹೋಗುತ್ತೇವೆ ಅಂದರೆ ನನ್ನ ಬಗ್ಗೆ ನನ್ನ ಸ್ನೇಹಿತರ ಬಗ್ಗೆ ನಮ್ಮ ಪಕ್ಷದಲ್ಲಿರತಕ್ಕ ಸದಸ್ಯರುಗಳ ಬಗ್ಗೆ ನಮಗೆ ಅಪನಂಬಿಕೆಯಾಗಿದೆ ಎಂದು ಅರ್ಥ. ಅಪನಂಬಿಕೆ ಆಗುವಂಥ ರೀತಿಯ ವಾತಾವರಣವನ್ನು ನಾವೇ ಸೃಷ್ಟಿ ಮಾಡಿದ್ದೇವೆ ಎಂಬುದಕ್ಕಿಂತ ನಾವೆಲ್ಲರೂ ಪಾಲುದಾರರಾಗಿ ಚ್ಯುತಿಯನ್ನು ಮಾಡಿದ್ದೇವೆ. ನೀವೆಲ್ಲರೂ ಹೇಳಿದಂತೆ ಇವತ್ತು ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗದಿದ್ದರೆ 18–20 ತಿಂಗಳವರೆಗೆ ಈ ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇವತ್ತು ಯಾವ ಕಾರಣಕ್ಕಾಗಿ, ಆಂತರಿಕವಾಗಿರತಕ್ಕ ಒಳಜಗಳ, ಆಂತರಿಕವಾಗಿರತಕ್ಕ ಅವರ ಕಾಲು ಎಳೆಯುವಂಥ ಪ್ರಯತ್ನ, ಸ್ಪಷ್ಟವಾಗಿರತಕ್ಕಂಥ ನಿರ್ದೇಶನ ಕೊಡಲಾರದಿರತಕ್ಕಂಥ ವರಿಷ್ಠರ ಅನಿಶ್ಚಿತತೆ ಇವೆಲ್ಲವೂ ಕಾರಣಿಭೂತವಾದವು ಎಂಬುದನ್ನು ನಾವು ಮರೆಯಬಾರದು. ಯಾವ ಸಮಯದಲ್ಲಿ ಸಮಸ್ಯೆ ಉಲ್ಬಣಗೊಳ್ಳುತ್ತದೆ ಆ ಸಮಸ್ಯೆಯನ್ನು ಬಗೆಹರಿಸತಕ್ಕ ರೀತಿಯಲ್ಲಿ ತತ್‌ಕ್ಷಣ ಪ್ರಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಅದು ರೈಟೋ ರಾಂಗೋ ಇಲ್ಲಿ ಹೇಳಿದರೆ ತಪ್ಪಾಗಿ ಭಾವಿಸಬಾರದು ಮಾನ್ಯ ಯಡಿಯೂರಪ್ಪನವರು, ಉಪಮುಖ್ಯಮಂತ್ರಿಯವರು. ಅವರು ಯಾವುದೋ ಒಂದು ನಿರ್ಧಾರ ತೆಗೆದುಕೊಂಡಲ್ಲಿ ಆಂತರಿಕವಾಗಿ ಸಮಸ್ಯೆ ಬಂತು ಎಂದು ತಕ್ಷಣವೇ ವರಿಷ್ಠರೆಲ್ಲರೂ ಬೆಂಗಳೂರಿಗೆ ಆಗಮಿಸಿದರು. ಬಂದು ಅದನ್ನೇನು ಸರಿಪಡಿಸಬೇಕೋ ಅದನ್ನು ಸರಿಪಡಿಸಿದರು. ಅದು ಅವರ ಕರ್ತವ್ಯವಾಗಿದೆ. ಇಲ್ಲಿ ಏಕೆ ಬರಲಿಲ್ಲ, ಈ ಚರ್ಚೆಗಳ ಬಗ್ಗೆ ಉಸ್ತುವಾರಿಯಾದಂಥವರು ಕೊನೆ ಘಳಿಗೆಯಲ್ಲಿ ಬರತಕ್ಕದ್ದರಲ್ಲಿ ಅರ್ಥವೇನು? ನಾನು ಆ ಪಕ್ಷದ ವರಿಷ್ಠರ ಬಗ್ಗೆ ಮಾತನಾಡುತ್ತೇನೆಂದು ದಯವಿಟ್ಟು ತಿಳಿದುಕೊಳ್ಳಬಾರದು. ಆದರೆ ಆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥವರ ಸಚಿವ ಸಂಪುಟದ ಸಭೆಯಲ್ಲಿ ನಾನು ಕೆಲಸ ಮಾಡಿದ್ದೇನೆ. ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಒಂದು ದಿವಸವೂ ಕೂಡ ಯಾರ ಸ್ವಾತಂತ್ರ್ಯವನ್ನು ಅವರು ಅಪಹರಣ ಮಾಡಲಾರದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆವತ್ತಿನ ದಿವಸ ಅವರು ವಿಶ್ವಾಸ

ಮತವನ್ನು ಕೇಳಿದ್ದರೆ ನಾನು ಉಪ ಮುಖ್ಯಮಂತ್ರಿಯಾಗಿ ಅವರ ಪರವಾಗಿ ನಿಲ್ಲುತ್ತಿದ್ದೇನೇ ವಿನಹ ಮಾನ್ಯ ಕುಮಾರಸ್ವಾಮಿಯವರ ಪರವಾಗಿ ನಿಲ್ಲುತ್ತಿರಲಿಲ್ಲ. ಏಕೆಂದರೆ ನಾನು ಆ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದೆ, ಸರ್ಕಾರ ತೆಗೆದುಕೊಂಡಿರತಕ್ಕ ಎಲ್ಲಾ ನಿರ್ಣಯಗಳಿಗೂ ನಾನು ಬಾಧ್ಯನಾಗಿದ್ದೆ. ಇವತ್ತಿನ ಪರಿಸ್ಥಿತಿ ಅದು ಬದಲಾಗಿರತಕ್ಕ ಪರಿಸ್ಥಿತಿ ಬೇಕಾದಷ್ಟು ನೀರು ನದಿಯಲ್ಲಿ ಹರಿದು ಹೋಗಿದೆ. ಇವತ್ತು ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ನಮ್ಮದೇ ಆದ ಒಂದು ಪಕ್ಷ ಇದೆ, ರಾಜಕೀಯವಾದ ನಿಲುವನ್ನು ನಾವು ತೆಗೆದುಕೊಳ್ಳಲೇಬೇಕಾಗುತ್ತದೆ. ಆ ರಾಜಕೀಯ ನಿಲುವಿನಲ್ಲಿ ಪಕ್ಷ ಸಹ ಅತ್ಯಂತ ಮುಖ್ಯವಾಗಿರುತ್ತದೆ. ಅನೇಕರು ಅನೇಕ ಸಂದರ್ಭಗಳಲ್ಲಿ ಪಕ್ಷದ ವರಿಷ್ಠರು ತೆಗೆದುಕೊಂಡ ನಿರ್ಣಯಗಳು ವೈಯಕ್ತಿಕ ಅಭಿಪ್ರಾಯಗಳಿಗೆ ಭಿನ್ನವಾಗಿರುವುದೂ ಕೂಡ ಇದೆ. ಆ ಸಂದರ್ಭದಲ್ಲಿ ಕೂಡ ಹಿಂದುತ್ವ ಮೊದಲಾದ ರಾಜಿ ಆಗಿರತಕ್ಕಂತಹ ವಿಚಾರಗಳನ್ನು ಹೇಳುವುದಕ್ಕಾಗುವುದಿಲ್ಲ. ಯಾರನ್ನೋ ನಾನು ಸಮೀಕರಿಸಿ ಮಾತನಾಡುತ್ತೇನೆಂದು ಅಲ್ಲ. ಏನು ಆಗಬೇಕಾಗಿತ್ತು ಎನ್ನುವುದಾದರೆ 1947ರಲ್ಲಿ ಗಾಂಧೀಜಿಯವರು ವರ್ಕಿಂಗ್ ಕಮಿಟಿಯಲ್ಲಿ ಏನು ಹೇಳಿದರು, Guity men of 'India's partition' ಲೋಹಿಯಾರವರ ಪುಸ್ತಕವನ್ನು ದಯವಿಟ್ಟು ಓದಿ. ಅದರಲ್ಲಿ ಹೇಳುತ್ತಾರೆ, "The division of this country is over my dead body".ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ. ನಾನು ಸತ್ತು ನನ್ನ ಹೆಣದ ಮೇಲೆ ನೀವು ಭಾರತ ದೇಶವನ್ನು ವಿಭಜಿಸಿ ಎಂದು ಹೇಳುತ್ತಾರೆ. ಆದರೆ ಮುಂದೆ ಏನಾಯಿತು, ಅವರು ಕೂಡ ವಾಸ್ತವವಾದ ಸ್ಥಿತಿಯನ್ನು ಅನಿವಾರ್ಯತೆಯನ್ನು ಒಪ್ಪಲೇ ಬೇಕಾಯಿತು. ಅದೇ ರೀತಿಯಾಗಿ ವಾಸ್ತವದ ಸಂಗತಿಗಳಿಗೆ ಯಾರು ಹೆಜ್ಜೆ ಇಡುತ್ತಾರೆ ಅವರು ಬಹಳ ಅಪ್ರಾಮಾಣಿಕರು, ಅವರು ಮೌಲ್ಯಾಧಾರಿತವಾದ ವರ್ತನೆಗಳನ್ನು ಮಾಡಿಲ್ಲ, ಎನ್ನುವಂಥದ್ದು, ಮೌಲ್ಯ ಏನು? ಅನೇಕರ ಬಾಯಿಯಲ್ಲಿ ಮೌಲ್ಯ ಸಾಪೇಕ್ಷವಾಗಿದೆ. ಸಾಪೇಕ್ಷವಾದ ಮೌಲ್ಯಗಳ ಮೂಲಕ ಮತ್ತೊಬ್ಬರ ಬಾಯಿಯನ್ನು ತೆಗೆಸುವುದು ಇಲ್ಲ. ಏಕೆಂದರೆ, ನಮ್ಮ ಇತಿಹಾಸದಲ್ಲಿ ಪ್ರತಿಯೊಂದು ವಿಷಯದಲ್ಲಿ ಗೊತ್ತಿರತಕ್ಕಂಥದ್ದು ಇದು. ಯಾವ ಯಾವ ಹಿನ್ನೆಲೆಯಲ್ಲಿ ಏನೇನು ನಡೆಯಿತು, ಮುಸ್ಲಿಂ ಲೀಗ್ ಜಾತ್ಯಾತೀತ ಪಕ್ಷ ಎಂದು ಚುನಾವಣೆ ಹೊಂದಾಣಿಕೆ ಮಾಡಿಕೊಂಡಿದ್ದು ಕೇರಳದ ಉದಾಹರಣೆ ನಮ್ಮ ಮುಂದೆ ಇದೆ. ಕಾಂಗ್ರೆಸ್‌ನವರು ಇದನ್ನು ತಪ್ಪಾಗಿ ಭಾವಿಸಬೇಕಾದುದು ಇಲ್ಲ. ಇದು ಇತಿಹಾಸದ ದಾಖಲೆ. ಯಾರು ಈ ದೇಶದ ವಿಭಜನೆಗೆ ಕಾರಣರಾಗಿದ್ದರು, ಯಾರು ದ್ವಿರಾಷ್ಟ್ರ ಪದ್ಧತಿಯನ್ನು ಧರ್ಮದ ಆಧಾರದ ಮೇಲೆ ಪ್ರತಿಪಾದನೆ ಮಾಡಿದ್ದರು ಅಂತಹ ಮುಸ್ಲಿಂ ಲೀಗ್ ಜಾತ್ಯಾತೀತ ಪಕ್ಷ ಎಂದು ಹೇಳಿ ಅದರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಚುನಾವಣೆಗಳು ನಡೆಸಿರತಕ್ಕಂತಹ ಉದಾಹರಣೆಗಳೂ ಕೂಡ ಈ ದೇಶದಲ್ಲಿ ಇವೆ. ಶಿವಸೇನೆ ಜೊತೆ ಹೊಂದಾಣಿಕೆ. ಈ ರೀತಿಯಾಗಿರತಕ್ಕಂತಹ ಉದಾಹರಣೆಗಳಲ್ಲಿ ನಾವು ಬಹಳ ಪವಿತ್ರರು, ಮತ್ತೊಬ್ಬರು ಅಪವಿತ್ರರು ಎನ್ನತಕ್ಕಂತಹ ಸರಳವಾದ ವಿಚಾರವನ್ನು ಏನು ಇಲ್ಲಿ ಪ್ರಸ್ತಾಪ ಮಾಡಿದಿರಿ, ಇಷ್ಟು ಸುಲಭವಾಗಿ ನಮ್ಮ ಬದುಕಾಗಲಿ, ಸಮಾಜವಾಗಲಿ, ಕೈಗೆ ಸಿಗುವುದಿಲ್ಲ. ಸರ್ಕಾರದಲ್ಲಿ ಕೆಲವು ಅನಿವಾರ್ಯತೆಗಳು ಇರುತ್ತವೆ. ಸರ್ಕಾರದಲ್ಲಿ ಮಾಡಲೇಬೇಕಾದಂತಹ ಕೆಲವು ನಿರ್ಧಾರಗಳು ಇರುತ್ತವೆ. ಒಂದೊಂದು ಸಾರಿ ಮಾಡುವಂತಹ ನಿರ್ಧಾರಗಳೂ ಕೂಡ ಎಷ್ಟೋ ಬೇರೆ ಬೇರೆ

ಸಂದರ್ಭಗಳಲ್ಲಿ ಅದು ತೊಂದರೆಯನ್ನು ಕೊಡುತ್ತದೆ ಅಂದರೆ, ಇದು ನನಗೆ ಉದಾಹರಣೆಯಾಗಿ ಬರಲಿ ಎನ್ನುವ ಕಾರಣಕ್ಕಾಗಿ ಹೇಳುವುದಿಲ್ಲ, ಒಂದು ಉದಾಹರಣೆಯಾಗಿ ಹೇಳಬೇಕೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಾವು ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಪ್ರತಿಪಾದನೆ ಮಾಡಿದವರೇ ನಾವು. ಪರಿಶಿಷ್ಟ ಪಂಗಡಗಳಿಗೆ ಸಮಾನ ಪದಗಳನ್ನು synonymous names ಆಗಿ ಮಾಡಬೇಕೆಂದು ಹೇಳಿದಂಥವರು ನಾವು ಮಾನ್ಯ ಚಂದ್ರಶೇಖರ್‌ರವರು 1991ರಲ್ಲಿ ಪ್ರಧಾನಿಗಳಾಗಿದ್ದಾಗ ಆಜ್ಞೆಯನ್ನು ಹೊರಡಿಸಿದವರು ಅವರು. ಆದರೆ ಆ ಆಜ್ಞೆ ಅನುಷ್ಠಾನಕ್ಕೆ ಬರುವಾಗ ಈ ಮತದಾನ ಕ್ಷೇತ್ರದ ಪುನರ್ ವಿಂಗಡಣೆಯಲ್ಲಿ ಯಾವ ರೀತಿಯ ವೈಪರೀತ್ಯವನ್ನು ತರುತ್ತದೆ, electoral malady ಎಂದು ಕರೆಯಬೇಕಾದಂಥದ್ದು ಸುಮಾರು 9 ಕ್ಷೇತ್ರಗಳು ಇರತಕ್ಕಂತಹ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಎರಡು ಪರಿಶಿಷ್ಟ ಜಾತಿಗೆ ಏಳು ಪರಿಶಿಷ್ಟ ವರ್ಗಕ್ಕೆ ಎಂದು ಏಳು ಕ್ಷೇತ್ರಗಳು ಮೀಸಲಾತಿ ಆಗುತ್ತವೆ. ಬಳ್ಳಾರಿ ನಗರ, ಹೊಸಪೇಟೆ ನಗರ ಈ ಎರಡು ಕ್ಷೇತ್ರಗಳು ಮಾತ್ರ ಅಲ್ಲಿರತಕ್ಕಂಥದ್ದು ಅದು ಅನ್ ರಿಸರ್ವ್ಡ್. ಉಳಿದಿರತಕ್ಕಂಥವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿವೆ. ಇದಕ್ಕೆ ಕಾರಣವೇನು? It is a legislative anomaly ಅನ್ನುವುದಕ್ಕಿಂತ Government in the electoral politicsನ ರೀತಿ ಎಂದೂ ಕೂಡ ನಾವು ಅಂದುಕೊಳ್ಳಬಹುದು. ಪರಿಶಿಷ್ಟ ಪಂಗಡದವರು ಹೆಚ್ಚು ಜನಸಂಖ್ಯೆ ಇರತಕ್ಕಂಥದ್ದರಲ್ಲಿ ಮೇಲಿನಿಂದ ಕೆಳಗಡೆ ಬರಬೇಕು. In a descending order ಎನ್ನತಕ್ಕಂತಹ ಮಾತನ್ನು ಹೇಳಿ, ರಾಯಚೂರು ಚಿತ್ರದುರ್ಗ, ಮತ್ತು ಬಳ್ಳಾರಿ ಇಲ್ಲಿ ಹೆಚ್ಚು ಜನಸಂಖ್ಯೆ ಇರತಕ್ಕಂತಹ ಕಾರಣಕ್ಕಾಗಿ ಅಲ್ಲಿ ನಾವು ಐದು ಸೀಟುಗಳನ್ನು ರಿಸರ್ವ್ ಮಾಡುತ್ತೇವೆಂದರೆ, ಉಳಿದವರು ಎಲ್ಲಿ ಹೋಗಬೇಕು, ನಾಯಕತ್ವ ಎಲ್ಲಿ ಬರುತ್ತದೆ, ಅವರು ಯಾವ ರೀತಿಯಾಗಿ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯತೆ ಆಗುತ್ತದೆ? ಎಲ್ಲವೂ ಇದ್ದರೂ ಕೂಡ ಅದು ಆಗಲೇ ಬೇಕಾದ ಪರಿಸ್ಥಿತಿ ಬಂದಾಗ ನಾವು ಮತ್ತೆ ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾದಂಥ ಅನಿವಾರ್ಯತೆ ಇರುತ್ತದೆ. ಆ ತಿದ್ದುಪಡಿ ಸಾದು ಆಗುವ ಸಂದರ್ಭ ಬಂದಾಗ ಕೂಡ ಇದನ್ನು ಮಾನ್ಯ ಈಶ್ವರಪ್ಪನವರು ಹೇಳುತ್ತಿದ್ದರು, ಆ ಸಂವಿಧಾನವನ್ನು ತಿದ್ದುಪಡಿ ಮಾಡಿದಂತಹವರು ನಾವು ಎಂದು. ಆ ಸಂವಿಧಾನ ತಿದ್ದುಪಡಿ ಮಾಡಿದಂತಹ ಸಂದರ್ಭದಲ್ಲಿ ಇದರ ಅನಾಹುತಗಳು ಏನಾಗುತ್ತವೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿತ್ತಲ್ಲಾ. ಮಾನ್ಯ ಶಿವರಾಜ್ ಪಾಟೀಲರು ಇವತ್ತು ನಮ್ಮ ಗೃಹ ಮಂತ್ರಿಗಳಾಗಿರತಕ್ಕಂಥವರು ಅವತ್ತಿನ ಕಾಲದಲ್ಲಿ ಕಾಂಗ್ರೆಸ್‌ನ ಉಪ ನಾಯಕರಾಗಿದ್ದರು ಪಾರ್ಲಿಮೆಂಟಿನಲ್ಲಿ. ಅವರು ಅವತ್ತು ಒಪ್ಪಿಗೆಯನ್ನು ಕೊಡುತ್ತಾರೆ. As a Deputy Leader of the Congress party I have a bounded duties to support this amendment of the Constitution. ಆದರೆ ನನ್ನದೇ ಆದಂಥ ವಿಚಾರಗಳು ಇವೆ ಎಂದು ಬೇರೆ ಬೇರೆಯಾಗಿ ವೈಯಕ್ತಿಕವಾದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ. ಹಾಗೆ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸಂವಿಧಾನ ತಿದ್ದುಪಡಿ ಮಾಡಿದಂತಹ ನೀವೂ ಕೂಡ ಇದರ ದುಷ್ಪರಿಣಾಮ ಏನಾಗಬಹುದು ಎಂದು ಯೋಚನೆ ಮಾಡಲಿಲ್ಲ. ಅದರ ಪರಿಣಾಮ ಏನಾಗುತ್ತದೆ ಎಂದು, ಅವರಿಗೆ 18 ಸೀಟ್ ಬಂದವು ಎನ್ನುವುದರ ಬಗ್ಗೆ ನಮಗೆ ಬೇಸರ ಇದೆ ಎನ್ನತಕ್ಕಂತಹ ಮಾತಲ್ಲ. ಆದರೆ ನಿಮ್ಮ ಈ ಸಾಮಾಜಿಕ ನ್ಯಾಯದಲ್ಲಿ ಯಾರು ಇವತ್ತು ಹಿಂದುಳಿದವರಿಗೂ, ಮುಂದುವರಿದವರಿಗೂ ಯಾರಿಗೂ ಕೂಡ ಅವಕಾಶ

ಇಲ್ಲದಂತೆ ಒಂದು ಜಿಲ್ಲೆಯಲ್ಲಿ ಏಳು ಸ್ಥಾನಗಳು ಮೀಸಲಾತಿ ಆಗತಕ್ಕಂಥದ್ದು ಆಗಿದೆ. ಇದು ರಾಯಚೂರಿನಲ್ಲಿ ಆಗಿದೆ, ಚಿತ್ರದುರ್ಗದಲ್ಲಿ ಆಗಿದೆ, ಇದರ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾದ ಅಗತ್ಯ ಇದೆ. ಇವತ್ತು ನಾವು ಏನು ಗೆದ್ದು ಬಂದಿದ್ದೇವೆ, ಗೆದ್ದು ಬಂದಿರತಕ್ಕಂಥಹವರು ಅಥವಾ ರಾಜಕಾರಣದಲ್ಲಿ ಬಹಳ ವರ್ಷಗಳಿಂದ ಇರತಕ್ಕಂತಹವರು ನಾವೆಲ್ಲರೂ ವ್ಯಕ್ತಿಗಳಾಗಿ ಏನೂ ಉಳಿದಿಲ್ಲ. ನಮ್ಮದೇ ಆದ ಆತ್ಮವನ್ನು ಇಟ್ಟುಕೊಂಡು ಉಳಿದಿರತಕ್ಕಂತಹವರು ಆಗಲಿಲ್ಲ. ನಮ್ಮ ಮತದಾರರು, ನಮ್ಮ ಹಿಂಬಾಲಕರು, ಅವರು ಯಾವ ಯಾವ ಉದ್ದೇಶಗಳಿಂದ ನಮ್ಮನ್ನು ಬೆಂಬಲಿಸಿದರು ಅದು ಬೇರೆ ವಿಚಾರ. ನಾವು ಅಧಿಕಾರದಲ್ಲಿ ಇರುವುದರ ಮೂಲಕ ಅವರಿಗೆ ಏನೆಲ್ಲಾ ಸವಲತ್ತುಗಳು ಸಿಗಬಹುದು ಎನ್ನುವ ಸ್ವಾರ್ಥದ ಸಣ್ಣ ಚಿಂತನೆ ಅವರಲ್ಲಿ ಇರಬಹುದು ಎನ್ನತಕ್ಕಂಥದ್ದೂ ಇರಬಹುದು. ಅಥವಾ ನಾನು ಈಗಾಗಲೇ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ನಾನೇ ಅಧಿಕಾರದಲ್ಲಿ ಉಳಿಯುವುದಕ್ಕಾಗಿ ಮಾತನಾಡುತ್ತಿದ್ದೇನೆ ಎಂದು ಆಗಿರಬಹುದು, ಅದು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮನುಷ್ಯನ ಮಾತು ಅದಕ್ಕೆ ಬೇರೆ ಬೇರೆ ಆಯಾಮಗಳು ಇರುತ್ತವೆ. ಆತ ಮುಚ್ಚಿಟ್ಟುಕೊಂಡು ಮಾತನಾಡತಕ್ಕಂತಹ ಸಾಧ್ಯತೆಗಳೂ ಕೂಡ ಇರುತ್ತವೆ, ಆ ಕಾರಣಕ್ಕಾಗಿ ನಾವು ಇವತ್ತು ವ್ಯಕ್ತಿಗತವಾಗಿ ಚಿಂತನೆ ಮಾಡತಕ್ಕಂತಹ ಸ್ವಾತಂತ್ರ್ಯವನ್ನು ಬಹಳ ವರ್ಷಗಳ ಕಾಲ ರಾಜಕೀಯದಲ್ಲಿ ಜನ ಪ್ರತಿನಿಧಿಗಳಾದಂತಹವರು ನಮ್ಮದನ್ನು ಕಳೆದುಕೊಂಡಿದ್ದೇವೆ. ನಾವು ಎಷ್ಟು ಸಲ ಇಲ್ಲಿ ಆರಿಸಿ ಬಂದಿದ್ದೇವೆ ಎನ್ನುವುದು ಬಹಳ ಮುಖ್ಯವಾಗುವುದಿಲ್ಲ. ಆರಿಸಿ ಬರದೇ ಇರತಕ್ಕಂತಹ ಅನೇಕ ಗಣ್ಯರು ಕೂಡ ಇರತಕ್ಕಂಥದ್ದನ್ನು ನಾವು ಕಂಡಿದ್ದೇವೆ. ಆಚಾರ್ಯ ಕೃಪಲಾನಿಯವರು ಒಳಗೆ ಬರುವುದಕ್ಕೆ ಆಗಲಿಲ್ಲ. ಡಾ|| ರಾಮ ಮನೋಹರ ಲೋಹಿಯಾರವರು 1966ರಲ್ಲಿ ನಿಂತು ಗೆದ್ದು ಬರಬೇಕಾದರೆ ಆ ಸನ್ನಿವೇಶದಲ್ಲಿಯೂ ಕೂಡ ಕಾಂಗ್ರೆಸ್‌ನವರು ಅವರ ಪ್ರತಿಸ್ಪರ್ಧಿ ಆಗಿ ನಿಲ್ಲಿಸಲಿಲ್ಲ. ಯಾರೋ ಅವರಿಗೆ ಉಪಕಾರ ಮಾಡಿ ಕೊಟಿದ್ದೇವೆ ಎನ್ನುವ ರೀತಿಯಲ್ಲಿ ಅನೇಕ ಗಣ್ಯರು ಬರತಕ್ಕಂಥದ್ದು ಆಯಿತು. ಅಂಬೇಡ್ಕರ್‌ರವರು ಅವರು ಎಲಕ್ಟ್ರಾಲ್ ಪಾಲಿಟಿಕ್ಸ್‌ನಲ್ಲಿ ಸೋತು ಹೋದರು. ವಿಭಿನ್ನತೆಯನ್ನು ಹೇಳಿದ ಮೇಲೆ, ನಾವು ಅಂಬೇಡ್ಕರ್‌ರವರಂತಹ ನಿಲುವು ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ವೈಚಾರಿಕವಾದ ಶಕ್ತಿ ಇದೆಯೇ? ಆಚಾರ್ಯ ಕೃಪಲಾನಿಯವರಂತಹ ರೀತಿಯಲ್ಲಿ ವರ್ತಿಸಿರಥಕ್ಕಂತಹ ಧೈರ್ಯವನ್ನು ಕಾಪಾಡಿಕೊಂಡು ಬಂದಿದ್ದೇವೆಯೇ? ಅಂತಹ ವಾತಾವರಣ ಇವತ್ತು ಇದೆಯೇ? ಅವತ್ತು ನೆಪೋಲಿಯನ್ ಬದುಕಿದ್ದಾಗ ಹೇಳುತ್ತಿದ್ದರು, When Nepolean was alive, every soldier was a Nepolean ಎನ್ನತಕ್ಕಂತಹ ಮಾತು. ಗಾಂಧೀಜಿ ಬದುಕಿದ್ದಾಗ ಒಂದು ಆದರ್ಶ ಪುರುಷ ಇದ್ದ, ಆ ಆದರ್ಶ ಪುರುಷನ ಪರವಾಗಿ ಹೋರಾಟ ಮಾಡಲಿಕ್ಕೆ ನಮಗೆಲ್ಲರಿಗೂ ಸಾಧ್ಯತೆ ಇತ್ತು. ಇವತ್ತು ಕಲುಷಿತವಾಗಿರತಕ್ಕಂತಹ ವಾತಾವರಣ ಇದೆ. ನಾವು ನಿಯಮಾವಳಿ ಪ್ರಕಾರ ನಮ್ಮ ಆಟವನ್ನು ಆಡಬೇಕೆಂದು ಹೇಳುತ್ತೇವೆ ನಿಜ, ಒಪ್ಪಿಕೊಳ್ಳುತ್ತೇನೆ. ಆದರೆ ನಿಯಮಾವಳಿ ಪ್ರಕಾರ ಆಟ ಆಡುವುದನ್ನು ಒಂದು ತಂಡ ತಪ್ಪಿ ಬೇರೆ ರೀತಿಯಾಗಿ ಆಟ ಆಡಿದರೆ ನಾವು ಸೋತು ಹೋಗುತ್ತೇವೆ ಅಥವಾ ಗೆಲ್ಲುತ್ತೇವೆ ಯೋಚನೆ ಮಾಡಿ. ಆಗ ಅನಿವಾರ್ಯವಾಗಿ ಎಲ್ಲವನ್ನೂ ನಿಯಮಾವಳಿ ಪ್ರಕಾರ ನಡೆಯಬೇಕು ಎನ್ನತಕ್ಕಂಥದ್ದು ಆಗಬೇಕಾಗುತ್ತದೆ. ಆ ನಿಯಮಾವಳಿಗಳ ಪ್ರಕಾರವಾಗಿ ಇವತ್ತು ದೇಶದ ರಾಜಕೀಯ ಅಥವಾ ದೇಶದ ನಡವಳಿಕೆ ಆಗುತ್ತಿಲ್ಲ. ನಾನು ಮಾನ್ಯ ಸಿಂಧ್ಯರವರಿಗೆ ಮಾನ್ಯ ಸಿದ್ದರಾಮಯ್ಯನವರಿಗೆ

ಅಭಿನಂದಿಸುತ್ತೇನೆ. ಅವರು ಏನು ಪ್ರಸ್ತಾಪ ಮಾಡಿದರು ಆ ಪ್ರಸ್ತಾಪದಲ್ಲಿ ನಾನೂ ಕೂಡ ಭಾಗಿ ಆಗಿದ್ದೇನೆ. ಆದರೆ ಅವತ್ತು ನಾನು ತಾಂತ್ರಿಕವಾದ ಕಾರಣವನ್ನು ಇಟ್ಟುಕೊಳ್ಳಬಹುದಾಗಿತ್ತು. ಇವತ್ತು ಮಾನ್ಯ ತಿಪ್ಪಣ್ಣನವರು ಅಧ್ಯಕ್ಷರು ಅಲ್ಲ ಎಂದು ತಾಂತ್ರಿಕವಾದ ಕಾರಣ ಇಟ್ಟುಕೊಳ್ಳಬಹುದು. ಆದರೆ ಇಲ್ಲಿ ಇರತಕ್ಕಂತಹ ನಾವೆಲ್ಲರೂ ಕೂಡ ಮರೆಯದೆ ಇರತಕ್ಕಂತಹ ಒಂದು ಸೆಂಗತಿ 42 ಜನ ಶಾಸಕರು ಆ ಕಡೆಗೆ ಇದ್ದಾರೆ. ತಾಂತ್ರಿಕವಾಗಿ ನಾನು ಒಂದು ವಿಪ್ ಕೊಡಬಹುದು. ನಾನೇ ನಾಯಕ ಎಂದು ನಾನು ಹೇಳಿಕೊಳ್ಳಬಹುದು. ಆದರೆ ನಾನೇ ನಾಯಕ ನಾನೇ ವಿಪ್ ಕೊಟ್ಟಿದ್ದೇನೆಂದರೆ, 42 ಜನಗಳು ಯಾವ ಕಾರಣಕ್ಕಾಗಿ ಕುಮಾರಸ್ವಾಮಿ ಅವರ ಹಿಂದೆ ಬಂದಿದ್ದಾರೆ? ಚುನಾವಣೆ ಸಮಯ ಇದಲ್ಲ. ಚುನಾವಣೆ ಇವತ್ತು ದುಬಾರಿ ಆಗಿರತಕ್ಕಂತಹ ಚುನಾವಣೆಯಾಗಿದೆ. ಈ ಸಂದರ್ಭದಲ್ಲಿ ನಾವು ಮತ್ತೊಂದು ಚುನಾವಣೆ ಎದುರಿಸಲಿಕ್ಕೆ ಸಾಧ್ಯವಾಗಿಲ್ಲ ಎನ್ನುವ ಕಾರಣಕ್ಕಾಗಿ ಬಂದಾಗ ನಮ್ಮ ಜೊತೆಗೆ ಇದ್ದಂತಹ ನಮ್ಮ ಸ್ನೇಹಿತರು ಎಲ್ಲರೂ ಕೂಡ ನಾನು ಒಂದು ತಾಂತ್ರಿಕ ಕಾರಣದಿಂದ ವಿಪ್ ಕೊಟ್ಟು ಅವರನ್ನು ನಾನು ಅತಂತ್ರನನ್ನಾಗಿ ಮಾಡುತ್ತೇನೆಂದರೆ, ಅದಕ್ಕಿಂತ ದೊಡ್ಡ ದೋಷ ಮತ್ತೊಂದು ಯಾವುದೂ ಇರಲಿಕ್ಕೆ ಸಾಧ್ಯತೆ ಇದೆ? ಅದರ ಪರಿಣಾಮ ಏನಾಗುತ್ತದೆ ಅದರ ವಿಚಾರ ಬೇರೆ. ಆದರೆ ಅದರ ಪರಿಣಾಮಕ್ಕಿಂತ ಹೆಚ್ಚಾಗಿ ನೈತಿಕವಾಗಿ ಅಂತು ನಾನು ಹೊರಟು ಹೋಗಿದ್ದೇನೆ. ನೈತಿಕವಾಗಿ ನನ್ನ ನಾಯಕತ್ವವನ್ನು ನಮ್ಮ ಶಾಸಕರು ಒಪ್ಪಿಲ್ಲ. ಅದಕ್ಕೆ ಅನುಗುಣವಾದ ರೀತಿಯಲ್ಲಿ ಕೂಡ ತಾವು ಹೇಳಿದ್ದೀರಿ ಮಾನ್ಯ ಕುಮಾರಸ್ವಾಮಿಯವರನ್ನು ನಾವು ನಮ್ಮ ಜಾತ್ಯಾತೀತ ಜನತಾದಳದ ಶಾಸಕಾಂಗ ಪಕ್ಷದ ನಾಯಕರನ್ನಾಗಿ ತಾವು ಈಗಾಗಲೇ ತೀರ್ಮಾನ ಕೊಟ್ಟಿದ್ದೀರಿ. ನನ್ನ ವೈಯಕ್ತಿಕ ಅಭಿಪ್ರಾಯ ಏನೇ ಇರಬಹುದು, ವೈಯಕ್ತಿಕ ಅಭಿಪ್ರಾಯ ಏನೇ ಇದ್ದರೂ ಕೂಡ ತಾವು ಕೊಟ್ಟಂತಹ ತೀರ್ಮಾನವನ್ನು ಮತ್ತೆ ನಾವು ಇಲ್ಲಿ ಪ್ರಶ್ನಿಸಿ ಹೇಳುವುದಕ್ಕೆ ನಮಗೆ ಅಧಿಕಾರವಿಲ್ಲ. ಇವತ್ತು ಅದೇ ಸೋಮನಾಥ್ ಚಟರ್ಜಿ ಅವರ ಮುಂದಿರತಕ್ಕಂತಹ ಪ್ರಶ್ನೆ. ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಉತ್ತಮವಾದ ರೀತಿಯಲ್ಲಿ ಐದು ವರ್ಷಗಳ ಕಾಲ ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರು ಅನೇಕ ಸಭಾಧ್ಯಕ್ಷರ ಸಮಾವೇಶಗಳಿಗೆ ಹೋಗಿ ಇಂತಹ ನೀತಿ ನಿಯಮಗಳನ್ನು ಸಂಹಿತೆಗಳನ್ನು ಮಾಡಿದವರಲ್ಲಿ ಅವರೂ ಕೂಡ ಭಾಗಿ ಆಗಿದ್ದಾರೆ. ಸಂವಿಧಾನದಲ್ಲಿ ರಾಜ್ಯಾಂಗ, ಶಾಸಕಾಂಗ, ಮತ್ತು ಕಾರ್ಯಾಂಗಗಳ ಪ್ರತ್ಯೇಕವಾದ ವಿಷಯಗಳು ಇವೆ. ಆದರೆ ಯಾವುದು ಯಾವುದರ ಮೇಲೆ ಬರುತ್ತದೆ, overlapping powers ಯಾವ್ಯಾವುದು ಎನ್ನತಕ್ಕಂತಹ ವಿಚಾರದಲ್ಲಿ ಪ್ರತಿ ಸಂದರ್ಭದಲ್ಲಿ ಕೂಡ ಶಾಸಕಾಂಗದ ಮೇಲೆ ನಮ್ಮ ನ್ಯಾಯಾಂಗ ಸವಾರಿ ಮಾಡಿರತಕ್ಕಂತಹ ವಿಚಾರದಲ್ಲಿ ಇಲ್ಲಿಯೂ ಚರ್ಚೆಯಾಗಿದೆ. ತಾವೂ ಕೂಡ ಅಲ್ಲಿ ಮೇಲೆ ಕೂತಾಗ ಮಾನ್ಯ ನಂಜೇಗೌಡರವರು ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಈ ಶಾಸಕಾಂಗಕ್ಕೆ ಇರತಕ್ಕಂಥದ್ದರ ಮಾನ್ಯತೆ ಮತ್ತು ಗೌರವಗಳನ್ನು ಎತ್ತಿಹಿಡಿಯತಕ್ಕಂಥವರು ತಾವು ಎಂದು ಹೇಳಿದ್ದಾರೆ. ಅದಕ್ಕಾಗಿಯೇ ನಿಮ್ಮ ಮುಂದೆ ಅಶೋಕ ಚಕ್ರ ಇದೆ. ಹೌಸ್ ಆಫ್ ಕಾಮನ್ಸ್ ನಮ್ಮ ತಾಯಿ ಸ್ವರೂಪವಾಗಿರತಕ್ಕಂಥದ್ದು. Mother of the Parliament ಎಂದು ಕರೆಯುತ್ತೇವೆ ಆ ಸಂಸತ್ತಿನ ನಡವಳಿಕೆಗಳನ್ನು. ಅಲ್ಲಿ ಏನು ಮಾಡುತ್ತಾರೆ; ಇಲ್ಲಾದರೂ ಕೂಡ ನಮ್ಮ ರಾಷ್ಟ್ರಗೀತೆಯನ್ನು ನುಡಿಸಿಕೊಂಡು ನಮ್ಮ ರಾಜ್ಯಪಾಲರನ್ನು ಒಳಗೆ ಕರೆದುಕೊಂಡು ಬರುತ್ತೇವೆ, ಅಲ್ಲಿ ಆ ರೀತಿ ಆಗುವುದಿಲ್ಲ. ಅಲ್ಲಿಯ ಸಾಮ್ರಾಟನನ್ನು ಕ್ರಾಮ್ಯುಯಲ್ ಕತ್ತರಿಸುತ್ತಾನೆ ಅದೇ ಹೌಸ್ ಆಫ್

ಕಾಮನ್ಸ್‌ನಲ್ಲಿ. ಅವೊತ್ತಿನ ನಂತರ ಒಂದು ನಡವಳಿಕೆ, ಸಂಪ್ರದಾಯ ಅಲ್ಲಿ ಬೆಳೆದಿದೆ. ಆತ ಬಂದಾಗ ಮಾರ್ಷಲ್‌ಗಳು ಹೋಗಿ ಬಾಗಿಲು ಹಾಕುತ್ತಾರೆ, ಹೌಸ್ ಆಫ್ ಕಾಮನ್ಸ್‌ನಲ್ಲಿ. ಅಲ್ಲಿ ಹೊರಗಡೆಗೆ ಏನು ಹೇಳುತ್ತಾರೆ. Long live the King, King is dead ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಆತ ಅಲ್ಲಿಗೆ ಬರುತ್ತಾನೆ, ಬಂದು ಮೂರು ಬಾರಿ ಬಾಗಿಲು ಬಡಿಯುತ್ತಾನೆ May I come in? ಎಂದು ಕೇಳುತ್ತಾನೆ. ಆಗ ನೀವು ಆ Mace ಟೇಬಲ್ ಮೇಲಿಟ್ಟು Yes, you may come in ಎಂದು ಹೇಳುತ್ತೀರಿ. ಅಂದರೆ ಅಲ್ಲಿ ಒಂದು ಸಾಂಕೇತಿಕವಾದಂಥ ಅರ್ಥ ನಿಮಗೆ ಇರತಕ್ಕಂಥ ಅಧಿಕಾರದ ಬಗ್ಗೆ ಯಾರೂ ಪ್ರಶ್ನೆ ಮಾಡಬಾರದು, ಅದಕ್ಕೆ ಒಂದು ಇತಿಶ್ರೀಯನ್ನು ಹಾಡಬೇಕಾಗುತ್ತದೆ. ವೈಯಕ್ತಿಕವಾಗಿರತಕ್ಕಂಥದ್ದು ಏನೇ ಇರಬಹುದು. ಆದರೆ ಇಲ್ಲಿ ನೀವು ಒಂದು ತೀರ್ಮಾನವನ್ನು ಕೊಟ್ಟಾಗ ನಾನು ಕೂಡ ನನ್ನ ಅಭಿನಂದನೆಯನ್ನು ಮಾನ್ಯ ಸಿಂಧ್ಯಾರವರಿಗೆ ಇವತ್ತಿಗೂ ಸಲ್ಲಿಸುತ್ತೇನೆ. ಇಲ್ಲಿ ನಾನು ಈಗ ಶಾಸಕಾಂಗ ಪಕ್ಷದ ನಾಯಕನಲ್ಲ, ಮಾನ್ಯ ಕುಮಾರಸ್ವಾಮಿಯವರೇ ಶಾಸಕಾಂಗ ಪಕ್ಷದ ನಾಯಕರು. ಇದಕ್ಕೆ ನೈತಿಕ ಕಾರಣವೂ ಇದೆ, ನಿಮ್ಮ ಅಧಿಕಾರದ ಕಾರಣವೂ ಇದೆ, ಅದು ಈಗ ವಿವಾದ ಎನ್ನತಕ್ಕಂಥದ್ದು ಹೈಕೋರ್ಟ್‌ನಲ್ಲಿದೆ. ಹೈಕೋರ್ಟ್‌ನವರು ಮಾಡಿದಂಥ ತೀರ್ಮಾನ ಅದನ್ನು ಎಷ್ಟರಮಟ್ಟಿಗೆ ಎಲ್ಲರೂ ಜಾರಿಗೆ ತರಬೇಕು. ಎಷ್ಟೋ ಸ್ಪೀಕರ್‌ಗಳು ಜೈಲಿಗೆ ಹೋಗಿರತಕ್ಕಂಥದ್ದು ಇದೆ, ಅರೆಸ್ಟ್ ಮಾಡಿಸಬೇಕು ಎಂದು ಕಳುಹಿಸಿದಂಥ ಸಂಧರ್ಭದಲ್ಲಿ ನಾನು ಕಳುಹಿಸುವುದಿಲ್ಲ ಎಂದು ಸ್ಪೀಕರ್ ಹೇಳಿ ಅವರೂ ಕೂಡ ಜೈಲಿಗೆ ಹೋಗಿರುವ ಉದಾಹರಣೆಗಳಿವೆ. ಇವೆಲ್ಲವೂ ಕೂಡ ಬಹಳ ಸೂಕ್ಷ್ಮವಾಗಿರತಕ್ಕಂಥ ವಿಚಾರಗಳು. ಹೀಗೆಯೇ ಇರುತ್ತದೆ, ಇದೇ ಒಂದು golden democratic line ಎನ್ನತಕ್ಕಂಥ ರೀತಿಯಲ್ಲಿ ವಿಭಜನೆ ಮಾಡುವುದಕ್ಕೆ ಆಗಲಾರದಂಥ ಸ್ಥಿತಿ. ಆ ಕಾರಣಕ್ಕಾಗಿಯೇ ಇವೊತ್ತು ಸೋಮನಾಥ ಚಟರ್ಜಿಯವರು I ignore the summons ಎಂದು ಹೇಳಿದ್ದಾರೆ. ನ್ಯಾಯಾಂಗದ ಜೊತೆ ಅದು ನಮ್ಮ ಸಾರ್ವಭೌಮ ಹಕ್ಕು, ಯಾರನ್ನು ಅನರ್ಹರನ್ನಾಗಿ ಮಾಡಬೇಕು ಯಾರನ್ನು ಅರ್ಹರನ್ನಾಗಿ ಮಾಡಬೇಕು ಎನ್ನತಕ್ಕಂಥದ್ದು ನಮ್ಮ ತೀರ್ಮಾನ, The parliament has taken a decision. I abide by that ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಾರೆ. ಅದು ಮುಂದೆ ನಡೆಯಲಿ; ಒಂದು ಸತ್ಸಂಪ್ರದಾಯಗಳು, ಒಂದು ವ್ಯಾಖ್ಯಾನಗಳು ಬರಲಿ, ತೀರ್ಮಾನಗಳು ಬರಲಿ, ಆದರೆ ಈ ಸಂದರ್ಭದಲ್ಲಿ ಮಾತ್ರ ನಾನು ಇಷ್ಟು ಹೇಳುತ್ತೇನೆ.' ಇವೊತ್ತು ಬಹಳ ಸುಲಭವಾಗಿ ಸರಳವಾಗಿ ಇದನ್ನು ಅರ್ಥೈಸಿಕೊಳ್ಳತಕ್ಕಂಥ ಸ್ಥಿತಿಯಲ್ಲಿ ನಾವ್ಯಾರೂ ಇಲ್ಲ. ಆ ಹಳೇ ವಿಚಾರಗಳನ್ನೆಲ್ಲಾ ನಾವು ತೆಗೆದುಹಾಕಬೇಕಾಗಿರತಕ್ಕಂಥದ್ದೂ ಕೂಡ ಇದೆ. ಕೇಂದ್ರದಲ್ಲಿ ಮಾನ್ಯ ದೇವೇಗೌಡರ ಸರ್ಕಾರಕ್ಕೆ ನಾವೆಲ್ಲಾ ಬಹಳ ಬೆಂಬಲ ಕೊಟ್ಟೆವು ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದರೂ ಕೂಡ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಬಹಳ ಮಟ್ಟಿನ ಜವಾಬ್ದಾರಿಗಳು ಬಹಳ ಮಟ್ಟಿನ ನಡವಳಿಕೆಗಳ ಬಗ್ಗೆ ಇಲ್ಲಿ ಆ ವಿಚಾರಗಳನ್ನು ಚರ್ಚೆ ಮಾಡತಕ್ಕಂಥ ಅಗತ್ಯವಿರಲಿಲ್ಲ. ಮಾನ್ಯ ಚಂದ್ರಶೇಖರ್‌ರವರು ಅವರು ಹೋಗಿದ್ದೇ ತಪ್ಪು ಎಂದು ಆ ಕಾಲದಲ್ಲಿ ನಮ್ಮ ವಲಯದಲ್ಲಿ ಹೇಳಲಾಗಿತ್ತು. ಯಾವುದೋ ಹರ್ಯಾಣ ಪ್ರಾಂತ್ಯದ ಎರಡು ಪೋಲೀಸರು ಅವೊತ್ತು ಮನೆ ಮುಂದೆ ನಿಂತಿದ್ದರು ಎನ್ನುವ ಕಾರಣಕ್ಕಾಗಿಯೇ ಅವರ ಸರ್ಕಾರ ಪತನವಾಯಿತು. ಇವೊತ್ತು ಅಂಥ ಕಾರಣಗಳು ಇರಬಹುದು. ಒಂದು ರಾಜಕೀಯ ಪತನ ಮತ್ತು ವ್ಯತ್ಯಾಸ ಆಗಬೇಕಾಗಿರತಕ್ಕಂಥದ್ದು, ನಮ್ಮ ಟ್ರಾನ್ಸ್‌ಫರ್ ಆಗಲಿಲ್ಲ, ನಮಗೇನೋ ತೊಂದರೆಯಾಯಿತು, ಯಾರು ಯಾರು ಇಂಥ ವಿಚಾರಗಳ ಬಗ್ಗೆ

ಯೋಚನೆ ಮಾಡುತ್ತೇವೆ ಶಾಸಕರಾದಂಥವರು, ನಾಳೆ ಅಧಿಕಾರ ಬಂದಾಗ ಅವರಿಗೂ ಇದೇ ಸಮಸ್ಯೆ ಬರುತ್ತದೆ. ಆ ಪ್ರಶ್ನೆ ಬರುತ್ತದೆ. ದಯವಿಟ್ಟು ಯಾರು ಧರ್ಮಸಿಂಗ್ ವಿರುದ್ಧವಾಗಿ ಈ ಪಿಸು ಮಾತುಗಳನ್ನು ಮಾತನಾಡುತ್ತಿದ್ದೇವೆ, ಆ ಮಾತುಗಳನ್ನು ದಯವಿಟ್ಟು ನೀವೇ ಆಯ್ಕೆ ಮಾಡಿರತಕ್ಕಂಥ ಕುಮಾರಸ್ವಾಮಿಯವರಿಗೂ ಕೂಡ ಅಂಥ ಮುಜುಗರವನ್ನು ತಂದುಕೊಡಬಾರದು ಎಂದು ನಾನು ವಿನಂತಿ ಮಾಡುತ್ತೇನೆ. ತಾತ್ವಿಕ ಹಿನ್ನೆಲೆಯಲ್ಲಿಯೂ ರಾಜಕೀಯ ಪಕ್ಷಗಳಲ್ಲಿ ವ್ಯತ್ಯಾಸಗಳಾಗುತ್ತವೆ. ಅದಕ್ಕಾಗಿ ಸರ್ಕಾರ ಪತನವಾಗಿದೆ. ಅದು ಬೇರೆ ವಿಷಯ. ಆದರೆ ಸರ್ಕಾರ ಪತನವಾಗತಕ್ಕಂಥದ್ದು ನಮ್ಮ ಅಸಹನೆಗಾಗಿ ಅಥವಾ ನಮ್ಮ ಕೆಲಸ ಆಗಲಿಲ್ಲ ಎನ್ನುವ ಕಾರಣಕ್ಕಾಗಿಯೇ ಆಗುವುದಾಗಿದ್ದರೆ ಅದು ನಿಜವಾಗಿಯೂ ಕೂಡ ಕ್ಷಮಾರ್ಹವಾದಂಥ ವಿಚಾರವಲ್ಲ. ನಾನು ವೈಯಕ್ತಿಕವಾಗಿ ತಾವು ನಿರ್ಧಾರ ತೆಗೆದುಕೊಂಡಾಗ ನಿಯಮಾವಳಿಗಳನ್ನು ಪಾಲಿಸಲಿಲ್ಲ ಎಂಬುದು ಅದು ತಾಂತ್ರಿಕ ಕಾರಣಗಳು. ಅದು ಒಂದು ಮರೆತುಹೋಗತಕ್ಕಂಥ ಪ್ರಸಂಗ ಎಂದೂ ಕೂಡ ನಾನು ಅಂದುಕೊಂಡಿದ್ದೇನೆ. ಅದು ಮರೆತುಹೋಗುವಂಥ ಪ್ರಸಂಗ. ಆದರೆ ಅದು ಉದಾಹರಣೆಯಾಗಿ ಮುಂದೆ ಎಂದೂ ಕೂಡ ಬರಬಾರದು. ಏಕೆಂದರೆ ಹಿಂದೆ ಒಂದು ಅಂತಹ ಕಾರಣವಾಗಿದೆ. ಅದನ್ನು ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾರೆ. ನಾವೆಲ್ಲರೂ ಕೂಡ ಎಚ್ಚರದಿಂದ ಒಂದು ತಪ್ಪಿಗೆ ಮತ್ತೊಂದು ತಪ್ಪನ್ನು ಮಾಡುವುದರಿಂದಾಗಿ ಒಂದು ತಪ್ಪು, ಮತ್ತೊಂದು ತಪ್ಪು ಸೇರಿದರೆ ಅದು ಸರಿಯಾಗುವುದಿಲ್ಲ. ಅದಕ್ಕೆ ನಾವೆಲ್ಲರೂ ಕೂಡ ಕಾರಣರಾಗಿರುತ್ತೇವೆ. ಈ ಕಾರಣಕ್ಕಾಗಿಯೇ ಇವೊತ್ತು ಬಹಳ ಸುಲಭವಾಗಿರತಕ್ಕಂಥ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಈ ಒಂದು ಸಂದರ್ಭದಲ್ಲಿ ನೃಪತುಂಗ ಬಹಳ ಉತ್ತಮವಾದಂಥ ಮಾತೆನ್ನು ಕವಿರಾಜ ಮಾರ್ಗದಲ್ಲಿ ಹೇಳುತ್ತಾನೆ. ನಾವು ಏನನ್ನು ಕಲಿಯಬೇಕು ಎನ್ನತಕ್ಕಂಥದ್ದು ಇರುತ್ತದಲ್ಲಾ, "ಕೆಸವರವೆಂಬುದು ಸೆರೆಸೈರಿಸಲಾರ್ಪುಡೆ ಪರವಿಚಾರಮಂ ಧರ್ಮಮಂ" ಎನ್ನತಕ್ಕಂಥ ಮಾತನ್ನು ಬರೆದಿದ್ದಾರೆ. ಅನ್ಯರ ವಿಚಾರವನ್ನು ಮತ್ತು ಧರ್ಮವನ್ನು ಸಂಪೂರ್ಣವಾಗಿ ಸಹಿಸಲು ಸಾಧ್ಯವಾದರೆ ಆ ಮನಸ್ಸೇ ದೊಡ್ಡ ಮನಸ್ಸು ಅದೇ ಸಂಪತ್ತು ಎನ್ನತಕ್ಕಂಥ ಮಾತನ್ನು 7ನೇಯ ಶತಮಾನದಲ್ಲಿ ನಮ್ಮ ಧರ್ಮಸಿಂಗ್‌ರವರ ಗುಲ್ಬರ್ಗಾ ಜಿಲ್ಲೆಯ ಮಳಖೇಡದಿಂದ ಆ ನೃಪತುಂಗ ಹೇಳಿದಂಥ ಮಾತಿದು. ಆದ್ದರಿಂದ ಅನ್ಯರ ವಿಚಾರಗಳನ್ನು, ಅನ್ಯರ ಧರ್ಮವನ್ನು ನಾವು ಸೈರಿಸಿಕೊಳ್ಳತಕ್ಕಂಥ ಒಂದು ಸಹಜ ಗುಣವನ್ನು ನಾವು ಬೆಳೆಸಿಕೊಂಡಾಗ ಮಾತ್ರ ಪ್ರಜಾಪ್ರಭುತ್ವ ಈ ತರಹ ಉಳಿಯುವುದಕ್ಕೆ ಸಾಧ್ಯತೆಯಾಗುತ್ತದೆ. ಉತ್ತರ ಭಾರತದ ಉದಾಹರಣೆಗಳು ನಮ್ಮ ಕರ್ನಾಟಕಕ್ಕೆ ಬರಬಾರದು. ನಾವು ಸಂಪೂರ್ಣವಾದಂಥ ರೀತಿಯಲ್ಲಿ ಈ ಕೆಲಸಗಳನ್ನು ಮಾಡಿಕೊಂಡು ಹೋಗಬೇಕಾಗಿರುತ್ತದೆ. ನಾವು ಆಗಲೇ ಹೇಳಿದಂತೆ ನನಗೆ ಕಾಂಗ್ರೆಸ್‌ನವರು ಬಹಳ ಸಹಕಾರವನ್ನು ಅವರ ಅಧಿಕಾರ ಅವಧಿಯಲ್ಲಿ ಕೊಟ್ಟಿದ್ದೀರಿ. ನಮಗೆ ಸರ್ಕಾರ ರಚನೆ ಮಾಡಿದಂಥ ಸಂದರ್ಭದಲ್ಲಿಯೂ ಕೂಡ ನಾವು ಬಹಳ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿ ನಮ್ಮ ಕನಿಷ್ಠ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ಸಂಪೂರ್ಣವಾದಂಥ ಸಲಹೆಯನ್ನು ಕೊಟ್ಟಿದ್ದೀರಿ. ಇವೊತ್ತು ನಾನು ಮಾತನಾಡುವ ಸಂದರ್ಭದಲ್ಲಿಯೂ ಕೂಡ ಯಾರೂ ಅಡತಡೆ ಉಂಟುಮಾಡಲಿಲ್ಲ. ನಾನು ಮೊನ್ನೆ ಕೂಡ ಸಿಂಧ್ಯಾರವರಿಗೆ ಹೇಳಿದೆ, Sui Juris ಎಂದು ಇರುತ್ತದೆ, Sui generis ಎಂಧು ಇರುತ್ತದೆ. Sui Juris ಎನ್ನತಕ್ಕಂಥದ್ದು ಏನಿದೆ ಎಂದರೆ ಸ್ವಯಂ ಅದು. ಕಾಂಗ್ರೆಸ್ ತನ್ನದೇ ಆದಂಥ ಸ್ವಯಂಭೂ ತನ್ನದೇ ಅಂತರ್ಗತ ವಾದಂಥ ಅಧಿಕಾರ ಎಂದು

ಭಾವಿಸಿಕೊಳ್ಳುತ್ತದೆ. ಆದರೆ ಅದು ಅಂತರ್ಗತವಾದಂಥ ಅಧಿಕಾರ ಇರುವುದಿಲ್ಲ. ಆ ಅಧಿಕಾರದಲ್ಲಿ ಒಂದು ಸಂಕೋಲೆ ಇರುತ್ತದೆ. ಅದರಲ್ಲಿ ಯಾರ್‍ಯಾರು ಸಂಕೋಲೆಗಳನ್ನು ಕಟ್ಟಿಕೊಂಡಿರುತ್ತಾರೆ ಅದೇ ಸ್ವಾತಂತ್ರ್ಯ ಆಗುತ್ತದೆ. If liberty were to be the fetters., I will do away with the liberty ಎಂದು Krupal Singh ಹೇಳುತ್ತಾರೆ. ಒಂದು ನಮ್ಮ ಸ್ವಾತಂತ್ರ್ಯ ಎನ್ನತಕ್ಕಂಥದ್ದೂ ಕೂಡ ನಾವು ನಮ್ಮದೇ ಆದಂಥ surrendered/rights ಎನ್ನತಕ್ಕಂಥದ್ದು. ಒಂದು ಸಮಾಜ ಚೆನ್ನಾಗಿ ಬದುಕಬೇಕು ಎನ್ನುವ ಕಾರಣಕ್ಕಾಗಿಯೇ ನನ್ನ ಕೆಲವು ಹಕ್ಕುಗಳನ್ನು ಸಮಾಜಕ್ಕೆ ಕೊಟ್ಟು ಸಮಾಜದಿಂದ ನಾನು ಸ್ವಾಯತ್ತತೆಯನ್ನು, ಸ್ವಸ್ಥತೆಯನ್ನು ನಾನು ಪಡೆದುಕೊಂಡಿರುತ್ತೇನೆ. ಈ Sui Generis ಎನ್ನತಕ್ಕಂಥದ್ದು ಏನಿದೆ ನಾವು ಅದು. ನಾವೆಲ್ಲಾ ಏನು ಎಂಬ ಬಗ್ಗೆ ನಮ್ಮ ದಿವಂಗತ ಜೆ.ಹೆಚ್. ಪಟೇಲ್‌ರವರು ಹೇಳುತ್ತಿದ್ದರು. 'ನಾವು ರಣಮೂಲಿಗಳು' ಎಂದು. ಇನ್ಯಾರ್‍ಯಾರೋ ತೃಣಮೂಲ, ಆ ಮೂಲ, ಈ ಮೂಲ ಎಂದು ಇದ್ದರೂ ಕೂಡ ಜನತಾ ದಳ, ಜನತಾ ಪಕ್ಷ, ನಾವೆಲ್ಲರೂ ಕೂಡ ರಣಮೂಲಿಗಳು, ನಾವು ಜಗಳ ಆಡತಕ್ಕಂಥದ್ದೇ ನಮ್ಮ ಆಜನ್ಮಸಿದ್ಧ ಹಕ್ಕು ಎಂದು ಭಾವಿಸಿಕೊಂಡಿರತಕ್ಕಂಥ ಜನ ನಾವು. ಅಧಿಕಾರ ಬಂದಾಗೆಲ್ಲಾ ಹೀಗೆಯೇ ಮಾಡುತ್ತಿರುತ್ತೇವೆ. Sui Generis ಎನ್ನತಕ್ಕಂಥದ್ದು ಏನೆಂದರೆ ಅದು ವಿಭಜನೆ ಆಗತಕ್ಕಂಥದ್ದು. ಅದು ವಿಭಜನೆ ಆಗುತ್ತಿರುವಂತೆಯೇ ಅದು ಮತ್ತೆ ಹೆಚ್ಚು ಉಲ್ಬಣವಾಗುತ್ತದೆ. ಆದ್ದರಿಂದ ಅದು ಹೆಚ್ಚು ಪ್ರಸರಣವಾಗಿ ಬರುತ್ತದೆ. ಆದ್ದರಿಂದ ಇವೊತ್ತು ನಾವು ಏನು ವಿಭಜನೆ ಆಗಿದ್ದೇವೆ ಎನ್ನತಕ್ಕಂಥದ್ದು ಇರಬಹುದು. ಆದರೆ ವಿಭಜನೆ ಆಗಿದ್ದರೂ ಕೂಡ ಮುಂದಿನ ದಿನಗಳಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರುವುದಕ್ಕೆ ಸನ್ನದ್ಧರಾಗಿರುತ್ತೇವೆ. ಕನ್ನಡದ ಜನತೆ ನಮ್ಮನ್ನು ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಿ, ಇದು ಒಂದು ಮರೆತುಹೋಗುವಂಥ ಪ್ರಸಂಗ ಎಂದು ನಾನು ಭಾವಿಸಿಕೊಂಡು ಮಾನ್ಯ ಕುಮಾರಸ್ವಾಮಿಯವರು ಹಾಗೂ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಸರ್ಕಾರವನ್ನು ಕೊಡಲಿ. ಎಲ್ಲಾ ಸರ್ಕಾರ ಮಾಡಬೇಕಾಗಿರುವುದು ಏನೆಂದರೆ ನಾವು ಜನತೆಗೆ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಪ್ರಕಾಶ್‌ರವರೆ, He is a forbidden Emperor.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರು ಹೇಳಿದ್ದು Yes. Forbidden Emperor ಎನ್ನತಕ್ಕಂಥದ್ದು is a different thing. ಅಲ್ಲಿ ಮುಂದೆ ಏನು ಆಗುತ್ತದೆ ಎಂಬುದು ತಮಗೆ ಗೊತ್ತಿದೆ. ಏಕೆಂದರೆ ಅವನು ನಿಜವಾದಂಥ ಮಗ ಆಗಿರಲಿಲ್ಲ. ಆತನನ್ನು ದತ್ತು ತೆಗೆದುಕೊಂಡು ಬಂದಂಥವರೇ ಆಗಿದ್ದರು. ಅವನು ಮಂಗೋಲಿಯನ್‌ನ ಆದಿಯಿಂದ ಬಂದಂಥವನಾಗಿದ್ದ. ಹಾನ್ಸ್ ಡಯನಾಸ್ಟಿಕ್‌ಗೆ ಸೇರಿರತಕ್ಕಂಥವನಲ್ಲ ಅವನು. last Emperor, Don't quote me that. I know the History, why it has happened.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಪ್ರಕಾಶ್‌ರವರು ಅಂತೂ ಇಂತೂ ಸಿಂಧ್ಯಾರವರಿಗೆ ಕೈ ಬಿಟ್ಟಿರಿ ನೀವು. ಪಾಪ ಅವರು ನಮ್ಮ ಲೀಡರ್, ನಮ್ಮ ಲೀಡರ್, ನಮ್ಮ ಲೀಡರ್. ನಮ್ಮ ಲೀಡರ್ ಇನ್ನೂ ಬಂದಿಲ್ಲ, ನಮ್ಮ ಪ್ರಕಾಶ್‌ರವರೇ ನಮ್ಮ ಲೀಡರ್ ಎಂದು ಸಿಂಧ್ಯಾರವರು ಹೇಳಿಕೊಂಡು ಬಂದರು ಪಾಪ. ನೀವು ಇಷ್ಟೆಲ್ಲಾ ದೀರ್ಘವಾಗಿ ಭಾಷಣ ಮಾಡಿ ಕೊನೆಗೆ ಯಾರಿಗೆ ಕೈಬಿಟ್ಟಿರಿ ಎಂದರೆ, ಸಿಂಧ್ಯಾರವರಿಗೆ ಕೈಬಿಟ್ಟಿರಿ.

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಖರ್ಗೆಯವರ ಮಾತನ್ನು ಒಪ್ಪುತ್ತೇನೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಆಗಿಲ್ಲದಿದ್ದರೂ ಅದರ ಸಿಹಿ ಕಹಿ ಉಣ್ಣಬೇಕಲ್ಲಾ. ಅವರಿಗೂ ಏನು ಆಯಿತೋ, ಯಾರು ಕೈಬಿಟ್ಟರೋ ಅದೇ ರೀತಿ ನನ್ನನ್ನೂ ಕೈಬಿಟ್ಟರು ಎಂದು ನಾನು ಭಾವಿಸಿಕೊಳ್ಳುತ್ತೇನೆ.

**ಅಧ್ಯಕ್ಷರು** : ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, ಸುಮಾರು ಜನರು ಈಗಾಗಲೇ ನಿರ್ಣಯದ ಮೇಲೆ ಸಾಕಷ್ಟು ಮಾತನಾಡಿದ್ದಾರೆ.

**ಅಧ್ಯಕ್ಷರು** : ಸಭೆ ಇನ್ನೂ ಮುಕ್ತಾಯವಾಗಿಲ್ಲ. ಎಲ್ಲರೂ ಏಕೆ ಎದ್ದು ಹೊರಟಿರಲ್ಲ, ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ)** : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ಸದಸ್ಯರುಗಳೆಲ್ಲರೂ ಸೀರಿಯಸ್ಸಾಗಿ ಕುಳಿತಿದ್ದಾರೆ. ಇದು ಅಪರೂಪ ಒಂದೆರಡು ನಿಮಿಷ ಬಿಡೋಣ. Let them settle down. ಬಹಳ ಉತ್ತಮ ರೀತಿಯಲ್ಲಿ ಇವತ್ತು ಕಲಾಪಗಳು ನಡೆದುಕೊಂಡು ಹೋಗುತ್ತಿವೆ. ಒಬ್ಬೊಬ್ಬರದೂ ಕಲಾ ಪ್ರತಿಭೆ ಈಚೆಗೆ ಬರುತ್ತಿದೆ. ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸರ್ಕಾರ ಏನು ಮಾಡಿತ್ತು ತಮ್ಮ ಸ್ವಭಾವ ತಮ್ಮ ಉದ್ದೇಶ ಅಷ್ಟಕ್ಕೆ ಬಿಟ್ಟು, ಒಳ್ಳೆಯದಾಗಲಿ ಎಂದು ಒಬ್ಬ ಹಿರೀಕರ ತರಹ ಅವರಿಗೆ ಒಳ್ಳೆಯ ಮಾತನ್ನು ಹೇಳಿ ಕುಳಿತುಬಿಟ್ಟರು. ಇನ್ನು ಮಾನ್ಯ ಸಿಂಧ್ಯಾರವರು ಇವತ್ತು ಅವರ ಹಾಗೂ ನನ್ನ ಪರಿಚಯದಲ್ಲಿ ನಾನು ನೋಡಿದ್ದರಲ್ಲಿ ಬಹಳ ದೀರ್ಘವಾದ ಆಲೋಚನೆ ನಂತರ ಕೆಲವು ದೃಢವಾದ ಅನಿಸಿಕೆಗಳನ್ನು ಅವರ ಭಾಷಣದಲ್ಲಿ ನಗುನಗುತ್ತಾ ಹೇಳಿದರು. ಸ್ಪಷ್ಟತೆ ಮತ್ತು ಗೊಂದಲ ಇವೆರಡೂ ಒಟ್ಟಿಗೆ ಇರುವುದಕ್ಕೆ ಸಾಧ್ಯವಿಲ್ಲ. ಸ್ಪಷ್ಟತೆ ಇದ್ದವನಿಗೆ ಗೊಂದಲ ಇರುವುದಿಲ್ಲ, ಗೊಂದಲ ಇದ್ದವನಿಗೆ ಸ್ಪಷ್ಟತೆ ಇರುವುದಿಲ್ಲ. ಬದ್ಧತೆ ಇದ್ದರೆ ಗೊಂದಲ ಇರುವುದಿಲ್ಲ, ಈ ಸಭೆಯಲ್ಲಿ ಒಟ್ಟು 224 ಜನ ಸದಸ್ಯರಿರುವುದು. ಹೆಚ್ಚಿಗೆ ಜನ ಇದ್ದವರು ಸರ್ಕಾರ ಮಾಡುತ್ತಾರೆ. ಉಳಿದವರು ಈ ಕಡೆ (ವಿರೋಧ ಪಕ್ಷ) ಬರುತ್ತಾರೆ. ಅದು ಸಿಂಪಲ್ ಅರ್ಥಮೆಟಿಕ್. ಅದು ಅಷ್ಟೇ ಆಗಿದ್ದರೆ ಚರ್ಚೆಯ ಅಗತ್ಯವಿರಲಿಲ್ಲ. ಈಗ ಎಲ್ಲರೂ ಹೇಳಿರುವುದನ್ನು ಪುನಃ ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಹೋದಬಾರಿ ರಾಜ್ಯದ ವಿಧಾನಸಭೆಗೆ ನಡೆದಂತಹ ಸಾರ್ವತ್ರಿಕ ಚುನಾವಣೆಯಲ್ಲಿ ಯಾರ ಪರವಾಗಿಯೂ ಮ್ಯಾಂಡೇಟ್ ಇಲ್ಲ. ಅದಕ್ಕೆ ಅವರವರದೇ ಆದಂತಹ ವ್ಯಾಖ್ಯಾನವನ್ನು ಅವರವರ ಪರವಾಗಿ ಕೊಟ್ಟುಕೊಂಡಿದ್ದಾರೆ. ನಾನು ಕೊಡತಕ್ಕಂಥ ವ್ಯಾಖ್ಯಾನ ಎನ್‌ಡಿಎ ಈ ದೇಶವನ್ನು ಆಳುತ್ತಿತ್ತು. ಕಳೆದ ಏಳೆಂಟು ಅಥವಾ ಹತ್ತು ವರ್ಷಗಳಿಂದ ಈಚೆಗೆ ಕೋಮುವಾದಿ ಶಕ್ತಿಗಳ ಪರ ವಿರೋಧ ಎನ್ನುವಂತಹ ಒಂದು ಪೋಲರೈಸೇಷನ್ ಆಗಿದೆ. ಎನ್‌ಡಿಎ ಬದಲಿಗೆ ಯುಪಿಎ ಅಧಿಕಾರಕ್ಕೆ ಬರಬೇಕಾದರೆ ಈ ಭಾರತ ದೇಶದ ಜನ ಒಟ್ಟಾರೆ ಕೋಮುವಾದಿ ಶಕ್ತಿಗಳಿಗೆ ಪ್ರೋತ್ಸಾಹವನ್ನು ಕೊಡಲಿಲ್ಲ.

**(ಈ ಹಂತದಲ್ಲಿ ಮಾನ್ಯ ಎ.ಟಿ. ರಾಮಸ್ವಾಮಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

ಈ ಬ್ಯಾಕ್‌ಗ್ರೌಂಡನ್ನೆಲ್ಲಾ ಡೆಡ್ಯೂಸ್ ಮಾಡಿಕೊಂಡು ಭಾರತೀಯ ಜನತಾ ಪಕ್ಷಕ್ಕೆ ಬಂದಂತಹ ವೋಟು ಮತ್ತು ವೋಟಿನ ಪರ್ಸಂಟೇಜ್ ಮತ್ತು ಇತರ ಪಕ್ಷಗಳಿಗೆ ಬಂದಿರತಕ್ಕಂಥಾದ್ದನ್ನು ನೋಡಿಕೊಂಡು ನಮಗೆ ಒಂದು ಮೆಸೇಜ್ ಇದೆ. ಪೊಲಿಟಿಕಲ್ ವರ್ಕರ್‌ಗೆ, ಪೊಲಿಟಿಕಲ್ ಪಾರ್ಟಿಗೆ, ಪೊಲಿಟಿಕಲ್

ಲೀಡರ್‌ಗೆ ತಮ್ಮ ಜವಾಬ್ದಾರಿಯನ್ನು ತಾನು ರಿಯಲೈಸ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿದ್ದರೆ duty calls upon to raise us. ಹಾಗಾಗಿ ಸೆಕ್ಯುಲರ್ ಕ್ರೆಡೆನ್ಸಿಯಲ್ಸ್ ಇರತಕ್ಕಂಥವರು ಒಟ್ಟಿಗೆ ಬಂದು ಸರ್ಕಾರವನ್ನು ರಚನೆ ಮಾಡಬೇಕೆನ್ನತಕ್ಕಂಥದ್ದಾಯಿತು. ನಾನು ಬೆಳಿಗ್ಗೆ ಕೂಡ ಹೇಳಿದ ಇಂಟರ್‌ವೆನ್‌ಷನ್ ಮಾಡಿದಾಗ, ನಮ್ಮದು ಚುನಾವಣೆ ಆದ ನಂತರ ಆದಂತಹ ಮೈತ್ರಿ. ಒಂದು ಸರ್ಕಾರ ರಚನೆ ಮಾಡಿದಮೇಲೆ ನಾವು ಸೆಕ್ಯುಲರ್ ಗೌರ್ವನಮೆಂಟ್ ಎಂದು ಕೈಕಟ್ಟಿಕೊಂಡು ಕುಳಿತು ಕೊಳ್ಳುವುದಕ್ಕಾಗುವುದಿಲ್ಲ. ನಮಗೊಂದು ಪ್ರೊಗ್ರಾಂ ಇರಬೇಕಾಗುತ್ತದೆ. ಕಾಮನ್ ಮಿನಿಮಂ ಪ್ರೋಗ್ರಾಂ ಏನಿತ್ತು ಅದನ್ನು ಎರಡು ಪಕ್ಷಗಳ ವರಿಷ್ಠರು, ನೇತಾರರು ಎಲ್ಲರೂ ಸೇರಿ, that was chalked out. ಕಾಮನ್ ಮಿನಿಮಂ ಪ್ರೋಗ್ರಾಂ ಇಂಪ್ಲಿಮೆಂಟೇಷನ್ ವಿಚಾರದಲ್ಲಿ ಅಪಸ್ವರ ಎತ್ತಿದ್ದಾಗಲಿ, ಅಥವಾ ಅದನ್ನು ಆಚರಣೆಗೆ ತರಲಿಲ್ಲವೆಂದಾಗಲಿ, ಅರೆಮನಸ್ಸಿನಿಂದ ಇದ್ದಾರೆ ಎಂದು ಯಾರೂ ಹೇಳಿದ್ದನ್ನು ನಾನು ಕೇಳಲಿಲ್ಲ. ವ್ಯಕ್ತಿಗತವಾದಂತಹ ತಪ್ಪು ಅಪರಾಧಗಳು ಆಗತಕ್ಕಂಥಾದ್ದು. ಅಥವಾ ನಾವು ನಾಚಿಕೆಯಿಂದ ತಲೆ ಎತ್ತುವುದಕ್ಕೆ ಆಗದೆ ಇರುವಂತಹ ಕೆಲಸಗಳನ್ನು ಮಾಡಿರುವುದು, ಅದು ಆ ಕಡೆ ಅಥವಾ ಈ ಕಡೆ ಆಗಲಿಲ್ಲ. ಆದ್ದರಿಂದ ಏನಾದರೂ ವಿರಸವುಂಟಾಯಿತೇ ? ಇಲ್ಲ ಖಜಾನೆಗೆ ಏನಾದರೂ ಕನ್ನ ಹಾಕುವಂತಹ ಕೆಲಸ ಹಾಕಿ, ಮತ್ತೆ ತೀವ್ರವಾದಂತಹ ಭಿನ್ನಾಭಿಪ್ರಾಯ ಏನಾದರೂ ಬಂತಾ ? ಯಾವ ಪ್ರೊವೂಕೇಷನ್ ನನ್ನ ಪ್ರಕಾರ ಒಂದು ಘನ ಉದ್ದೇಶಕ್ಕಾಗಿ ಸ್ಥಾಪನೆಯಾಗಿರತಕ್ಕಂಥ ಸರ್ಕಾರ ಕೆಳಗೆ ಇಳಿಸಬೇಕಾಗಿದ್ದರೆ, ಕಣ್ಣಿಗೆ ಗೋಚರವಾಗುವಂತಹ ಯಾವ ಘನ ಉದ್ದೇಶಗಳು ನಮ್ಮ ಕಣ್ಣಿಗೆ ಕಾಣುತ್ತಾ ಇಲ್ಲ. ಆದುದರಿಂದ it leades to speculation. ತಮಗೆ ತಮ್ಮದೇ ಆದಂತಹ ಅಭಿಪ್ರಾಯಗಳಿರುತ್ತವೆ, ನಮಗೆ ನಮ್ಮದೇ ಆದಂತಹ ಅಭಿಪ್ರಾಯಗಳು ಇರುತ್ತವೆ. We agree to dis-agree. ನಾವು ಇಲ್ಲಿರತಕ್ಕಂವರು ಎಲ್ಲರೂ ಕೂಡ ನಮ್ಮ ನಾಯಕರ ಅನುಮತಿಯನ್ನು ಪಡೆದು ಹೇಳುತ್ತೇವೆ. ನಾವು ಬಹುಶಃ ಅಗತ್ಯಕ್ಕಿಂತ ಹೆಚ್ಚು ವಿಶ್ವಾಸವನ್ನು ಇಟ್ಟೆವೇನೋ? ಎಲ್ಲಿಯವರೆಗೆ ನಮ್ಮ ವಿಶ್ವಾಸ ಇತ್ತೆಂದರೆ 27 ನೇ ತಾರೀಖು 3.00 ಗಂಟೆಯವರೆಗೂ ನಮಗೆ ನಿಮ್ಮ ಮೇಲೆ ವಿಶ್ವಾಸ. ಏನಾದರೂ ಪವಾಡ ಆಗಬಹುದು ಎಂದು ಇತ್ತು. ಹಾಗೂ ಪರಿಸ್ಥಿತಿ ಸುಧಾರಿಸಬಹುದು ಎಂದು ಇತ್ತು. ನಾವು ಒಪ್ಪಿಕೊಳ್ಳುತ್ತೇವೆ, ಅದು ನಮ್ಮ ತಪ್ಪಾ ? ನಂಬಿಕೆ ನಮಗೆ ಅಷ್ಟು ಕೆಲಸ ಕೊಟ್ಟಿತ್ತು ಎನ್ನುವುದನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಇದು ಸತ್ಯವಾಗುವುದಿಲ್ಲ. ಒಪ್ಪಿಕೊಂಡರೆ ಹೃದಯ ಹಗುರವಾಗುತ್ತದೆ. A famous Chinese / Philosopher confusions saying, to commit a sin is one, to own it amounts in a single mistake to deny it becomes struggle.ಹಾಗೆ ನಾವು ನಿಮ್ಮಲ್ಲಿ ಅತಿಯಾದ ವಿಶ್ವಾಸವನ್ನು ಇಟ್ಟಿದ್ದಾದರೆ, ಅದನ್ನು ಒಪ್ಪಿಕೊಂಡರೆ ಅದು ಒಂದೇ ಮಿಸ್ಟೇಕ್‌ನಲ್ಲಿ ಎಂಡ್ ಆಗಿ ಬಿಡುತ್ತದೆ. Genesis of Congress and Janatha Dal, I am thankful to Sriram Reddy, ನಮ್ಮ ಹಿಂದಿನ ಚರಿತ್ರೆ ಪ್ರೀಇಂಡಿಪೆಂಡೆನ್ಸ್ ಮೂವ್‌ವೆಂಟ್ ಬಗ್ಗೆ ಎಲ್ಲಾ ತಿಳಿದುಕೊಂಡು ಬಂದು ಎಲ್ಲಾ ಹೇಳಿದರು. 1969 ರಲ್ಲಿ ಕಾಂಗ್ರೆಸ್ ಇಬ್ಭಾಗ ಆದದ್ದು, ಕಾಂಗ್ರೆಸ್, ಸೋಷಿಯಲಿಸ್ಟ್ ಪಾರ್ಟಿ, ಭಾರತೀಯ ಜನಸಂಘ ಸ್ವತಂತ್ರ ಪಾರ್ಟಿಗಳೆಲ್ಲಾ ಸೇರಿ ಜನತಾ ಪಕ್ಷವಾದದ್ದು. ಆ ಜನತಾ ಪಕ್ಷ ಮತ್ತೆ ಹೋಳುಸೀಳು ಆದದ್ದು. ಪುನಃ ವಿ.ಪಿ. ಸಿಂಗ್‌ರವರು ಜನಮೋರ್ಚಾ ಕಟ್ಟಿದ್ದು ಮತ್ತೆ ಅವರು ಇವರು ಸೇರಿ ಬೆಂಗಳೂರಿನಲ್ಲಿ ಜನತಾ ದಳ ಪಾರ್ಟಿಯನ್ನು ಅಕ್ಟೋಬರ್ 11ನೇ ತಾರೀಖು 1989ರಲ್ಲಿ ಹುಟ್ಟು

ಹಾಕಿದ್ದು. ಈ ಜನತಾ ದಳದ ಕಾರ್ಯಕ್ರಮ ಲಾಲೂ ಪ್ರಸಾದ್ ಯಾದವ್‌ರವರಿಗಾಗಲೀ ಮುಲಾಯಂ ಸಿಂಗ್ ಯಾದವ್‌ರವರಿಗಾಗಲೀ ಉಳಿದವರು ಎಲ್ಲರೂ ಕೂಡ ಸೆಕ್ಯುಲರಿಸಂ ಪರ, ಅಲ್ಪಸಂಖ್ಯಾತರ ಪರ, ಬ್ಯಾಕ್‌ವರ್ಡ್ ಕ್ಲಾಸಸ್ ಪರ, ಹೀಗಾಗಿ ಕಾಂಗ್ರೆಸ್ ಬಲವಾಗಿದ್ದಂತಹ ಯುಪಿ ಹೊಗೂ ಬಿಹಾರ್‌ನಲ್ಲಿ ಕೂಡ ಕಾಂಗ್ರೆಸ್ ಅಧಿಕಾರವನ್ನು ಕಳೆದುಕೊಂಡಿತ್ತು, ಇದು ನಿಮ್ಮ ಹಿನ್ನೆಲೆ. ನಾವು ಬಿಡಿ we were put to test. ನಮ್ಮನ್ನು ಜನ ನಂಬಲಿಲ್ಲ. ನಮ್ಮ ಸ್ನೇಹಿತರು ಯಡಿಯೂರಪ್ಪನವರು, ನಮ್ಮ ಈಶ್ವರಪ್ಪನವರು ಧೈರ್ಯದಿಂದ ಹೇಳಿದರು, ಹೌದು ನಾನು ಆರ್‌ಎಸ್. ನಿಂದ ಬಂದಿದ್ದೇನೆ. ಪ್ರಕಾಶ್ ಸಾಹೇಬರೇ ತಾವು ಒಪ್ಪುತ್ತೀರಿ. ಚಾತುರ್ವರ್ಣ ಪದ್ಧತಿಯನ್ನು ಸನಾತನ ವ್ಯವಸ್ಥೆಯನ್ನು ಅಕ್ಷರಶ : ಈ ಸೆಕೆಂಡಿಗೂ ಕೂಡ ಸಮರ್ಥನೆ ಮಾಡತಕ್ಕಂಥಾದ್ದು ಭಾರತೀಯ ಜನತಾ ಪಕ್ಷ. ಈ ಸಮಾಜವನ್ನು ಜಾತಿ ಪದ್ಧತಿಯ ಮೇಲೆ ವಿಂಗಡಣೆ ಮಾಡಿ ಪಂಚಮನನ್ನು ಕೆಳಗಿಟ್ಟು ಅವನ ಹೆಗಲ ಮೇಲೆ ಎಲ್ಲರನ್ನೂ ಕೂರಿಸಿ ಮೇಲೆ ವೈದಿಕ ಕುಳಿತುಕೊಂಡು ಚೆನ್ನಾಗಿದೆ ಸವಾರಿ ಎಂದು ಹೇಳತಕ್ಕಂಥ ಪ್ರತಿಪಾದನೆ ಮಾಡತಕ್ಕಂಥವರು ಅಲ್ಲಿ ಕಕ್ಕಸ್ಸು ತೊಳೆಯತಕ್ಕಂಥವರಿಗೆ ಮೋಕ್ಷ ಸಿಗಬೇಕೆಂದು ಹೇಳಿ, ಜಟಕಾ ಹೊಡೆಯುವವನಿಗೆ ಮೋಕ್ಷ ಸಿಗಬೇಕೆಂದು ಹೇಳಿ, ಮಂಡಲ್ ಕಮಿಷನ್ ಜಾರಿಗೆ ಬರಬೇಕೆಂಧು ಹೇಳಿ ಅಧಿಕಾರವನ್ನು ಕಳೆದುಕೊಳ್ಳುವುದಕ್ಕೆ ಸಿದ್ಧವಾಗಿ ಹೋರಾಟ ಮಾಡಿದಂತಹ ನಿಮ್ಮ ಹಿಸ್ಟರಿ ಒಂದು ಕಡೆಗೆ. ಈ ಎರಡೂ ಕಾಂಬಿನೇಷನ್ ಆಗಿದೆಯಲ್ಲಾ, how do you justify ?

**ಶ್ರೀ ಎಂ.ಪಿ. ಪ್ರಕಾಶ್** : ನಾನು ಒಂದು ಮಾತು ಹೇಳುತ್ತೇನೆ. ಇದು ನಿಮಗೆ ಸಹಾಯವಾಗಲಿ ಹಾಗೂ ರೆಕಾರ್ಡ್‌ಗೆ ಹೋಗಲಿ ಎಂದು ಹೇಳುತ್ತಿದ್ದೇನೆ. ಗಾಂಧೀಜಿಯವರು ಚಾತುರ್ವರ್ಣಕ್ಕೆ ಒತ್ತುಕೊಡುತ್ತಾ, ಅಸ್ಪೃಶ್ಯತೆಯನ್ನು ಪ್ರತಿಪಾದಿಸಿದಂತಹ ಈ ಹಿಂದೂ ಧರ್ಮವನ್ನು ನಾನು ನಿರಾಕರಿಸುತ್ತೇನೆ ಎನ್ನುವಂತಹ ಮಾತನ್ನು ಕೂಡ ಹೇಳಿದರು. ಅದನ್ನು ಕೂಡ ತಾವು ಒಪ್ಪಬೇಕಾಗುತ್ತದೆ; ಅಂದರೆ ನಾನು ಚಾತುರ್ವರ್ಣದ ಪರವಾಗಿ ಇದ್ದೇನೆಂದು ಅಲ್ಲ. ಆದರೆ ಅದು ಒಂದು ಯೋಚನೆಗೆ ಶಕ್ತಿಯಾಗಿತ್ತು. ಇವತ್ತು ಗಾಂಧೀಜಿಯವರನ್ನು ನಾವು ಆದರ್ಶವಾಗಿ ತೆಗೆದುಕೊಳ್ಳುತ್ತೇವೆ. ಅದೇ ರೀತಿಯಾಗಿ ಅವರು ಆ ಮಾತನ್ನು ಹೇಳಿ, ಮತ್ತೆ ಪರಿವರ್ತನೆಯಾಗಿರುವುದನ್ನು ನಾವು ಕಂಡಿದ್ದೇವೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಚೇರ್ಮನ್‌ರವರೇ, ತಮ್ಮದೇ ಆದಂತಹ ಒಂದು ಕಾರಣಕ್ಕಾಗಿ, ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೂ ನಮ್ಮನ್ನು ಜಾತಿವಾದಿಗಳೆಂದು ಪಟ್ಟ ಕಟ್ಟಿ, ಪರಿಶಿಷ್ಟ ವರ್ಗದ ಜನರ ವಿರೋಧಿ ಎಂಬ ಪಟ್ಟವನ್ನು ಕಟ್ಟಿ ನಮ್ಮನ್ನು ಸಮಾಜದಿಂದ ದೂರ ಇಡುವಂತಹ ಪ್ರಯತ್ನವನ್ನು ಮಾಡಿ, ಅಲ್ಪಸಂಖ್ಯಾತರಿಂದ ದೂರವಿಟ್ಟು, ವೋಟ್ ಬ್ಯಾಂಕ್ ರಾಜಕಾರಣ ನಡೆಯಿತು. ಆದರೆ ನಮ್ಮ ದೇಶದ ಜನರು, ಇವತ್ತು ನಮ್ಮ ವಿಚಾರವನ್ನು ಒಪ್ಪಿಕೊಂಡಿದ್ದಾರೆ. ಈ ಜಾತಿ ಎಂಬ ವಿಷ ಬೀಜವನ್ನು ಬಿತ್ತುವಂತಹ ಪ್ರಯತ್ನವನ್ನು ಮಾಡಿದ ಮೇಲೂ ಸಹ, ಅದು ಅಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ. ನಾನು ಮಾತನಾಡುವ ಸಂದರ್ಭದಲ್ಲಿ ಇನ್ನು ಉಳಿದ ವಿಚಾರವನ್ನು ಮಾತನಾಡುತ್ತೇನೆ. ಡಾ: ಸರ್ವಪಲ್ಲಿ ರಾಧಾಕೃಷ್ಣನ್‌ವರ ಬಗ್ಗೆ ನಮಗೆಲ್ಲರಿಗೂ ಗೌರವ ಇದೆ. ನಾನು ನಮ್ಮೆಲ್ಲಾ ಶಾಸಕರಿಗೂ ಅವರ ಪುಸ್ತಕ The Hindu way of life' ನಲ್ಲಿ ಹಿಂದುತ್ವದ ಸ್ವಭಾವವನ್ನು ಈ ರೀತಿ ವಿವರಿಸಿದ್ದಾರೆ. ಅದನ್ನು ಕಳುಹಿಸಿ ಕೊಡುತ್ತೇನೆ ಓದಿ 'ಹಿಂದುತ್ವವು ಒಂದು

ವಿಚಾರಧಾರೆಯಲ್ಲ, ಅದೊಂದು ಜೀವನ ಪದ್ಧತಿ, ಅದು ವೈಚಾರಿಕ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ನೀಡುತ್ತದೆ. ನಾಸ್ತಿಕನಾಗಲಿ, ಆಸ್ತಿಕನಾಗಲಿ, ಎಲ್ಲರೂ ಹಿಂದೂಗಳಾಗಬಲ್ಲರು. ಹಿಂದುತ್ವವೂ ಧಾರ್ಮಿಕ ಏಕರೂಪಿಗೆ ಒತ್ತು ನೀಡುವುದಿಲ್ಲ; ಬದಲಿಗೆ ಆಧ್ಯಾತ್ಮಿಕ ದೃಷ್ಟಿಕೋನಕ್ಕೆ ಮಹತ್ವವನ್ನು ನೀಡುತ್ತದೆ. ಇದು ಡಾ: ರಾಧಾಕೃಷ್ಣನ್‌ರವರು ಹೇಳಿರುವಂತಹ ಮಾತು ಆಗಿದೆ. ಧರ್ಮದ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ನಿಲುವಿನ ಬಗ್ಗೆ, AIR 1996 ಎಸ್‌ಸಿ 1765 ನ್ಯಾಯಮೂರ್ತಿ ಜೆ. ರಾಮಸ್ವಾಮಿಯವರು ಹೇಳಿರುವಂತಹ ಮಾತು: ಧರ್ಮವನ್ನು ಐತಿಹಾಸಿಕ ಕಾರಣಗಳಿಂದಾಗಿ, ಹಿಂದೂ ಧರ್ಮವೆಂದು ಕರೆಯಲಾಗುತ್ತಿದೆ. ಧರ್ಮ ಅಥವಾ ಹಿಂದೂ ಧರ್ಮವೂ, ಸಾಮಾಜಿಕ ಹಾಗೂ ಮಾನವತೆಯ ಉತ್ತುಂಗಕ್ಕಾಗಿ ಮಾಡಿರುವಂತಹ ಪ್ರಯತ್ನಗಳನ್ನು ಸಮನ್ವಯ ಮಾಡುತ್ತದೆ.ಇದೇ ಹಿಂದೂ ಧರ್ಮ ಮತ್ತು ಕಡೆಯದಾಗಿ ಇದೇ ಸರ್ವಧರ್ಮ ಸಮಾಭಾವ ಇದನ್ನು ಸುಪ್ರೀಂಕೋರ್ಟ್‌ನ ನ್ಯಾಯಾಧೀಶ ಜೆ. ರಾಮಸ್ವಾಮಿಯವರು ಹೇಳಿರುವಂಥಾದ್ದು. ಮತ್ತೆ ಡಾ : ರಾಧಾಕೃಷ್ಣ ರವರು ಹೇಳಿರುವಂತಹ ಪುಸ್ತಕವನ್ನು ತಮಗೆ ಕಳುಹಿಸಿ ಕೊಡುತ್ತೇನೆ, ಅದನ್ನು ತಾವು ಓದಿ, ಆಮೇಲೆ ಅದಕ್ಕೆ ರಾಜಕಾರಣ ಮಾಡುವಿರಂತೆ

**ಶ್ರೀ ಕೆ. ಆರ್.ರಮೇಶಕುಮಾರ್** ಮಾನ್ಯ ಚೇರ್ಮನ್‌ರವರೇ, ಮಾನ್ಯ ಯಡಿಯೂರಪ್ಪನವರಿಗೆ ನಾನು ಅತ್ಯಂತ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಭಾರತೀಯ ಜನತಾ ಪಕ್ಷ, ಓಟು ಕೇಳುವುದಕ್ಕೆ ಹೋಗುತ್ತಿದ್ದೀರಿ. ಇದನ್ನೆಲ್ಲಾ ಮರೆತು ಬಿಡಿ ಈ ಸಮಾಜ ಮುಂದೆ ಹೋಗಬೇಕಾ ಅಥವಾ ಹೇಗಿದೆಯೋ, ಹಾಗೆ ಎಲ್ಲಿ ಇದೆಯೋ ಅಲ್ಲಿ ಹಾಗೆ ಇರಬೇಕಾ ಅನ್ನುವಂಥಾದ್ದು ಒಂದು ಪ್ರಶ್ನೆ. ಈ ಸನಾತನವಾದಿಗಳು ಎಂದು ನಾವು ಯಾರನ್ನು ಸಂಭೋಧನೆ ಮಾಡುತ್ತೇವೆ, ಇವರು ಎಲ್ಲಾ ಪಕ್ಷದಲ್ಲೂ ಇರಬಹುದು. ಆದರೆ ಇದನ್ನೇ ಒಂದು ಸಿದ್ಧಾಂತವೆಂದು ನಂಬಿರತಕ್ಕಂಥವರು ಇದ್ದಾರೆ, ಅವರ ಬಗ್ಗೆ ನಾನು ವ್ಯಾಖ್ಯಾನ ಮಾಡುತ್ತಿಲ್ಲ. ಅವರ ಪ್ರೇರಣೆಯಿಂದ ನಿಮ್ಮ ಪಕ್ಷಕ್ಕೆ ಹೆಚ್ಚು ಶಕ್ತಿ ಸಿಕ್ಕತಕ್ಕಂಥಾದ್ದು. ಇವತ್ತಿನ ಪರಿಸ್ಥಿತಿಯಲ್ಲಿ ಎಲ್ಲಾ ರೀತಿಯ ಜನರನ್ನು ಹೊಂದೊಂಡಂತೆ ಸೇರಿಸಿಕೊಳ್ಳುತ್ತಿದ್ದೀರಿ, ಚುನಾವಣೆಗಳನ್ನು ಮಾಡುತ್ತಿದ್ದೀರಿ. ಅದೆಲ್ಲಾ ನಿಜ, ನಾನು ಹೇಳುವಂಥಾದ್ದು ಬಯಾಲಜಿಯಲ್ಲಿ ಇಡೀ ಜೀವರಾಶಿಗಳನ್ನು ಎರಡು ವರ್ಗಗಳಾಗಿ ವಿಂಗಡಿಸುತ್ತಾರೆ. Vertibrates ಮತ್ತು Invertibrates ಎಂದು ವಿಂಗಡಿಸಿದ್ದಾರೆ. ಬೆನ್ನುಮೂಳೆ ಇದ್ದರೆ, spine ಇದ್ದರೆ, vertibral column ಇದ್ದರೆ Vertibrates ಎಂದು ಕರೆಯುತ್ತಾರೆ. ಅವು ಇಲ್ಲದೇ ಇರುವುದಕ್ಕೆ Invertibrates ಎಂದು ಕರೆಯುತ್ತಾರೆ. ಈಗ ಹಾವು ಇದೆ, ಅದು invertibrate, ಅದು ಹಗ್ಗದ ರೀತಿಯಲ್ಲಿ ಸುತ್ತುಕೊಂಡು ಬಿಡುತ್ತದೆ. ಅದಕ್ಕೆ ಬೆನ್ನುಮೂಳೆ ಇಲ್ಲ. ನಾವು ಈ ಬೆನ್ನುಮೂಳೆಗೆ ಏಕೆ ಪ್ರಾಶಸ್ತ್ಯವನ್ನು ಕೊಡುತ್ತೇವೆಂದರೆ, ಮನುಷ್ಯ ಎದೆಗಾರಿಕೆಯಿಂದ ನಿಲ್ಲಬೇಕು. ಅವನು ಬೆನ್ನು ತಗ್ಗಿಸಬಾರದು, ಸ್ವಾಭಿಮಾನದಿಂದ ಬದುಕಬೇಕು; ಎಂದು ಹೇಳುವಂಥಾದ್ದು. ಬೆನ್ನುಮೂಳೆ ಇದ್ದು, ಬೆನ್ನು ಇದ್ದವರು, ಸ್ವಾಭಿಮಾನದಿಂದ ಬದುಕುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕ ವಾದವನ್ನು ಮಂಡನೆ ಮಾಡತಕ್ಕಂಥವರು, ಒಂದು ಕಡೆಗೆ ಇವರೆಲ್ಲರೂ ಒಂದೇ ವರ್ಗಕ್ಕೆ ಸೇರಿದಂಥವರು. ಇವರಿಗೂ ಕೂಡ ಸ್ವಾಭಿಮಾನದಿಂದ ಬದುಕುವಂತಹ ಹಕ್ಕು ಇದೆಯೆಂದು ಹೇಳುವಂಥಾದ್ದು ಮತ್ತೊಂದು ಕಡೆಗೆ ನೀವೂ ಇಬ್ಬರೂ ವಿವಿಧ ಗುಂಪುಗಳಲ್ಲಿ ಇದ್ದಂಥವರು; ಆಶೀರ್ವಾದವನ್ನು ಮಾಡಿದ್ದೀರಿ, ಒಳ್ಳೆಯ ಕೆಲಸವನ್ನು ಮಾಡಲಿ ಎಂದು ಹೇಳಿದ್ದೀರಿ. ಇನ್ನು ಚಿಕ್ಕ ವಯಸ್ಸು ಅವಕಾಶ ಸಿಕ್ಕಿದೆ. ನಾವು

ಏನೂ ಹಲಬುವುದಿಲ್ಲ. Let them do good work. ನಾವು ಇವತ್ತು ಏನು ಒಂದು ಫಾರ್ಮಲಿಟಿ ಮಾಡುತ್ತಿದ್ದೇವೆ, ಇದಕ್ಕೆಲ್ಲಾ ನಾವು ಅಷ್ಟು ನೀಚತನದಿಂದ ನಡೆದುಕೊಳ್ಳುವುದಿಲ್ಲ. ಆದರೆ ಸೈದ್ಧಾಂತಿಕವಾಗಿ where is the match ? ಒಂದು ಕಡೆಗೆ ಮಂಡಲ್ ಕಮೀಷನ್ ಅನ್ನು ಜಾರಿಗೆ ತಂದದ್ದು. ಡಾ: ಬಾಬಾ ಸಾಹೇಬ್ ಅಂಬೇಡ್ಕರವರಿಗೆ, posthumous ಆಗಿ ಭಾರತ ರತ್ನವನ್ನು ಕೊಟ್ಟಿದ್ದು; Prophet's day ಗೆ Holiday ಡಿಕ್ಲೇರ್ ಮಾಡಿದ್ದು. In a row, ಆ tension ಪ್ರಾರಂಭ ಆದಾಗ, ಅದೇ ಸಮಯಕ್ಕೆ 10–11 ವರ್ಷದ ಮಕ್ಕಳೆಲ್ಲಾ ಮಂಡಲ್ ಕಮೀಷನ್‌ನಿಂದ ನಮಗೆಲ್ಲಾ ಅನ್ಯಾಯವಾಗುತ್ತಿದೆಯೆಂದು ಆತ್ಮಾಹುತಿಯನ್ನು ಮಾಡಿಕೊಂಡದ್ದು. ಈ ರೀತಿ ಆತ್ಮಾಹುತಿಯನ್ನು ಮಾಡಿಕೊಂಡವರಿಗೆಲ್ಲಾ ಸಾಂತ್ವನ ಮಾಡಲೆಂದು ಲಾಲ್‌ಕೃಷ್ಣ ಅಡ್ವಾನಿಯವರು ಹೊರಟದ್ದು; ನಂತರ ಕೆಲವೇ ದಿವಸಗಳಲ್ಲಿ ರಥವನ್ನು ಏರಿ, ರಥಯಾತ್ರೆ ಹೊರಟದ್ದು. ಮಾನ್ಯ ಚೇರ್ಮನ್‌ರವರೇ, ಈ ರಥಯಾತ್ರೆ ಹೊರಟಾಗ ಏನೇನು ಆಯಿತು, ಎಂಬುದನ್ನು ಪುನಃ ನಾನು ಇಲ್ಲಿ ಹೇಳಿ, ನಿರ್ಮಲವಾದಂತಹ ವಾತಾವರಣವನ್ನು ಕೆಡಿಸುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ನೀವು ರಥಯಾತ್ರೆಗೆ ಏಕೆ ಹೊರಟಿರಿ? ರಾಮ ಗುಡಿಯನ್ನು ಕಟ್ಟಲಿಕ್ಕೆ, ಮಾನ್ಯ ಪ್ರಕಾಶ್‌ರವರೇ, ತಾವು ಅನೇಕ ಸಲ ರಾಮ ಎಂದರೆ ಮರ್ಯಾದೆ ಪುರುಷನೆಂದು ಹೇಳಿದ್ದೀರಿ. ಯಾವ ರಾಯನು ಬೆಳಿಗ್ಗೆ ಎದ್ದು ಕಿರೀಟವನ್ನು ಇಟ್ಟುಕೊಳ್ಳಬೇಕಾಗಿತ್ತು. ಸಿಂಹಾಸನ ಏರಬೇಕಾಗಿತ್ತು. ಪಟ್ಟಾಭಿಷೇಕಕ್ಕೆ ಅಯೋಧ್ಯ ಪಟ್ಟಣ ಎಲ್ಲಾ ತಯಾರಿ ಆಗಿ, ಶೃಂಗಾರವಾಗಿರುತ್ತದೆ. ರಾಮನ ಚಿಕ್ಕತಾಯಿ ರಾಮನ ತಂದೆ ಹತ್ತಿರ ಬಂದು, ನೀನು ಕೊಟ್ಟಿದ್ದ ವರ ನನಗೆ ಪೂರೈಸು ನಿನ್ನ ಮಗ ಕಿರೀಟವನ್ನು ಇಟ್ಟುಕೊಳ್ಳುವ ಹಾಗೆ ಇಲ್ಲವೆಂದು ಹೇಳಿದ ತಕ್ಷಣ ದಶರಥ ಪ್ರಲಾಪಕ್ಕೆ ಒಳಗಾಗುತ್ತಾನೆ. ಆಗ ರಾಮನಿಗೆ ಇಲ್ಲ ಮಗ ನಾನು ಮಾತು ಕೊಟ್ಟಿದ್ದೇನೆ, ನಿನಗೆ ಕಿರೀಟವಿಲ್ಲವೆಂದು ಹೇಳಿದರೆ, ರಾಮನು ಕಿರೀಟವನ್ನು ಬಿಟ್ಟು, ಸಿಂಹಾಸನವನ್ನು ಬಿಟ್ಟು ಕಾಡಿಗೆ ಹೋದನು. ಇವರು ರಾಜ್ಯವನ್ನು ಹಿಡಿಯುವುದಕ್ಕೆ ಆ ರಾಮನ ಹೆಸರನ್ನು ಹೇಳಿಕೊಂಡು, ರಥವನ್ನು ಹತ್ತಿ ಮಾಡಬಾರದ್ದನ್ನೆಲ್ಲಾ ಮಾಡಿಕೊಂಡು ಅವರು ಹೊರಟರು. ನೀವು ಒಂದು ಕಡೆ ಶಾಂತಿಯಾತ್ರೆ ಎಂದು ಕೊಂಡು ಇನ್ನೊಂದು ಕಡೆಯಿಂದ ನೀವು ಬಂದಿರಿ. and today you are culminating. How do you justify ? ನಿಮ್ಮನ್ನು ಅಪಾರವಾಗಿ, ಅಭದ್ರತೆಯಿಂದ, ಭಯದಿಂದ, ಆಕಾಂಕ್ಷೆಯಿಂದ ಹೊಸ ಕನಸುಗಳನ್ನು ಕಂಡು ನಂಬಿದಂಥ ಅಲ್ಪಸಂಖ್ಯಾತರಿಗೆ, ಬಡವರಿಗೆ, ದಲಿತರಿಗೆ, ಯಾವ ಜನರು ನಿಮ್ಮಲ್ಲಿ ವಿಶ್ವಾಸವನ್ನು ಇಟ್ಟಿದ್ದರು. ನಿಮಗೆ ಇಲ್ಲಿ ಯಾರು ರಾಜಕೀಯ ಶಕ್ತಿಯನ್ನು ಕೊಟ್ಟರು, ಈ ಸ್ವರೂಪವನ್ನು ಕೊಟ್ಟರು, ಅವರಿಗೆ ನೀವು ಏನು ಉತ್ತರವನ್ನು ಹೇಳುತ್ತೀರಿ ? ನಾವು ಬಿಡಿ, ನಾವು ಕೆಟ್ಟವರು, ನೀವು ಬಹಳ ಬುದ್ಧಿವಂತಿಕೆಯಿಂದ ಮಾಡಿದಿರಿ. Display was excellent. - ಧರ್ಮಸಿಂಗ್‌ರವರು ಒಳ್ಳೆಯವರು, ತಪ್ಪು ನಮ್ಮದು, ನಾವೆಲ್ಲಾ ಸೇರಿ ದಿನಾ ಅವರ ಕಾಲನ್ನು ಎಳೆಯುತ್ತಿದ್ದೆವು. ಅವರು ಕುಳಿತಿದ್ದಾರೆ. ಅವರ ಕಾಲು ಕಾಣುವುದಿಲ್ಲ ಕುಳಿತಿದ್ದಾರೆ ಕಾಲು ಕಾಣುತ್ತಾ ಇಲ್ಲ ಎಲ್ಲರೂ ಎಳೆದು ಎಳೆದು ಸಣ್ಣಗೆ ಆಗಿದೆ. ಇವರು ದಿವಸ ಕಾಲಿಗೆ ತೈಲವನ್ನು ಹಾಕಿ ಬೆಂಬಲವನ್ನು ಕೊಡುತ್ತಿದ್ದರು. ಅಷ್ಟು ಬೆಂಬಲವನ್ನು ಕೊಟ್ಟು, ಇವರು ಎಲ್ಲಾ ತೈಲವನ್ನು ಹಾಕಿ ತಿಕ್ಕಿ, ಇಂಜೆಕ್ಷನ್ ಕೊಟ್ಟರೂ ಉಳಿಯುವುದಕ್ಕೆ ಆಗಲಿಲ್ಲ. ಇದು ಇಡೀ ಲೋಕಕ್ಕೆ ಗೊತ್ತು. What has happened ? The whole world is a witness. ಮಾನ್ಯ ಸಿದ್ದರಾಮಯ್ಯನವರು ಅಹಿಂದಾ ಕಾನ್‌ಫರೆನ್ಸ್‌ಗೆ

ಸೇರಿದ ತಕ್ಷಣ he attracts disciplinary action. ಅವರು ನಿಮ್ಮ ಪಕ್ಷಕ್ಕೆ ಬೆನ್ನೆಲುಬಾಗಿ ನಿಂತಿದ್ದವರು. ನಿಮ್ಮ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯೆಂದು ಹೇಳಿ, ಜನರಿಗೆ ತೋರಿಸಿದಂಥವರು. ಅವರು ಇಲ್ಲಿ ಉಪ ಮುಖ್ಯಮಂತ್ರಿಗಳಾಗಿ, ಶಾಸಕಾಂಗ ಪಕ್ಷದ ನಾಯಕರಾಗಿ ಇದ್ದಂಥವರು. ಅವರನ್ನು ಎರಡು ನಿಮಿಷಗಳಲ್ಲಿ ಶಾಸಕಾಂಗ ಪಕ್ಷದ ನಾಯಕನ ಸ್ಥಾನ, ಉಪ ಮುಖ್ಯಮಂತ್ರಿಗಳ ಸ್ಥಾನ ಎಲ್ಲದರಿಂದ ತೆಗೆಯುತ್ತಾರೆ. ನಿಮ್ಮ ಸಿದ್ಧಾಂತಕ್ಕೆ ತದ್‌ವಿರುದ್ಧವಾದಂತಹ ಸಿದ್ಧಾಂತದ ಜೊತೆಗೆ ರಾಜಿಯನ್ನು ಮಾಡಿಕೊಂಡು, ಇಷ್ಟೆಲ್ಲಾ ಹಗಲೆಲ್ಲಾ ನಡೆಯುತ್ತಿದ್ದರೂ ಅವತ್ತಿನಿಂದ ಇವತ್ತಿನವರೆಗೂ, ಕೂಡ ಒಂದು ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ನೀವು ಮಾಡಿಲ್ಲವಲ್ಲಾ . ನಿಮ್ಮ secular credentials ನೀವು ಹೇಗೆ establish ಮಾಡುತ್ತೀರಾ, please let us know. ನಮ್ಮ ನಿಯಮಾವಳಿಗಳ ಪ್ರಕಾರ, 10th schedule ಪ್ರಕಾರ ಒಂದು ವೇಳೆ disqualification ಆಗಬೇಕಾಗಿದ್ದರೆ, ಅಂತಹ ಸದುದ್ದೇಶ ಇದ್ದರೆ, ಆ ಕಂಪ್ಲೇಂಟ್ ಯಾರಿಗೆ ಹೋಗಬೇಕು ಅಧ್ಯಕ್ಷರೇ? ಅದು ನಿಮಗೆ ಬರಬೇಕು. ಆ ಕಂಪ್ಲೇಂಟ್ ಯಾರಿಗೆ ಹೋಗುತ್ತದೆ? ಗೌವರ್ನರ್‌ಗೆ ಹೋಗುತ್ತದೆ. ಇದಕ್ಕೆ ತಿಳುವಳಿಕೆಯ ಕೊರತೆನಾ ? ಸದುದ್ದೇಶದ ಅಭಾವನಾ ? ಮಾನ್ಯ ಎ.ಕೆ ಆಂಟೋನಿಯವರು ಮೂರು ಗಂಟೆಯವರೆಗೂ ಕಾಯುತ್ತಾರೆ. ಮೂರು ಗಂಟೆಗೆ ನಮಗೆ ಪತ್ರ ಬಂತು. ನೀವು ದಯಮಾಡಿ ಧರ್ಮಸಿಂಗರವರಿಗೆ ರಾಜೀನಾಮೆಯನ್ನು ಕೊಡುವುದಕ್ಕೆ ಸೂಚನೆ ಮಾಡಿ ಎಂದು ಬಂತು. ನಮ್ಮ ಸ್ನೇಹಿತರುಗಳು, ಮುಖಂಡರುಗಳು ಆ ಘಳಿಗೆಯವರೆಗೆ, ಆ ಕ್ಷಣದವರೆಗೆ ನಮಗೇನೋ ಒಳ್ಳೆಯದಾಗಬಹುದು ಎನ್ನುವುದನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿದ್ದರು. ಮಾನ್ಯ ಈಶ್ವರಪ್ಪನವರು ಬಹಳ ಚೆನ್ನಾಗಿ ಹೇಳಿದರು; ಇವರ ಸರ್ಕಾರದ ಪತನದ ವಿಚರದಲ್ಲಿ ಇವರಿಗೇ ತಿಳುವಳಿಕೆ ಇಲ್ಲದೇ ಹೋದರೆ ಇವರು ಸರ್ಕಾರದಲ್ಲಿ ಇರಲು ಲಾಯಕ್ಕೇ ಎಂದು ಹೇಳಿದರು. ಶಹಬಾಸ್, ನೀವು ಹೇಳಿದ ಮಾತು ನಿಜ. ಅದಕ್ಕೇ ನಾವು ಇಲ್ಲಿಗೆ ಬಂದಿರುವುದು. ನಮಗೆ ಆ ಶಿಕ್ಷೆ ಆಗಬೇಕಾದದ್ದೇ. ಎಲ್ಲಾ ಒಳ್ಳೆಯದನ್ನು ಅಂದರೆ ದೇಶಭಕ್ತಿ, ಮಾತೃಪ್ರೇಮ, ಹಿಂದೂ ಸಂಪ್ರದಾಯ, ಸಂಸ್ಕೃತಿ ಇವುಗಳ ಜಹಗೀರು ಅವರ ಕೈಯ್ಯಲ್ಲಿ ಇದೆ. ಅವರು ಏನಾದರೂ ಬಿಟ್ಟರೆ ಅಷ್ಟೋ, ಇಷ್ಟೋ ನಮಗೆ ಶೇರ್ ಸಿಗುತ್ತದೆ. ಆದರೆ ನೀವು ನಿಮ್ಮ ಶಾಸಕರನ್ನು ಕರೆದುಕೊಂಡು ಎಲ್ಲೆಲ್ಲಿಗೋ ಹೋದಿರಲ್ಲಾ, ಅದು ಏಕೆ? ನಮ್ಮ ಸರ್ಕಾರ ಸತ್ತು ಹೋಗಿತ್ತು, ನಾವು ಏನೂ ಪ್ರಯತ್ನ ಮಾಡಲಿಲ್ಲ, ಏನಾಗುತ್ತಿದೆ ಎಂದು ನಮಗೆ ಗೊತ್ತಿರಲಿಲ್ಲ, ಸರಿ. ಆದರೆ ಬಿಜೆಪಿಯವರು ನೀವು ಏಕೆ ಬಸ್ಸುಗಳನ್ನು ಮಾಡಿಕೊಂಡು ಪಾಂಡಿಚರಿಗೆ, ಗೋವಾಗೆ, ಮತ್ತೊಂದು ಕಡೆಗೆ ಹೋದಿರಿ ? ಕಡಗೆ ಯಾವಯಾವ ಊರಿಗೆ ಹೋದಿರಿ ಎಂಬುದು ನಮಗೆ ಗೊತ್ತಿಲ್ಲ. ನೀವು ಹೇಳಿದಿರಲ್ಲಾ, ನಾವು ಸತ್ತು ಹೋಗಿದ್ದೆವು, ಸರ್ಕಾರವೇ ಇಲ್ಲ ಎಂದು ಹೇಳಿದ ಮೇಲೆ horse trade ಹೇಗೆ ಬರುತ್ತದೆ ? ಯಾವುದಾದರೂ ಒಂದನ್ನು ಒಪ್ಪಿಕೊಳ್ಳಬೇಕು. ಅದನ್ನು ಒಪ್ಪಿಕೊಳ್ಳಬೇಕು ಇಲ್ಲವೆಂದರೆ, ಇದನ್ನು ಒಪ್ಪಿಕೊಳ್ಳಬೇಕು. Either of the two must be true. ಅಲ್ಲವೇ ? ಈಶ್ವರಪ್ಪನವರು ನಾಳೆ ಮಂತ್ರಿಯಾಗುವವರು, ಹಿರಿಯರು, ಅವರ ಮಾತು ಸತ್ಯ ಎಂದು ಒಪ್ಪಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ಏಕೆಂದರೆ ಮುಂದಕ್ಕೆ ಅವರದೇ ಆಡಳಿತ ನಡೆಯುವುದು. ಮುಂದೆ ಏನಾಗುತ್ತದೆ ಎಂಬುದು ನಮಗೆ ಗೊತ್ತಿದೆ. ಆದರೆ ನೀವು ಏಕೆ ಹೋದಿರಿ? ಬಹಳ ಜನರಿಗೆ ರಾಜಕೀಯದ ಗಾಂಭೀರ್ಯ ಇನ್ನೂ ಪರಿಚಯವಾಗಿಲ್ಲ. ಚುನಾವಣೆಗೆ ನಿಲ್ಲುವುದು, ಸರ್ಟಿಫಿಕೇಟ್ ತೆಗೆದುಕೊಂಡು ಬರುವುದಷ್ಟೇ ರಾಜಕಾರಣ ಎಂದು

ತಿಳಿದುಕೊಂಡಿದ್ದಾರೆ. ಇದು ನಾಡಿನ ಜನರ ಬದುಕಿಗೆ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದಂಥ ಒಂದು ಕ್ಷೇತ್ರ. ಇಲ್ಲಿ ನಾವು ತೆಗೆದುಕೊಳ್ಳತಕ್ಕಂಥ ಪ್ರತಿ ನಿಲುವು, ಇಡತಕ್ಕಂಥ ಪ್ರತಿ ಹೆಜ್ಜೆ, ನೇರ ಪರಿಣಾಮ ಅದರ ಮೇಲೆ ಆಗುತ್ತದೆ. ಎನ್ನುವುದರ ಅರಿವು ಇವರಿಗೆ ಇಲ್ಲ. ನಾನು ಯಾರನ್ನು ಕುರಿತೂ ಲಘುವಾಗಿ ಮಾತನಾಡಲು ಇಷ್ಟಪಡುವುದಿಲ್ಲ. ನಾನು ಹೇಳತಕ್ಕಂಥಾದ್ದು ಇಷ್ಟೇ. ಹೇಗೆ ನೀವು ಈ ಸಿಚ್ಯುಯೇಷನ್ ಅನ್ನು ಜನರಿಗೆ ಎಕ್ಸ್‌ಪ್ಲೈನ್ ಮಾಡುತ್ತೀರಿ ? ಪಾಪ, ದಶರಥ ಮಗನನ್ನು ಎಷ್ಟು ಪ್ರೀತಿ ಮಾಡುತ್ತಾನೆ. ಎಂದರೆ ಅವನಿಗೆ ಕಣ್ಣು ಮಸುಕಾಗಿಬಿಡುತ್ತದೆ, ಇದು ಗೊತ್ತಾಗಿ ಈ ಮಾತು ಹೇಳಬೇಕು ಎಂದ ತಕ್ಷಣ. ಭಾಸ ವಿರಚಿತ ಪ್ರತಿಮಾ ನಾಟಕದಲ್ಲಿ ಹೇಳುತ್ತಾನೆ. ದಶರಥ ಕೌಸಲ್ಯಳನ್ನು ಕರೆಯುತ್ತಾನೆ. ಕೌಸಲ್ಯ, ನನಗೇನೂ ಕಾಣುತ್ತಿಲ್ಲ ಕಣ್ಣೆಲ್ಲಾ ಮಸುಕಾಗಿಬಿಟ್ಟಿದೆ. ನಾನೇನು ಮಾಡುವುದು, ನನಗೇನೂ ತೋಚುತ್ತಿಲ್ಲ, I have become blind , ಹೆಲ್ಪ್ ಮಾಡು, ನನ್ನನ್ನು ಹಿಡಿದುಕೋ ಎಂದು ಹೇಳುತ್ತಾನೆ. ಸೌಮಿತ್ರೆ ಓಡಿಬರುತ್ತಾಳೆ, ಅವರೆಲ್ಲರೂ ಕಾಡಿಗೆ ಹೊರಟು ಬಿಟ್ಟರು ಎಂದು ಹೇಳುತ್ತಾಳೆ. ಯಾರ್‍ಯಾರು ಹೋದರು ಎಂದು ಕೇಳುತ್ತಾನೆ,-ಅವಳು ಎಲ್ಲಾ ಹೇಳಿ, ರಾಮ ಹೋದ ಎಂದು ಹೇಳಿದರೆ, ದಶರಥನಿಗೆ ಆ ಮಗನ ಮೇಲಿರತಕ್ಕಂಥ ವಾತ್ಸಲ್ಯ ಏನು ಹೇಳಿಸುತ್ತದೆ ಎಂಧರೆ, ರಾಮು ಎಂದು ಸಂಬೋಧನೆ ಮಾಡಬೇಡ, ಸರ್ವಹೃದಯ ನಯನಾಭಿರಾಮ ಎಂದು ಹೇಳು ಎಂದು ಹೇಳಿ, ಗೊಳಗೊಳಗೊಳ ಎಂದು ಅತ್ತು ದಶರಥ ಕೆಳಗೆ ಬಿದ್ದುಬಿಡುತ್ತಾನೆ. ಶ್ರೀರಾಮನ ವಿಚಾರವನ್ನು ಹೇಳುತ್ತಿದ್ದೇನೆ. ನಾವೂ ಈಗ ನಿಮ್ಮ ಕಡೆಗೆ ಬರುತ್ತಿದ್ದೇವೆ. ರಾಮನ ಕಡೆಗೆ ಬರುತ್ತಿದ್ದೇವೆ. ಇಲ್ಲಿ ಮಾನ್ಯ ಡಿ. ಮಂಜುನಾಥ್ ಸಾಹೇಬರು, ಪ್ರಕಾಶ್‌ರವರು, ಸಿಂಧ್ಯಾರವರು ಎಲ್ಲರೂ ಇದ್ದಾರೆ. ಧೃತರಾಷ್ಟ್ರ ಕುಳಿತಿದ್ದಾನೆ, ದುರ್ಯೋಧನನ ಆರ್ಡರ್ ಆಗಿದೆ, ದ್ರೌಪದಿಯನ್ನು ಎಳೆದುಕೊಂಡು ಬರಬೇಕು ಎಂದು ದುಶ್ಶಾಸನ ಹೋಗಿದ್ದಾನೆ. 'ಅವರು ಅಲ್ಲಿ ಅಂತರಂಗದಲ್ಲಿ ಹೇಳುತ್ತಾರೆ. ದ್ರೌಪದಿ ಬರುವುದಕ್ಕೆ ಸಾಧ್ಯವಿಲ್ಲ, ಆಕೆ ಬರಲು ಅವಕಾಶವಿಲ್ಲ, ಆಕೆ ರಜಸ್ವಲೆಯಾಗಿದ್ದಾಳೆ ಎಂದು ಹೇಳುತ್ತಾರೆ. ದುರ್ಯೋಧನನ ದುರಹಂಕಾರ ಹೇಗಿತ್ತು ಎಂದರೆ, ಅಲ್ಲಿ ತಂದೆ ಇದ್ದಾನೆ, ತಾತ ಇದ್ದಾನೆ, ಗುರು ಇದ್ದಾನೆ, ಮಾವ ಇದ್ದಾನೆ, ಆಚಾರ್ಯರು ಇದ್ದಾರೆ ಎನ್ನುವುದನ್ನೂ ಮರೆತು 'ರಜಸ್ವಲೆಯಾದರೆ ಏನು ಎಳೆದು ತಾ ಅವಳನ್ನು' ಎಂದು ಹೇಳುತ್ತಾನೆ. ಧೃತರಾಷ್ಟ್ರ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. ಮಂಜುನಾಥ್‌ರವರೇ ಶಲ್ಯ, ಕೃಪ, ದ್ರೋಣ, ಭೀಷ್ಮ ಎಲ್ಲರೂ ಸೈಲೆಂಟಾಗಿದ್ದರು. ರಾಮಾಯಣ, ಮಹಾಭಾರತಗಳನ್ನು ಸುಮ್ಮನೆ ಸೃಷ್ಟಿ ಮಾಡಲಿಲ್ಲ.

**ಶ್ರೀ ಎಂ. ಪಿ. ಪ್ರಕಾಶ್** :- ಮಾನ್ಯ ರಮೇಶ್‌ಕುಮಾರ್‌ರವರೇ ಒಂದು ನಿಮಿಷ ಅವರು ಉತ್ತರವನ್ನೂ ಕೊಡುತ್ತಾರೆ. ನಾವು ಅವರ ಉಪ್ಪನ್ನು ಉಂಡಿದ್ದೇವೆ ಅನ್ನುವಂಥ ಮಾತನ್ನು ಹೇಳುತ್ತಾರೆ. ಏಕೆ ಒಮ್ಮೊಮ್ಮೆ ಮೌನವಾಗುತ್ತೇವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ. ಉಪ್ಪಿನ ಋಣ ಮೌನಕ್ಕೆ ಕಾರಣವಾಗಿರುತ್ತದೆ. ಇದರ ಜೊತೆಗೆ ಮತ್ತೊಂದು ಕಾರಣವೂ ಇದೆ. ಅದ್ಯಾವುದೆಂದರೆ, ಜೂಜಿನಂಥ ಜೂಜಿನಲ್ಲಿ ಆಗ ಪಣಕ್ಕಿಟ್ಟಂಥ ಹೆಣ್ಣನ್ನು, ಅದು ನಮ್ಮ ವಸ್ತು ಎಂದು ಪರಿಭಾವಿಸಬಾರದು. ಗೆದ್ದಂಥವನ ಆಸ್ತಿ ಅದು ಎಂದು ಹೇಳಿ, ಹೆಣ್ಣನ್ನು , ಹೊನ್ನನ್ನು, ಮಣ್ಣನ್ನು ಕೂಡ ಗೆದೆಯಬೇಕು ಎನ್ನುವಂಥ ಪರಿಸ್ಥಿತಿ ಆ ಕಾಲಕ್ಕೆ ಇತ್ತು. ಆದರೆ ಅದು ಇವತ್ತಿಗೆ ಅನ್ವಯವಾಗತಕ್ಕಂಥಾದ್ದು ಅಲ್ಲ.

**ಶ್ರೀ ಹೆಚ್.ಡಿ. ಬಸವರಾಜು** : ಮಾನ್ಯ ಅಧ್ಯಕ್ಷರೆ, ಮಹಾಭಾರತವನ್ನು ಪೂರ್ಣವಾಗಿ ಚಿತ್ರಣ ಮಾಡಿ ಮನಮುಟ್ಟುವಂತೆ ಹೇಳುತ್ತಿದ್ದಾರೆ. ಆದರೆ ಒಂದು ಸಂದರ್ಭದಲ್ಲಿ ಅವರು ನಿಜವಾದ

ಹಿನ್ನೆಲೆಯನ್ನು ಹೇಳಲಿಲ್ಲ. ಎಂ.ಪಿ.ಪ್ರಕಾಶ್‌ರವರು ಹಿನ್ನಲೆ ಹೇಳಿದರು. ಇವರ ಭಾವನೆ ಹೇಗಿದೆ ಎಂದರೆ, ಚಂದನವನ್ನು ಕಡಿದರು ಎನ್ನುವುದರಲ್ಲಿ ದನ ಕಡಿದರು ಎನ್ನುವುದನ್ನು ಮಾತ್ರ ಹೇಳುತ್ತಿದ್ದಾರೆಯೇ ಹೊರತು ಚಂದನ ಎಂದು ಹೇಳುವಂಥಾದ್ದನ್ನು ಮಾಡುತ್ತಿಲ್ಲ. ಅಲ್ಲಿ ಯಾವ ಸಂದರ್ಭದಲ್ಲಿ ಅವರು ಪಣದಿಂದ ಸೋತಿದ್ದರು. ಅದಕ್ಕೋಸ್ಕರ ಆ ಸಂದರ್ಭವನ್ನು ಅವರು ಉಪಯೋಗ ಮಾಡಿಕೊಂಡರು ಎನ್ನುವುದೂ ಕೂಡ ಅವರ ದಾಟಿಯ ವರ್ಣನೆಯಲ್ಲಿ ಬರಬೇಕಾಗಿತ್ತು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮುಂದೆ ಖಾಲಿ ಇರುತ್ತೇವಲ್ಲಾ , ಆಗ ಇವುಗಳನ್ನೆಲ್ಲಾ ಕಲಿತುಕೊಂಡು ಕೀರ್ತನೆಗಳನ್ನಾದರೂ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮುಂದೆ ಆ ಕೆಲಸ ಮಾಡುವುದೇ ಒಳ್ಳೆಯದು. ಇದು ಸರಿಯಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಪ್ರಕಾಶ್‌ರವರು ಎಂದರೆ ಅವರು ನಮಗೆ ಬಹಳ ವ್ಯಕ್ತಿಗತವಾದಂಥ ಸಂಬಂಧ ಇದೆ. ಪಾಪ, ಇವತ್ತು ನಿಜವಾಗಲೂ ಕೂಡ ಇವತ್ತು ಅವರದ್ದು ಆ ಸ್ಥಿತಿಯೇ ತೆಲುಗಿನಲ್ಲಿ ಧರ್ಮರಾಯನ ಬಗ್ಗೆ ಒಂದು ಮಾತು ಹೇಳುತ್ತಾರೆ. ಧರ್ಮರಾಯುನಿ ಅಂತಟವಾಡು ಲೇಡು, ಧರಣಿಯುಂಡು ಲೇಡು. ಎಲಕ ಶೋಕಂತ ಅಬದ್ದಮು ಚೆಪ್ಪಿನಾರು ತನವಾರಿ ಕೊರಕ್ಕೆ ಧರ್ಮರಾಯನಂಥ ದೊಡ್ಡ ಮನುಷ್ಯ ಈ ಧರಣಿ ಮೇಲೆ ಹುಟ್ಟುವುದೇ ಸಾಧ್ಯವಿಲ್ಲವಂತೆ. ಆದರೆ ತನ್ನವರಿಗೋಸ್ಕರ ತನ್ನ ಒಂದು ಸ್ವಾರ್ಥಕ್ಕೋಸ್ಕರ ಒಂದು ಚಿಕ್ಕ ಸುಳ್ಳು ಹೇಳುತ್ತಾನೆ. ಏನದು ಎಂದರೆ, "ಅಶ್ವತ್ಥಾಮೋ ಹತ್ : ಕುಂಜರಹ : ಎಂದು ಹೇಳುತ್ತಾನೆ.

ಶ್ರೀ ಜಿ.ಟಿ. ದೇವೇಗೌಡ : ಧರ್ಮರಾಯ ಸುಳ್ಳು ಹೇಳಿಲ್ಲ. ಯಾವತ್ತೂ ಸುಳ್ಳು ಹೇಳಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಹಾಸ್ವಾಮಿ ದೇವೇಗೌಡರೆ ನಿಮ್ಮ ಪರಿಚಯ ಬಹಳ ದಿವಸಗಳಿಂದ ಇದೆ ನನಗೆ, ನೀವು ಬರಬೇಡಿ. ಸೆಕ್ಯುಲರಿಸಂಗೆ ನಾನು ಹೆಚ್ಚು ದೊಡ್ಡ ವಿಶ್ಲೇಷಣೆ ಕೊಡುವುದಕ್ಕೆ ಹೋಗುವುದಿಲ್ಲ. ಸೆಕ್ಯುಲರಿಸಂ ಅಂದರೆ ಏನು, ಎನ್ಲೈಟನ್ ಕನ್ಸಿಡರೇಷನ್ ಎಂದು ಮಾನ್ಯ ಶ್ರೀರಾಮರೆಡ್ಡಿಯವರು, ಎಲ್ಲರೂ ಹೇಳಿದರು. ನಮಗೆಲ್ಲರಿಗೂ ಆತ್ಮೀಯ ಸ್ನೇಹಿತರಾಗಿದ್ದಂಥ ನಜೀರ್ ಸಾಹೇಬರು ಒಂದು ಕಡೆ ಹೇಳುತ್ತಿದ್ದರು. ಗುಂಡ್ಲುಪೇಟೆಯಲ್ಲಿ ಸತ್ಯ ಹರಿಶ್ಚಂದ್ರ ' ಎನ್ನುವ ಒಂದು ಡ್ರಾಮಾ ಆಗುತ್ತದೆ. ಊರಿನ ಜನರೆಲ್ಲಾ ಚಂದಾ ಹಾಕಿ ಡ್ರಾಮಾಕ್ಕೆ ವ್ಯವಸ್ಥೆ ಮಾಡಿರುತ್ತಾರೆ. ಊರಿನ ಹಿರೀಕರು ಕರೀಂ ಸಾಹೇಬ್ ಎನ್ನುವವರು. ಅವರೂ ಚಂದಾ ಕೊಟ್ಟಿರುತ್ತಾರೆ. ಅವರು ಬಂದು ಫ್ರಂಟ್‌ರೋಲ್‌ನಲ್ಲಿ ಕುಳಿತಿರುತ್ತಾರೆ. ಡ್ರಾಮಾ ನಡೆಯುತ್ತಾ, ನಡೆಯುತ್ತಾ, ಇದ್ದಾಗ ನಕ್ಷತ್ರಿಕ ಹರಿಶ್ಚಂದ್ರನನ್ನು ಪೀಡಿಸುವುದು ಜಾಸ್ತಿಯಾಗಿಬಿಡುತ್ತದೆ, ಹರಿಶ್ಚಂದ್ರ ಬಾಕಿ ಕಟ್ಟಬೇಕಲ್ಲಾ ಅದಕ್ಕಾಗಿ. ಆಗ ಕೆಳಗೆ ಕುಳಿತಿದ್ದಂಥ ಕರೀಂ ಸಾಹೇಬರು ಅದು ಡ್ರಾಮಾ ಎನ್ನುವುದನ್ನು ಮರೆತು ಬಿಡುತ್ತಾರೆ. ಅವರು ಸೀದಾ ಸ್ಟೇಜ್ ಮೇಲೆ ಹೋಗಿ, ತಮ್ಮ ಕಾಲಲ್ಲಿದ್ದಂಥ ಮೆಟ್ಟು ತೆಗೆದುಕೊಂಡು ಆ ನಕ್ಷತ್ರಿಕನಿಗೆ ಹೊಡೆದು ಬಿಡುತ್ತಾರೆ. ಮಾದರ್ ಚೋತ್ ಎಷ್ಟು ಕಟ್ಟಬೇಕು ಹೇಳು ಹರಿಶ್ಚಂದ್ರ ನಿನಗೆ, ಅದನ್ನು ಈಗ ನಿನಗೆ ಬಿಸಾಕುತ್ತೇನೆ, ಅವನನ್ನು ಸತಾಯಿಸುತ್ತೀಯಾ ಎಂದು ಹೇಳುತ್ತಾರೆ. ಅದು ಡ್ರಾಮಾ ಕರೀಂ ಸಾಹೇಬ್ ಪ್ರೇಕ್ಷಕ; ನಕ್ಷತ್ರಿಕ ನಟ, ಆದರೆ ಹೃದಯದ ಮಿಡಿತದಿಂದ , ನಕ್ಷತ್ರಿಕ ಅವನಿಗೆ ಸತಾಯಿಸುತ್ತಿದ್ದಾನಲ್ಲಾ ಎಂದು ಹೋಗುತ್ತಾನೆ. ಅದು ಸೆಕ್ಯುಲರಿಸಂ.

I cannot explain secularism beyond this. ಇದಕ್ಕೆ ನಾವು ಬದ್ಧರು. ಇದು ನಮ್ಮ ಜೀವನದ ಶೈಲಿ. ನಾವು secularism ಅನ್ನು election ಗೋಸ್ಕರ vote ಗೋಸ್ಕರ profess ಮಾಡಬೇಕಾದ necessity ನಮಗೆ ಇಲ್ಲ. ಆದರೆ ಯಾರು ಅದನ್ನು election ಗೋಸ್ಕರ profess ಮಾಡಿದರೋ, ಯಾರಿಗೆ ಅದರಲ್ಲಿ conviction ಇರಲಿಲ್ಲ. They are getting exposed. The test is for them, not for us. We have stood the test of time. I leave it to the guess of the whole word. ಜವಾಬ್ದಾರಿ, ಜವಾಬು ಹೇಳಬೇಕಾದದ್ದು ನಮ್ಮ ಹೆಗಲ ಮೇಲೆ ಇಲ್ಲ. ನಮ್ಮ ಪಾಲಿಗೆ ಹೋರಾಟ ಮಾಡುವುದು ಬಂದಿದೆ. ಹೋರಾಟ ಮಾಡುತ್ತೇವೆ. ಜನ ಇದ್ದಾರೆ. ಜನ ಏನು ಅಪೇಕ್ಷೆ ಪಟ್ಟರೆ ಅದು ಆಗುತ್ತದೆ. ಮಾನ್ಯ ಜಗದೀಶ ಶೆಟ್ಟರು ಮೇಲಿಂದ ಮೇಲೆ ನಮಗೆ ಟಿ.ವಿ. ಯಲ್ಲಿ ಕಾಣಿಸುತ್ತಿದ್ದರು. ಜೆ.ಡಿ.ಎಸ್.ಗೂ ನಮಗೂ ಯಾವುದೇ ಸಂಬಂಧವಿಲ್ಲ. ನಮ್ಮ ಪಕ್ಷದ ಹಿರೀಕರು ಇದನ್ನು ಒಪ್ಪಲಿಲ್ಲ. ನಾವು ಸೇರುವುದಿಲ್ಲ ಎಂದು ಹೇಳಿದ್ದರು. ಜಗದೀಶ್ ಶೆಟ್ಟರನ್ನು ನೋಡಿದಾಗಲೆಲ್ಲಾ. Geobbles ನ ಜ್ಞಾಪಕ ನನಗೆ ಬರುತ್ತದೆ. ಸರ್, ನಾನು Chancellor ಆಗುವುದಿಲ್ಲವೆಂದು ಆ ಹಿಟ್ಲರ್ ಆಸೆ ಬಿಟ್ಟುಬಿಡುತ್ತಾನೆ. Goebbles ಹೇಳುತ್ತಾನೆ, 'No, ಬಿಡುವ ಹಾಗಿಲ್ಲ ನೀನು. ಇರು, ಬರುತ್ತದೆ ವರ್ತಮಾನ. ಸಾಕಷ್ಟು pressure ಹಾಕಿದ್ದೇವೆ ಅವನಿಗೆ, ಬರುತ್ತಾನ surrender ಆಗುತ್ತಿದ್ದಾನೆ. You are going to be the Chancellor ಎಂದು ಹೇಳುತ್ತಾನೆ. An unknown corporal of the Austrian Army in the I World War, rose to the height of being the Chancellor of Germany by the time of II World War- a cobbler's son. Hats off to the role played by Goebbles. What was the aim? What was the object ? What was the target ? ಅಲ್ಲಿಂದಲೇ Fascism ಪ್ರಾರಂಭವಾಗುತ್ತದೆ ಅಲ್ಲವೇ ? ಮಾನ್ಯ ಯಡಿಯೂರಪ್ಪನವರು ನಮ್ಮ ಜೊತೆಗೆ ಬಂದಿದ್ದರು. ನಾವು ಜರ್ಮನಿಗೆ ಹೋಗಿದ್ದೆವು ಸರ್. ಅವನ Concentration Camps ನಲ್ಲಿ ಹಿಟ್ಲರ್ human beings ಅನ್ನು ಹಾಕಿ human fat ತೆಗೆದು soap ಮಾಡಿರತಕ್ಕಂಥದ್ದನ್ನು ನಾವೆಲ್ಲಾ ಕಣ್ಣಾರೆ ನೋಡಿಕೊಂಡು ಬಂದೆವು. Concentration Camps ಎಲ್ಲವನ್ನೂ ನಾವು visit ಮಾಡಿಕೊಂಡು ಬಂದೆವು. ಇವತ್ತು ಇಡೀ ಪ್ರಪಂಚದಲ್ಲಿ Goebbles ಅನ್ನು ಏಕೆ quote ಮಾಡುತ್ತಾರೆ, ಹಿಟ್ಲರ್ ಅನ್ನು ಏಕೆ hate ಮಾಡುತ್ತಾರೆಂದರೆ, ಈ he is anti human. Geoncide ಎನ್ನುವುದನ್ನು ಮೊಟ್ಟಮೊದಲ ಬಾರಿಗೆ ವಿಶ್ವದ ಇತಿಹಾಸದಲ್ಲಿ ಮಾನವ ಸಂಸ್ಕೃತಿಯಲ್ಲಿ ಮೊದಲನೇ ಬಾರಿಗೆ ಮಾಡಿದಂಥವನು, ಘಾರುಣವಾಗಿ ಮಾಡಿದಂಥವನು ಹಿಟ್ಲರ್ ಆಗಿದ್ದಾನೆ. ಹಿಟ್ಲರ್ ಅನ್ನು ಆರಾಧನೆ ಮಾಡತಕ್ಕಂಥವರು, ಗಾಂಧಿಯನ್ನು ಆರಾಧನೆ ಮಾಡತಕ್ಕಂಥವರು ಒಟ್ಟಿಗೆ ಸರ್ಕಾರವನ್ನು ನಡೆಸುತ್ತಿದ್ದಾರೆ. ಕರ್ನಾಟಕದ ಜನರಿಗೆ ಇದಕ್ಕಿಂತ ದೊಡ್ಡ ಸೌಭಾಗ್ಯ ಮತ್ತೊಂದು ಇಲ್ಲ. ನಾನು ಇವತ್ತು ಮಾತನಾಡಬೇಕಾದದ್ದು ಬೇರೆಯೇ ಇತ್ತು.

ಶ್ರೀ ಎಂ.ಪಿ. ಪ್ರಕಾಶ್ : ಒಂದ್ನಿಮಿಷ ತಾವು yield ಆಗುವುದಾದರೆ,

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆಗಬಹುದು. Yes sir, any number of times.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ರಮೇಶ್‌ಕುಮಾರ್‌ರವರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ ಮತ್ತು ಬಹಳ ಹೊಸ ವಿಷಯಗಳನ್ನು ಬೆಳಕಿಗೆ ತರುತ್ತಿದ್ದೀರಿ. Richard Wagner ಎನ್ನತಕ್ಕಂಥ ಒಬ್ಬ ದೊಡ್ಡ ಸಂಗೀತ ತಜ್ಞ ಜರ್ಮನಿಯಲ್ಲಿದ್ದ. ಪ್ರಾಯಶಃ Bethoven ನಂತರ Richard Wagner ಎನ್ನತಕ್ಕಂಥವನೇ ಬಹಳ ದೊಡ್ಡ ಸಂಗೀತ ತಜ್ಞ ಆತ ಯಹೂದಿ ವಿರೋಧಿ. ಜನಾಂಗ ವಿರೋಧಿ. ಆ ಜನೋಸೈಡ್‌ಗೆ ಪ್ರೇರೇಪಣೆಯನ್ನು ಹಿಟ್ಲರ್‌ಗೆ ಮಾಡಿದಂಥವನೇ Richard Wagner. ಆದರೆ, ಮೊನ್ನೆ ಮೊನ್ನೆ ಇಸ್ರೇಲ್‌ನಲ್ಲಿ Richard Wagner ನ ಸಂಗೀತ festival ಅನ್ನು ಮಾಡಿದರು. ಯಾವ ಯಹೂದಿಗಳು ಆಗಿ ಒಂದು promised land ಇಲ್ಲ ಎನ್ನುವ ಕಾರಣದಿಂದ Jewish Congress ಅನ್ನು ಮಾಡಿ ಹೋರಾಟ ಮಾಡಿದ್ದರು. ಇಸ್ರೇಲ್‌ನಲ್ಲಿ ಆ ಒಂದು ಪವಿತ್ರ ಸ್ಥಳದಲ್ಲಿ Richard Wagner ನ ಸಂಗೀತ ಅವನ ವೈಯಕ್ತಿಕ ಭಾವನೆಗಳಿಗೆ ವಿರೋಧವಾಗಿರತಕ್ಕಂಥ ಉತ್ಕೃಷ್ಟತೆಯನ್ನು ತೆಗೆದುಕೊಂಡು ಬಂದು ಬರೀ Richard Wagner ಮೇಲೆ ಇಸ್ರೇಲ್‌ನಲ್ಲಿ ಸಂಗೀತ festival ಆಯಿತು. Bethoven ವಿಚಾರದಲ್ಲಿ ಬಂದಾಗ ಅತ್ಯಂತ ದೈವಿಕವಾದಂಥ ಸಂಗೀತ ಇದು, ಆದರೆ ನಮ್ಮ ಆತ್ಮವನ್ನು ಸಪ್ಪೆ ಮಾಡುತ್ತದೆ ಎಂದು Lenin ಹೇಳಿದ. ಅವನು ದೊಟ್ಟ ಆರಾಧಕನಾಗಿದ್ದ ಆದ್ದರಿಂದ ನೀವು ಇದನ್ನು ಸರಳವಾಗಿ ಅರ್ಥೈಸಲಿಕ್ಕೆ ಸಾಧ್ಯ ಆಗುವುದಿಲ್ಲ. ಯಾರನ್ನು ಯಾರು ವಿರೋಧ ಮಾಡಿದಂಥ ಒಬ್ಬ ವ್ಯಕ್ತಿ ಮತ್ತೊಂದು ಕಾಲದಲ್ಲಿ ಅವನನ್ನು ಬೇರೆ ಕಾರಣಗಳಿಗಾಗಿ ಹೊತ್ತಿರತಕ್ಕಂಥದ್ದೂ ಕೂಡ ಇವತ್ತಿನ ಇತಿಹಾಸ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಉದಾಹರಣೆ ಆಗಬೇಕೆಂದು ಹೇಳುತ್ತಿದ್ದೀರಾ ?

ಶ್ರೀ ಎಂ.ಪಿ. ಪ್ರಕಾಶ್: ಅದು ಉದಾಹರಣೆ ಎಂದು ಅಲ್ಲ. ಅದನ್ನು ನೀವು . . . . .

**SRI G.V. SRIRAMAREDDY :** Wagner, should he become the example or Israel should become the example.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ನಿಮ್ಮ ರಾಮಕೃಷ್ಣರವರನ್ನು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮ್ಮ ರಾಮಕೃಷ್ಣ ಅಲ್ಲ ಸರ್. ಅವರು ನಮ್ಮ ಅಣ್ಣನೇ ? ನಮ್ಮ ರಾಮಕೃಷ್ಣ ಅಲ್ಲ ಅವರು. ನಾನು ಹೇಳುವುದೇನೆಂದರೆ, ಈಗ ಲೋಹಿಯಾರವರು ನಿಮ್ಮ ಲೋಹಿಯನೂ ಅಲ್ಲ ನಮ್ಮ ಲೋಹಿಯನೂ ಅಲ್ಲ. ರಾಮಕೃಷ್ಣ ನಿಮ್ಮ ರಾಮಕೃಷ್ಣನೂ ಅಲ್ಲ ನಮ್ಮ ರಾಮಕೃಷ್ಣನೂ ಅಲ್ಲ. .. ಇಲ್ಲಿ ಕೇಳಿ ಸರ್. ನಾನು ಹೇಳಿದ್ದು, ಉದಾಹರಣೆಗಳು ಸಾಕಷ್ಟು ಇವೆ. But should it become the example for all ? No, they cannot become example. They can become only incidents.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೇ, Difficulty ಏನೆಂದರೆ ಮಾನ್ಯ ಪ್ರಕಾಶ್‌ರವರು ಬೇರೆ ರೀತಿ conclude ಮಾಡಬಹುದೆಂದು ನಾನು ಆಲೋಚನೆ ಮಾಡಿಕೊಂಡು proceedings, ಈ disqualification Speaker ಒಲವು ಇವೆಲ್ಲದರ ಬಗ್ಗೆ prepare ಆಗಿ ಬಂದಿದ್ದೆ. ಅವರು he pre-empted the whole thing and I have become briefless, now My books and other things which I have brought, is of no use. does't come to my rescue. He said he is my leader. ಎಂದ ಮೇಲೆ ಹಸು ಕೂಗಲಿಲ್ಲ, ಆಕಳು ಕೂಗಲಿಲ್ಲ ಎಂದ ಹಾಗೆ ಮೂರನೆಯವನು ಕೂಗಿದರೆ ಅವರಲ್ಲಿ ಅರ್ಥ

ಏನಿದೆ? They have accepted that we have no case. So, ನಾನು ಮಾತನಾಡಬೇಕಲ್ಲಾ, ಅದಕ್ಕೆ ಬೇರೆ ಕೆಲವು ವಿಚಾರಗಳನ್ನು ಮಾತನಾಡಿದೆ. ಮಾನ್ಯ ಕುಮಾರಸ್ವಾಮಿಯುವರು ಸಭಾನಾಯಕರಾಗಿದ್ದಾರೆ – I am really happy. ಅವರು ಮೊದಲು ಮಾತನಾಡಲು ಪ್ರಾರಂಭ ಮಾಡಿದಾಗ ಹಿಂದಿನ ಎಲ್ಲಾ ಮುಖ್ಯಮಂತ್ರಿಗಳನ್ನು ಇಲ್ಲಿ ನೆನಪು ಮಾಡಿಕೊಂಡರು. ಸದನದಲ್ಲಿ ಇರತಕ್ಕಂಥವರಿಗೂ ಕೂಡ ತಮ್ಮ ಗೌರವ ಸೂಚಿಸಿದರು. On a note of humility, he wants to do good work, ಎನ್ನುವ ಮಾತನ್ನು ಹೇಳಿದರು. ನನಗೇನೂ prejudices ಇಲ್ಲ. Personal animosity ಏನಿಲ್ಲ. If he can do well, we will all appreciate. ಆದರೆ ನಾನು ಒಂದು ಮಾತು ಹೇಳುತ್ತೇನೆ. ಅದೇನೆಂದರೆ, ಇಡೀ ಭಾರತದ ಇತಿಹಾಸ ಬೇರೆ, ಕರ್ನಾಟಕದ ಇತಿಹಾಸ ಬೇರೆ. ಸಂಸ್ಕೃತಿ, ಭಾಷೆ, ನಡೆ, ನಡವಳಿಕೆ, ನಮಗೆ ನಮ್ಮದೇ ಆದಂಥ ಒಂದು heritage ಇದೆ. ನಾವು ಸಣ್ಣವರಾಗಿದ್ದಾಗ school, college ಗಳಲ್ಲಿ ಇದ್ದಾಗ ಆವಾಗ ಶ್ರೀಮಾನ್ ನಿಜಲಿಂಗಪ್ಪನವರನ್ನು ಯಾರು ನೋಡಿದರೂ ಟೀಕೆ ಮಾಡುತ್ತಿದ್ದರು. ಕಂಡಕಂಡವರೆಲ್ಲಾ ಪರಿಚಯ ಇದ್ದವರು, ಇಲ್ಲದಿದ್ದವರು, ನೋಡಿರುವವರು, ಅವರು ಆಗಲೇ ೨೦ ಮನೆ ಕಟ್ಟಿದ್ದಾರಂತೆ, ಇಲ್ಲ 50 ಮನೆ ಕಟ್ಟಿದ್ದಾರಂತೆ, ಅವರ ನೆಂಟರು ಹಾಗಂತೆ ಹೀಗಂತೆ ಎಂದು. ಇನ್ನು ಅವರಿಗಿಂತ ಹೆಚ್ಚು ದುರಾಡಳಿತ ನಡೆಸುವವರು ಬರುವುದೇ ಇಲ್ಲ ಎನ್ನುವ ತರಹ ಮಾತನಾಡುತ್ತಿದ್ದರು. ಆದರೆ, ನಾವು ರಾಜಕಾರಣಕ್ಕೆ ಬಂದ ಮೇಲೆ ಇತ್ತೀಚೆಗೆ ಅವರನ್ನು ಹತ್ತಿರದಿಂದ ನೋಡಿ ಅವರ ಕಡೆಯ ದಿನಗಳನ್ನು ನೋಡಿದಾಗ, ಎಂಥ ನೀಚ ಸಮಾಜ ಇದು ಎಂದು ಅನಿಸುತ್ತಿದೆ. ಅಂಥ ಮೃದು ಸ್ವಭಾವದವರನ್ನು, ಪ್ರಾಮಾಣಿಕ ವ್ಯಕ್ತಿಯನ್ನೂ ಕೂಡ ಅನುಮಾನಿಸತಕ್ಕಂಥ ದಾರಿದ್ರ್ಯನೂ ಹೌದು ನಮ್ಮ ಜನರಿಗೆ. ಅತ್ಯಂತ ಉಗ್ರವಾದ ಭಾಷೆಯನ್ನು ಈ assembly ಯಲ್ಲಿ ಬಳಸಿರತಕ್ಕಂಥವರು ಬಹುಶಃ ಇದುವರೆಗೆ ಅಂದರೆ ಶ್ರೀಮಾನ್ ಗೋಪಾಲಗೌಡರು. ಆದರೆ ಆತನಂಥ moderate ಇನ್ನೊಬ್ಬರು ಇಲ್ಲ. The extremism, according to our estimation, is very very moderate in the normal course. ಪ್ರೊ. ನಂಜುಂಡಸ್ವಾಮಿಯವರು ಇದೇ ಸದನದಲ್ಲಿ ಕೆಲವು ವೇಳೆಯಲ್ಲಿ ಅವರು ಮಾಡಿರತಕ್ಕಂಥ ಭಾಷಣಗಳು, ಉಪಯೋಗ ಮಾಡಿರತಕ್ಕಂಥ ಪದಗಳು ಅತ್ಯಂತ ಕಠಿಣ ಮತ್ತು ಗಾಂಭೀರ್ಯವಾದದ್ದು. ಆಗ ನಾನು ಇರಲಿಲ್ಲ ಅದು ನನ್ನ ದೌರ್ಭಾಗ್ಯ. ಆದರೆ when compared to the other States, it is very very moderate. ಅಂದರೆ ಅತ್ಯಂತ ಕಠಿಣ ಮಾತುಗಳನ್ನು ಭಾವನೆಗಳನ್ನು, ತೀವ್ರತರವಾದಂಥ ಅಭಿಪ್ರಾಯಗಳನ್ನು ಕೂಡ ಮಧುರವಾಗಿ ಹೇಳತಕ್ಕಂತ ಕಲೆಯನ್ನು ಹೊಂದಿರತಕ್ಕಂಥದ್ದು ನಮಗೆ ರಕ್ತಗತವಾಗಿ ಬಂದುಬಿಟ್ಟಿದೆ. ಈ ಸದನದಲ್ಲಿ ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುತ್ತಿದ್ದರು. ಆ ನೋವಿನ ಅಂತರಾಳ ಆ ಮನುಷ್ಯ ಮಾತನಾಡುವಾಗ ಅದು ಕೆಲವರಿಗೆ ಮಾತ್ರ ಅರ್ಥವಾಗುತ್ತಿತ್ತು. ಕೆಲವರಿಗೆ it would go above their heads, ಅದೇ ರೀತಿ ಕಾರ್ಮಿಕ ಕ್ಷೇತ್ರದಿಂದ ಬಂದಿದ್ದಂಥ ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು, ಈ ರಾಜ್ಯಕ್ಕೆ ತನ್ನದೆ ಆದಂಥ ಇತಿಹಾಸವಿದೆ. ಎಲ್ಲಾ ಮುಖ್ಯಮಂತ್ರಿಗಳು, ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದವರೆಗೆ ಹಳೆ ಮೈಸೂರು ಇತ್ತು. ಆವಾಗ ನಾಗಯ್ಯರೆಡ್ಡಿ ಅವರು ಇವರು ಸ್ವಲ್ಪ ಒರಟಾಗಿ ಮಾತನಾಡುತ್ತಿದ್ದರು. ಎಂದು ನಾವು ಕೇಳಿದ್ದೇವೆ. ನಾವೇನೂ ನೋಡಿರಲಿಲ್ಲ. ಅದರ ನಂತರ ಸಮಗ್ರ ಕರ್ನಾಟಕ ಆದಮೇಲ 'integration ಆದ ಮೇಲೆ

ಬಂದಂಥ ವಾತಾವರಣ ಏನಿತ್ತು let us place before us on record, ಶ್ರೀಮಾನ್ ಗುಂಡೂರಾಯರು ನಮ್ಮ ಸಹಪಾಠಿಯಾಗಿದ್ದರು. ಅವರು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ, ನಾನು ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೆ. ಅವರಿಗೂ ನಮಗೂ ಒಂದು ಹಂತದಲ್ಲಿ ಸ್ವಲ್ಪ ವ್ಯತ್ಯಾಸ ಬಂತು. ಅಭಿಪ್ರಾಯ ಬೇರೆ ಬೇರೆ ಬಂತು. ಮಾನ್ಯ ಕುಮಾರಸ್ವಾಮಿಯವರಂತೆ ಆವತ್ತಿನ ಸಂದರ್ಭದಲ್ಲಿ ಅದೃಷ್ಟದಿಂದ ಅವರೂ ಮುಖ್ಯಮಂತ್ರಿಗಳಾದರು. One of the best persons, as an individual, as a friend. ಆದರೆ, ಸಹವಾಸ ದೋಷನೋ, ಸ್ನೇಹಿತರೋ, ಮತ್ತೊಬ್ಬರೋ ಅವರಿಗೆ proper information ಕೊಡಲಿಲ್ಲ. ಸ್ವಂತ ಆಡಳಿತ ಎಲ್ಲೋ ಒಂದು ಕಡೆಗೆ ನಾಗರೀಕತೆಯ ಮಿತಿಯನ್ನು ಥಾಟಿದಾಗ People did not forgive him ನಾನು ಅವರನ್ನು ಟೀಕೆ ಮಾಡುತ್ತಿಲ್ಲ. People of Karnataka are extremely sensitive. ಮಾನ್ಯ ಯಡಿಯೂರಪ್ಪನವರೇ, ನೀವು ಮತ್ತು ಶ್ರೀ ಕುಮಾರಸ್ವಾಮಿಯವರು ಇವತ್ತು ಈ ರಾಜ್ಯದ ಹೊಣೆಗಾರಿಕೆಯನ್ನು ಹೊತ್ತುಕೊಂಡು ಹೊರಟಿದ್ದೀರಿ. ನಿಮ್ಮ ಕಾರ್ಯಕರ್ತರುಗಳು ನಿಮ್ಮ ಆಲೋಚನೆಗೆ ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಅವರ ಸ್ನೇಹ ಹೇಗಿತ್ತೋ ನಿಮ್ಮ ಅವರ ಸ್ನೇಹ ಕೂಡ ಮುಂದಕ್ಕೆ ಹಾಗೆಯೇ ಇರುವುದು. ಅವರ ಕಾರ್ಯಕರ್ತರು ನಿಮ್ಮ ಕಾರ್ಯಕರ್ತರು ಒಂದೇ ರೀತಿಯಲ್ಲಿ ಆಲೋಚನೆ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಬದಲು ನೀವು ಇದ್ದೀರಿ ಎನ್ನುವುದನ್ನು ಬಿಟ್ಟರೆ ಪರಿಸ್ಥಿತಿಯಲ್ಲಿ ಏನೂ ದೊಡ್ಡ ವ್ಯತ್ಯಾಸವಾಗುವುದಿಲ್ಲ. ನಮ್ಮಲ್ಲಿ ಏನಾಗಿತ್ತು ಎಂದರೆ, ಎಂಎಲ್ಎ ಗಳು ಆಗಿದ್ದವರು ದೊಡ್ಡವರು ಬಹಳ ಜನ ಇದ್ದರು. ಪ್ರಬಲಸ್ತರು ಇದ್ದರು. ಅವರು ಬಂದು ಮುಖ್ಯಮಂತ್ರಿಯವರನ್ನು ಕಾಡುವುದು, ಗೆದ್ದಿರುವವರು ಒಂದು ಕಡೆಯಲ್ಲಿ ಬರುತ್ತಿದ್ದರು, ಸೋತಿರುವವರು ಒಂದು ಕಡೆಯಿಂದ ಬರುತ್ತಿದ್ದರು, ಪಕ್ಷದ ನಿರ್ಬಂಧ ಒಂದು ಕಡೆಗೆ. Partners ನ ಮುಲಾಜು ಒಂದು ಕಡೆಗೆ, yes, ಇಂಥ ಸಂಕಷ್ಟಗಳ ಮಧ್ಯೆ ಅವರು ಸ್ವಲ್ಪ ನಲುಗಿದ್ದಾರೆ ನಿಜ. ಇದು ಕಡಿಮೆ ಆಗಬಹುದೇ ಹೊರತು ಪೂರ್ಣ ನಿವಾರಣೆ ಏನೂ ನಿಮಗೆ ಆಗುವುದಿಲ್ಲ. ನನಗೆ ಯಾವ ideology ಯೂ ಇಲ್ಲ ಎಂದು ಕುಮಾರಸ್ವಾಮಿಯವರು ಹೇಳಿದ್ದಾರೆ. That is the most dangerous thing. You are a good man. ನಿಮಗೆ ನಿಮ್ಮಲ್ಲಿ ವಿಶ್ವಾಸವಿದೆ. ನಿಜ, ಒಪ್ಪುತ್ತೇವೆ ನಾವು. You can be taken for ride. ಒಳ್ಳೆಯದನ್ನು ಮಾಡಬೇಕೆನ್ನುವ ಮೂಲಭೂತವಾದ ಬದ್ಧತೆ ನಿಮ್ಮಲ್ಲಿರತಕ್ಕಂಥ ದೌರ್ಬಲ್ಯವನ್ನು ಬಳಸಿಕೊಂಡೇ ಅವಕಾಶವಾದಿಗಳು ನಿಮ್ಮನ್ನು ತಪ್ಪು ದಾರಿಗೆ ಎಳೆಯಬಹುದು. ಸೈದ್ಧಾಂತಿಕವಾಗಿ ಯಾವ ಹಾದಿಯಲ್ಲಿ ಈ ರಾಜ್ಯ ನಡೆದುಕೊಂಡು ಹೋಗುತ್ತಿದೆ ಆ ಹಾದಿಯನ್ನು ತಪ್ಪಿಸಬಹುದು. ನಿಮ್ಮ ತಂದೆಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದಾಗ ಮಾನ್ಯ ಸಿಂಧ್ಯಾರವರು Home Minister ಆಗಿದ್ದರು. ನಾನು ಅಲ್ಲಿ ಕುಳಿತಿದ್ದೆ. ಪ್ರಕಾಶ್ ಸಾಹೇಬರೇ, ತಾವು ಇದ್ದಿರಿ. ಹುಬ್ಬಳ್ಳಿಯ situation ಅನ್ನು ಹೇಗೆ handle ಮಾಡಿದೆವೆಂದು ನೆನಪು ಮಾಡಿಕೊಳ್ಳಿ. ಮಾನ್ಯ ಸಿ.ಟಿ. ರವಿಯವರು ನನಗೆ ಕಾಣುತ್ತಿರುತ್ತಾರೆ. ಜಿಂಕೆ ತರಹ ಓಡಾಡುತ್ತಿರುತ್ತಾರೆ. ದತ್ತಪೀಠ ಬರುತ್ತದೆ ಮತ್ತೆ ರವಿಯವರು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ರವಿಯವರನ್ನು ನೀವು ಮುಟ್ಟುವುದಕ್ಕೆ ಆಗುವುದಿಲ್ಲ. ರವಿಯವರನ್ನು ಮುಟ್ಟುವುದಕ್ಕೆ ಹೋದರೆ Governor ಹತ್ತಿರ ಹೋಗುತ್ತಾರೆ. ಮುಟ್ಟದೆ ಹೋದರೆ ಜನ ಬಿಟ್ಟು ಹೋಗುತ್ತಾರೆ. ನಿಜವಾಗಲೂ ಕೂಡ ನಮಗಿಂತಲೂ ಸಂತೋಷ

ಪಡತಕ್ಕಂಥವರು ಯಾರೂ ಇಲ್ಲ. ನಾವು ಯಾರಿಗೆ ನಂಬಬೇಕು ಮಾನ್ಯ ಯಡಿಯೂರಪ್ಪನವರು? ನಿಮ್ಮನ್ನೇ ನಾವು ನಂಬಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಒಂದ್ನಿಮಿಷ ಸರ್. ನಾನು ಇಷ್ಟನ್ನು ಮಾತ್ರ ಈ ಸದನದಲ್ಲಿ ಭರವಸೆಯನ್ನು ಕೊಡುತ್ತೇನೆ. ನಮ್ಮ ತತ್ವ, ನೀತಿ, ಸಿದ್ಧಾಂತಗಳು ಅದಕ್ಕೆ ನಾವು ಬದ್ಧರಾಗಿದ್ದರೂ ಕೂಡ ಯಾವ ರೀತಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ೨೨ ಪಕ್ಷಗಳನ್ನು ಕಟ್ಟಿಕೊಂಡು ಒಂದು common minimum programme ಅನ್ನು ಇಟ್ಟುಕೊಂಡು ಶ್ರೀ ಜಾರ್ಜ್ ಫರ್ನಾಂಡೀಸ್ ಅಂಥವರನ್ನು ಪಕ್ಕದಲ್ಲಿ ಇಟ್ಟುಕೊಂಡು ದೇಶದ ಪ್ರಗತಿಗಾಗಿ ಒಂದು ದೊಡ್ಡ ಸಾಧನೆ ಆಯಿತು. ಇಡೀ ಜಗತ್ತೇ ಮೆಚ್ಚುವಂಥ ಒಂದು ಆಡಳಿತವನ್ನು ಕೊಟ್ಟರು. ಆ ರೀತಿ ಕರ್ನಾಟಕ ರಾಜ್ಯದಲ್ಲಿ ಮಾದರಿ ಎಂದರೆ ಶ್ರೀ ಕುಮಾರಸ್ವಾಮಿ – ಯಡಿಯೂರಪ್ಪನವರ ಬಿ.ಜೆ.ಪಿ.– ಜೆ.ಡಿ.(ಎಸ್) ನಂಥ ಮಾದರಿ ಸರ್ಕಾರ ಕೊಟ್ಟಿದ್ದಾರೆ ಹೋಗಿ ನೋಡಿಕೊಂಡು ಬಂದಿದ್ದೇವೆಂದು ಬೇರೆ ರಾಜ್ಯದಲ್ಲಿ ಹೇಳುವ ರೀತಿಯಲ್ಲಿ ನಾವು ಆಡಳಿತ ಮಾಡಿ ತೋರಿಸುತ್ತೇವೆ. ಪ್ರಗತಿ ಡೆವಲಪ್‌ಮೆಂಟ್ ಇದಕ್ಕೇ ನಮ್ಮ ಆದ್ಯತೆ ಕೊಡುತ್ತೇವೆ. ಮಾನ್ಯ ಕುಮಾರಸ್ವಾಮಿಯವರನ್ನು ಇಕ್ಕಟ್ಟಿಗೆ ಸಿಲುಕಲು ಬಿಡುವುದಿಲ್ಲ. ಕಾರ್ಯಕ್ರಮಗಳನ್ನು ಯೋಜನೆ ಮಾಡಿ, ಆ ಕಾರ್ಯಕ್ರಮಗಳನ್ನು ಅನುಷ್ಠಾನ ಕೊಡುವುದರ ಕಡೆ ವಿಶೇಷ ಗಮನವನ್ನು ಕೊಡುತ್ತೇವೆಯೇ ಹೊರತು ಬೇರೆಯದಕ್ಕೆ ಆಸ್ಪದ ಕೊಡುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ.

ಛೇರ್ಮನ್ : ಮಾನ್ಯ ಅಭಯ ಚಂದ್ರರವರೆ ಪ್ಲೀಸ್ ಸಿಟ್‌ಡೌನ್ .

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸಾರ್, ನಮ್ಮ ನಮ್ಮದೇ ಆದ ಕಾರಣಗಳಿಗೆ ಬೇರೆ ಬೇರೆ ಪಕ್ಷ, ಪಂಗಡ, ಚುನಾವಣೆಗಳಿಗೆ ಜನರ ಮಧ್ಯೆ ಹೋಗಬೇಕು. ಅಖೈರಾಗಿ ಜನರ ಕಲ್ಯಾಣ, ಜನರ ಕ್ಷೇಮ ಬಿಟ್ಟು ನಮಗೆ ಏನು ಇರುತ್ತದೆ ಹೇಳಿ ? ಆದರೆ ನಾವು ಮಾಡುತ್ತೇವೆನ್ನುವ ಮಾತನ್ನು ನೀವು ಹೇಳಿದರೆ, ಯಾವ ಕಾರಣವೂ ಇಲ್ಲದೆ, ಅನುಮಾನ ಪಡುವುದಕ್ಕೆ, ನಾವು ನಿಮ್ಮನ್ನು ನೇರ ನಂಬುವುದಕ್ಕೆ ತಯಾರಾಗಿದ್ದೇವೆ. ನಿಮಗೆ ಸಹಕಾರ ಕೊಡಲಿಕ್ಕೂ ನಾವು ತಯಾರಾಗಿದ್ದೇವೆ. You should start on a note of confidence, not on a note of disbelief. ಆದರೆ, seeing is believing. ನೋಡಬೇಕಾಗುತ್ತದೆ. ನೀವು ಹೇಗೆ ಮಾಡುತ್ತೀರಿ ಎನ್ನತಕ್ಕಂಥದ್ದನ್ನು ನಾವು ನೋಡಬೇಕಾಗುತ್ತದೆ. ಐಡಿಯಾಲಜಿ ಅನ್ನತಕ್ಕಂಥದ್ದು ಇಲ್ಲದೇ ಹೋದರೆ it is not a party. It is a shopping centre. ಒಬ್ಬ ಐಡಿಯಾಲಜಿ ಇಲ್ಲದೇ ಇರತಕ್ಕಂಥ ಪೊಲಿಟಿಷಿಯನ್‌ಗೆ ತಾನೊಂದು ಐಡಿಯಾಲಜಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ನಂಬಬೇಕಾಗುತ್ತದೆ. ಒಂದು ಪಾರ್ಟಿಗೂ ಕೂಡ ತನ್ನ ಐಡಿಯಾಲಜಿಕಲ್ ಸ್ಟ್ಯಾಂಡ್ ಏನು ಅಂತ ಪ್ರತಿ ವಿಚಾರದ ಮೇಲೆ ಕೂಡ ಹೇಳಬೇಕಾಗುತ್ತದೆ. ಅಮೆರಿಕಾದವರು ಸೆವೆನ್ಥ್ ಫ್ಲೀಟ್ ಅನ್ನು ಇಂಡಿಯನ್ ಓಷನ್‌ಗೆ ಕಳುಹಿಸುತ್ತಿದ್ದಾರೆಂದರೆ, Mrs. Gandhi would say, no; I will stall it ; I will not permit it, ಅಂತ ಹೇಳಿದ್ದರು. ಚಿಲಿಯಲ್ಲಿ ALLENDE ಗೆ ಕೊಲೆಯಾಗುತ್ತದೆ ಅಂದರೆ, ಇಲ್ಲಿ ನಾವೆಲ್ಲಾ ಪ್ರೊಟೆಸ್ಟ್ ಮಾಡಿದೆವು. 'Fescist force are gaining upper hand, this should not happen'.ಅಂತ. ಒಂದು ರಾಜಕೀಯ ಪಕ್ಷವಾಗಿ ನಾವು ಪ್ರಪಂಚದ ಎಲ್ಲಾ ಆಗುಹೋಗುಗಳಿಗೂ ಕೂಡ ಸ್ಪಂದಿಸತಕ್ಕಂಥವರಾಗಿರುತ್ತೇವೆ. ಸಿದ್ಧಾಂತದ ವಿಚಾರದಲ್ಲಿ ನಮಗೆ

ಸ್ಪಷ್ಟತೆ, ಬದ್ಧತೆ, ಇಲ್ಲದೇ ಹೋದರೆ ನಾವು ರಿಯಾಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಮಟ್ಟಿಗೆ ನಿಮ್ಮನ್ನು ವಿಶ್ವಾಸ ಮಾಡತಕ್ಕಂಥ ಕೆಲಸ ಮಾಡಿದರೂ ಕೂಡ ವಿರೋಧ ಪಕ್ಷದಲ್ಲಿ ನಾವಿದ್ದೇವೆ. ನೀವು ತರಾತುರಿ ಅರ್ಜೆಂಟ್ ಆಗಿ ಒಂದಾಗಿರುವುದು ನೋಡಿದರೆ ನಿಮ್ಮ ಟೂರ್, ನಿಮ್ಮ ಎಕ್ಸ್‌ಕರ್ಷನ್, ನಿಮ್ಮ ಹೋಮ, ಹವನ ಇವುಗಳನ್ನೆಲ್ಲಾ ನೋಡಿದರೆ ಯಾವುದೇ ಒಂದು ಸಿದ್ಧಾಂತ ನಿಮ್ಮನ್ನು ಒಟ್ಟಿಗೆ ತಂದಿಲ್ಲ. ಒಂದು ಕಾರ್ಯಕ್ರಮ ನಿಮ್ಮನ್ನು ಒಟ್ಟಿಗೆ ತಂದಿಲ್ಲ. ಜನರ ಬದುಕು ಆತಂಕದಲ್ಲಿದೆ. ರಾಜ್ಯದ ಭವಿಷ್ಯ ಆತಂಕದಲ್ಲಿದೆ. ಈ ಆತಂಕದ ಮಡುವಿನಲ್ಲಿ ನಾವು ಇವತ್ತು ಈಜುತ್ತಿದ್ದೇವೆ. ನಮ್ಮ ಹತ್ತಿರ ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ , ನಮ್ಮ ಬಳಿಯಲ್ಲಿರತಕ್ಕಂಥ ಸಂಪೂರ್ಣ ಶಕ್ತಿಯನ್ನು ವಿನಿಯೋಗ ಮಾಡಿ, ಈ ವಿಶ್ವಾಸ ಮತದ ನಿರ್ಣಯವನ್ನು ನೀವೇನು ಮಂಡಿಸಿದ್ದೀರಿ, ಇದನ್ನು ವಿರೋಧ ಮಾಡುತ್ತಾ ನಮ್ಮ ಹೋರಾಟ ನೀವು ಅನೇಕ ಸಲ ಇಲ್ಲಿ ಕುಳಿತು ಹೇಳಿದಂತೆ, ಮಾನ್ಯ ಯಡಿಯೂರಪ್ಪನವರೆ ಇಲ್ಲಿಗೆ ಮುಕ್ತಾಯವಾಗುವುದಿಲ್ಲ. ನಾವು ವಂಚನೆಗೆ ಒಳಗಾಗಿದ್ದೇವೆ, ಅಧಿಕಾರ ಭ್ರಷ್ಟರಾಗಿದ್ದೇವೆ. ಆದರೆ, ನಮ್ಮನ್ನು ನಂಬಿದವರನ್ನು ಕೈಬಿಡುವುದಿಲ್ಲ. ಅವರ ಜೊತೆಗೆ ನಾವು ನಿಲ್ಲುತ್ತೇವೆ. ಅಧಿಕಾರದ ದುರುಪಯೋಗ ಆದ ವೇಳೆಗೆ, ಅಧಿಕಾರದ ಅಮಲಿನಿಂದ ಏನಾದರೂ ದುರ್ವರ್ತನೆ ಆದರೆ, ಯಾವುದೇ ತ್ಯಾಗಕ್ಕೂ ನಾವು ಸಿದ್ಧರಾಗಿರುತ್ತೇವೆ, ಬಹಳ ಶ್ರಮದಿಂದ ಕಷ್ಟಪಟ್ಟು ಸಂಪಾದನೆ ಮಾಡಿರತಕ್ಕಂಥ ಮೌಲ್ಯಗಳನ್ನು ಉಳಿಸಿಕೊಂಡು ಹೋಗಲಿಕ್ಕೆ ಯಾವ ತ್ಯಾಗಕ್ಕೂ ನಾವು ಸಿದ್ಧರಾಗುತ್ತೇವೆ. ಸಹಕಾರಕ್ಕೆ ಸಿದ್ಧರಾಗಿರುತ್ತೇವೆ, ಹೋರಾಟಕ್ಕೂ ಸಿದ್ಧರಾಗಿರುತ್ತೇವೆ. ಈ ಸದನದೊಳಗಿರತಕ್ಕಂಥ ಅಸಂಖ್ಯಾತ ಜನರು ಯಾರು ಇವತ್ತು ಆತಂಕದಲ್ಲಿದ್ದಾರೆ, ಅವರಿಗೆ ನಾವು ಇಷ್ಟೇ ಹೇಳುತ್ತೇವೆ, ತರಾಚಿ ಓರ್ಸೆ ನ ಗಭರಾಯಿಯೆ ದಿಲ್ ಜಲಾಂಗ್ ಹಂ ರೋಷನಿ ಕೆ ಲಿಯೆ. ನಮ್ಮ ಹೃದಯವನ್ನು ಸುಟ್ಟು ಬೆಳಕು ನಿಮಗೆ ಕೊಡುತ್ತೇವೆ. ಕತ್ತಲೆ ಇದೆ ಎಂದು ನೀವು ಗಾಬರಿ ಪಡಬೇಕಾಗಿಲ್ಲ ಅನ್ನತಕ್ಕಂಥ ಧೈರ್ಯವನ್ನು ಅವರಿಗೆ ಹೇಳಿ ಈ ಸದನದಲ್ಲಿ ನಾಲ್ಕು ಮಾತುಗಳನ್ನು ಆಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಛೇರ್ಮನ್ : ನಾನು ಈಗಾಗಲೇ ಮಾನ್ಯ ಸಿದ್ದರಾಮಯ್ಯನವರನ್ನು ಕರೆದುಬಿಟ್ಟಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ :- ಮಾನ್ಯ ಛೇರ್ಮನ್‌ರವರೆ, ನಾನು ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ :- ನಾನು ಕೊನೆಗೆ ಮಾತನಾಡುತ್ತೇನೆ . ಅವರು ಮಾತನಾಡಿದ ನಂತರ ಮಾತನಾಡುತ್ತೇನೆ.

ಛೇರ್ಮನ್ :- ಇಲ್ಲ, ನೀವು ಮಾತನಾಡುವುದಿಲ್ಲವೆಂದರೆ ನಾನು ಮಾನ್ಯ ರಾಜೇಂದ್ರನ್‌ರವರನ್ನು ಕರೆಯುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನು ಮಾತನಾಡುತ್ತೇನೆ.

ಛೇರ್ಮನ್ : ಅಲ್ಲ, ನೀವೀಗ ಮಾತನಾಡುವುದಿಲ್ಲವೆಂದರೆ ಮಾನ್ಯ ರಾಜೇಂದ್ರನ್‌ರವರನ್ನು ಕರೆಯುತ್ತೇನೆ.

**ಶ್ರೀ ಎಸ್. ರಾಜೇಂದ್ರನ್ : (ಕೆ.ಜಿ.ಎಫ್)** ಸನ್ಮಾನ್ಯ ಛೇರ್ಮನ್‌ರವರೆ, ಒಂದೆರಡು ನಿಮಿಷ ತಮಾಷೆಯಾಗಿ ಮಾತನಾಡಬೇಕು. ಏನೆಂದರೆ, ಈ ಕಡೆ ಇರುವವರ ಪರ ಮಾತನಾಡಿದರೆ ಚಪ್ಪಾಳೆ ಹೊಡೆಯುತ್ತಾರೆ. ಇವರು ನಮ್ಮನ್ನು ಬೈಯುತ್ತಾರೆ. ಈ ಕಡೆ ಮಾತನಾಡಿದರೆ ಅವರು ನಮ್ಮ ಮೇಲೆ ಕೋಪ ಮಾಡಿಕೊಳ್ಳುತ್ತಾರೆ. ಏನು ನಡೆಯುತ್ತಿದೆ ಸಭೆಯಲ್ಲಿ ಅಂದರೆ, ನಾನು

ಮಾತನಾಡುವುದೆಲ್ಲಾ ಸತ್ಯಾಂಶವೇ, ಎಲ್ಲ ದೇವರ ಮಾತುಗಳನ್ನೇ, ಎಲ್ಲಾ ಇದೇ ಹೇಳುವುದು. ನಿಜವಾಗಲೂ ಹೃದಯದಿಂದ ಹೇಳಬೇಕು. ಸಬ್ಜೆಕ್ಟ್ ಏನೀಗ ? ಶ್ರೀಮಾನ್ ಕುಮಾರಸ್ವಾಮಿಯವರು ಚೀಫ್ ಮಿನಿಸ್ಟರ್ ಆಗಿ ಕುಳಿತಿದ್ದಾರೆ. ಅದನ್ನು ಎಲ್ಲರೂ ಅಕ್ಸೆಪ್ಟ್ ಮಾಡಬೇಕೆ ? ಬೇಡವೆ ? ಅಷ್ಟೆ. ಇದು ಎರಡು ನಿಮಿಷದ ಕೆಲಸ ಯೆಸ್ ಎನ್ನುವವರು ಯೆಸ್ ಎನ್ನಬಹುದು, ನೋ ಅನ್ನುವವರು ನೋ ಅನ್ನಬಹುದು ಅಷ್ಟೆ. ಬೇಕಾದಷ್ಟು ಚರ್ಚೆಗಳು ಬಂದರೆ, ಬಡವರ ಬಗ್ಗೆ. ಅದರ ನೆಕ್ಸ್ಟ್ ಈಗ ನಾವು ಮಾತನಾಡಿರಬಹುದು. ಇಲ್ಲ ನಾಳೆ ಶುರು ಮಾಡಿರಬಹುದು. ಈಗ ನಾವೇನು ಮಾತನಾಡುತ್ತೇವೆಂದರೆ ಬರೀ ವೇದಾಂತ, ಸಿದ್ಧಾಂತ, ಯೆಸ್ ಯಾವುದರ ಬಗ್ಗೆ ಚರ್ಚೆಯಾಗುತ್ತಿದೆಯೆಂದು ಗೊತ್ತಿಲ್ಲ. ಈ ರೀತಿ ಮಾತನಾಡಿದರೆ ಅದು ವೇದಾಂತ, ಯೆಸ್ ಅದೇ ವೇದಾಂತ. ಇಟೀಸ್ ದಟ್, ಯಾವುದು ಗೊತ್ತಿಲ್ಲ. ಯಾವುದರ ಬಗ್ಗೆ ನಾವು ಮಾತನಾಡುತ್ತಿದ್ದೇವೆ ಸ್ವರ್ಗ ಅದು ಇದು ನಾವು ಯಾರೂ ನೋಡಿಲ್ಲ. ಅದರ ಬಗ್ಗೆ ಮಾತನಾಡುವುದೆಲ್ಲಾ ವೇದಾಂತ. ಕಣ್ಣ ಮುಂದೆ ಏನು ನಡೆಯುತ್ತಿದೆ ಏನು ಗೊತ್ತಿದೆ ಅದು ಸಿದ್ಧಾಂತ. ಈಗ ಯಾವುದರಲ್ಲಿ ಸಿದ್ಧಾಂತ ಈ ಕಡೆಯಾ ? ಆ ಕಡೆಯಾ ? ವೇದಾಂತ ಆ ಕಡೆಯಾ ? ಈ ಕಡೆಯಾ ? ತಾವು ನಮಗೆ ಜಡ್ಜ್‌ಮೆಂಟ್ ಕೊಡಬೇಕು. ತಾವು ಜಡ್ಜ್‌ಮೆಂಟ್ ಕೊಡಿ ಸಾಹೇಬರೆ ಅಂದರೆ ತಮಗೆ ಕೋಪ ಬರುತ್ತದೆ. You are questioning the chair ಎಂದು ಹೇಳುತ್ತೀರಿ. ಯಾವುದರ ಬಗ್ಗೆ ಮಾತನಾಡುವುದಕ್ಕಾಗುತ್ತದೆ ? ತಾವು ನೋಡಿರಬಹುದು. ದೊಡ್ಡ ಲಾಕ್ ಅಂಡ್ ಕೀ. ಒಂದು ಬೀಗ, ಇನ್ನೊಂದು ಬೀಗದ ಕೈ ಕೆಲವು ಟೈಂನಲ್ಲಿ ಲಾಕ್ ಮಾಡಿ ನೋಡಿದ್ದೀರಾ ? ಸರಿಯಾಗಿ ಲಾಕ್ ಆಗುವುದಿಲ್ಲ. ಸುಮ್ಮನೆ ಹಾಗೆ ಪ್ರೆಸ್ ಆಗಿರುತ್ತದೆ. ಯಾರಾದರೂ ಅದನ್ನು ತೆಗೆದರೆ, ಓಪನ್ ಆಗಿಬಿಡುತ್ತದೆ. ಅದು ಲಾಕ್ ಅಂಡ್ ಕೀನೇ. ಕರೆಕ್ಟ್ ಅಗಿ ಲಾಕ್ ಮಾಡಿದರೆ ಏನೇನೋ ಫೋರ್ಸ್‌ಮಾಡಿ ಎತ್ತಿದರೂ ಓಪನ್ ಆಗುವುದಿಲ್ಲ. ಅದೂ ಲಾಕ್ ಅಂಡ್ ಕೀನೇ. ಮುಂದೆ ಇರುವುದು ಯಾವುದು? ಈಗ ಇರುವುದು ಯಾವುದು ? ಕರೆಕ್ಟ್ ಆಗಿ ಕೀಲಾಕ್‌ಗೆ ಸಿಕ್ಕಿಹಾಕಿಕೊಂಡರೆ ಅದು ಒಳ್ಳೆ ಲಾಕ್. ಡೂಪ್ಲಿಕೇಟ್ ಸಿಕ್ಕಿದರೆ ಅದು ಡೂಪ್ಲಿಕೇಟ್. ಈಗ ಬಿಜೆಪಿ ಯವರ ಬಗ್ಗೆ ಚರ್ಚೆ ಏನೆಂದರೆ, ಜಾತಿವಾದಿಗಳು ಮತವಾದಿಗಳು, ದೇವರಿಗೆ ನಮಸ್ಕಾರ ಮಾಡುವವರು, ದೇವರ ಬಗ್ಗೆ ಹೇಳಿಕೊಂಡಿರುವವರು; ಇದು ಸತ್ಯಾಂಶ. ನಾವು ಯಾರೂ ದೇವರು ಬಂದರೂ ನೋಡುವುದಿಲ್ಲ. ದೇವರು ಎದುರಿಗೆ ಬಂದರೆ ನಾವು ಎಲ್ಲಾ ಈ ಕಡೆಗೆ ತಿರುಗಿಕೊಂಡು ಹೋಗುವವರು. ನೋಡಿ ನಾವು ಎಷ್ಟು ಸುಳ್ಳು ಜನಗಳಿಗೆ ಹೇಳುತ್ತೇವೆ. ಸತ್ಯಾಂಶ ಹೇಳಿ, ಎಷ್ಟು ಜನ ಈ ಹೌಸ್‌ನಲ್ಲಿ we will not pray God, ಎಂದು ಒಂದು ಸರ್ಟಿಫಿಕೇಟ್ ಮಾಡಿಕೊಳ್ಳಿ. ಅವರ ಕಾನ್‌ಸ್ಟಿಟ್ಯೂಯನ್ಸಿಗೆ ಕಳುಹಿಸಿ ಇವರೆಲ್ಲಾ ದೇವರಿಗೆ ನಮಸ್ಕಾರ ಹೇಳುವುದಿಲ್ಲವೆಂದು ಹೇಳಿ ಚುನಾವಣೆಗೆ ಭಂದರೆ

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾನು ಇದ್ದೇನೆ.

**ಶ್ರೀ ಎಸ್. ರಾಜೇಂದ್ರನ್** : ಒಂದ್ನಿಮಿಷ ಇರಿ, ನೀವು ಇರಬಹುದು ಯಾರಾದರೂ ಒಬ್ಬರು ಇದ್ದುಕೊಂಡು ಹೇಳಿಬಿಡಬಹುದಾ ? ಫಾರೆಸ್ಟ್ ಎಲ್ಲಾ ತಿಕ್ ಆಗಿದೆ ಎಂದು ಹೇಳುವುದಕ್ಕಾಗುತ್ತಾ? ಯಾವುದೋ ಒಂದು ಫಾರೆಸ್ಟ್‌ನಲ್ಲಿ ಸ್ಯಾಂಡಲ್‌ವುಡ್ ಟ್ರೀ ಒಂದು ಇದೆ ಅಂದರೆ ಈ ಫಾರೆಸ್ಟ್ ಎಲ್ಲಾ ಸ್ಯಾಂಡಲ್‌ವುಡ್ ಟ್ರೀ ಎಂದು ಹೇಳುವುದಕ್ಕಾಗುತ್ತಾ ? ನೀವು ಇರಬಹುದು; because your policy is communist. ಅದಕ್ಕೋಸ್ಕರ ನಾವು ಎಲ್ಲಾ ಇರಬೇಕೆನ್ನುವ ಅವಶ್ಯಕತೆ ಇಲ್ಲ.. ನಾನು ಏಕೆ ಈಗ ಈಲ್ಡ್ ಆಗಬೇಕು ಈಗ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ, ನೋಡಿ ನಾಸ್ತಿಕರೆಲ್ಲರೂ ಮಾರ್ಕ್ಸ್‌ವಾದಿಗಳಲ್ಲ. ಆಸ್ತಿಕರೆಲ್ಲರೂ ದೈವವಾದಿಗಳಲ್ಲ. ಅದನ್ನು ಮಾನ್ಯ ರಾಜೇಂದ್ರನ್‌ರವರು ತಿಳಿದರೆ ಒಳ್ಳೆಯದು. ಏಕೆಂದರೆ, ಮಾರ್ಕ್ಸಿಸ್ಟ್‌ಗಳು ಮಾತ್ರ ದೇವರನ್ನು ಪೂಜೆ ಮಾಡುವುದಿಲ್ಲ. ನಂಬುವುದಿಲ್ಲವೆಂದು ಹೇಳತಕ್ಕಂಥದ್ದು ಸರಿಯಲ್ಲ. ಇ.ವಿ. ರಾಮಸ್ವಾಮಿ ನಾಯಕ್ ಇದ್ದಾರೆ, ಉದಾಹರಣೆಗೆ ಅವರೆಂದು ಮಾರ್ಕ್ಸಿಸ್ಟ್ ಏನಲ್ಲ, ಅವರು ದೇವರನ್ನು ವಿರೋಧ ಮಾಡಿದರು. ನಾಸ್ತಿಕರೆಲ್ಲರೂ ಮಾರ್ಕ್ಸ್‌ವಾದಿಗಳಲ್ಲ. . ಆಸ್ತಿಕರೆಲ್ಲರೂ ದೈವಭಕ್ತರಲ್ಲ.

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಅಧ್ಯಕ್ಷರೆ ಆಸ್ತಿಕ ಮತ್ತು ನಾಸ್ತಿಕ ಎಂಬ ವ್ಯಾಕ್ಯಾರ್ಥವನ್ನು ಬಹಳ ತಪ್ಪಾಗಿ ಭಾವಿಸುತ್ತೇವೆ. ದೇವರ ಅಸ್ಥಿತ್ವ ಅಥವಾ ಅದರ ಅಸ್ಥಿತ್ವ ಇಲ್ಲ ಎನ್ನುವುದರ ಮೇಲೆ ಆಸ್ತಿಕ, ನಾಸ್ತಿಕ ನಿಂತಿಲ್ಲ. ವೇದ ಪ್ರಮಾಣವನ್ನು ಒಪ್ಪದೇ ಇರತಕ್ಕಂಥವನು ನಾಸ್ತಿಕ. ವೇದ ಪ್ರಮಾಣ್ಯವನ್ನು ಒಪ್ಪತಕ್ಕಂಥವನು ಆಸ್ತಿಕ. ಅದು ದೇವರ ಅಸ್ಥಿತ್ವ ಅಥವಾ ಅಲ್ಲ ಎನ್ನತಕ್ಕಂಥದ್ದು ಅಲ್ಲ. ಏಕೆಂದರೆ, ಹಿಂದೂ ಧರ್ಮದಲ್ಲಿ ಶದ್‌ದರ್ಶನಗಳಲ್ಲಿ ಚಾರುವಾಕ ಮತ್ತು ಈ ತರಹ ಇರತಕ್ಕಂಥದ್ದನ್ನು ಕೂಡ ಒಪ್ಪಿದ್ದಾನೆ. ಆದುದರಿಂದ, ತರ್ಕ ಬೇಡ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಆದರೆ ವೇದಗಳ ಪ್ರಾಮಾಣೀಕೃತವನ್ನು ಒಪ್ಪದೇ ಇರತಕ್ಕಂಥವರನ್ನು ನಾಸ್ತಿಕರೆಂದು ಹೇಳಿದರೆ, ವೇದಗಳು ಪ್ರತಿಪಾದನೆ ಮಾಡಿದಂಥ ತತ್ವ ಏನು ಎನ್ನುವುದನ್ನೂ ಕೂಡ ನಾವು ನೋಡಬೇಕಾಗುತ್ತದೆ. ಅಂದರೆ, ವೇದಗಳನ್ನು ಪ್ರಾಮಾಣೀಕೃತ ಮಾಡದೇ ಇರತಕ್ಕಂಥವರನ್ನು ನಾಸ್ತಿಕರು ಎಂದು ಏಕೆ ಹೇಳುತ್ತಾರೆಂದರೆ, ವೇದಗಳು ಪ್ರತಿಪಾದನೆ ಮಾಡಿದಂಥ ಸಿದ್ಧಾಂತವನ್ನು ವಿರೋಧ ಮಾಡಿದವರು. ವೇದಗಳು ಪ್ರತಿಪಾದನೆ ಮಾಡಿದಂಥ ಸಿದ್ಧಾಂತಗಳು ಯಾವುದು ? ಅದನ್ನು ವಿರೋಧ ಮಾಡತಕ್ಕಂಥವರು ನಾಸ್ತಿಕರು. ವೇದಗಳು ಪ್ರತಿಪಾದನೆ ಮಾಡಿದ್ದು ಏನೆಂದರೆ, ಇಲ್ಲಿ ಒಬ್ಬ ಸೃಷ್ಟಿಕರ್ತ ಇದ್ದಾನೆ, ಆ ಸೃಷ್ಟಿಕರ್ತ the Creator. He is omnipotent power. That is the whole crux of the Vedas and that philosophy, the whole Vedas..... ವೇದಗಳಲ್ಲೂ ಕೂಡ ಇವತ್ತು, ಋಗ್ವೇದದ ಪ್ರಥಮ ಭಾಗದಲ್ಲಿ ದೇವರ ಪ್ರಸ್ತಾಪವೇ ಇಲ್ಲ, ಋಗ್ವೇದದ ಎರಡನೇ ಅಂಕಣಕ್ಕೆ ಬಂದಾಗ ಎಲ್ಲಾ ದೇವರುಗಳನ್ನು ನೀವು ನೋಡುತ್ತೀರಿ, ಉಪನಿಷತ್ತುಗಳೆಲ್ಲಾ ಬಂದಾಗ ದೇವರುಗಳ ಅವತಾರಗಳನ್ನು ನೋಡುತ್ತೀರಿ. That is not correct.

**ಶ್ರೀ ಎಸ್. ರಾಜೇಂದ್ರನ್** : ಮಾನ್ಯ ಅಧ್ಯಕ್ಷರೆ, ಈಗ ಇದು ಹಿಸ್ಟರಿ ಕ್ಲಾಸ್ ಅಲ್ಲ. ಋಗ್ವೇದ ಯಜುರ್‌ವೇದ, ಸಾಮವೇದ ಎಂದು, ನಾನು ಮೊದಲೇ ಈ ವೇದಗಳ ಬಗ್ಗೆ ಒಂದೇ ಮಾತಿನಲ್ಲಿ ಹೇಳಿದೆ ಅಲ್ವೇ ? ನೋಡಿ ಆಸ್ತಿಕನೂ ಇಲ್ಲ ನಾಸ್ತಿಕನೂ ಇಲ್ಲ ಎಲ್ಲಾ ಕಲ್ಪನೆ. ಒಬ್ಬ ಆಸ್ತಿಕ ಮತ್ತೊಬ್ಬ ನಾಸ್ತಿಕ ಇಬ್ಬರೂ ಫ್ರೆಂಡ್. ನಾನು ಮಾನ್ಯ ಶ್ರೀರಾಮರೆಡ್ಡಿಯವರ ತರಹ. ಒಂದು ರೂಂನಲ್ಲಿ ನಾವಿಬ್ಬರೂ ಇದ್ದೆವು. ಆಸ್ತಿಕನು ಹೇಳುತ್ತಾನೆ ನೋಡಿ ಸ್ವಿಚ್ ಹಾಕಿದ ತಕ್ಷಣ ಲೈಟ್ ಬರುತ್ತದೆ ಎಲ್ಲಾ ದೇವರ ದಯೆ ಎಂದು ಹೇಳುತ್ತಾನೆ. ಆಗ ನಾಸ್ತಿಕನಿಗೆ ಕೋಪ ಬಂದು ಬಿಡುತ್ತದೆ. ಕೂಡಲೇ ಅವನು ಸ್ವೀಚ್ ಆಫ್ ಮಾಡುತ್ತಾನೆ. ಈಗೇನು ಹೇಳುತ್ತೀರಿ ? ನಾವು ಆಸ್ತಿಕರು ಧೈವಭಕ್ತರು, ಸ್ವೀಚ್ ಹಾಕಿದ ತಕ್ಷಣ ಲೈಟ್ ಬಂತು ದೇವರ ದಯೆ ಎಂದು ಹೇಳಿದಿರಿ ಈಗ ಏನು ಹೇಳುತ್ತೀರಿ ? ನಾನು ಸ್ವೀಚ್ ಆಫ್ ಮಾಡಿದ್ದೇನೆ. ಈಗ ಏನು ಹೇಳುತ್ತೀರಿ ಎಂದು ಹೇಳಿದನಂತೆ. ಆಗ ಆಸ್ತಿಕ ಏನು ಹೇಳಿದ ಗೊತ್ತೇ ದೇವರು ನಿದ್ದೆ ಮಾಡಿಬಿಟ್ಟಿದ್ದಾನೆಂದು ಇವೆಲ್ಲಾ ಕಲ್ಪನೆ. ಯಾವ ದೇವರು ಸ್ವಾಮಿ

ನಿದ್ದೆ ಮಾಡುವುದು ಇವರಿಗೆ ಮುಖ ತೋರಿಸಿರುವುದು ? ಇವೆಲ್ಲಾ ಸುಳ್ಳು ಸ್ವಾಮಿ, ಆತ್ಮತೃಪ್ತಿಗೋಸ್ಕರ ನಾವು ನಮಸ್ಕಾರ ಹೇಳುವುದು. ಶ್ರೀಮಾನ್ ದೇಶಪಾಂಡೆಯವರು. he was under former chief Minister J.H. Patel. ಅವರ ಕಾಲದಲ್ಲಿ ಒಂದು ಚರ್ಚೆಯಾಯಿತು. Whether I am right or wrong, ಆ ದಿವಸ ದೇವರು ಹಾಲು ಕುಡಿಯುವುದು, ಗಣೇಶ ಹಾಲು ಕುಡಿದ ಎಂದು ಇದು ದೊಡ್ಡ ಚರ್ಚೆಯಾಯಿತು. ಅವತ್ತು ಇವರು ಅಲ್ಲಿ ಕುಳಿತುಕೊಂಡು ಹೇಳಿದರು, ನಾನು ನೋಡಿದೆ ನಮ್ಮ ಮನೆಯಲ್ಲಿ ಕೂಡ ಗಣೇಶ ಹಾಲು ಕುಡಿದಿದೆ ಎಂದು.

**ಶ್ರೀ ಆರ್. ವಿ. ದೇಶಪಾಂಡೆ** : ಮನೆಯಲ್ಲಿ ಅಲ್ಲ..........

**ಶ್ರೀ ಎಸ್. ರಾಜೇಂದ್ರನ್** : ಮನೆಯಲ್ಲಿ ಎಂದು ನೀವು ಹೇಳಿದ್ದು. ನಾನೇ ನೋಡಿದ್ದೇನೆ ಎಂದರು. ಹಾಗಾದರೆ ಎಲ್ಲಿ ನೋಡಿದರು ? ಬೀದಿಯಲ್ಲಿ ಹೋಗಿ ನೋಡಿದ್ದಾರಾ ? ಮನೆಯಲ್ಲಿ ಪೂಜೆ ಮಾಡುವ ಟೈಂ ನಲ್ಲಿ ಇರಲಿ, ಅವರು ಹೇಳಿದಾಗ ನಾನು ಆ ದಿವಸ ಅಬ್‌ಜಕ್ಷನ್ ಮಾಡಿದೆ. ಇಲ್ಲಿ ನಿಂತುಕೊಂಡು ಹೇಳಿದೆ , ಯಾವ ಗಣೇಶ , ಯಾವ ಪೂಜಾರಿ, ಕರೆದುಕೊಂಡು ಬಂದು ಇಲ್ಲಿ ತೋರಿಸಿ, ಹಾಲು ಕೊಟ್ಟರೆ ಕುಡಿಯುತ್ತದೆಯೋ ಇಲ್ಲವೋ ನೋಡೋಣ ಎಂದು ನಾನು ಹೇಳಿದೆ. ಅಲ್ಲಿ ಕುಳಿತಿರುವ ಟೈಂನಲ್ಲಿ ನಿಮಗೆ ದೇವರು ಬೇಕು, ಇಲ್ಲಿ ಕುಳಿತಿರುವ ಟೈಂನಲ್ಲಿ ನಿಮಗೆ ದೇವರು ಬೇಡವೇ ? ಇದು ಹೇಗೆ ನ್ಯಾಯ ? ಧರ್ಮ ಎಲ್ಲಿದೆ ?

**ಶ್ರೀ ಆರ್.ವಿ. ದೇಶಪಾಂಡೆ** : ದೇವರು ಬೇಡ ಎಂದು ಯಾರೂ ಹೇಳಿಲ್ಲ. ದೇವರಿಗೆಲ್ಲಾ ನಮನ ಮಾಡಿ ನಾವು ಇಲ್ಲಿಗೆ ಬರುತ್ತೇವೆ. ಇಲ್ಲಿ ದೇವರ ಪ್ರಶ್ನೆನೇ ಬರಲಿಲ್ಲ.

**ಶ್ರೀ ಎಸ್. ರಾಜೇಂದ್ರನ್** : ಈಗ ಅವರನ್ನು ಕೋಮುವಾದಿಗಳು, ಕೋಮುವಾದಿಗಳು, ಎಂದು ಯಾವ ರೀತಿಯಲ್ಲಿ ಹೇಳುತ್ತೀರಿ ? ಜಾಸ್ತಿ ಯಾರು they are praying God, ಪೂಜೆ ಮಾಡುವುದು, ದೈವಭಕ್ತಿ, ಜಾತಿ, ಇವೆಲ್ಲಾ ಒಂದು ರೀತಿ ಬೇರೆ. ಬ್ರಾಹ್ಮಣಗುಂಪುಗಳ ತರಹ ಇದನ್ನೆಲ್ಲಾ ಇಟ್ಟುಕೊಂಡೇ ಮಾತನಾಡುವುದು. ಸ್ವಾಮಿ ಬಿಜೆಪಿ ಯವರು ದೇವರ ಗುಡಿಗಳಿಗೆಲ್ಲಾ ಹೋದರು. ಶ್ರೀಮಾನ್ ವಾಟಾಳ್‌ನಾಗರಾಜ್‌ರವರು ಮಾತನಾಡುವ ಟೈಂನಲ್ಲಿ ಕನ್ನಡದ ಮೇಲೆ ಅಪಾರ ಪ್ರೀತಿಯಿಟ್ಟುಕೊಂಡು ಮಾತನಾಡಿದರು. ನಮ್ಮ ರಾಜ್ಯ, ಕನ್ನಡ ರಾಜ್ಯ, ಮಣ್ಣಿನ ಮಗ ಇವೆಲ್ಲಾ ನಾವು ಹೇಳುವುದು, ಆದರೆ ಇವರೆಲ್ಲಾ ತಮಿಳು ನಾಡು ದೇವರಗುಡಿಗಳಿಗೆ ಹೋದರು, ತಿರುನಲ್ಲಾರ್ – ತಮಿಳುನಾಡು, ಪಾಯಿಂಡಿ – ತಮಿಳುನಾಡು, ತಿರುಪತಿ – ಆಂಧ್ರ, ಏಕೆ ಇಲ್ಲಿ ದೇವರು ಇಲ್ಲವೆ? ಭಾಷೆ ಮಾತ್ರ ಕನ್ನಡ ನಾಡು, ಮಣ್ಣಿನ ಮಗ, ನಾವು ಹೇಳುವುದು, ಇದೆಲ್ಲಾ ತಮಾಷೆ, ಸುಳ್ಳು, ಜಾತಿ ಮೇಲೆ ಮಾತನಾಡುವುದು.. ಹೌದು ಧರ್ಮಸ್ಥಳ ಎಲ್ಲಿದೆ ಕರ್ನಾಟಕ ಹೌದು ಸ್ವಾಮಿ ನಾನು ಗುಡಿಗಳಿಗೆ ಅಷ್ಟು ಹೋಗುವುದಿಲ್ಲ. ನೀವು ಹೋಗುವುದಿಲ್ಲ ಆದರೂ ನಿಮಗೆ ಗೊತ್ತಿದೆ ನೋಡಿ. ಇವೆಲ್ಲಾ just for discussion, it may be good. ಮಾಡೋಣ ಒಂದು ಹೆಲ್ತಿಯಾಗಿ ಡಿಸ್‌ಕಷನ್ ಇರಲಿ. ಆ ರೀತಿ ಹೆಲ್ತಿ ಡಿಸ್‌ಕಷನ್ ತೆಗೆದುಕೊಳ್ಳಬೇಕು. ಶ್ರೀಮಾನ್ ಕುಮಾರಸ್ವಾಮಿ ಬೇಕೋ ಬೇಡವೋ ? ಈಗ ಎಲ್ಲರಿಗೂ ಚುನಾವಣೆ ಅಂದರೆ ಭಯ ಇದೆ ಇದು ನಿಜ. ನಾವು ಕೆಲವರು ನನಗೇನು ಭಯವಿಲ್ಲವೆಂದು ಹೇಳಬಹುದು. ನಾನು ಹೋದ ತಕ್ಷಣ ಜನ ವೋಟು ಹಾಕಿಬಿಡುತ್ತಾರೆ. ಎಂದು ಜನ ಏನು ಅಷ್ಟು ಈಸಿ ಇಲ್ಲ. ಹೇಳಬಹುದು ಅದೇನೋ ಅಪ್ಪಿತಪ್ಪಿ ಯಾರೋ ಒಬ್ಬರಿಬ್ಬರೂ ಸಿಕ್ಕಬಹುದು, ಶ್ರೀಮಾನ್ ಖರ್ಗೆ ಸಾಹೇಬ್ರು, ಶ್ರೀಮಾನ್ ಧರಂಸಿಂಗ್ ಸಾಹೇಬ್ರು, ಅಂಥವರು. because they can challenge. They have proved six times, seven times, eight times ನನ್ನ ತರಹ ಶಾಸಕರ ಗತಿ ಏನು ಸ್ವಾಮಿ? ನನಗೆ

ಕಾಂಗ್ರೆಸ್ ಅಲೈಯನ್ಸ್ ಇಲ್ಲ, ಜನತಾದಳ ಅಲೈಯನ್ಸ್ ಇಲ್ಲ, ಬಿಜೆಪಿ ಅಲೈಯನ್ಸ್ ಇಲ್ಲ, ಯಾರ ಅಲೆಯನ್ಸ್ ಇಲ್ಲ, ಎದುರು ಪಾರ್ಟಿ ಕೂಡ. Strong We are standing on our own legs, not parasites. ನಮಗೆ ಎಷ್ಟು ಕಷ್ಟ ಇರಬಹುದು ಎಂಬುದನ್ನು ತಾವು ನೋಡಿದಿರಾ? ನಿಮಗೆ ಚುನಾವಣೆ ಎಂದರೆ ತಮಾಷೆಯಾಗಿದೆ. ಚುನಾವಣೆಯಲ್ಲಿ ಗೆಲ್ಲಬೇಕು ಎಂದರೆ, ತೋರಿಸಬೇಕು, ಬಸ್ ಸ್ಟ್ಯಾಂಡ್ ಇದು, ರೋಡ್ ಮಾಡಿದ್ದೇವೆ, ಕುಡಿಯುವುದಕ್ಕೆ ನೀರು ಕೊಟ್ಟಿದ್ದೇವೆ ಅಂತ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅದು ತೋರಿಸಿದರೂ ವೋಟು ಹಾಕುವುದಿಲ್ಲ.

**ಶ್ರೀ ಎಸ್. ರಾಜೇಂದ್ರನ್** : ಅದು ನಿಮ್ಮ ಕಡೆ. ನನ್ನ ಕಡೆಗೆ ತೋರಿಸಲೇಬೇಕು. ಇದು ಹೇಗಿದೆ ನೋಡಿ, ತೋರಿಸಿಲ್ಲವೆಂದರೆ ಹೇಗೆ ? ತೋರಿಸಿದರೆ ತಾನೇ ಆಗುವುದು. ತೋರಿಸಿಲ್ಲವೆಂದರೆ ಹೇಗೆ ಆಗುತ್ತದೆ? ಇದು ಒಳ್ಳೆಯ ಕತೆ. ತೋರಿಸಬೇಕು. ತಾಯಿ ತನ್ನ ಮಗನಿಗೆ ಹೇಳಬೇಕು, ಇದು ನಿನ್ನ ತಂದೆ ಎಂದು ತೋರಿಸಬೇಕು, ಇಲ್ಲಾಂದ್ರೆ ಅವನು ಯಾರನ್ನು ತಂದೆ ಎಂದು ಕರೆಯುತ್ತಾನೆ? ಬೀದಿಯಲ್ಲಿ ಓಡಾಡುವವರನ್ನು ಅಪ್ಪ ಎಂದು ಕರೆಯುತ್ತಾನೆಯೇ ? ಅದು ಆಗುತ್ತಾ ? ಅದಕ್ಕೆ ಏನು ವಾದ ಇದೆ ಎಂದರೆ, ಇವರೆಲ್ಲಾ ಗುಡಿಗಳಿಗೆ ಹೋಗಿ, ಎಲ್ಲಾ ನಮಸ್ಕಾರನೇ ಹೇಳಿರುವುದು. ಅದು ಇಲ್ಲಿ ಮುಖ್ಯವಲ್ಲ. ನಾವು ಈ ಸದನದೊಳಗಡೆ ಕಾನ್‌ಸ್ಟಿಟ್ಯೂಷನ್ ಮೇಲೆ ಚಾಲೆಂಜ್ ಮಾಡಿದೆವು. ಅದರ ಬಗ್ಗೆ ಮಾತನಾಡುವುದು ಅವಶ್ಯಕತೆಯಿಲ್ಲ, ಬಟ್ frankly we will speak. We are not speaking anybody. ಇದು ಸರಿಯೋ ಇಲ್ಲವೋ ? ಒಂದು ವಾದ. ಇಡೀ throughout India, citation ಇರಬೇಕು. AIR ... year 2006 Sri Kumara Swamy, Chief Minister ಕಾಲದಲ್ಲಿ ಮಿಸ್ಟರ್ ವಾಟಾಳ್ ನಾಗರಾಜ್ , ಶ್ರೀರಾಮರೆಡ್ಡಿ, ರಾಜೇಂದ್ರನ್ ಇಂಥವರು ಇಂಥವರಿಗೆ ಮಾಡಿದ್ದಾರೆ. ಈಗ ನಾವು ಇವರಿಗೆ ಎಗೆನೆಸ್ಟ್ ಆಗಿ ಹೋಗಿ ನಾಳೆ, ಈ ಕಡೆ ಇರುವವರೇ ಶ್ರೀಮಾನ್ ಧರಂ ಸಿಂಗ್‌ರವರೇ ಚೀಫ್ ಮಿನಿಸ್ಟರ್ ಆಗಿ ಅಲ್ಲಿ ಕುಳಿತುಕೊಂಡರೆ ನಮಗೆ ಮಂತ್ರಿ ಕೊಡುತ್ತಾರೆಯೇ ? ಅವತ್ತು ನೋಡಿ ಎಷ್ಟು ಜನ ? ನಾನು ಡೆಲ್ಲಿಗೆ ಹೋಗಿ ತೆಗೆದುಕೊಂಡು ಬರುತ್ತೇನೆ. ನಾನು ಜಪಾನ್‌ನಿಂದ ತೆಗೆದುಕೊಂಡು ಬರುತ್ತೇನೆ. ನಮಗೆ ಈ ಮಂತ್ರಿ ಬೇಕು. ನಮಗಿಲ್ಲ ಸ್ವಾಮಿ, ನಾವು ಮಾಡಿದ್ದು ಏನೆಂದರೆ, ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನು ಇದೆ ? ಟೆಂಥ್ ಷೆಡ್ಯೂಲ್‌ನಲ್ಲಿ ಏನು ಇದೆ ? ಒಂದು ಅರ್ಥವಾಗಬೇಕು. ಅಷ್ಟೆ. ಅದು ಬಂದರೇನು ಹೋದರೇನು ನಮಗೇನೆಂದರೆ ಮೂರು ವರ್ಷ ಈ ಸರ್ಕಾರ ಇರಬೇಕು ಅಟ್‌ಲೀಸ್ಟ್ ಮೂರು ವರ್ಷ ನಾವು ಎಂಎಲ್‌ಎಗಳಾಗಿರಬೇಕು. ಆಮೇಲೆ ಜನಗಳ ಮುಂದೆ ಹೋಗಬೇಕು, ಎಲ್ಲರಿಗೂ ಇದೇ ಆಸೆ ತಾನೆ ಇರುವುದು ? ಎಲ್ಲರಿಗೂ ನಿಮಗೆ ಮಾತ್ರ ಅಲ್ಲ ಈ ಕಡೆಗೂ ಇದೆ ಆ ಕಡೆಗೂ ಇದೆ. ಇದರಲ್ಲಿ ಯಾರು ಕೇರ್ ಮಾಡುವುದಿಲ್ಲ ಅಂದರೆ the real leaders, who think about the political party, who think about the realism, ಮುಂದಿನ ಚುನಾವಣೆಯಲ್ಲಿ ಗೆದ್ದು ಬರಬೇಕು, ನಮ್ಮ ಪಕ್ಷ ಇರಬೇಕೆಂದು ಮತ್ತು ನಾವು ಸೋಲಬಾರದೆಂದು the real leaders will think. 90% of people will think about next election. ಮಾನ್ಯ ಕುಮಾರಸ್ವಾಮಿಯವರು ಒಳ್ಳೆಯ ಕೆಲಸ ಮಾಡಿದ್ದಾರೆ ನಾವು ಮೂರು ವರ್ಷಗಳವರೆಗೆ ಚುನಾವಣೆಯಿಂದ ಎಸ್ಕೇಪ್ ಆಗಿದ್ದೇವೆ ಎಂದು ಹೇಳತಕ್ಕಂಥವರು ಬಹಳಷ್ಟು ಜನ ಇದ್ದಾರೆ. ಒಳಗಡೆ

ಇದನ್ನು ಹೇಳುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ. ಆದರೆ, ನಾನು ಸತ್ಯವನ್ನು ಹೇಳುತ್ತಿದ್ದೇನೆ. It is in a family fight, inner fight. ಜನತಾದಳದಲ್ಲಿ ಶ್ರೀ ಮಾನ್ ಸಿದ್ದರಾಮಯ್ಯನವರನ್ನು everybody appreciated. He was a very good Finance Minister. No doubt he is disciplined; he is decent, and they like his simplicity. No doubt, it is their fight. ಆದ್ದರಿಂದ ನಮಗೇನು ನೋವು ? ಅವರು ಇವರನ್ನು ತೆಗೆದಿದ್ದಾರೆಂದು ಈ ಸಭೆಯ ಮೂಲಕ ಜನಗಳಿಗೆ ಸಂದೇಶ ಹೋಗಬೇಕೆ ? ಆದರೆ, ಜನಗಳು ಏನು ಹೇಳುತ್ತಾರೆಂದರೆ ಆಗಿದ್ದು ಆಯಿತು ಇದನ್ನು ನೋಡದೇ ಬೇಗ ಮುಗಿಸಿಬಿಡಿ ಎಂದು ಹೇಳುತ್ತಾರೆ. That is the fact. Secondly, ಏನೆಂದರೆ, ಮಾನ್ಯ ಕುಮಾರಸ್ವಾಮಿಯವರು ೩೫ ಜನರನ್ನು ಮತ್ತು ಬಿಜೆಪಿಯವರು ೭೯ ಜನರನ್ನು ಹಾಗೂ ಕಾಂಗ್ರೆಸ್‌ನವರು ಸುಮಾರು ೬೪ ಜನ ಇಟ್ಟು ಕೊಂಡಿದ್ದಾರೆ. ನಾವೆಲ್ಲಾ ಸೇರಿ for the past two year, worthful chief Minister Dharam Singh ರವರನ್ನು ಮಾಡಿದ್ದೆವು. ಅವರ ಮುಂದೆ ನಾವು ಈ ಎಲ್ಲಾ ಭಾಷಣ ಮಾಡುತ್ತಿದ್ದೇವೆ. ಅವರು ಮುಖ್ಯಮಂತ್ರಿ ಆಗಿಲ್ಲದಿದ್ದರೆ ನಾವೆಲ್ಲಾ ಕಾಫಿಗೆ ಹೋಗಬಹುದಿತ್ತು. ಇದನ್ನು ಆಗ ಪಾಸ್ ಮಾಡತಕ್ಕಂಥ ಅವಶ್ಯಕತೆ ಇರುತ್ತಿರಲಿಲ್ಲ. What we are speaking here, is because of the Chief Minister. ಏಕೆ ಈ ಹಿಸ್ಟ್ರಿ ಹೇಳಿದೆ ಎಂದರೆ ನಮ್ಮ ಊರಿಗೆ ಕುಡಿಯುವ ನೀರಿನ ಯೋಜನೆಯನ್ನು ಕ್ಲಿಯರ್ ಮಾಡಿಕೊಟ್ಟಿದ್ದಾರೆ. Yes, I should be loyal to him, for drinking water. ಸಣ್ಣ ಪುಟ್ಟ ರಸ್ತೆ ಕೆಲಸಗಳಿವೆ, ಆದರೆ ಇವುಗಳನ್ನು ಇನ್ನು ಪ್ರಾರಂಭವಾಗಿಲ್ಲ. ಜನತಾ ದಳದವರು ಕಾಂಗ್ರೆಸ್‌ನವರು ಸರಿಯಿಲ್ಲವೆಂದು ಹೇಳಿದ್ದಾರೆ. ಆದರೆ ಮಾನ್ಯ ಧರ್ಮಸಿಂಗ್‌ರವರು ಸರಿಯಿಲ್ಲವೆಂದು ಯಾವಾಗಲೂ ಹೇಳಿಲ್ಲ. They have not told, ಯಾರೂ ಹೇಳಿಲ್ಲ. ನಾವೂ ಸಹ ಕೇಳುವುದಿಲ್ಲ. But, why this disturbance ? ಅದಕ್ಕೆ ನಾವು ಲೀಗಲ್ ಎಕ್ಸ್‌ಪರ್ಟ್ ಇಲ್ಲ, ನಾವು ಪ್ರೋಫೆಷನಲ್‌ಗಳಲ್ಲ, ನಾವು ಲೀಡರ್ಸ್‌ಗಳಲ್ಲ. ನನ್ನ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾನಲ್ಲಿ my President Sri R.S. Gawai, what he instructs me, I have to follow. Nothing else. That is the loyalty. ಆದರೆ, 20 ತಿಂಗಳಿಂದ ಆತರಹ ಅವರು ಎಷ್ಟು ಸ್ಟ್ರಗಲ್ ಮಾಡಿದ್ದಾರೆಂಬುದು ನಮಗೆ ಗೊತ್ತಿಲ್ಲ. ಆದರೆ, ಅವರಿಗೆ ಗೊತ್ತಿರಬೇಕು. ಆ ನೋವನ್ನು ಇಟ್ಟುಕೊಂಡು ನಾನು ತಮಾಷೆಯಲ್ಲಿ ಮಾತನಾಡಿಕೊಂಡು ಹೋಗತಕ್ಕಂಥ ಅವಶ್ಯಕತೆ ಇಲ್ಲ. ಜನತಾದಳದಲ್ಲಿ ಏನೊಂದು ಸ್ಥಿತಿಯಾಗುತ್ತಿದೆ. ಹಳೆಯ ಟಿಪ್ಪುಸುಲ್ತಾನ್ ಕಾಲದಲ್ಲಿಯೂ ಕೂಡ ರಾಜಕೀಯದಲ್ಲಿ ಡಿಫರೆನ್ಸ ಇತ್ತು. ಅವತ್ತಿನ ಕಾಲದಲ್ಲಿ ಸೀಟು ಕೊಡುವುದಕ್ಕೆ ಸ್ವಾತಂತ್ರ್ಯ ಹೋರಾಟಗಾರರ ಬಯೋಡೇಟಾವನ್ನು ತೆಗೆದುಕೊಳ್ಳುತ್ತಿದ್ದರು. ಆದರೆ., ಈಗ ಆ ರೀತಿ ಇಲ್ಲ. ಏರಿಯಾದಲ್ಲಿ ಏನಾದರೂ ದೊಡ್ಡ ರೌಡಿಸಂ ಮಾಡಿದ್ದಾರೆಯೇ, ಅಥವಾ ತಾಕತ್ ಇದ್ದರೆ ಸೀಟ್ ಕೊಡತಕ್ಕಂತ ಸ್ಥಿತಿ ಈಗ ಬಂದಿದೆ. ಅಂದರೆ ಈಗ ಅಟ್ಮಾಸ್ಫಿಯರ್ ಚೇಂಜ್ ಆಗಿದೆ. ಇದೆಲ್ಲಾ ಇದ್ದಮೇಲೆ ಮತ್ತೆ ದುಡ್ಡು ಇರುವವರಿಗೆ ಸೀಟು ಕೊಡುತ್ತಾರೆ. ಕರ್ನಾಟಕ ರಾಜ್ಯದ ಪರಂಪರೆಯ ಮೇಲೆ ಪ್ರೀತಿ ಇಟ್ಟುಕೊಂಟಿರುವವರು ನಾವು ಮತ್ತೆ ಕರ್ನಾಟಕದಲ್ಲಿ ಕನ್ನಡ ಬೆಳಸಬೇಕು ಮತ್ತೆ ಕನ್ನಡದವರು ಈ ರಾಜ್ಯದಲ್ಲಿರಬೇಕೆಂದು ಈ ಸಭೆಯಲ್ಲಿ ನಾವೆಲ್ಲಾ ಮಾತನಾಡಿ

ರಾಜ್ಯಸಭೆಯ ಚುನಾವಣೆಯಲ್ಲಿ ತಮಿಳುನಾಡಿನ ಎಂ.ಎಂ. ರಾಮಸ್ವಾಮಿಯವರಿಗೆ ನಾವೆಲ್ಲಾ ವೋಟು ಹಾಕಿದ್ದೇವೆ. ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿ. ಅವತ್ತು ಇದೆಲ್ಲಾ ಎಲ್ಲಿಗೆ ಹೋಗಿತ್ತು ? These are all valuable points in future, you should not allow. Only you must take Karnataka people. ಇರಬೇಕು. ಅದು ನಿಜವಾಗಿಯೂ ಕೂಡ healthy discussion.

**ಶ್ರೀ ಜಿ.ವಿ ಶ್ರೀರಾಮರೆಡ್ಡಿ** : ವೆಂಕಯ್ಯನಾಯ್ಡು ಕೂಡ ಇಲ್ಲಿಂದ ಹೋಗಿದ್ದಾರೆ.

**ಶ್ರೀ ಎಸ್. ರಾಜೇಂದ್ರನ್** : ನಿಮ್ಮ ಬಾಗೇಪಲ್ಲಿ ಆಂಧ್ರಪ್ರದೇಶದ ಗಡಿಯಲ್ಲಿದೆ. ಆದ್ದರಿಂದ ವೆಂಕಯ್ಯನಾಯ್ಡು ಹೋಗಬೇಕೆಂದು ನೀವು ಹೇಳಿರಬೇಕು. ನನಗೆ ಇದು ತಮಿಳುನಾಡು ಬಾರ್ಡರ್. ಉದಾಹರಣೆ ಒಂದು ಹೇಳೀದರೆ ಸಾಕು, ಉದಾಹರಣೆಗಳು ಗೊತ್ತಿವೆ ಎಂದು ಹತ್ತು ಹೇಳಿಕೊಂಡು ಹೋಗುವುದಕ್ಕೆ ಆಗುತ್ತದೆಯೇ ? ಅದು ವೆಂಕಯ್ಯನಾಯ್ಡು ಆಗಿರಲಿ ಅಥವಾ ಯಾವುದೇ ನಾಯ್ಡು ಆಗಿರಲಿ ಒಂದೇ ಒಂದು ಉದಾಹರಣೆ ಸಾಕು. ಬೇರೆಯದು ನಮಗೆ ಬೇಡ. This is called healthy discussion which should take place here. Now, here whether Sri Dharam Singh is not better than Mr. Kumara Swamy or Mr. Kumara Swamy is better than Dharm Singh, nobody can tell, boldly. who is better ? ಎಂದು ಆ ಕಡೆಯವರೂ ಸಹ ಹೇಳುವುದಿಲ್ಲ. ಕಾರಣ ಏನೆಂದರೆ, he is a lovable man, even to them even to us. That is the only reason why they will also not tell. ಆದರೆ, ಇರತಕ್ಕಂತ ಸಿಚ್ಯುಯೇಶನ್ ಏನೆಂದರೆ, ಕಾಂಗ್ರೆಸ್‌ನವರು ಜಿಲ್ಲಾ ಪರಿಷತ್‌ನಲ್ಲಿ ಗೆದ್ದಿದ್ದಾರೆ. ಮತ್ತೆ ಗ್ರಾಮಪಂಚಾಯತ್ ಚುನಾವಣೆಯಲ್ಲಿಯೂ ಕೂಡ they have got highest. They had an idea. ಗೆದ್ದಿದ್ದೇವೆಂದು ಅವರು ಇದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ಚುನಾವಣೆ ಬಂಧರೆ ಪೂರ್ತಿ ಸ್ವೀಪ್ ಮಾಡಬಹುದು ಮತ್ತೆ ನಾವೇ ಸುಮಾರು 150 ರಿಂದ 160 ಸೀಟ್ ಗೆದ್ದು ಮೆಜಾರಿಟಿ ಪಡೆದುಕೊಂಡು ಇಲ್ಲಿ ಕುಳಿತುಕೊಳ್ಳಬಹುದೆಂದು ಅವರು ಒಂದು ಐಡಿಯಾ ಮಾಡಿರಬಹುದು. ಆದರೆ, ನಾನು ಅಸ್ಟ್ರಾಲಜಿಯಲ್ಲ. ಏಕೆಂದರೆ ಇದರ ಬಗ್ಗೆ ಶಾಸ್ತ್ರ ಹೇಳುವುದಕ್ಕೆ. ಮತ್ತೆ ಅದು ನಮಗೇನೂ ಸಹ ಗೊತ್ತಿಲ್ಲ. ಆದರೆ, ಚುನಾವಣೆಗೆ ಹೋಗಬೇಕೆಂದು ಅವರು ಯೋಚನೆ ಮಾಡಿರಬೇಕು. Some inner problems, everybody knows. ಒಬ್ಬೊಬ್ಬರು ಒಂದು ಕತೆ ಹೇಳುತ್ತಾ ಹೋಗುವುದು. ಯಾವುದೊಂದು ರೂಮರ್ ಅದು ಯಾವ ರೀತಿ ಇದೆ ಎಂದರೆ, ಚೌಲ್ಟ್ರಿಯಲ್ಲಿ ಊಟ ಕೊಡುತ್ತಾರೆಂದು ಯಾರೊಬ್ಬ ಕೆಲಸಕ್ಕೆ ಬಾರದೆ ಇರುವವನು ಒಂದು ನಾಲ್ಕು ಜನಕ್ಕೆ ಹೇಳಿದ ಆತ ಕೂಡ ಅಲ್ಲಿಗೆ ಹೋಗಿ ಚಾಲ್ಟ್ರಿಯಲ್ಲಿಯೇ ಮಲಗಿಕೊಂಡಿದ್ದಾನೆ. ಸಾವಿರಾರು ಜನ ಚೌಲ್ಟ್ರಿಗೆ ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಅಲ್ಲಿಯೇ ನಿದ್ದೆ ಮಾಡುತ್ತಿದ್ದವನು ಎದ್ದು ನೋಡಿ ಇಷ್ಟೊಂದು ಜನ ಹೋಗುತ್ತಿದ್ದಾರೆ, ನಿಜವಾಗಿಯೂ ಕೂಡ ಊಟ ಹಾಕುತ್ತಿದ್ದಾರೆಯೇ ಎಂದು ಆತನಿಗೆ ಚಿಂತೆ ಬಂದಿದೆ. ಇಂತಹ ಒಂದು ರೂಮರ್ ಇರುವಾಗ, ಮಾನ್ಯ ಕುಮಾರ ಸ್ವಾಮಿಯವರು ಒಂದು ತೀರ್ಮಾನವನ್ನು ಒಳಗಡೆ ಮಾಡಿಕೊಂಡರು. Whether it is true or not, ಒಟ್ಟಿನಲ್ಲಿ ಇದು ಜನರಿಗೆ ಗೊತ್ತಾಗಬೇಕು. ಈ ಸಂದರ್ಭವನ್ನು ಬಿಟ್ಟರೆ ನಾವು ಮತ್ತೆ

ಚುನಾವಣೆಗೆ ಹೋಗತಕ್ಕಂಥ ಅವಶ್ಯಕತೆ ಇದೆ ಎಂದು ಎಲ್ಲಾ ಎಂ.ಎಲ್.ಎ. ಕೇಳುತ್ತಿದ್ದಾರೆ ಆದ್ದರಿಂದ ಇದಕ್ಕೆ ಏನಾದರೂ ವ್ಯವಸ್ಥೆ ಮಾಡಿ ಎಂದು ಎಲ್ಲರೂ ಕೇಳುತ್ತಿದ್ದಾರೆ. Majority of the youngesters. ಆದ್ದರಿಂದ, ಏನಾದರೂ ವ್ಯವಸ್ಥೆ ಮಾಡಿ ಎಂದು ಹೇಳಿರಬಹುದು. ಸಂದರ್ಭ ಬಂದಾಗ ಏನಾದರೂ ಮಾಡೋಣವೆಂದು ಅವರೂ ಕೂಡ ಕರೆಕ್ಟ್ ಆಗಿ ಹೇಳುತ್ತಾ ಬಂದರು. ಈಗ ಸಂದರ್ಭ ಬಂತು. ಅವರು ಕೇವಲ ೪೫ ಜನರನ್ನು ಇಟ್ಟುಕೊಂಡು ೬೪ ಜನರನ್ನು ಯಾಮಾರ್ಸಿ ಮತ್ತೆ ೭೯ ಜನರನ್ನು ಯಾಮರ್ಸಿ ತಾಕತ್ ಇರುವುದರಿಂದ ಇವತ್ತು ಮುಖ್ಯಮಂತ್ರಿಗಳಾಗಿ ಕುಳಿತುಕೊಂಡಿದ್ದಾರೆಂದರೆ, we must appreciate. ಯಾರಿದ್ದರೂ ಸಹ ಇದನ್ನು ಹೇಳಲೇ ಬೇಕಾಗಿತ್ತು. ಈಗ ನಾವು ಏನು ಹೇಳುವುದು ನಾನು ನೆಪೋಲಿಯನ್‌ನ್ನು ನೋಡಿಲ್ಲ. ಮತ್ತೆ ಹಿಟ್ಲರನ್ನು ನೋಡಿಲ್ಲ. ಹಾಗೆಯೇ ಮುಸೋಲಿನ್‌ನ್ನ ನೋಡಿಲ್ಲ. ಸ್ಟಾಲಿನ್‌ನ್ನು ಸಹ ನೋಡಿಲ್ಲ. ಇವರ ಇತಿಹಾಸದಲ್ಲಿ ಕೋಟ್ ಮಾಡುವುದು ಹೇಗೆ ? ನೆಪೋಲಿನ್ ಕುದುರೆಯ ಮೇಲೆ ಮಲಗಿಕೊಂಡಿದ್ದರೆಂದು ಹೇಳಿದರೆ, ನಾನು ನೋಡಿದ್ದೇನೆಯೇ ? ಆದರೆ, ಕುಮಾರಸ್ವಾಮಿಯವರು ಸುಮಾರು 45 ಜನರನ್ನು ಇಟ್ಟುಕೊಂಡು ಮುಖ್ಯಮಂತ್ರಿಗಳಾಗಿರತಕ್ಕಂಥದ್ದನ್ನು ನಾನು ನೋಡಿದ್ದೇನೆ. ನಾಳೆ ಇದರ ಬಗ್ಗೆ ಇತಿಹಾಸದಲ್ಲಿ ಮಾತನಾಡುತ್ತೇವೆ. ಆದರೆ, ಬಿಜೆಪಿಯವರು ಸಂತೋಷದಿಂದ ನಗುತ್ತಿದ್ದೀರಿ. ನೀವು 79 ಜನ ಇಟ್ಟುಕೊಂಡು ಡೆಪ್ಯುಟಿ ಚೀಫ್ ಮಿನಿಸ್ಟರ್ ಆಗಿ ಕುಳಿತುಕೊಂಡಿದ್ದೀರಿ. ಇದೆಂಥ ಪರಿಸ್ಥಿತಿ ನೋಡಿ ? Whatever it may be. ಏನೇ ಒಂದು ಇರಲಿ ಅವರಿಗೂ ಬಿಟ್ಟುಕೊಡೋಣ ಎಂಬ ಮನೋಭಾವನೆ ಇದೆ. Gire and take policy ಈ ರೀತಿಯಾದ ಸಂದರ್ಭದಲ್ಲಿ ಇದಾಗಿದೆ. ಆದರೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ರೀತಿಯಾಗಿ ಒಂದು ಗಂಭೀರವಾದಂಥದ್ದು ಇರಬೇಕು. ಆದರೆ ಬೇರ ರಾಜ್ಯದಲ್ಲಿ ಈ ರೀತಿಯಾಗಿ ಇರುವುದಕ್ಕೆ ಸಾಧ್ಯವೇ ಇಲ್ಲ. ಪೀಸ್‌ಫುಲ್ ಸಿಟಿ ಎಂದು ಹೇಳುವುದಕ್ಕೆ ಒಂದು ಉದಾಹರಣೆ ಏನೆಂದರೆ, ಇಷ್ಟೆಲ್ಲಾ ಆಗಿದ್ದರೂ ಕೂಡ ಶ್ರೀಮಾನ್ ದೇವೇಗೇಡ ಒಂದು ಮಾತೂ ಸಹ ಶ್ರೀಮಾನ್ ಧರ್ಮಸಿಂಗ್‌ರವರ ಮೇಲೆ ಹೇಳಿಲ್ಲ. He has not uttered a word against him. ಈ ರೀತಿಯಾಗಿ ಶ್ರೀಮಾನ್ ಧರ್ಮಸಿಂಗ್‌ರವರನ್ನು ಮಾನ್ಯ ದೇವೇಗೌಡರು ಎಂದೂ ಸಹ ಕೆಟ್ಟದಾಗಿ ನೋಡಿಲ್ಲ. This is the cordial relationship in our politics o;f Karnataka. ಒಂದು ವೇಳೆ ಇದೇ ರೀತಿಯಾಗಿ ತಮಿಳುನಾಡು ಅಥವಾ ಆಂಧ್ರಪ್ರದೇಶದಲ್ಲಿ ಆಗಿದ್ದರೆ ಎಷ್ಟು ಗೊಂದಲವಾಗುತ್ತಿತ್ತು? ಇದರ ಜೊತೆಗೆ, ಸಿದ್ದರಾಮಯ್ಯನವರೂ ಸಹ ಹಾಗೆಯೇ ಮಾಡಿದ್ದಾರೆ. ತಾವು ಈ ರೀತಿ ಮಾಡಿದ್ದರಿಂದ ಮಾನ್ಯ ಧರ್ಮಸಿಂಗ್ ಸಾಹೇಬರಿಗೆ ಕಷ್ಟ ಹೇಗೆ ಬಂತು ಅಂದರೆ ತಾವು ಅಹಿಂದಾ ಮಾಡಿದಿರಿ ಸ್ವಾಮಿ ಇವರು ಸುಮ್ಮನೆ ಇದ್ದಿದ್ದರೆ ಪರವಾಗಿರಲಿಲ್ಲ. ಆದರೆ ಅವರು ಡೆಪ್ಯುಟಿ ಸಿ.ಎಂ. ಎಂದು ಕರೆದಿದ್ದಾರೆಂದು ಅವರು ಹೋದರು. ಅವರು ಮನಸ್ಸಿನಲ್ಲಿ ಏನೋ ಇರಬಹುದು. ಆದರೆ, ಈ ಒಂದು ರೀತಿಯಲ್ಲಿ ಅವರೂ ಸಹ ಹೋದರು. ಹೋಗಿದ್ದರಿಂದ ಇಲ್ಲಿ ನಿಮ್ಮದು ಡ್ಯಾಮೇಜ್ ಆಯಿತು. ತಪ್ಪು ಏನಿಲ್ಲ. ಆದರೆ ಅವರು ಹೋಗಬಾರದೆಂದು ಹೇಳಿದ್ದರೆ ಅವರು ಹೋಗಬಾರದು. ಯಾರೂಬ್ಬ ನನ್ನ ಹೆಂಡತಿ ಜೊತೆಯಲ್ಲಿ ಮಾತನಾಡಬಾರದು ಎಂದು ಹೇಳಿದರೆ ನೀನು ಮಾತನಾಡಬಾರದು. ಹೆಂಡತಿ ಸಹ ಅವನ ಜೊತೆ ಮಾತನಾಡಬಾರದೆಂದರೆ ಮಾತನಾಡಬಾರದು. ನಾನು ಮಾತನಾಡುತ್ತೇನೆಂದರೆ ಆತನಿಗೆ ಸಂದೇಹ ಬರುತ್ತದೆ. ಓಹೋ ಯಾವಾಗಲಾದರೂ ಇದು

ಡೇಂಜರ್ ಎಂದು ತಿಳಿದುಕೊಳ್ಳುತ್ತಾರೆ. ಇಷ್ಟಿದ್ದರೂ ಏನೇನೋ ಮಾತನಾಡಿದರೆ ಆತನಿಗೆ ಡೌಟ್ ಬರುತ್ತದೆ. ಗಂಡ ಹೆಂಡತಿ ಅಪಾರ ಪ್ರೀತಿಯಲ್ಲಿದ್ದರೆ ಥರ್ಡ್‌ಪರ್ಸನ್ ಏನು ಮಾಡುತ್ತಾರೆಂದರೆ, ನೀನು ಇಷ್ಟು ಹೇಳಿದರೂ ಕೂಡ ನಿನ್ನ ಹೆಂಡತಿ ಆತನ ಮಾತನಾಡುತ್ತಿದ್ದರೆಂದು ಅಲ್ಲಿ ಹೋಗಿ ಹೇಳುವುದು. ಮತ್ತೆ ಈಕೆಯ ಹತ್ತಿರ ಬಂದು ನೀವು ಒಳ್ಳೆಯ ರೀತಿಯಲ್ಲಿ ಮಾತನಾಡಿದರೂ ನಿಮ್ಮ ಯಜಮಾನರು ದೊಡ್ಡದಾಗಿ ತೆಗೆದುಕೊಳ್ಳುತ್ತಾರೆಂದು ಇಲ್ಲಿ ಹೇಳುವುದು. ಎರಡು ಕಡೆ ಹೇಳಿ ಅವರುಗಳನ್ನು ಸಪರೇಟ್ ಮಾಡಿ ಇವನು ಅವಳ ಜೊತೆಗೆ ಹೋಗಿಬಿಟ್ಟ. ಈ ರೀತಿಯಾಗಿ ಇಲ್ಲಿ ಆಗಿದೆ. ಇಬ್ಬರ ಮೇಲೂ ಕೂಡ ಯಾವುದೇ ತಪ್ಪಿಲ್ಲ. ಅಂದರೆ, ಇಲ್ಲಿ ಬಿಜೆಪಿಯವರದು ಏನೂ ತಪ್ಪಿಲ್ಲ. ಆ ಸಿಚ್ಯುಯೇಷನ್‌ನ್ನು ಅವರು ಕರೆಕ್ಟ್ ಆಗಿ ನೋಡಿಕೊಂಡರು. ಯಾರಿದ್ದರೂ ಸಹ ಇದನ್ನೇ ಮಾಡುತ್ತಿದ್ದರು. ಯಾರಾದರೂ ಕರೆದು ನಿಮಗೆ ಮಿನಿಸ್ಟರ್ ಮಾಡುತ್ತೇವೆಂದು ಹೇಳಿದರೆ ಯಾರಾದರೂ ಬೇಡವೆಂದು ಹೇಳುತ್ತಾರೆಯೆ? ಈಗ ಅಪರೂಪ ಶ್ರೀಮಾನ್ ಪಿ.ಜಿ.ಆರ್; ಸಿಂಧ್ಯಾರವರ ತರಹ ನಾನು ನನ್ನ ತರಹ ಈ ತರಹದ ಸಂದರ್ಭದಲ್ಲಿ as a Republican Party of India, I am for my party. My Republican Party of India president Mr.R.S. Gawai is a Rajya Sabha Member by the support of the Congress. ಅವರ ವಿರುದ್ದವಾಗಿ ನಾನು ಹೋದರೆ, I am not a loyal person. As a Karnataka legislator, what I ahve to do ? whether I like Kumaraswamy or not. One word, straight away. Yes, I like him. ಏತಕ್ಕೆ ನೀವು ಲೈಕ್ ಮಾಡುತ್ತಿರೆಂದು ಕೋಶ್ಚನ್ ಮಾಡಿ ಕೇಳಿದರೆ, ಲೈಕಿಂಗ್‌ನಲ್ಲಿ ಹೇಳುವುದಕ್ಕಾಗುತ್ತದೆಯೇ ? O.K. ಏಕೆ liking ಅಂದರೆ ಲೈಕಿಂಗ್ ಅದನ್ನೂ ಹೇಳುವುದಕ್ಕಾಗುತ್ತದೆಯೆ ? Liking is liking. ಏಕೆ ಲೈಕ್ ಮಾಡುತ್ತೀರೆಂದರೆ ಹೇಗೆ ಎಕ್ಸ್‌ಪ್ಲೇನ್ ಮಾಡುತ್ತೀರಿ. ನಾನು ಹ್ಯಾಪಿಯಾಗಿದ್ದೇನೆ, ಏಕೆ ಹ್ಯಾಪಿ ಎಂದರೆ, ನಾನು ಈ ತರಹ ಹ್ಯಾಪಿ ಎಂದು ಬರೆದು ಕೊಡುವುದಕ್ಕಾಗುತ್ತದೆಯೇ ? ಲವ್ ಕೂಡ ಪ್ರೀತಿನೇ ? ಏನಾಗಿದೆ ಎಂದರೆ, ಮಿಸ್ಟೇಕ್ ಹೇಗೆ ಬಂದಿದೆ ಎಂದರೆ, ಡಿಸೈಡ್ ಮಾಡಿದರು. ಕಾಂಗ್ರೆಸ್‌ನವರು ಜನತಾದಳದವರಿಗೆ ಎಷ್ಟು ನೋವನ್ನು ಕೊಟ್ಟಿದ್ದರು ಅದರ ಬಗ್ಗೆ ನಮಗೆ ಗೊತ್ತಿಲ್ಲ. ಬಿಜೆಪಿ ಯವರ ಬಗ್ಗೆ ತಪ್ಪು ಹೇಳಲೇಬಾರದು. ಅವರು ಸುಮ್ಮನೆ ಇದ್ದರು. ಅರು ಏನು ಗಲಾಟೆ ಮಾಡಿದ್ದರಾ, ನಾವು ಅಲ್ಲಿ ಬರಬೇಕೆಂದು ಹೇಳಿದ್ದರಾ ? ಇಲ್ಲ. They were keeping quite. Somebody wants their support, they have taken it, they are sitting here. ಇದು ಒಂದು ಕಡೆ. ಇಷ್ಟೆಲ್ಲಾ ನಾವು ಪ್ರೀತಿಯಿಂದ ಮಾತನಾಡಿದರೂ I would like to discuss with ಶ್ರೀಮಾನ್ ಯಡಿಯೂರಪ್ಪನವರ ಬಗ್ಗೆ ಪತ್ರಿಕೆಯನ್ನು ನೋಡಿದರೆ ಷೆಡ್ಯೂಲ್ಡ್ ಕಾಸ್ಟ್‌ದವರು, ದಲಿತರು ಹೋರಾಟ ಮಾಡುತ್ತಿದ್ದಾರೆ ಶ್ರೀಮಾನ್ ಯಡಿಯೂರಪ್ಪನವರು ಡಾ: ಬಾಬಾಸಾಹೇಬ ಅಂಬೇಡ್ಕರ್‌ರವರ ಫೋಟೋವನ್ನು ಅವರ ಕೊಠಡಿಯಿಂದ ತೆಗೆದಿದ್ದಾರೆ. ನನ್ನ ಕಣ್ಣ ಮುಂದೆಯೇ ತೆಗೆದಿದ್ದರು ಎಂದು ಕನ್ನಡ ಪ್ರಭ ಪತ್ರಿಕೆಯಲ್ಲಿ 4ನೇ ತಾರೀಖು ಬರೆದಿದ್ದಾರೆ ನೋಡಿ. ಇದರ ಮೇಲೆ through out the state ಪ್ರತಿಭಟನೆ ಮಾಡುತ್ತಿದ್ದಾರೆ, effigies burn ಮಾಡುತ್ತಿದ್ದಾರೆ. It is a burning issue. ಅದರ ಬಗ್ಗೆ ಮಾನ್ಯ ಈಶ್ವರಪ್ಪನವರು ಹೇಳಿದರು. ಆ ತರಹ ನಮ್ಮ ನಾಯಕರು ಹೇಳಿಲ್ಲ. ಅವರಿಗೋಸ್ಕರ ನಮ್ಮ ನಾಯಕರು ಹೋರಾಟ ಮಾಡಿದವರು ಎಂದು.

ಶ್ರೀಮಾನ್ ಯಡಿಯೂರಪ್ಪನವರು ಅದರ ಬಗ್ಗೆ ಹೇಳಿದರು. ಸತ್ಯವಾಗಿ ನಾನು ಆ ತರಹ ಮಾಡಿಲ್ಲ. ಇದಕ್ಕಿಂತ ದೊಡ್ಡ ಮಾತು ಏನೂ ಇಲ್ಲ; ಒಪ್ಪಿಕೊಳ್ಳುತ್ತೇನೆ. ಇಷ್ಟೆಲ್ಲಾ ನೀವು ಮಾಡಿಲ್ಲವೆಂದು ಸತ್ಯಾಂಶವನ್ನು ಹೇಳಿದಿರಲ್ಲಾ, you challenge, you take it. The entire House, members will support you. You move the privilege motion against the press man. Move a privilege motion against him. Bring him to this House. Put him in a cage and question him, Why you have written like this. ಹೀಗೆ ಮಾಡಿದರೆ ನಿಜವಾಗಲೂ , you are for the Scheduled caste and Scheduled Tribes. ಎಂದು ಗೊತ್ತಾಗುತ್ತದೆ. If you are supressing that, then the question will raise whether it is true or not. ತಾವು ಮಾಡಲೇಬೇಕು. ಇಷ್ಟು ನೀವು ಅಶ್ಯೂರೆನ್ಸ್ ಕೊಟ್ಟ ಮೇಲೆ ಸತ್ಯವಾಗಿ ಮಾಡಿಲ್ಲವೆಂದು ಹೇಳಿದ ಮೇಲೆ ನನ್ನ personal opinion ರೀತಿಯಲ್ಲಿ ನೀವು ಮಾಡಿದರೆ ನಂಬಿಕೆ ಬರುತ್ತದೆ. ನೀವು ಯಾರಿಗೆ ವೋಟ್ ಹಾಕುತ್ತೀರೆಂದು ಕೇಳುತ್ತಾರೆ, ನಮ್ಮ ಪಾರ್ಟಿ ಬೆಂಬಲ ಕಾಂಗ್ರೆಸ್ ಮೇಲೆ ಇದೆ, ನನಗೆ ಶ್ರೀಮಾನ್ ಧರ್ಮಸಿಂಗ್‌ರವರ ಮೇಲೆ ಅಪಾರ ಪ್ರೀತಿ ಇದೆ, ನನಗೆ ಧರ್ಮಸಿಂಗ್‌ರವರಿಗೆ ವೋಟು ಹಾಕಬಾರದೆಂದು ಹೇಳಿದರೆ, ನಾನು ಅವರಿಗೋಸ್ಕರ ವೋಟು ಹಾಕುವುದೇ ಅಥವಾ ನಿಮ್ಮ ಮಾತನ್ನು ಕೇಳಿಕೊಂಡು ನಿಮ್ಮ ಸಲುವಾಗಿ ವೋಟು ಹಾಕುವುದಾ ? ಮತ್ತು ಈಗ ಇರುವ ಸಿಚ್ಯುಯೇಶನ್‌ನಲ್ಲಿ ಕಾಂಗ್ರೆಸ್‌ನವರೇ ನಮ್ಮ ಧರ್ಮಸಿಂಗ್‌ರವರಿಗೆ ಅನ್ಯಾಯ ಮಾಡಿದ್ದಾರೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ ಸರ್. ಪಾಪ ಅಂತಹ ಒಳ್ಳೆಯ ವ್ಯಕ್ತಿ ಅವರು ನಾನು ಮಾನ್ಯ ಕುಮಾರಸ್ವಾಮಿಯವಿಗೆ ವೋಟು ಹಾಕಿದರೆ ನಮ್ಮ ಕಾನ್‌ಸ್ಟಿಟ್ಯೂಯೆನ್ಸಿ ಚೆನ್ನಾಗಿರುತ್ತದೆ ಎಂಬುದು That is the truth. ನಾನು ಓಪನ್ನಾಗಿ ಮಾತನಾಡುತ್ತೇನೆ. Why, because, I am not yielding to either this side or that side. I am not. This is the fact, we should speak truth on the Floor of this Home. ಆ ತರಹ ಶ್ರೀಮಾನ್ ಯಡಿಯೂರಪ್ಪನವರು, What is the burning issue today in the entire state. In the name of Baba Sahib Ambedkar, you i,e the Hon. Deputy Chief Minister removed that photo. ಸತ್ಯವಾಗಿ ನಾನು ಆ ಕೆಲಸವನ್ನು ಮಾಡಿಲ್ಲವೆಂದು ಹೇಳಿದ್ದಕ್ಕೋಸ್ಕರ , you have to move the privilege motion against that press. ಅವರು ಬರಲಿ, ನಿಜ ಹೇಳಲಿ. ಏಕೆ ಒಂದು ಸುಳ್ಳನ್ನು ಡೆಪ್ಯುಟಿ ಸಿ.ಎಂ. ಮೇಲೆ ಬರೆಯಬೇಕು ? ಅವರು ಏನು ಉತ್ತರವನ್ನು ಹೇಳುತ್ತಾರೆ ಅದರ ಬಗ್ಗೆ ಜನರಿಗೆ ಗೊತ್ತಾಗಲಿ. It is a crystal clear discussion. ಹಾಗೆ ಮಾಡಿದರೆ ಅದು ನಮ್ಮ ಕಮ್ಯುನಿಟಿಗೆ ನೀವು ಅವಮಾನ ಮಾಡಿಲ್ಲವೆಂದು ಗೊತ್ತಾಗುತ್ತದೆ ನಾನು ಬೇಗ ಮುಗಿಸಿ ಬಿಡುತ್ತೇನೆ. ಈ ಕಡೆ ಇರುವವರು ಯಾರೂ ತೊಂದರೆ ಮಾಡಿಲ್ಲ. ಅವರಿಗೂ ಒಂದು ಸಂತೋಷವಿದೆ. ಚುನಾವಣೆಯಲ್ಲಿ ನಮಗೆ ಒಳ್ಳೆಯ ಹೆಸರು ಬರುತ್ತದೆ, ಬಿಜೆಪಿ ಯವರು ರಾಂಗ್ ಸಿಗ್ನಲ್ ಹೋಗುತ್ತಿದ್ದಾರೆಂದಾಗ ಕೆಲವೊಂದು ಸಲ ಅದೇ ರೈಟ್ ಸಿಗ್ನಲ್ಲಾಗಿ ಬಿಡುತ್ತದೆ. ಹೇಗಂದರೆ, ಅಟೋ ಹೊಸದಾಗಿ ಊರಿನಲ್ಲಿ ಬರುವಾಗ ಜನ ಎಲ್ಲಾ ಮಾತನಾಡಿದ್ದಾರೆ ಎರಡು ರೂಪಾಯಿ ಕೊಟ್ಟು ಅಟೋಗೆ ಹೋಗುತ್ತಾನೆ ಇದೆಲ್ಲಾ ಆಗುತ್ತದೆಯೆ ಬಿಡುತ್ತದೆಯೆ ? ಜನ ಇಷ್ಟೆಲ್ಲಾ ಮಾತನಾಡಿದರು.

ಈಗ ಆಟೋ ಅಂದರೆ ಆ ಜನ ಹೋಗುವುದೇ ಇಲ್ಲ. ಶ್ರೀಮಾನ್ ಕುಮಾರಸ್ವಾಮಿಯವರು ನೈಟ್‌ರೌಂಡ್ಸ್ ನಾವು ಬರುತ್ತೇವೆ. ಏನೇನು ನಡೆಯುತ್ತದೆ ಅದನ್ನೆಲ್ಲಾ ನಾವು ನೋಡುತ್ತೇವೆ. ಎಂದು ಜೊತೆಗೆ ಸ್ವಾಮಿ ಐಎಎಸ್, ಐಪಿಎಸ್ ಅಧಿಕಾರಿಗಳ ರೌಂಡ್ಸ್ ಮಾಡಿ ಊರಿನಲ್ಲಿ ಇವರಿಂದಲೇ ಅರ್ಥ ಗೊಂದಲ. Yes, my earlier Chief Minister has given more liberty to IAS. IPS officers, who have spoiled the entire administration of the state, ಎಕ್ಸೈಜ್ ಡಿಪಾರ್ಟ್‌ಮೆಂಟಾಗಲಿ, ಆರ್‌ಟಿಒ ಡಿಪಾರ್ಟ್‌ಮೆಂಟಾಗಲಿ ಮಜಾ ಮಾಡಿ ಲೂಟಿ ಮಾಡಿಕೊಂಡು ತಿನ್ನುವವರ ಮೇಲೆ ನಾವು ಚಾರ್ಜ್ ತೆಗೆದುಕೊಂಡು ಬಂದರೆ, you must belive us and take action against them. Because of the members' belief, because of our co-operation, you are sitting as Chief Minister. None of the IAS officers.IAS officers or KAS officers supported you to sit in the chair. They are not. You should take them to task. Then you will get good name and fame. Keep this in your mind. I once again should be thankful to my previous chief Minister. I must be in his heart. What ever it may be, yes, I like it. He is simple, you is very tasteful personality. ಅದು ಹೇಗೆ ಸರ್, ನೀವೇ ಹೇಳಿ ಸರ್, ನಾನು ಮಂತ್ರಿಯಾದರೆ ಒಂದು ಕಡೆ ಹೇಳಿ ಬಿಡುತ್ತೇನೆ. ನಾನು ನೀವು ಮಂತ್ರಿ ಕೊಡುತ್ತೇನೆಂದರೆ ಅಲ್ಲ. You should appreciate what he has done. He has done wonderful work. ನಾವು ಹೋದರೆ ಅಪಾರವಾದ ಪ್ರೀತಿಯನ್ನು ಇಟ್ಟುಕೊಂಡು, ನಮ್ಮ ಕೆಲಸ ಮಾಡಿ ಕೊಟ್ಟಿದ್ದಾರೆ. ನಿಜವಾಗಲೂ ನಮಗೆ ನೋವು ಅಂತಹ ಒಬ್ಬ ವ್ಯಕ್ತಿ ಕುಳಿತುಕೊಂಡಿರಬೇಕಾಗಿತ್ತು , ಅವರ ಕಡೆಯಿಂದಲೋ ಯಾರ ಕಡೆಯಿಂದನೋ ಆದ ತಪ್ಪಿಗಾಗಿ ಅವರು ಈ ಕಡೆ ಬಂದಿದ್ದಾರೆ. Whatever it may be, we wish this government to do the good work for the people ಎಂದು ಹೇಳಿ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ thank you very much.

**ಶ್ರೀ ಬಿ.ಆರ್.ಪಾಟೀಲ್ (ಆಳಂದ)** : ಮಾನ್ಯ ಛೇರ್ಮನ್‌ರವರೇ ಈ ವಿಶ್ವಾಸ ಮತದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ನಾನು ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇನೆ. ಈಗಾಗಲೇ ಬೆಳಿಗ್ಗೆಯಿಂದ ಮಾನ್ಯ ಮುಖ್ಯ ಮಂತ್ರಿಗಳಿಂದ ಹಿಡಿದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಧರ್ಮಸಿಂಗ್‌ರವರನ್ನು ಹಿಡಿದು ಅನೇಕ ಹಿರಿಯ ಸದಸ್ಯರು ಮತ್ತು ಮುಖಂಡರು ತಮ್ಮ ತಮ್ಮದೇ ಆದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ಈ ರಾಷ್ಟ್ರದಲ್ಲಿ ತನ್ನದೇ ಆದ ವೈಶಿಷ್ಟತೆ ಮತ್ತು ಸಂಸ್ಕೃತಿ ಮತ್ತು ಸಭ್ಯತೆ ಪರಂಪರೆಯನ್ನು ಇಟ್ಟುಕೊಂಡು ರಾಷ್ಟ್ರದಲ್ಲಿ ಒಂದು ಹೊಗಳಿಕೆಗೆ ಪಾತ್ರವಾದಂಥ ಈ ರಾಜ್ಯ. ಇಲ್ಲಿ ಸರ್ವಧರ್ಮ ಸಮಭಾವತೆ ಮತ್ತು ಜಾತಿಜಾತಿಗಳ ಮಧ್ಯೆ ಒಂದು ಸಾಮರಸ್ಯ, ಇಂತಹ ಒಂದು ಒಳ್ಳೆಯ ನಾಡಿನಲ್ಲಿ

(ಗೊಂದಲ)

ಛೇರ್ಮನ್ : ಮಾನ್ಯ ಚಂದ್ರಣ್ಣ ದಯಮಾಡಿ, ಸ್ಟೇಟ್ಸ್ ಪ್ಲೀಸ್.

ಶ್ರೀ ಬಿ.ಆರ್. ಪಾಟೀಲ್ : ಹಾಗಾಗಿ ಈ ರಾಜ್ಯಕ್ಕೆ ಒಂದು ಇತಿಹಾಸ ಹಾಗೂ ಪರಂಪರೆ ಇದೆ. ಆ ಇತಿಹಾಸ ಮತ್ತು ಪರಂಪರೆಯನ್ನು ಕಾಯ್ದುಕೊಂಡು ಹೋಗಬೇಕಾದುದು ನಮ್ಮೆಲ್ಲರ ಜವಾಬ್ದಾರಿ ಎಂದು ನಾನು ಭಾವಿಸುತ್ತೇನೆ. ಕಳೆದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟವಾದ ಬಹುಮತ ಸಿಗಲಿಲ್ಲ. ನಾವೆಲ್ಲರೂ ಕಾಂಗ್ರೆಸ್ಸಿನ ವಿರುದ್ಧ ಹೋರಾಟವನ್ನು ಮಾಡಿ ರಾಜಕಾರಣವನ್ನು ಮಾಡಿದವರಾಗಿದ್ದೇವೆ. ಆದರೆ ಒಂದು ವಿಚಾರಕ್ಕೆ ಬಂದಾಗ ಕೋಮುವಾದಿ ಶಕ್ತಿಗಳನ್ನು ಹೊರಗೆ ಇಡಬೇಕು, ಜಾತ್ಯಾತೀತ ಶಕ್ತಿಗಳು ಒಂದು ಕಡೆ ಬರಬೇಕೆನ್ನುವಂತಹ ಒಂದೇ ಒಂದು ದೃಷ್ಟಿಯಿಂದ ನಾವು ಮತ್ತು ಕಾಂಗ್ರೆಸ್ಸಿನವರು ಸೇರಿಕೊಂಡು ಸರ್ಕಾರವನ್ನು ರಚನೆ ಮಾಡಿದೆವು. ಸರ್ಕಾರ ರಚನೆ ಮಾಡುವುದು ಬಹಳ ಕಷ್ಟ ಕರ್ನಾಟಕದಲ್ಲಿ ಒಂದು ಹೊಸ ಪ್ರಯೋಗ ಪ್ರಾರಂಭವಾದುದು ಇದು ಮೊದಲನೆಯ ಸಲುವಾಗಿದೆ. ಶ್ರೀಮಾನ್ ಧರ್ಮಸಿಂಗ್‌ರವರ ತಾಳ್ಮೆ ಮತ್ತು ಸಹಿಷ್ಣತೆ ಮತ್ತು ಅವರು ಒಂದು ಸೇಡಿನ ಮನೋಭಾವನೆ ಇಲ್ಲದೆಯೇ ಇವತ್ತು ರಾಜಕಾರಣವನ್ನು ಮುಂದುವರಿಸಿಕೊಂಡು ಬಂದರು. ಅವರು ಇದನ್ನೆಲ್ಲಾ ತೆಗೆದುಕೊಂಡು ಬಂದು ಈ ಸರ್ಕಾರವನ್ನು ನಡೆಸುವುದರಲ್ಲಿ ಖಂಡಿತವಾಗಿಯೂ ಯಶಸ್ವಿಯಾದರು. ಇವತ್ತು ಏನೂ ಎರಡು ಪಕ್ಷಗಳೂ ಸೇರಿ ಹೊಂದಾಣಿಕೆಯನ್ನು ಮಾಡಿಕೊಂಡಿದೆ. ಆ ಕಡೆ ಕುಳಿತಿರುವಂತಹ ನಮ್ಮ ಬಿಜೆಪಿ ಸ್ನೇಹಿತರು ಬಹಳ ಸಮಯ ಅವಕಾಶವನ್ನು ಉಪಯೋಗ ಮಾಡಿಕೊಂಡು ನಮ್ಮ ಮೇಲೆ ಟೀಕೆ ಪ್ರಹಾರವನ್ನು ಮಾಡಿದರು. ಸಮಯ ಸಂದರ್ಭ ಬಂದಾಗ ನಮ್ಮನ್ನೆಲ್ಲಾ ಚುಚ್ಚಿ ಮಾತನಾಡಿದರು ನಾವು ಅವೆಲ್ಲವನ್ನೂ ಸ್ವೀಕಾರ ಮಾಡಿದೆವು. ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಈ ಎರಡು ಉತ್ತರ ಮತ್ತು ದಕ್ಷಿಣಧ್ರುವದ ತದ್‌ವಿರುದ್ಧ ದಿಕ್ಕಿನಲ್ಲಿ ಹೋಗುವಂತಹ ಪಕ್ಷಗಳಲ್ಲ. ಹಾಗಾಗಿ ಸಾಮ್ಯತೆಗೆ ಒಳಗಾಗಿ ನಾವು ಅನಿವಾರ್ಯವಾಗಿ ಪ್ರಸಂಗಕ್ಕೆ ಬಂದೆವು. ಮನಸಿಲ್ಲದ ಮನಸ್ಸಿನಿಂದ ಒಂದು ಸರ್ಕಾರವನ್ನು ರಾಜ್ಯಕ್ಕೆ ಕೊಡಬೇಕು. ರಾಜ್ಯದ ಬೊಕ್ಕಸದ ಮೇಲೆ ಮತ್ತೊಂದು ಚುನಾವಣೆಯನ್ನು ತಂದು ಭಾರವನ್ನು ಹೇರಬಾರದು. ಆ ಒಂದು ಕಾರಣಕ್ಕಾಗಿ ಸರ್ಕಾರವನ್ನು ಕೊಡುವಂತಹ ಪ್ರಯತ್ನ ಶ್ರೀಮಾನ್ ಧರ್ಮಸಿಂಗ್‌ರವರ ನಾಯಕತ್ವದಲ್ಲಿ ನಾವೆಲ್ಲರೂ ಒಪ್ಪಿ ನಡೆಸಿದ್ದೇವೆ. ಶ್ರೀಮಾನ್ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಯಾಗಿ ಹಣಕಾಸಿನ ಸಚಿವರಾಗಿ ಬಹಳ ದಕ್ಷತೆಯಿಂದ ಈ ರಾಜ್ಯಕ್ಕೆ ಎರಡು ಆದರ್ಶ ಬಜೆಟನ್ನು ಕೊಟ್ಟರು. ಪ್ರಾರಂಭದಲ್ಲಿ ನಮ್ಮ ಪಕ್ಷದಿಂದ ಬೇಡಿಕೆ ಬೋರ್ಡ್ ಹಾಗೂ ಕಾರ್ಪೋರೇಷನ್ ಆಗಬೇಕು. ಅಧಿಕಾರ ಸಿಗಬೇಕು, ಇವೆಲ್ಲವೂ ಸ್ವಾಭಾವಿಕವಾದುದು. ಒಂದೇ ಪಕ್ಷಕ್ಕೆ ಬಹುಮತ ಸಿಕ್ಕಿದ್ದರೆ ಇವುಗಳನ್ನೆಲ್ಲಾ ಬಹಳ ಸರಳವಾಗಿ ಮಾಡಬಹುದಾಗಿತ್ತು. ಆದರೆ ಎರಡು ಪಕ್ಷಗಳ ಆಡಳಿತ ಅವರು ಪ್ರತಿ ಮಾತಿಗೂ ಕೂಡ ಹೈಕಮಾಂಡನ್ನು ಕೇಳಬೇಕಾಗಿತ್ತು. ಇಲ್ಲಿ ನಮ್ಮಲ್ಲಿಯೂ ಕೂಡ ಬಹಳ ಅಧಿಕಾರದ ಆಸೆ ಒತ್ತಡದಿಂದ ನಾವೂ ಕೂಡ ತೀರ್ಮಾನ ಮಾಡುವುದಕ್ಕೆ ಬಾರದಿರುವ ಕಾರಣಕ್ಕಾಗಿ ಇದು ಆ ಪ್ರಕ್ರಿಯೆ ಮುಂದುವರಿಸಿಕೊಂಡು ಹೋಗುವುದಕ್ಕೆ ಆಗಲಿಲ್ಲ. ಹಾಗಾಗಿ ಒಳಒಳಗೆ ಒಂದು ಬಿಸಿ ವಾತಾವರಣ ನಿರ್ಮಾಣವಾಯಿತು. ಕೊನೆಗೆ ಎಲ್ಲಿಯವರೆಗೆ ಈ ರಾಜಕಾರಣ ಹೋಯಿತು ಎಂದರೆ ಏನು ಒಂದು ಸಿದ್ಧರಾಮಯ್ಯನವರು ಮತ್ತು ಅವರ ಸಂಗಡಿಗರು ದೇವರಾಜ ಅರಸುರವರು ಏನು ಒಂದು ಈ ಸಮಾಜದಲ್ಲಿ ಸಾಮಾಜಿಕ ಕ್ರಾಂತಿಯನ್ನು ಮಾಡಿ

ಬಸವಣ್ಣನವರು ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಬಿತ್ತಿಹೋಗಿದ್ದಾರೆ, ಆ ಒಂದು ರಥವನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕು. ಈ ರಾಜ್ಯದಲ್ಲಿ ಇನ್ನು ಒಂದು ಜಾತ್ಯಾತೀತ ಶಕ್ತಿಯನ್ನು ಇನ್ನು ಗಟ್ಟಿಯಾಗಿ ಬೆಳೆಸಬೇಕು. ಜಾತಿ ಜಾತಿಗಳ ಮಧ್ಯೆ ಸಾಮರಸ್ಯ ನಿರ್ಮಾಣವಾಗಬೇಕು. ಬಸವಣ್ಣನವರ ಸಂದೇಶವನ್ನು ಮನೆಮನೆಗೆ ಹೋಗಿ ಮುಟ್ಟಿಸಬೇಕು ಎನ್ನುವಂತಹ ಉದ್ದೇಶದಿಂದ ಅವರೇ ಒಂದು ವೈಚಾರಿಕ ನಿಲುವು ತೆಗೆದುಕೊಂಡು ಹುಬ್ಬಳ್ಳಿಯಲ್ಲಿ ಒಂದು ಸಮಾವೇಶವನ್ನು ಮಾಡಿದೆವು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರವರಿಗೆ ಬೇಕಾಗಿರುವಂತಹ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಜನರಿಗೆ ಹೇಳುವಂತಹ ಸ್ವಾತಂತ್ರ್ಯ ಈ ಸಂವಿಧಾನದ ಮೂಲಕ ಕೊಟ್ಟಿರುವುದರಿಂದ ಯಾರು ಕೂಡ ಅದಕ್ಕೆ ಹೊರತಾಗಿ ಇರುವುದಕ್ಕೆ ಸಾಧ್ಯವಿಲ್ಲ. ಆವೊಂದು ಪ್ರಕ್ರಿಯೆಯಲ್ಲಿ ಅಹಿಂದ ಚಳುವಳಿಯು ಪ್ರಾರಂಭವಾಯಿತು. ಆ ಅಹಿಂದ ಚಳುವಳಿಯು ಯಾವುದೇ ಒಬ್ಬ, ವ್ಯಕ್ತಿಯ ವಿರುದ್ಧವಾಗಿ ಚಳುವಳಿಯು ಶುರುವಾಗಲಿಲ್ಲ. ಅಥವಾ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ರಚನೆಯಾಗಿ ಆ ಸರ್ಕಾರದ ಕಾರ್ಯಕ್ರಮದ ವಿರುದ್ಧ ಅವತ್ತು ಆ ಚಳುವಳಿಯಾಗಿರಲಿಲ್ಲ. ಅಥವಾ ಜಾತ್ಯಾತೀತ ಸಿದ್ಧಾಂತದ ವಿರುದ್ಧ ಚಳುವಳಿಯಾಗಿರಲಿಲ್ಲ. ಆ ಒಂದು ಚಳುವಳಿ ಈ ಒಂದು ಸಾಮಾಜಿಕ ಚಳುವಳಿ ಅದು ಬಸವಣ್ಣ , ಬುದ್ಧ, ಅಂಬೇಡ್ಕರ್ ರಾಮಮನೋಹರ ಲೋಹಿಯಾ ಹೀಗೆ ಮಾನ್ಯ ದೇವರಾಜ ಅರಸ್‌ರವರ ದಾರಿಯಲ್ಲಿ ಈ ಚಳುವಳಿಯನ್ನು ಮುಂದೆ ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಅನೇಕ ಬಿಕ್ಕಟ್ಟುಗಳು ಬಂದವು. ಬಿಕ್ಕಟ್ಟುಗಳನ್ನು ನಾವು ಎಣಿಸಿದ್ದೇವೆ. ಮಾನ್ಯ ಮಹದೇವಪ್ಪನವರನ್ನು ಸಿದ್ದರಾಮಯ್ಯನವರನ್ನು ಸತೀಶ್ ಜಾರಕಿಹೊಳಿಯವರನ್ನು ಮಂತ್ರಿಮಂಡಲದಿಂದ ತೆಗೆದುಹಾಕಿದರು. ಅದು ಮಾನ್ಯ ಮುಖ್ಯಮಂತ್ರಿಯವರ ವಿವೇಚನೆಗೆ ಬಿಟ್ಟಿರುವಂತಹ ವಿಚಾರ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ನಿರ್ಧಾರಕ್ಕೆ ಬಿಟ್ಟಿರುವಂತಹದ್ದು. ನಾವುಗಳು ಅದನ್ನು ಸ್ವಾಗತ ಮಾಡಿ ನಮ್ಮ ನಮ್ಮ ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಂಡು ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ನಮಗೆ ಒಂದು ಅರ್ಥವಾಗುತ್ತಿಲ್ಲ:. ಶ್ರೀಮಾನ್ ಎಂ.ಪಿ. ಪ್ರಕಾಶ್‌ರವರನ್ನು ಅಲ್ಲಿ ನಾಯಕರನ್ನಾಗಿ ಮಾಡಿಕೊಂಡರು. ಮಾನ್ಯ ಸಿದ್ದರಾಮಯ್ಯನವರು ಅವತ್ತು ಹೇಳಿದ ಹಾಗೆ ಮಾನ್ಯ ಎಂ.ಪಿ ಪ್ರಕಾಶ್‌ರವರನ್ನು ನಾವು ಯಾವತ್ತೂ ಕೋಶ್ಚನ್ ಮಾಡುವುದಕ್ಕೆ ಹೋಗಲಿಲ್ಲ. ನಿಮ್ಮನ್ನು ಯಾರು ನಾಯಕರನ್ನಾಗಿ ಮಾಡಿದರು ? ನಮ್ಮನ್ನು ಏಕೆ ಸಭೆಗೆ ಕರೆಯಲಿಲ್ಲ., ನೀವು ಹೇಗೆ ಸಭಾ ನಾಯಕರು ಎಂದು ನಾವು ಕೊಶ್ಚನ್ ಮಾಡುವುದಕ್ಕೆ ಹೋಗಲಿಲ್ಲ. ನಾವು ಅವುಗಳನ್ನು ಸ್ವೀಕಾರ ಮಾಡಿದೆವು. ಕೋರ್ಟಿನಲ್ಲಿ ಪಕ್ಷದ ಚಿಹ್ನೆಯ ವಿಷಯಗಳ ದಾವೆ ಇವೆ.

**ಶ್ರೀ ಎಂ.ಟಿ. ಕೃಷ್ಣಪ್ಪ** : ಮಾನ್ಯ ಛೇರ್ಮನ್‌ರವರೆ ಇವುಗಳೆಲ್ಲಾ ಪಾರ್ಟಿ ಅಫೇರ್ಸ್ ಪಾರ್ಟಿಯಲ್ಲಿ ಮಾತನಾಡಿ ನಾಟ್ ಇನ್ ದಿ ಸೆಷನ್ . ಅದು ಅರ್ಥವಿಲ್ಲದ ವಿಚಾರ.

**ಛೇರ್ಮನ್** : ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ ಇದು ಕರ್ನಾಟಕದಲ್ಲಿ ಒಂದು ಕ್ಷಿಪ್ರವಾದ ರಾಜಕೀಯ ಬೆಳವಣಿಗೆ ಬೆಳೆದು ಈ ಕಡೆ ಕುಳಿತಿರುವವರು ಆ ಕಡೆಗೆ ಹೋಗಿದ್ದಾರೆ. ಆ ಕಡೆ ಕುಳಿತಿರುವವರು ಈ ಕಡೆಗೆ ಹೋಗಿದ್ದಾರೆ. ಒಂದು ಸಿದ್ದಾಂತದ ವಿರುದ್ಧ ಹೋರಾಟವನ್ನು ಮಾಡಿ ಆ ಕಡೆ ಮತ್ತು ಈ ಕಡೆಗೆ ಆಗಿದೆ. ಇಂತಹ ಸಂದರ್ಭದಲ್ಲಿ ಏನು ಮಾತನಾಡಬೇಕು. ಮಾನ್ಯ ಕುಮಾರಸ್ವಾಮಿಯವರು ವಿಶ್ವಾಸಮತವನ್ನು ಯಾಚನೆ ಮಾಡಿದ್ದಾರೆ. ನಿಮಗೆ 122ರ ಸಂಖ್ಯಾಬಲವಿದೆ.

ನಿಮಗೆ ವಿಶ್ವಾಸಮತ ಸಿಕ್ಕೇ ಸಿಗುತ್ತದೆ. ಆದರೆ ಇಲ್ಲಿ ರಾಜಕೀಯ ಸಿದ್ಧಾಂತದ ಬಗ್ಗೆ ಚರ್ಚೆ ಯಾಗಬೇಕು. ಯಾವ ಕಾರಣಕ್ಕಾಗಿ ಸರ್ಕಾರ ಹೋಯಿತು, ಯಾವ ಕಾರಣಕ್ಕಾಗಿ ಮತ್ತೊಂದು ಸರ್ಕಾರ ಬಂತು. ಇದರ ಬಗ್ಗೆ ಕರ್ನಾಟಕ ಜನತೆಗೆ ಗೊತ್ತಾಗಬೇಕು. ಆ ಕಾರಣಕ್ಕಾಗಿಯೇ ಮಾನ್ಯ ಸದಸ್ಯರಾದ ರಾಜೇಂದ್ರನ್‌ರವರು ಹೇಳಿದಹಾಗೆ 10 ನಿಮಿಷದಲ್ಲಿಯೇ ವಿಶ್ವಾಸ ಮತವನ್ನು ಯಾಚನೆ ಮಾಡಬಹುದಾಗಿತ್ತು. 122 ಮತ ನಿಮಗೆ ಇತ್ತು. ನಿಮಗೆ 97 ಮತ ವಿರೋಧ ಇತ್ತು. ನೀವು ಅಧಿಕಾರದಿಂದ ಪಾಸು ಆಗುತ್ತಿದ್ದೀರಿ ಯಾರ ಸರ್ಕಾರದ ವಿರುದ್ಧ ವಿಪ್‌ನ್ನು ವಿರೋಧ ಮಾಡುತ್ತಾರೋ ಅವರುಗಳು ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ. ಇಲ್ಲಿ ಪ್ರಶ್ನೆ ಏನು ಬಂದಿದೆ ಎಂದರೆ, ಏಕೆ ಗೊಂದಲ ನಿರ್ಮಾಣವಾಯಿತು. ಮಾನ್ಯ ಎಂ.ಪಿ. ಪ್ರಕಾಶ್‌ರವರ ಜೊತೆಗೆ ಮಂತ್ರಿಮಂಡಲ ಇತ್ತು ಸರ್ಕಾರ ಇತ್ತು ಮಾನ್ಯ ದರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದರು. ಜಾತ್ಯಾತೀತ ತತ್ವಗಳಿಗೆ ಎರಡೂ ಜನರು ಬದ್ಧರಾಗಿದ್ದರು. ಎಲ್ಲಿ ಗೊಂದಲ ಪ್ರಾರಂಭವಾಗಿ ಏನಾಯಿತು? ಇದರ ಬಗ್ಗೆ ನನಗಂತೂ ಏನೇನು ಅರ್ಥವಾಗುತ್ತಿಲ್ಲ. ಅಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಇದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅಲ್ಲಿ ಅಹಿಂದದಿಂದ ಹೆಜಾರಗೆ ಬದಂತಹ ನನ್ನ ಸ್ನೇಹಿತರುಗಳು ಈ ಧರ್ಮಸಿಂಗ್ ಸರ್ಕಾರದಲ್ಲಿ ಬ್ರಷ್ಟಾಚಾರ ಜಾಸ್ತಿಯಾಗಿದೆ ಜನರಿಗೆ ಅನ್ಯಾಯ ಜಾಸ್ತಿಯಾಗುತ್ತಿದೆ ಬಡವರ ಹೊಟ್ಟೆಯ ಮೇಲೆ ಹೊರೆಯಾಗುತ್ತಿದೆ. ಅದಕ್ಕೋಸ್ಕರ ನಾವು ಹೊರಗಡೆ ಬರುತ್ತಿದ್ದೇವೆ. ಆ ಮಾತನ್ನೂ ಕೂಡ ಹೇಳಬಹುದಾಗಿತ್ತು. ಆ ಮಾತು ಬರಲಿಲ್ಲ. ಉತ್ತರಕರ್ನಾಟಕದಲ್ಲಿ ಈ ಸರ್ಕಾರದಿಂದ ಅನ್ಯಾಯವಾಗುತ್ತಿದೆ ಅಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಆಗುತ್ತಿಲ್ಲ. ರಸ್ತೆಗಳು ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ. ಆ ಕಾರಣಕ್ಕೋಸ್ಕರ ಧರ್ಮಸಿಂಗ್ ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ. ಅದನ್ನಾದರೂ ಕೂಡ ಹೇಳಬಹುದಾಗಿತ್ತು. ಇಡೀ ರಾಜ್ಯದಲ್ಲಿ ಕಾರ್ಖಾನೆಯನ್ನು ಮುಚ್ಚಿ ಕಾರ್ಮಿಕರು ಬೀದಿಗೆ ಬಂದಿದ್ದಾರೆ, ಇವತ್ತು ಉದಾರೀಕರಣದ ನೀತಿಯಿಂದ ಇವತ್ತು ಇಡೀ ಉದ್ಯೋಗ ನಿಂತುಹೋಗುತ್ತಿದೆ. ಕೃಷಿಯು ಹಾಳಾಗಿಹೋಗುತ್ತಿದೆ. ಆ ಕಾರಣಕ್ಕಾಗಿ ನಾವು ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ. ಎಂಬ ಮಾತನ್ನು ಹೇಳಬಹುದಾಗಿತ್ತು. ಇವತ್ತೆ ರಾಜ್ಯದಲ್ಲಿ ಬಿಪಿಎಲ್ ಕಾರ್ಡು ಮತ್ತೊಂದು ಸಲ ಸರ್ವೆ ಮಾಡಿ ಹಂಚಬೇಕಾಗಿತ್ತು. ಬಡವರಿಗೆ ಸರಿಯಾಗಿ ಧಾನ್ಯ ಸಿಗುತ್ತಿಲ್ಲ. ಇದರಿಂದಾಗಿ ಅನ್ಯಾಯವಾಗುತ್ತಿದೆ. ಆ ಕಾರಣಕ್ಕಾಗಿ ನಾವು ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಬಹುದಾಗಿತ್ತು. ಕಳೆದ 4 ತಿಂಗಳಿಂದ ಯಾವ ಬಡವರಿಗೆ ಮಾನ್ಯ ಸಿದ್ದರಾಮಯ್ಯನವರು 3 ರೂಪಾಯಿಗೆ ಒಂದು ಕಿಲೋ ಅಕ್ಕಿಯನ್ನು ಕೊಡುವಂತಹ ಏನೊಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೋ, ಕಳೆದ 4 ತಿಂಗಳಿಂದ ಬಡವರಿಗೆ ಅಕ್ಕಿ ವಿತರಣೆಯಾಗದೆ ಯಾವುದೋ ಕಾರಣಕ್ಕಾಗಿ ಅದು ನಿಂತುಹೋಗಿತ್ತು. ಆ ಕಾರಣಕ್ಕಾಗಿ ಬಡವರ ಪರವಾಗಿ ಸರ್ಕಾರವನ್ನು ವಿರೋಧಿಸುತ್ತೇವೆ. ನಾವು ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ಅದನ್ನಾದರೂ ಕೂಡ ಹೇಳಬಹುದಾಗಿತ್ತು. ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷವಾಯಿತು. ಒಂದು ಮನೆಯನ್ನೂ ಕೂಡ ಈ ರಾಜ್ಯದಲ್ಲಿ ಹಂಚಿಲ್ಲ. ಆ ಕಾರಣಕ್ಕಾಗಿ ನಾವು ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತಿದೇವೆ ಎಂದು ಈ ಮಾತನ್ನು ಹೇಳಬಹುದಾಗಿತ್ತು. ಇದು ಯಾವುದನ್ನೂ ಕೂಡ ಹೇಳಲಿಲ್ಲ. ಇವತ್ತು ಪ್ರಶ್ನೆ ಇರತಕ್ಕದ್ದು ನಾವು ಹೇಳಿದಂತಹ ಟ್ರಾನ್ಸ್‌ಫರ್ ಆಗಲಿಲ್ಲ. ನಮ್ಮನ್ನು ಬೋರ್ಡ್ ಮತ್ತು ಕಾರ್ಪೋರೇಷನ್‌ಗೆ ಛೇರ್ಮನ್ ಮಾಡಲಿಲ್ಲ. ನಮಗೆ

ಹೋದ ಕಡೆಗಳಲ್ಲಿ ಕೆಲಸವನ್ನು ಮಾಡಲಿಲ್ಲ. ಸ್ವಾಮಿ, ಅಧಿಕಾರದಲ್ಲಿ ಬಂದಂತಹವರು ನಾವು ಎಂಎಲ್‌ಎ ಆಗುವುದಕ್ಕೆ ಬಂದಿದ್ದೇವೆ. ಬೋರ್ಡ್ ಮತ್ತು ಕಾರ್ಪೋರೇಷನ್‌ಗಳಲ್ಲಿ ಛೇರ್ಮನ್ ಆಗಬೇಕೆಂಬ ಆಸೆ ಇದೆ. ನಮಗೆಲ್ಲರಿಗೂ ಮಂತ್ರಿಗಳಾಗಬೇಕೆಂಬ ಆಸೆ ಇದೆ. ಆದರೆ ಇವತ್ತು ಜನರಿಗೆ ಸಂದೇಶ ಏನು ಹೋಯಿತು ಎಂದರೆ ಇದು ಸರ್ಕಾರ ಬದಲಾವಣೆಯಾದದ್ದು ಜನತೆಗೋಸ್ಕರ ಬದಲಾವಣೆಯಾಗಲಿಲ್ಲ.ತಮ್ಮ ಸ್ವಾರ್ಥಕ್ಕೋಸ್ಕರ, ನಿಮ್ಮ ಅಧಿಕಾರಕ್ಕೋಸ್ಕರ ಬದಲಾವಣೆ ಆಗಿದೆಯೆಂಬುದನ್ನು ರಾಜ್ಯದ ಜನತೆಗೆ ನೇರವಾಗಿ ಬಹಿರಂಗವಾಗಿ ಹೇಳಿಬಿಟ್ಟಿದ್ದೀರಿ, ಹಾಗಾಗಿ ಈ ಸರ್ಕಾರದ ಬದಲಾವಣೆ ಕರ್ನಾಟಕ ಇತಿಹಾಸಲ್ಲಿ ಬಹಳ ದೊಡ್ಡ ಅಪಾಯಕಾರಿ ಬದಲಾವಣೆ. ಒಂದು ಕಡೆ ಇತ್ತೀಚೆಗೆ ಒಂದು ತಿಂಗಳಲ್ಲಿ ಪೇಪರ್‌ಗಳನ್ನು ಓದುತ್ತಾ ಹೋದರೆ ತದ್ವಿರುದ್ಧವಾದ ಹೇಳಿಕೆಗಳು, ತದ್ವಿರುದ್ಧವಾದ ನಿಲುವುಗಳು, ಸೂಚನೆಗಳು, ರಾಷ್ಟ್ರೀಯ ಅಧ್ಯಕ್ಷರು ಒಂದು ಹೇಳುತ್ತಾರೆ, ರಾಜ್ಯದ ಅಧ್ಯಕ್ಷರು ಒಂದು ಹೇಳುತ್ತಾರೆ, ರಾಜ್ಯದ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳುತ್ತಾರೆ, ಇನ್ನೊಂದು ಗುಂಪಿನವರು ಮತ್ತೊಂದು ಹೇಳುತ್ತಾರೆ. ಯಾರದು ಸತ್ಯವೋ, ಯಾರದು ಮಿತ್ಯವೋ, ಒಟ್ಟಿನಲ್ಲಿ ರಾಜ್ಯದ ಜನತೆಯ ದಿಕ್ಕನ್ನು ತಪ್ಪಿಸುವಂತಹ ಕೆಲಸವಂತೂ ಆಗಿದೆ, ಯಾವುದನ್ನು ನಂಬಬೇಕು, ಯಾವುದನ್ನು ನಂಬಬಾರದು ಎಂಬುದರ ಬಗ್ಗೆ ಅಂದು ನಮಗೆ ಗೊತ್ತಾಗಲಿಲ್ಲ. ಸಂತ ಶಿಶುನಾಳ ಷರೀಫರು ಒಂದು ತತ್ವಪದವನ್ನು ಹೇಳುತ್ತಾರೆ, ' ಸುಳ್ಳೇ ಸುಳ್ಳು, ಸಂಸಾರದಾಗ ಸುಳ್ಳೇ ಸುಳ್ಳು, ನಾನು ಸುಳ್ಳೇ ಅವನು ಸುಳ್ಳು, ನೀನು ಸುಳ್ಳು, ಇವನು ಸುಳ್ಳು, ಕವಿ ಮಾಡಿದ ಕೈಬರಹ ಸುಳ್ಳು, ಸೃಷ್ಟಿಕರ್ತನೊಬ್ಬ ಮೊದಲೇ ಸುಳ್ಳು, ತಂದೆ ಸುಳ್ಳು, ಬಂಧು ಸುಳ್ಳು, ಮಗ ಸುಳ್ಳು., ತಂದೆ ತಾಯಿಗಳನ್ನು ನಂಬಿದಂತಹ ಹಂದಿ ಮಾನವ ಮೊದಲೇ ಸುಳ್ಳು,; ಈ ತತ್ವ ಪದ ನನಗೆ ನೆನಪಾಯಿತು, ಇದು ಯಾರು ಸತ್ಯ, ಯಾರು ಮಿತ್ಯ, ಇದು ಏನು ಎಂದು ನನಗೆ ಗೊತ್ತಾಗಲಿಲ್ಲ, ಹೀಗಾಗಿ ಇವತ್ತು ರಾಜ್ಯದಲ್ಲಿ ಎಷ್ಟೊಂದು ಗೊಂದಲದಿಂದ ರಾಜಕಾರಣ ನಡೆಯುತ್ತಿದೆ. ನಾವು ಹೇಳುವುದು ಸುಳ್ಳಲ್ಲ, ನೀವು ಹೇಳುವುದು ಸತ್ಯವಲ್ಲ, ಕರ್ನಾಟಕ ಜನತೆ ಏನು ಹೇಳುತ್ತದೆ ಅದೇ ಸತ್ಯ. ನಾವು ನೀವು ಏನೋ ನಮ್ಮ ಸ್ವಾರ್ಥಕ್ಕಾಗಿ ನಮ್ಮ ರಾಜಕಾರಣಕ್ಕಾಗಿ ಏನು ಹೇಳಿಕೊಂಡರೂ ಕೂಡ ಅಂತಿಮವಾಗಿ ನಮಗೆ ಮತ ಹಾಕಿ ಕಳುಹಿಸಿದಂತಹ ನಮ್ಮ ಪ್ರಭುಗಳು ಹೊರಗಡೆ ಕುಳಿತಿದ್ದಾರೆ, ಕಾಯುತ್ತಿದ್ದಾರೆ, ಅವರಿಗೆ ನಮ್ಮ ಸತ್ವ ಪರೀಕ್ಷೆ, ನಮ್ಮ ನಡತೆ, ನಮ್ಮ ನೀತಿ ಇವೆಲ್ಲಾ ಅವರಿಗೆ ಗೊತ್ತಾಗಬೇಕಾಗಿದೆ.__ _ ಜನ ಕೆಟ್ಟಿಲ್ಲ --- ಮಾನ್ಯ ಜಯಕುಮಾರ್‌ರವರೇ ಇಲ್ಲದ್ದನ್ನು ಸೃಷ್ಟಿ ಮಾಡಿ ಹೇಳಬಾರದು ಇವತ್ತು ರಾಜಕಾರಣದ ಬಗ್ಗೆ ನಮ್ಮ ಕಮ್ಯುನಿಸ್ಟ್ ಪಕ್ಷದ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡುತ್ತಾ ಅನೇಕ ಮಾತುಗಳನ್ನು ಹೇಳಿದರು. ಒಂದು ಮಾತನ್ನು ನಾವು ಇಲ್ಲಿ ನೆನಪಿಸಬೇಕಾಗುತ್ತದೆ. ಒಬ್ಬರು ಆಚಾರ್ಯ ಧರ್ಮಾನಂದ ಎನ್ನುವ ಕೇರಳದವರು, ಅವರೊಬ್ಬ ಹಿಂದೂ ಸನ್ಯಾಸಿ, ಹಿಂದೂ ಧರ್ಮದಲ್ಲಿ ಅಪಾರವಾದ ನಂಬಿಕೆಯನ್ನಿಟ್ಟುಕೊಂಡು ಸನ್ಯಾಸವನ್ನು ಸ್ವೀಕಾರ ಮಾಡಿ ದೇಶವನ್ನೆಲ್ಲಾ ಸುತ್ತಿ, ಸುತ್ತಿ ಕೊನೆಗೆ ಹಿಮಾಚಲ ಪ್ರದೇಶಕ್ಕೆ ಹೋಗಿ ಈ ದೇಶದ ವ್ಯವಸ್ಥೆಯ ಬಗ್ಗೆ ನೊಂದು ಅವರು 'ದಿ ಹಿಸ್ಟರಿ ಆಫ್ ಹಿಂದೂ ಇಂಪರಿಲಿಸಮ್ ' ಎಂಬ ಪುಸ್ತಕವನ್ನು ಬರೆಯುತ್ತಾರೆ. ಆ ಪುಸ್ತಕದ ಮುನ್ನುಡಿಯಲ್ಲಿ ಅವರು ಹೀಗೆ ಹೇಳುತ್ತಾರೆ, ಇತಿಹಾಸವನ್ನು ಮರೆತ ಜನ ಮಣ್ಣಾಗುತ್ತಾರೆ, ಇತಿಹಾಸವನ್ನು ಅರಿಯದ ಜನ ನಿರ್ವೀರ್ಯರಾಗುತ್ತಾರೆ. ಮರೆತವರು ಮಣ್ಣಾಗುತ್ತಾರೆ, ಇತಿಹಾಸವೆಂಬುದು ನಂಬಿಕೆ ವಸ್ತುವಲ್ಲ, ಅದು ವಿಶ್ಲೇಷಣಾ ಮಾಡುವುದು,

ನಮಗೆ ನಮ್ಮ ಗಾಂಧಿ, ಬುದ್ಧ ಹೇಳಿದ ಇತಿಹಾಸವೇನು ? ಬಸವಣ್ಣನವರು ಹೇಳಿದ ಇತಿಹಾಸವೇನು? ಅದೇ ಪ್ರಕಾರ ಬೇರೆಯವರ ಇತಿಹಾಸವೇನು ? ವೇಮಣ್ಣ, ನಾರಾಯಣರವರ ಇತಿಹಾಸವೇನು ? ಇವತ್ತು ಇತಿಹಾಸವನ್ನು ಬಿಟ್ಟು ಯಾವ ಕಡೆ ಹೊರಟಿದ್ದೇವೆ, ಅದಕ್ಕೆ ಅವರು ಒಂದು ಕಡೆ ಹೇಳುತ್ತಾರೆ, ಇತಿಹಾಸವನ್ನು ಮರೆತ ಜನ ಮಣ್ಣಾಗುತ್ತಾರೆ, ಇತಿಹಾಸವನ್ನು ಅರಿಯದ ಜನ ನಿರ್ವೀರ್ಯರಾಗುತ್ತಾರೆ. ಇವತ್ತಿನ ದಿವಸ ಇತಿಹಾಸವನ್ನು ಮರೆತಿದ್ದೇವೆ. ಇತಿಹಾಸವನ್ನು ಮರೆತು ನಾವು ಅಧಿಕಾರದ ಆಸೆಗಾಗಿ ಹಾದಿಯನ್ನು ತಪ್ಪಿ ಒಂದು ಕಡೆ ಹೋಗುತ್ತಿದ್ದೇವೆ. ಆ ದಾರಿಯಲ್ಲೇ ಮತ್ತೆ ವಾಪಸ್ ಬರಬೇಕಾಗುತ್ತದೆ ಏನಾದರೂ ಹೇಳಬಹುದು, ಅದು ನಿಮಗೆ ಬಿಟ್ಟಂತಹ ವಿಷಯ, ಮಾನ್ಯ ಅಧ್ಯಕ್ಷರೇ, ಇಲ್ಲಿ ಕರ್ನಾಟಕದ ಜನ ಎಷ್ಟು ಅತಂತ್ರರಾಗಿದ್ದಾರೆಂದು ಹೇಳಿದರೆ ಬಸವಣ್ಣನವರು ಒಂದು ಕಡೆ ಹೇಳುತ್ತಾರೆ, ಒಲೆ ಹತ್ತಿ ಉರಿದೊಡೆ ನಿಲ್ಲಬಹುದು, ಧರೆ ಹತ್ತಿ ಉರಿದೊಡೆ ನಿಲಬಹುದೇ ?

(ಗೊಂದಲ)

ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ಏಕೆಂದರೆ ಇನ್ನೂ ಮೂರು ವರ್ಷ ಈ ಸದನದಲ್ಲಿ ಇರಬೇಕೆಂದು ರಾಜೇಂದ್ರನ್ ಹೇಳಿದ್ದಾರೆ. ನಾನೊಬ್ಬ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದೇನೆ, ಒಂದು ಪಕ್ಷದಲ್ಲಿ ಎರಡು ನಿಲುವು ಎರಡೂ ಅಭಿಪ್ರಾಯ ಈ ಜಗತ್ತಿನ ಯಾವುದೇ ಪಕ್ಷದಲ್ಲಿ ನಾನು ನೋಡಲಿಕ್ಕೆ ಸಿಗಲಿಲ್ಲ, ಪಕ್ಷದ ರಾಷ್ಟ್ರಾಧ್ಯಕ್ಷರ ನಿಲುವು ಒಂದು, ರಾಜ್ಯಾಧ್ಯಕ್ಷರ ನಿಲುವು ಒಂದು ತದ್ವಿರುದ್ಧವಾದ ಸಿದ್ಧಾಂತದ ವಿರುದ್ಧ, ಇದು ಜಗತ್ತಿನ ಯವುದೇ ಒಂದು ರಾಜಕೀಯ ಪಕ್ಷದ ಇತಿಹಾಸದಲ್ಲಿ ನಡೆದಿಲ್ಲ, ಒಂದು ಪಕ್ಷಕ್ಕೆ ಒಂದು ಬದ್ಧತೆ, ಒಂದು ನಿಲುವು, ಸಿದ್ಧಾಂತ ಇದ್ದೇ ಇರಬೇಕು ಅದಕ್ಕೆ ಅದು ಪಕ್ಷ ಅನಿಸಿಕೊಳ್ಳುತ್ತದೆ, ಇಲ್ಲವಾದರೆ ಅದು ಚಾರಿಟಬಲ್ ಸಂಸ್ಥೆಯಾಗಿ ಯಾರೂ ಬೇಕಾದರೂ ಏನನ್ನಾದರೂ ಮಾಡಬಹುದು, ಹಾಗಾಗಿ ಈ ಕರ್ನಾಟಕ ರಾಜಕಾರಣ ಎಷ್ಟು ಹದಗೆಟ್ಟು ಹೋಯಿತು ಅಂದರೆ ಬಸವಣ್ಣನವರು ಹೇಳಿದ ಹಾಗೆ ಒಲೆ ಹತ್ತಿ ಉರಿದೊಡೆ ನಿಲಬಹುದು, ಧರೆ ಹತ್ತಿ ಉರಿದೊಡೆ ನಿಲಬಹುದೆ, ಏರಿಯೇ ನೀರುಂಡೆ, ಬೇಲಿಯೇ ಎದ್ದು ಹೊಲ ಮೇಯ್ದೊಡೆ, ನಾರಿ ತನ್ನ ಮನೆಯ ಕಳುವೊಡೆ, ತಾಯಿಯ ಹಾಲು ನಂಜಾದೊಡೆ, ಇನ್ನಾರಿಗೇ ಹೇಳಲಿ ಕೂಡಲ ಸಂಗಮದೇವಾ ಎಂದು, ಯಾರಿಗೆ ಹೇಳಬೇಕು ? ರಾಷ್ಟ್ರಾಧ್ಯಕ್ಷರ ಹತ್ತಿರ ಹೇಳಬೇಕು, ಇಲ್ಲವೇ ರಾಜ್ಯಾಧ್ಯಕ್ಷರ ಹತ್ತಿರ ಹೇಳಬೇಕು, ಅವರದೊಂದು ತರಹ ನಿಲುವು, ಇವರದೊಂದು ತರಹ ನಿಲುವು, ಹೀಗಾಗಿ ಇವತ್ತು ಇಷ್ಟೊಂದು ಗೊಂದಲದ ರಾಜಕೀಯ ವಾತಾವರಣವನ್ನು ಕರ್ನಾಟಕದಲ್ಲಿ ಸೃಷ್ಟಿ ಮಾಡಿದ್ದಾರಲ್ಲಾ, ಇದಕ್ಕೆ ಯಾರು ಕಾರಣಕರ್ತರು ? ಏಕೆ ಹೀಗಾಯಿತು ? ಮಾನ್ಯ ಸಿದ್ದರಾಮಯ್ಯನವರು, ಮಹದೇವಪ್ಪನವರು, ಜಾರಕಿಹೊಳಿಯವರು ಅಹಿಂದ ಸಮಾವೇಶದಲ್ಲಿ ಭಾಗವಹಿಸಿದರೆಂದು ಒಂದೇ ಒಂದು ಕಾರಣಕ್ಕಾಗಿ ಅವರನ್ನು ಮಂತ್ರಿಮಂಡಲದಿಂದ ತೆಗೆಯಲಾಯಿತು, ಆದರೆ ಯಾರೂ ತಕ್ಷಣ ಸಿದ್ಧಾಂತದ ವಿರುದ್ಧ ಸಿಡಿದೆದ್ದು ಕೋಮುವಾದಿಶಕ್ತಿಗಳೊಂದಿಗೆ ಕೈ ಜೋಡಿಸಿ ಸರ್ಕಾರವನ್ನು ರಚನೆ ಮಾಡಿದರೂ ಕೂಡ ಇವತ್ತಿನವರೆಗೂ ಕೂಡ ರಾಜ್ಯದ ಅಧ್ಯಕ್ಷರಾಗಲಿ, ಅಥವಾ ಈ ಗುಂಪಿನ ಯಾವುದೇ ಒಬ್ಬ ಸದಸ್ಯನ ಮೇಲೆ ಒಂದು ಪಕ್ಷದ ನೋಟಿಸ್ ಕೊಡಲಿಲ್ಲ, ಶಿಸ್ತುಕ್ರಮ ತೆಗೆದುಕೊಳ್ಳಲಿಲ್ಲ, ಇಂತಹ ಒಂದು ರಾಜಕೀಯ ದೊಂಬರಾಟ ಜಗತ್ತಿನಲ್ಲಿ ಎಲ್ಲಿಯೂ ಕೂಡ ನಡೆದಿಲ್ಲ,

ಶ್ರೀ ಎಂ.ಟಿ. ಕೃಷ್ಣಪ್ಪ : ಇದು ನಮ್ಮ ಪಕ್ಷದ ವಿಚಾರ, ಇದೆಲ್ಲಾ ಅನಾವಶ್ಯವಾದ ವಿಚಾರ.

(ಗೊಂದಲ)

ಛೇರ್ಮನ್ : ಮಾನ್ಯ ಬಿ.ಆರ್. ಪಾಟೀಲರೇ ಬೇಗ ಮಾತನಾಡಿ ಮುಗಿಸಿ, ದಯಮಾಡಿ ನೀವು ಕುಳಿತುಕೊಳ್ಳಿ, ಪ್ಲೀಸ್ ಡೋಂಟ್ ಇಂಟರ್‌ಫಿಯರ್,

(ಗೊಂದಲ)

ಛೇರ್ಮನ್ : ಪ್ಲೀಸ್ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಬಿ.ಸಿ. ಪಾಟೀಲ್ ದಯಮಾಡಿ ಕುಳಿತುಕೊಳ್ಳಿ ಅವರು ಮಾತನಾಡಲಿ, ಇನ್ನೂ ಬಹಳ ಮಂದಿ ಮಾತನಾಡುವವರಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಛೇರ್ಮನ್‌ರವರೆ, ನಿಮ್ಮ ಅನುಮತಿಯನ್ನು ಪಡೆದು ಯಾರಾದರೂ ಮಾತನಾಡಲಿ, ಅಥವಾ ಅವರು ಈಲ್ಡ್ ಆದರೆ ಮಾತನಾಡಲಿ, ಅವರು ಮಾತಾಡುತ್ತಿದ್ದಾರೆ, ಮಧ್ಯೆ ಅವರಿಗೆ ಈ ರೀತಿ ತೊಂದರೆ ಕೊಡುವುದು ಸರಿಯಲ್ಲ, ಅವರ ವಿಚಾರವನ್ನು ಅವರು ಹೇಳುತ್ತಿದ್ದಾರೆ, ನಿಮಗೆ ಮಾತನಾಡುವ ಅವಕಾಶ ಬಂದಾಗ ನಿಮ್ಮ ವಿಚಾರವನ್ನು ಅವರಿಗೆ ಹೇಳಿ, ಮಧ್ಯೆ ಮಧ್ಯೆ ಮಾತಾಡಿ ಅವರಿಗೆ ಅಡ್ಡಿಪಡಿಸುವುದು ಸರಿಯಲ್ಲ, ಅಧ್ಯಕ್ಷರೆ ದಯವಿಟ್ಟು ಅವರಿಗೆ ರಕ್ಷಣೆ ಕೊಡಬೇಕು.

ಛೇರ್ಮನ್ : ಮಾನ್ಯ ಬಾಲಕೃಷ್ಣರವರೇ, ಮಾತನಾಡಲಿ ಬಿಡಿ, ಅವರು ಈಲ್ಡ್ ಆಗಿದ್ದಾರೆ, ಮಾನ್ಯ ಬಯ್ಯಾಪುರ್ ಅವರೇ ಕುಳಿತುಕೊಳ್ಳಿ, ಯಾರಾದರೂ ಒಬ್ಬರು ಮಾತನಾಡಿ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಛೇರ್ಮನ್‌ರವರೆ, ಅವರಿಗೆ ಮಾತನಾಡಲಿಕ್ಕೆ ಅಡ್ಡಿ ಪಡಿಸಿದರೆ ಅವರ ಹಕ್ಕಿಗೆ ಚ್ಯುತಿ ಆಗುವುದಿಲ್ಲವೆ? ಅವರ ಅನುಮತಿಯನ್ನು ತೆಗೆದುಕೊಂಡು ಮಾತನಾಡಲಿ.

ಛೇರ್ಮನ್ : ನೀವಿಬ್ಬರೂ ಕುಳಿತುಕೊಳ್ಳಿ, ಮಾನ್ಯ ಬಾಲಕೃಷ್ಣರವರೇ, ಬೇಗ ಮಾತಾಡಿ ಮುಗಿಸಿ, ಬಾಲಕೃಷ್ಣರವರನ್ನು ನಾನು ಕರೆದಿದ್ದೇನೆ, ನೀವೆಲ್ಲಾ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಜಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಪಕ್ಷದಲ್ಲೂ ಕೂಡ ಎಲ್ಲಾ ವರ್ಗದ ಜನಾಂಗದವರು ಇದ್ದಾರೆ. ಅದೇ ರೀತಿ ನಮ್ಮ ಮಾನ್ಯ ಸಿದ್ದರಾಮಣ್ಣನವರು ನಮ್ಮ ಪಕ್ಷದಲ್ಲಿಯೇ ಇದ್ದುಕೊಂಡು, ನಮ್ಮ ಪಕ್ಷದವರನ್ನೇ ಕೂರಿಸಿಕೊಂಡು ಅಹಿಂಧ ಚಳುವಳಿಯನ್ನು ಮಾಡಬಹುದಾಗಿತ್ತು.. ಆದರೆ ನಮ್ಮ ಶತ್ರುಗಳನ್ನು ಕೂರಿಸಿಕೊಂಡು ಅಹಿಂದ ಚಳುವಳಿ ಮಾಡಲಿಕ್ಕೆ ಹೊರಟಂತಹ ಸಂದರ್ಭದಲ್ಲಿ ಈ ಅನಾಹುತವಾಯಿತೇ ವಿನಹ ಬೇರೆ ಏನೂ ಅಲ್ಲ ಎನ್ನತಕ್ಕಂಥಾದ್ದನ್ನು ನಾನು ಸ್ಪಷ್ಟಪಡಿಸಲು ಇಚ್ಛೆಪಡುತ್ತೇನೆ.

ಛೇರ್ಮನ್ : ಮಾನ್ಯ ಬಿ.ಆರ್. ಪಾಟೀಲ್‌ರವರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ

ಛೇರ್ಮನ್ :- ಮಾನ್ಯ ಬಿ.ಆರ್. ಪಾಸಟೀಲರೆ ತಾವು ಬೇಗ ಮುಗಿಸಿ ತಮ್ಮ ಸಮಯ ಆಯಿತು.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ಸರ್ಕಾರದ ಭವಿಷ್ಯ...........

(ಗೊಂದಲ)

**ಶ್ರೀ ಹೆಚ್.ಜಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ, ಇದು ಅವರು ಬಾಯಿ ಚಪಲಕ್ಕೆ ಹೇಳಬೇಕು ಅಷ್ಟೇ .

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್** : ನೋಡಿ ಮಾನ್ಯ ಬಾಲಕೃಷ್ಣರವರೇ, ತಾವು ನನ್ನ ಒಳ್ಳೆಯ ಸ್ನೇಹಿತರು ಚಿಕ್ಕವಯಸ್ಸಿನವರು ನಾವು ಬಾಯಿ ಚಪಲಕ್ಕೆ ಅಂತಹ ಮಾತನಾಡಲು ನಾವು ಇಲ್ಲಿ ಬಂದಿಲ್ಲ. ಬಾಯಿ ಚಪಲಕ್ಕೆ ಮಾತನಾಡುವುದಾದರೆ ...

(ಗೊಂದಲ)

**ಶೀ ಹೆಚ್.ಜಿ. ಬಾಲಕೃಷ್ಣ** : ನೀವೇ ಹೇಳಿದಿರಿ ಒಂದು ಮಾತು, ಸಂಖ್ಯಾಬಲದ ಮೇಲೆ ಮಾಡಿದಾಗ ಅದರ ಅವಶ್ಯಕತೆ ಇಲ್ಲ. ಚರ್ಚೆ ಮಾಡುವುದಕ್ಕೋಸ್ಕರ, ಅದನ್ನೇ ನಾವು ಮಾಡುತ್ತಿರುವುದು.

(ಗೊಂದಲ)

**ಛೇರ್ಮನ್** : ಮಾನ್ಯ ಬಿ.ಆರ್. ಪಾಟೀಲ್‌ರವರೇ, ತಾವು ಮುಂದುವರಿಸಿ.

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್** : ಮಾನ್ಯ ಛೇರ್ಮನ್‌ರವರೇ ಈ ವಿಚಾರ ಮತ್ತು ಸಿದ್ಧಾಂತ ಯಾವುದೂ ತಪ್ಪಾಗುವುದಕ್ಕೆ ಸಾಧ್ಯವಿಲ್ಲ. ಇದು ಪ್ರಜಾತಂತ್ರ ಆದರೆ ದಿಕ್ಕು ಮಾತ್ರ ಬಹಳ ಸ್ಪಷ್ಟವಾಗಿರಬೇಕು: ಜಾತ್ಯಾತೀತ, ಸಮಾಜವಾದ, ಮತ್ತು ಸೌಮ್ಯವಾದ ಇನ್ನೊಂದು ಕಡೆ ಜಾತಿವಾದ, ಕೋಮುವಾದ ಈ ಕಡೆಯವು, ಎರಡೂ ತದ್ವಿರುದ್ಧ ದಿಕ್ಕಿನಲ್ಲಿ ನಾವು ಹೋಗುತ್ತಿರಬೇಕಾದರೆ ಮಾನ್ಯ ದೇವೇಗೌಡರು ಏನು ಹೇಳಿದರು ನಮಗೆ ? ಕೋಮುವಾದಿ ಶಕ್ತಿಗಳನ್ನು ಹೊರಗೆ ಇಡುವುದಕ್ಕೋಸ್ಕರ ಇವತ್ತು ನಾವು ಕಾಂಗ್ರೆಸ್ಸಿನ ಜೊತೆಗೆ ಹೋಗಿ ಕೈ ಜೋಡಿಸಿ ಸರ್ಕಾರವನ್ನು ಮಾಡುತ್ತಿದ್ದೇವೆಂದು ಹೇಳಿ ಶ್ರೀಮತಿ ಸೋನಿಯಾ ಗಾಂಧಿಯವರ ಬಳಿ ಹೋಗಿ ಮಾತು ಕೊಟ್ಟು ಬಂದಿದ್ದರು. ಈಗ ಏನು ? ಎಲ್ಲಿ ಹೋಯಿತು ಮಾತು ಅದು.? ಮಾತು ಯಾರು ಮುರಿದರು ? ಮಾತು ಯಾರು ಮುಟದರು?

**ಶ್ರೀ ಸಿ.ಟಿ. ರವಿ** : ಮಾನ್ಯ ಪಾಟೀಲರೇ ..

(ಗೊಂದಲ)

**ಛೇರ್ಮನ್** : ಮಾನ್ಯ ರವಿಯವರೆ ಕುಳಿತುಕೊಳ್ಳಿ, ದಯಮಾಡಿ ಕುಳಿತುಕೊಳ್ಳಿ. ಪಾಟೀಲರು ಮುಗಿಸುತ್ತಾರೆ ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ** : ಮಾನ್ಯ ಪಾಟೀಲರು 1999 ರಲ್ಲಿ ನಮ್ಮ ಜೊತೆ ಹೊಂದಾಣಿಕೆ ಮಾಡಿಕೊಂಡು ಚುನಾವಣೆಗೆ ನಿಂತಿದ್ದರು. ಈಗ ಏನಪ್ಪಾ ಇವರು ಇಷ್ಟೊಂದು ಜಾತ್ಯಾತೀತವಾದ ಮಂಡಿಸುತ್ತಿದ್ದಾರೆ.

**ಶ್ರೀ ಹೆಚ್.ಜಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ ಉಗ್ರವಾದಿಗಳಿಗಿಂತ ಕೋಮುವಾದಿಗಳು ಮೇಲು ಅಂತ ನಾವು ಈ ಸಂಬಂಧ ಮಾಡಿದ್ದೇವೆ.

**ಛೇರ್ಮನ್** : ಮಾನ್ಯ ಪಾಟೀಲ್‌ರೇ ತಾವು ಬೇಗ ಮುಗಿಸಿ.

**ಶ್ರೀ ಸಿ.ಟಿ. ರವಿ** : ಇವರು ಜೆ.ಡಿ. ಯು ಜೊತೆಯಲ್ಲೂ ಹೊಂದಾಣಿಕೆ ಮಾಡಿಕೊಂಡಿದ್ದರು.

**ಶ್ರೀ ಬಿ. ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಈಗ ಇವರು ಹೇಳಿದ ಹಾಗೆ ನಾವು ಜಾತ್ಯಾತೀತ ದಳದ ಸದಸ್ಯರು ಬಹಳ ಸ್ವಾರಸ್ಯಕರವಾದ ಒಂದು ಚರ್ಚೆ ನಡೆಯಿತು. ಜನತಾ ಪಕ್ಷ ರಾಷ್ಟ್ರಮಟ್ಟದಲ್ಲಿ ಅಧಿಕಾರಕ್ಕೆ ಬಂದಾಗ ಮಾನ್ಯ ಮುರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಗಳಾಗುತ್ತಾರೆ. ಆಗ ಈ ಪಕ್ಷಾಂತರ ನಿಷೇಧದ ಕಾಯ್ದೆಯನ್ನು ಜಾರಿಗೆ ತರುತ್ತಾರೆ. ಆಗ ನಮ್ಮ ನಾಯಕರಾದಂತಹ ಮಾನ್ಯ ಮಧುಲಿಮೆಯವರು ಒಂದು ಮಾತು ಹೇಳಿದರು ಈ ಕಾನೂನು ನಿಮಗೆ ಮುಂದೆ ಬಹಳ ಅಪಾಯಕಾರಿಯಾಗುತ್ತದೆ. ದಯಮಾಡಿ ನೀವು ಅದನ್ನು ಯೋಚನೆ ಮಾಡಿ ಅಂತ.

"We have accepted the parliamentary System headed by Prime Minister. In turn it is Prime Minister system of government. Whoever becomes the Prime Minister or Chief Minister, he will dictate the terms in the cabinet and that cabinet dictate terms on the party. If a Member wants to express his opinion in the House, /should be / he allowed. He should not be bound by the law."

ಅಂತ ಹೇಳಿದರು. ಇವತ್ತು ನಮಗೆ ಬಂಧನಕ್ಕೆ ಒಳಗೆ ಮಾಡಿ ಇವತ್ತು ನಮ್ಮ ಜೊತೆಗೆ ನೀವು ಏನೋ ಆಟ ಆಡಬೇಕು ಅಂತ ಅಂತೀರಲ್ಲಾ ನಾವು ನಿಮ್ಮ ಸವಾಲನ್ನು ಸ್ವೀಕಾರ ಮಾಡಿದ್ದೇವೆ. ನಿನ್ನೆ ಶ್ರೀಮಾನ್ ಸಿದ್ದರಾಮಯ್ಯನವರು ನಾವೆಲ್ಲರು ಕೂಡಿ ಒಂದು ತೀರ್ಮಾನ ಮಾಡಿದ್ದೇವೆ. ಒಂದು ವೇಳೆ ಶ್ರೀಮಾನ್ ಕುಮಾರಸ್ವಾಮಿಯವರು ಏನಾದರೂ ವಿಪ್ ಅನ್ನು ಇಶ್ಯೂ ಮಾಡಿದರೆ ಸಿದ್ದರಾಮಯ್ಯನವರು ಹೇಳಿದರು ಆ ವಿಪ್ ಅನ್ನು ನಾವು ತೆಗೆದುಕೊಳ್ಳುವುದಿಲ್ಲ. ನಮ್ಮ ಸದಸ್ಯತ್ವ ಹೋದರೂ ಚಿಂತೆ ಇಲ್ಲ ನಾನು ಜನತೆಯ ಹತ್ತಿರ ಹೋಗುತ್ತೇನೆಯೇ ಹೊರತಾಗಿ ವಿಪ್ ತೆಗೆದುಕೊಳ್ಳುವುದಿಲ್ಲ ಈ ಮಾತನ್ನು ನಾವು ನಿನ್ನೆ ನಿರ್ಧಾರ ಮಾಡಿದೆವು.

**ಶ್ರೀ ಹೆಚ್.ಜಿ. ಬಾಲಕೃಷ್ಣ** : ನಮ್ಮ ನಾಯಕರು ಆಗಲೇ ಆತ್ಮಸಾಕ್ಷಿ ಮತ ಎಂದು ಹೇಳಿದ್ದಾರೆ.

**ಶ್ರೀ ಬಿ.ಆರ್. ಪಾಟೀಲ್** : ಆತ್ಮಸಾಕ್ಷಿ ಅಂತ ಹೇಳಿದಿರಿ ನಾವೂ ಆತ್ಮಸಾಕ್ಷಿಯಾಗಿ ನಡೆದುಕೊಳ್ಳೋಣ. ನಾನು ಹೇಳಿದೆನಲ್ಲಾ ಇದು ಸಂಖ್ಯಾ ಬಲದ ಮೇಲೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಸಂಖ್ಯಾ ಬಲದ ಮೇಲೆ ಸಿದ್ಧಾಂತ ಸಾಬೀತು ಆಗುವುದಿಲ್ಲ ಕೆಲವು ಸಲ ಸಿದ್ಧಾಂತಕ್ಕೆ ಜಯ ಇರದಿದ್ದರೂ ಕೂಡ ಸಂಖ್ಯಾ ಬಲ ಇವತ್ತು ಅನ್ಯಾಯ ಮಾಡುತ್ತದೆ. ಮಾನ್ಯ ಶ್ರೀ ರಾಮರೆಡ್ಡಿಯವರು ಹೇಳುವ ಮಾತನ್ನು ಒಪ್ಪಬೇಕಾಗುತ್ತದೆ. ಆದರೆ ಇವತ್ತು ಮಾನ್ಯ ಮಧುಲಿಮೆಯವರು ಹೇಳಿದ್ದನ್ನು ನಾನು ಮೇಲಿಂದ ಮೇಲೆ ನೆನಪು ಮಾಡಿಕೊಳ್ಳುತ್ತೇನೆ . This anti - difection law is equally dangerous ಯಾವುದು ಇಂತಹ ಒಂದು ಸರ್ವಾಧಿಕಾರ ಒಂದು ಕೋಮುವಾದಿ ಪಕ್ಷದ ಕಡೆಗೆ ಪಕ್ಷ ಹಾದು ಹೋಗುತ್ತಿರಬೇಕಾದರೆ ನಾನೇನೂ ಹೊಸದಾಗಿ ಹೇಳುತ್ತಿಲ್ಲ. ನಾನು ನಮ್ಮ ರಾಷ್ಟ್ರೀಯ ಅಧ್ಯಕ್ಷರು ಯಾವ ಸಿದ್ಧಾಂತವನ್ನು ಒಪ್ಪಿ ಕಾಂಗ್ರೆಸ್ ಜೊತೆಗೆ ಸರ್ಕಾರವನ್ನು ಮಾಡಿ ಇವರೆಲ್ಲರನ್ನೂ ಅಧಿಕಾರದಲ್ಲಿ ಕೂರಿಸಿದ್ದರು ಅದನ್ನು ನಾವೆಲ್ಲರೂ ಒಪ್ಪಿದ್ದೆವು. ಮಾನ್ಯ ಎಂ.ಪಿ. ಪ್ರಕಾಶ್ ಉಪ ಮುಖ್ಯಮಂತ್ರಿಗಳು, ಮಾನ್ಯ ಮಂಜುನಾಥ್‌ರವರು ಮಾನ್ಯ

ಸಿಂಧ್ಯಾರವರು ಇವರೆಲ್ಲರೂ ಮಾನ್ಯ ಬಯ್ಯಾಪುರ್, ಮಾನ್ಯ ಜಿ.ಟಿ. ಜಯಕುಮಾರ್ ಎಲ್ಲರೂ ಒಪ್ಪಿದ್ದೇವೆ. ನಾವೇನು ಕೋರ್ಟಿಗೆ ಹೋಗಿದ್ದೇವೆಯೇ ನಮ್ಮ ಮಂತ್ರಿಗಳು ನೀವಲ್ಲ ಅಂತ. ನಿಮ್ಮ ಮೇಲೆ ನಾವು ದಾವಾ ಹಾಕುತ್ತೇವೆ ನಾವು ನಿಮ್ಮನ್ನ ಒಪ್ಪುವುದಿಲ್ಲ ಅಂತ ಹೇಳಿದ್ದೇವೆಯೇ ? ಆದರೆ ಏನಾಯಿತು ? ಅಹಿಂದ ಚಳುವಳಿ ಮಾಡಿದ್ದು ಅಪರಾಧ ಆಯಿತಾ ? ಡಾಕ್ಟರ್ ಲೋಹಿಯಾ ಹೇಳುತ್ತಿದ್ದರು ಜನತಾಕೋ ಸಪ್ನಕೋ ಜಗಹರಣಾ ನಹೀ ಈಸ್ ದೇಶಮೇ ...

**ಶ್ರೀ ಅಮರೇಗೌಡ ಬಯ್ಯಾಪುರ್** : ಮಾನ್ಯ ಪಾಟೀಲರೇ ...

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೇ ...

**(ಗೊಂದಲ)**

**ಶ್ರೀ ಅಮರೇಗೌಡ ಬಯ್ಯಾಪುರ್** : ನಾನು ಮಾನ್ಯ ಬಿ.ಆರ್. ಪಾಟೀಲರನ್ನು ಈಲ್ಡ್ ಆಗಿ ಅಂತ ಕೇಳುತ್ತಿದ್ದೇನೆ. ಅವರು ಈಲ್ಡ್ ಆಗುತ್ತಾರೆ ನಾನು ಮಾತನಾಡುತ್ತೇನೆ ಅದು ತಪ್ಪಾ ...

**(ಗೊಂದಲ)**

ನೀವು ಏಕೆ ಮಾತನಾಡುತ್ತೀರಿ ನಾನು ಅವರಿಗೆ ಈಲ್ಡ್ ಅಗಿ ಅಂತ ಕೇಳುತ್ತಿದ್ದೇನೆ.

**(ಗೊಂದಲ)**

(ಒಟ್ಟಿಗೆ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದರು.)

**ಛೇರ್ಮನ್** : ನೀವು ಯಾರೂ ಮಾತನಾಡಿದ್ದು ರೆಕಾರ್ಡ್‌ಗೆ ಹೋಗುತ್ತಿಲ್ಲ.

(ಮಾನ್ಯ ಛೇರ್ಮನ್‌ರವರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

**ಛೇರ್ಮನ್** :–ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಮಾನ್ಯ ಬಿ.ಆರ್. ಪಾಟೀಲ್ ತಾವು ಬೇಗ ಮುಗಿಸಿ ನಿಮ್ಮ ಸಮಯ ಆಯಿತು ತಾವು ಮುಗಿಸಬೇಕು. ನಾನು ಬೇರೆಯವರನ್ನು ಕರೆಯುತ್ತೇನೆ ಈಗ.

**ಶ್ರೀ ಡಿ.ಟಿ. ಜಯಕುಮಾರ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಆರ್. ಪಾಟೀಲರು ಜೆ.ಪಿ. ಮೂವ್‌ಮೆಂಟ್‌ನಲ್ಲಿ ಬಂದವರು. ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಹಿಂದಾ ಚಳುವಳಿಯನ್ನು ನಾನು ಸರಿ ಇಲ್ಲ ಅಂತ ಹೇಳುವುದಿಲ್ಲ. ಅಹಿಂದಾ ಚಳುವಳಿ ಆದ ರೀತಿ ಇತ್ತಲ್ಲಾ ಅದು ಸರಿ ಇಲ್ಲ ಎಂದು ಹೇಳತಕ್ಕಂಥಾದ್ದು. ಅಹಿಂದಾ ಚಳುವಳಿ ಬಗ್ಗೆ ಯಾರ ವಿರೋದ ಇಲ್ಲ. ಅಹಿಂದಾ ರೀತಿ ನೀತಿ ಇತ್ತಲ್ಲಾ ಅದು ಸರಿಯಲ್ಲ.

**ಛೇರ್ಮನ್** : ಮಾನ್ಯ ಬಿ.ಆರ್. ಪಾಟೀಲ್ ತಾವು ಮುಗಿಸುತ್ತೀರಾ ಇಲ್ಲ ನಾನು ಬೇರೆಯವರನ್ನು ಕರೆಯಲೆ, ದಯವಿಟ್ಟು ಕುಳಿತುಕೊಳ್ಳಿ. ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

**(ಗೊಂದಲ)**

(ಮಾನ್ಯ ಛೇರ್ಮನ್‌ರವರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಇದು ಸದನವೇ ? ನಾವು ಎಲ್ಲಿದ್ದೇವೆ ಅಂತ ? ಇದು ಏನಿದು ?

**ಛೇರ್ಮನ್ :–** ತಾವು ಬೇಗ ಮುಗಿಸಬೇಕು ಇನ್ನು ಒಂದು ನಿಮಿಷ ಅಷ್ಟೇ. ನಿಮಗೆ ಅವಕಾಶ ಕೊಟ್ಟು ಅರ್ಧ ಗಂಟೆ ಸಮಯ ಆಗಿದೆ. ದಯಮಾಡಿ ಬೇಗ ಮುಗಿಸಿ ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

**ಶ್ರೀ ಬಿ.ಆರ್. ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಮುಕ್ತ ವಿಚಾರಗಳಿಗೆ ಅವಕಾಶ ಕೊಡುವಂತಹ ಸ್ವಭಾವದವರು ನೀವು ಕುಳಿತಿದ್ದೀರಿ. ದಯಮಾಡಿ ನಾನು ಸತ್ಯ ಹೇಳುವುದಕ್ಕೆ ಹೋದರೆ ನಿಮಗೆ ಬೇನೆ ಏಕೆ ಆಗುತ್ತದೆ ? ನಮ್ಮ ಕಡೆ ಬೇನೆ ಅಂತ ಹೇಳುತ್ತಾರೆ. ನಾನು ಏನು ಹೇಳುತ್ತಿದ್ದೇನೆ. Everything is going on record. You can dispute or you can punish me. I am not going to mislead this House. Whatever happened I am telling. ನಾನು ಆ ತರಹ ಮಿಸ್‌ಲೀಡ್ ಮಾಡುತ್ತಿಲ್ಲ ಹೌಸ್‌ಗೆ. ಯಾವ ಘಟನೆ ನಡೆಯಿತೋ ಅದೆಲ್ಲವನ್ನೂ ನಾನು ಈ ಸಂದರ್ಭಲ್ಲಿ ಹೇಳುತ್ತಿದ್ದೇನೆ. ನಾನು ದುರುಪಯೋಗ ಮಾಡಿಕೊಳ್ಳುತ್ತಿಲ್ಲ. ಈಗ ಡಾಕ್ಟರ್ ಲೋಹಿಯಾರವರು ಹೇಳುತ್ತಿದ್ದರು. ಜನತೆಯ ಕನಸುಗಳನ್ನು ಜಾಗೃತಗೊಳಿಸಬೇಕು. ಆಗಲೇ ಪ್ರಜಾಪ್ರಭುತ್ವ ಫಲವತ್ತಾಗಿ ಬೆಳೆಯುತ್ತದೆ. ಜನತೆ ನಿಮ್ಮ ಆಶಯವನ್ನು ಹುಡುಕಿಕೊಂಡು ಹೋಗುತ್ತಾರೆ. ಹೋರಾಟ ಮಾಡುತ್ತಾರೆ. ಆಗ ಒಂದು ಪರಿಪೂರ್ಣ ಜೀವನ ಸಾಧನೆಯಾಗುತ್ತದೆ. ಸಮಾನತೆ ಬರುತ್ತದೆ. ಸಂವೃದ್ಧಿ ಬರುತ್ತದೆ. ಅವರಿಗೆ ಮಾನ ಮರ್ಯಾದೆ ಸಿಗುತ್ತದೆ. ಆ ಕೆಲಸವನ್ನು ಮಾನ್ಯ ಸಿದ್ದರಾಮಯ್ಯನವರು ಮಾಡುವುದಕ್ಕೆ ಹೊರಟಿದ್ದರು. ದೇವೇಗೌಡ ವಿರುದ್ಧ ಅಲ್ಲ ಅಥವಾ ಜನತಾದಳದ ವಿರುದ್ದವಲ್ಲ. ಜನತಾದಳದ ಸಿದ್ಧಾಂತದ ವಿರುದ್ದವಲ್ಲ ಸಿದ್ಧಾಂತ ಯಾರ ಆಸ್ತಿ ಅಲ್ಲ. ನಾವು ಮಾರ್ಕ್ಸ ಸಿದ್ಧಾಂತವನ್ನು ಒಪ್ಪುತ್ತೇವೆ. ಲೋಹಿಯಾ ಸಿದ್ಧಾಂತವನ್ನು ಒಪ್ಪುತ್ತೇವೆ. ಗಾಂಧಿ ಸಿದ್ಧಾಂತವನ್ನು ಒಪ್ಪುತ್ತೇವೆ. ಆದರೆ ಗುರುಗೊಳ್ವಾರ್ ಸಿದ್ಧಾಂತವನ್ನು ನಾವು ಒಪ್ಪುವುದಿಲ್ಲ. ಮನು ಸಿದ್ಧಾಂತವನ್ನು ನಾವು ಒಪ್ಪುವುದಿಲ್ಲ. ಇವತ್ತೇನು ಜಾತ್ಯಾತೀತವಾದವನ್ನು ಪಠಿಸುವಂತಹ ಜನ ಮನುವಾದಿಗಳ ಜೊತೆ ಹೋಗಿ ಗೊಳ್ವಾರ್ ಗುರೂಜಿಯ ಜಪ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಸರ್ಕಾರ ಮಾಡುವುದಕ್ಕೆ ನಿಮಗೆ ಯಾವ ಸಿದ್ಧಾಂತ ಇದೆ ? ...

**(ಗೊಂದಲ)**

**ಛೇರ್ಮನ್ :** ಪ್ಲೀಸ್ ಮೇಂಟೆನ್ ಡಿಸಿಪ್ಲೀನ್, ಈಗ ನಿಮ್ಮ ಸಮಯ ಮುಗಿದಿದೆ ಮಾನ್ಯ ಬಿ.ಆರ್. ಪಾಟೀಲ್ ದಯಮಾಡಿ ಕುಳಿತುಕೊಳ್ಳಿ, ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ....

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಇದನ್ನೇ fascirm ಎಂದು ಹೇಳಿರತಕ್ಕಂಥದ್ದು, ಇದೇ ನಿಮ್ಮ ಆರ್‌ಎಸ್‌ಎಸ್ ಸಿದ್ಧಾಂತ ಗೊಳ್ವಾಳ್ಕರ ಸಿದ್ಧಾಂತ ...

**(ಗೊಂದಲ)**

**ಛೇರ್ಮನ್ :** ಈಗ ಮಾನ್ಯ ಬಿ.ಆರ್. ಪಾಟೀಲ್‌ರವರ ಸಮಯ ಮುಗಿದಿದೆ. ತಾವು ಕುಳಿತುಕೊಳ್ಳಿ ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ, ಮಾನ್ಯ ಖರ್ಗೆಯವರು ಮಾತನಾಡಿ ದಯಮಾಡಿ ಮಾತನಾಡಿ........

**(ಗೊಂದಲ)**

ನೀವು ಕುಳಿತುಕೊಳ್ಳದಿದ್ದರೆ ನಾನು ಮಾತನಾಡಲು ಅವಕಾಶ ಕೊಡುವುದಿಲ್ಲ ಯಾವುದೂ ರೆಕಾರ್ಡ್‌ಗೆ ಹೋಗುವುದು ಬೇಡ **(ಒಬ್ಬರಿಗಿಂತ ಹೆಚ್ಚು ಜನ ಮಾತನಾಡುತ್ತಿದ್ದಾಗ ರೆಕಾರ್ಡ್ ಮಾಡಬೇಡಿಯೆಂದು ವರದಿಗಾರರಿಗೆ ಛೇರ್ಮನ್‌ರವರು ಆದೇಶಿಸಿದರು.)** ಅವರು ಮಾತನಾಡಿಕೊಳ್ಳಲಿ ಯಾವುದನ್ನು ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ, ಇದ್ಯಾವುದನ್ನೂ ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ, ನಾನು ಅವಕಾಶ ಕೊಟ್ಟಾಗ ಮಾತನಾಡಬೇಕು. ಇದೇನು ಸಂತೆ ಎಂದು ತಿಳಿದುಕೊಂಡಿದ್ದೀರಾ ? ಮೊದಲು ಸಭೆ ಒಂದು ವ್ಯವಸ್ಥೆಗೆ ಬರಬೇಕು, ನಿಮ್ಮ ಮನಸ್ಸಿಗೆ ಬಂದಂತೆ ಎದ್ದು ನಿಂತು ಮಾತನಾಡುವುದಕ್ಕೆ ಸಂತೆ ಎಂದು ತಿಳಿದುಕೊಂಡಿದ್ದೀರಾ ಮಾರ್ಕೆಟ್ ಮಾಡಿಕೊಂಡಿದ್ದೀರಾ ? ನಿಮ್ಮ ಮಾತು ರೆಕಾರ್ಡ್‌ಗೆ ಹೋಗುತ್ತಿಲ್ಲ, ಪ್ಲೀಸ್ ಸಿಟ್ ಡೌನ್, ದಯಮಾಡಿ ಈ ಸಭೆಯ ಘನತೆಯನ್ನು ಗೌರವವನ್ನು ಎತ್ತಿಹಿಡಿಯುವುದಕ್ಕೆ ಶಾಂತರೀತಿಯಾಗಿ ಚರ್ಚೆಯಾಗುವುದಕ್ಕೆ ಸಹಕರಿಸಿ ಎಂದು ನಾನು ಈ ಮೂಲಕ ನಿಮ್ಮೆಲ್ಲರನ್ನೂ ಕೇಳಿಕೊಳ್ಳುತ್ತಿದ್ದೇನೆ. ನಿಯಮಾವಳಿ ಪ್ರಕಾರ ಸಭೆ ನಡೆಸುವುದಕ್ಕೆ ನೀವೆಲ್ಲರೂ ಸಹಕಾರ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಎಲ್ಲರೂ ಒಂದೇ ಸಾರಿ ಎದ್ದು ನಿಂತುಕೊಂಡರೆ ಇದೇನು ಮಾರ್ಕೆಟ್ ಎಂದು ತಿಳಿದುಕೊಂಡಿದ್ದಿರಾ ನೋನೋ .... ನಾಟ್ ಅಲೌಡ್ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ :** ಮಾನ್ಯ ಅಧ್ಯಕ್ಷರೆ, 1985ನೇ ಇಸವಿ ಮಾರ್ಚ್ 1ನೇ ತಾರೀಖಿಗೆ ಏನು ಸಂವಿಧಾನಕ್ಕೆ 51ನೇ ತಿದ್ದುಪಡಿಯಾಗಿದೆ. 29ಎ ರೆಪ್ರಸೆಂಟೇಷನ್ ಆಫ್ ಪೀಪಲ್ಸ್ ಆಕ್ಟ್‌ಗೆ ಏನು ತಿದ್ದುಪಡಿಯಾಗಿದೆ, ಇದರನ್ವಯ, ಪೊಲಿಟಿಕಲ್ ಪಾರ್ಟೀಸ್ ಕಂಪಲ್ಸರಿ ರಿಜಿಸ್ಟ್ರೇಷನ್ ಆದಮೇಲೆ, ಪಾರ್ಟಿಗಳ ಪೊಸಿಷನ್, within the House, it has completely undergone a characterstics change. ಒಬ್ಬೊಬ್ಬಬ್ಬರೇ ಆರಿಸಿ ಬಂದಿದ್ದರೂ ಕೂಡ ಒಂದು ರಾಜಕೀಯ ಪಕ್ಷದಿಂದ ಅವರನ್ನು we call him as Member of that particular Legislature Party. For instance, ಉದಾಹರಣೆಗೆ ಮಾನ್ಯ ಶ್ರೀರಾಮರೆಡ್ಡಿಯವರಿದ್ದಾರೆ, ಅವರು ಒಬ್ಬರೇ ಆಗಿದ್ದರೂ ಕೂಡ we tell him, he is representing the Legislature Party of the Communist Party of India Marxist. ಈ ಸದನದಲ್ಲಿ ಎಲ್ಲರೂ ದೊಡ್ಡ ಸಂಖ್ಯೆಯಲ್ಲೆ ಬರಬೇಕೆಂದರೆ ಆಗುವುದಿಲ್ಲ. ಆದರೆ ಸಂವಿಧಾನ ಬದ್ಧವಾಗಿ ರಿಜಿಸ್ಟರ್ ಆಗಿರತಕ್ಕಂಥ ಪೊಲಿಟಿಕಲ್ ಪಾರ್ಟೀಸ್, ರೆಪ್ರೆಸೆಂಟೆಟೀವ್ಸ್ ಆಗಿ ಆರಿಸಿ ಬಂದು ಇಲ್ಲಿ ಲೆಜಿಸ್ಲೇಚರ್ ಪಾರ್ಟಿ ಎಂದು ಆದಾಗ, ಅಥವಾ ಅವರ ನ್ಯೂಮರಿಕಲ್ ಸ್ಟ್ರೆಗ್ ಇದ್ದರೆ, ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡದೆ ಗೊಂದಲ ಮಾಡತಕ್ಕದ್ದು, ಸಂಖ್ಯೆ ಜಾಸ್ತಿ ಇರುವವರು ಅವರ ಮೇಲೆ ಬೀಳತಕ್ಕಂಥದ್ದು, ಬಲತ್ಕಾರದಿಂದ ಬಾಯಿ ಕಟ್ಟತಕ್ಕಂಥದ್ದು ಆದರೆ, we cannot be a party for such proceedings. That cannot happen. ಈಗ ಬಿ.ಆರ್. ಪಾಟೀಲ್ ಹಾಗೂ ಅವರ ಸಂಗಡಿಗರು, ಅವರದೇ ಆದ ಕಾರಣಗಳಿಗೆ ಅವರದೇ ಆದ ಅಭಿಪ್ರಾಯಗಳನ್ನಿಟ್ಟುಕೊಂಡು ಅವರವರಲ್ಲೇ ಜಗಳವಿದೆ, ತಾವು ಪೀಠದಿಂದ, you have called the name name of Mr. B.R. Patil. ನಾವು ಇಲ್ಲಿ ಕುಳಿತು ನೋಡುತ್ತಿದ್ದೇವೆ, ಅವರಿಗೆ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸುವುದಕ್ಕೆ ಬಿಡದೆ, ಆ ರೀತಿಯಾಗಿ ಬಲತ್ಕಾರ ಮಾಡಿದರೆ, ಇದನ್ನೇ ನಾವು ಫ್ಯಾಸಿಸ್ಟ್

ಟೆಂಡೆನ್ಸಿ ಎಂದು ಹೇಳುವುದು, ಸಂವಿಧಾನದ ತಿದ್ದುಪಡಿಗೆ ನಾವು ಗೌರವ ಕೊಡಬೇಕಾಗುತ್ತದೆ, ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ನಮ್ರತೆಯಿಂದ ಬೇಡಿಕೊಳ್ಳುತ್ತಿದ್ದೇವೆ. whatever he wants to say, let it go on record, let him not be interrupted.

(ಗೊಂದಲ)

**ಛೇರ್ಮನ್** : ಎಲ್ಲರೂ ಒಂದ್ನಿಮಿಷ ಕುಳಿತುಕೊಳ್ಳಿ ಈಗ ನಿಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಒಂದು ಸಮಯವನ್ನು ನಿಗದಿ ಮಾಡಬೇಕಾಗುತ್ತದೆ, ಈಗ ಮಾನ್ಯ ಬಿ.ಆರ್. ಪಾಟೀಲ್‌ರವರು ಅರ್ಧಗಂಟೆ ಸಮಯ ತೆಗೆದುಕೊಂಡು ಮಾತನಾಡಿದ್ದಾರೆ, ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ. ನೆಕ್ಸ್ಟ್ ಸಿದ್ಧರಾಮಯ್ಯನವರು ಮಾತನಾಡುವುದಕ್ಕೆ ಅವಕಾಶವಿದೆ ಬಿಡಿ, ನೆಕ್ಸ್ಟ್ ಸಿದ್ಧರಾಮಯ್ಯನವರನ್ನು ಕರೆಯುತ್ತೇನೆ, ನಾನು ಸಿದ್ಧರಾಮಯ್ಯರವರನ್ನು ಕರೆದಿದ್ದೇನೆ.

**ಶ್ರೀ ಸಿದ್ಧರಾಮಯ್ಯ** : ಮಾನ್ಯ ಅಧ್ಯಕ್ಷರೆ ಈ ರೀತಿಯ ನಡವಳಿಕೆ ಸರಿಯಲ್ಲ.

**ಶ್ರೀ ಎನ್. ಚೆಲುವರಾಯಸ್ವಾಮಿ** : ಅವರ ಸ್ವಂತ ವಿಚಾರವನ್ನು ಪಕ್ಷದ ವಿಚಾರವನ್ನು ವೈಯಕ್ತಿಕ ವಿಚಾರವನ್ನು ಚರ್ಚೆ ಮಾಡುವುದಕ್ಕಲ್ಲ ಸದನವನ್ನು ಕರೆದಿರುವುದು, ಈ ರಾಜ್ಯದ ಜನ ನೋಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಬಿ.ಆರ್. ಪಾಟೀಲರೂ ಕೂಡ ಈ ಸದನಕ್ಕೆ ಹೊಸಬರೇನಲ್ಲ. ಅವರೂ ಕೂಡ ಎರಡು ಸಾರಿ ಇಲ್ಲಿ ಶಾಸಕರಾಗಿ ಮೇಲ್ಮನೆಯ ಸದಸ್ಯರಾಗಿ, ಮೇಲ್ಮನೆಯಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿರತಕ್ಕಂಥವರು, ಅನುಭವವಿರತಕ್ಕಂಥವರು, ಅವರಿಗೂ ಕೂಡ ಈ ಸದನದ ನಡವಳಿಕೆಗಳ ಬಗ್ಗೆ ನಿಯಮಾವಳಿಗಳ ಬಗ್ಗೆ ಗೌರವ ಕೊಟ್ಟು ಮಾತನಾಡುವುದನ್ನೆಲ್ಲಾ ಕಲಿತು ಕೊಂಡಿದ್ದಾರೆ. ಮತ್ತೆ ಏನು ಮಾತನಾಡಬೇಕು ಎಂಬ ಬುದ್ಧಿ ಇದೆ. ಅವರ ಅಭಿಪ್ರಾಯವನ್ನು ಮೊಟಕು ಮಾಡಲಿಕ್ಕೆ ಯಾರಿಗೂ ಕೂಡ ಅಧಿಕಾರವಿಲ್ಲ. ನಿಮಗೆ ಅದನ್ನು ಕೇಳಲು ಇಷ್ಟವಿಲ್ಲದೆ ಇರಬಹುದು. ಅಥವಾ ನಿಮಗೆ ವಿರುದ್ಧವಾಗಿ ಕಾಣಬಹುದು. ಆದರೆ ಅದನ್ನು ಅಡ್ಡಿಪಡಿಸುತ್ತೇವೆ ಎನ್ನುವುದಿದೆಯಲ್ಲಾ ಹಾಗೆ ಮಾಡುವುದು ಈ ಸದನಕ್ಕೆ ಗೌರವ ತರುವಂಥದಲ್ಲ.

**ಶ್ರೀ ಡಿ . ಟಿ. ಜಯಕುಮಾರ್** : ಆದರೆ ಮಾನ್ಯ ಎ.ಟಿ. ರಾಮಸ್ವಾಮಿ ಮಾತನಾಡುವಾಗ,...

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಎ.ಟಿ. ಮಾನ್ಯ ರಾಮಸ್ವಾಮಿಯವರು ಮಾತನಾಡುವುದಕ್ಕೆ ಬಿಡಲಿಲ್ಲ ಎನ್ನುವುದು ಉದಾಹರಣೆಯಲ್ಲ. ಮನುವಾದಿ ವಿಚಾರಗಳ ಬಗ್ಗೆ ನಿಮಗೆ ವಿರೋಧವಿದ್ದರೆ ನಿಮಗೆ ಕೇಳಲು ಇಷ್ಟವಿಲ್ಲದೆ ಇರಬಹುದು. ಆದರೆ ನಮ್ಮ ಅಭಿಪ್ರಾಯಗಳಿಗೆ ಅಡ್ಡಿಪಡಿಸಲು ಇವರು ಯಾರು?

(ಗೊಂದಲ)

ನಾವೇನೂ ಇವರ ಗುಲಾಮರಲ್ಲ. ಸಂಸದೀಯವೋ ಅಸಂಸದೀಯವೋ ಎಂದು ತೀರ್ಮಾನ ಮಾಡಲು ಅಧ್ಯಕ್ಷರಿದ್ದಾರೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾವು ಯಾರೂ ನಿಯಮಬಿಟ್ಟು ಮಾತನಾಡಿಲ್ಲ.

**ಛೇರ್ಮನ್** : ಮಾನ್ಯ ಜಯಕುಮಾರ್ ಕುಳಿತುಕೊಳ್ಳಿ .... ಮಾನ್ಯ ಪಾಟೀಲ್‌ರೆ ನಿಮಗೆ ಕೊಟ್ಟ ಸಮಯ ಮುಗಿದಿದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಇದೇನು ಅಧ್ಯಕ್ಷರೇ ? ಒಬ್ಬ ಸದಸ್ಯರಿಗೆ ಅಭಿಪ್ರಾಯ ಹೇಳಲು ಬಿಡುವುದಿಲ್ಲ ಅಂದರೆ ನಾವೇಕೆ ಸದನಕ್ಕೆ ಬರಬೇಕು ? ಇವರಿಗಿಷ್ಟ ಬಂದಂತೆ ಮಾತನಾಡಬೇಕೇನು ನಾವು?

**ಛೇರ್ಮನ್** : ಮಾನ್ಯ ಬಿ.ಆರ್. ಪಾಟೀಲರೇ, ನಿಮ್ಮ ಸಮಯ ಮುಗಿದಿದೆ. ನಾನೀಗ ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ. ಅವರಿಗೆ ಸಮಯಾವಕಾಶ ಕಡಿಮೆ ಮಾಡಬೇಕು ಅಂದರೆ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಆರ್. ಪಾಟೀಲ್** : ಇಲ್ಲ ಬೇಗ ಮುಗಿಸಿಬಿಡುತ್ತೇನೆ. ಈ ಕಡೆ ನಮ್ಮ ಸ್ನೇಹಿತರಾದ ಮಾನ್ಯ ಅಶೋಕ್‌ರವರು ಏನು ಹೇಳಿದರು ಅಂದರೆ ............

**ಛೇರ್ಮನ್** : ಅವರ ಕಡೆ ಯಾಕೆ ತೋರಿಸುತ್ತೀರಿ ನೀವು ..

**ಶ್ರೀ ಬಿ.ಆರ್. ಪಾಟೀಲ** : ಅದು ರೆಕಾರ್ಡ್‌ಗೆ ಹೋಗಿದೆ. ನಾನು ಕ್ಲಾರಿಫೈ ಮಾಡಬೇಕು. ಅವರು ಏನು ಹೇಳಿದರು ಅಂದರೆ ಬಿ.ಆರ್. ಪಾಟೀಲರು ಹಿಂದೆ ಲೋಕಶಕ್ತಿಯಲ್ಲಿದ್ದಾಗ ಚುನಾವಣೆಯಲ್ಲಿ ನಿಂತಿದ್ದರು ಅಂತ. ಶ್ರೀಮಾನ್ ಎಂ.ಪಿ. ಪ್ರಕಾಶರು ಈ ದೇಶದ ರಾಜಕಾರಣ ಯಾವ್ಯಾವ ದಿಕ್ಕಿನಲ್ಲಿ ಯಾವ್ಯಾವ ತರಹ ಹೋಗಿ ಅನಿವಾರ್ಯವಾಗಿ ಏನೇನು ಮಾಡಬೇಕಾಯಿತು ಎಂದು ಮನಸುಬಿಚ್ಚಿ ಮುಕ್ತವಾಗಿ ಎಲ್ಲಾ ಸತ್ಯವನ್ನು ಹೇಳಿದ್ದಾರೆ. ಅದರಲ್ಲಿ ನಾನೂ ಭಾಗಿ, ಎಲ್ಲರೂ ಕೂಡ ಭಾಗಿಯಾಗಿದ್ದೇವೆ. ಅಂದರೆ ನಾನು ಸತ್ಯ ಒಪ್ಪಿಕೊಂಡರೂ ನೀವು ಸಹಿಸುವುದಿಲ್ಲ ಅಂದರೆ ನಾನು ಮಾತನಾಡುವುದೇ ಬೇಡವೇ ?

**(ಗೊಂದಲ)**

ಯಾಕೆಂದರೆ ಈಗ ನಾನು ಸ್ವಲ್ಪ ಹಿಂದೆ ಹೋಗಬೇಕಾಗುತ್ತದೆ. ಅಧ್ಯಕ್ಷರೇ, ಕೆಲವು ವಿಷಯಗಳು ಇಲ್ಲಿ ಚರ್ಚೆಯಾದರೆ ಅವರ ಅನುಮಾನಗಳಿಗೆ ಅವರಿಗೆ ತಿಳವಳಿಕೆ ಬರುತ್ತದೆ. ನಾವು ಹಿಂದೆ 1977 ರಲ್ಲಿ ಕೇಂದ್ರ ಸರ್ಕಾರ ಮಾಡಿದೆವು ಉದ್ದೇಶ ಏನು ಅಂದರೆ ಕಾಂಗ್ರೆಸ್‌ಗೆ ಪರ್ಯಾಯವಾಗಿ ಒಂದು ರಾಜಕಾರಣ ಪ್ರಾರಂಭ ಮಾಡಬೇಕು ಅಂತ. ಅದಕ್ಕೆ ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ನಾಲ್ಕೂ ಪಕ್ಷಗಳು ಸೇರಿ ಒಂದು ಕೇಂದ್ರ ಸರ್ಕಾರ ರಚನೆ ಮಾಡಿದೆವು. ಮಾಡುವಾಗ ಒಪ್ಪಂದ ಏನಾಗಿತ್ತು ಎಲ್ಲಾ ಪಕ್ಷಗಳನ್ನೂ ವಿಲೀನ ಮಾಡಬೇಕು, ಒಂದೇ ಸಶಕ್ತವಾದ ಕಾಂಗ್ರೆಸ್‌ಗೆ ಪ್ರಬಲವಾದ ವಿರೋಧ ಪಕ್ಷವನ್ನು ನಿರ್ಮಾಣ ಮಾಡಬೇಕೆಂಬುದು ಜಯಪ್ರಕಾಶ್ ನಾರಾಯಣರ ಆಶಯವಾಗಿತ್ತು. ಜನತಾ ಪಕ್ಷವಾಯಿತು. ಮೇ 1 ನೇ ತಾರೀಖು ದಿಲ್ಲಿಯಲ್ಲಿ ನಾವು ಒಂದು ಹೊಸ ಪಕ್ಷವನ್ನು ಕಟ್ಟಿದೆವು ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರ ಮನೆಯಲ್ಲಿ ನಾವು ನೀವೆಲ್ಲಾ ಒಟ್ಟಿಗೆ ಸೇರಿ ನಾವು ಸಮಾಜವಾದಿ ಯುವಜನ ಸಭಾವನ್ನು ವಿಲೀನ ಮಾಡಿದೆವು. ಅದೇ ಪ್ರಕಾರ ಸಂಸ್ಥಾ ಕಾಂಗ್ರೆಸ್‌ನವರು ಅವರ ಪಕ್ಷವನ್ನು ಮರ್ಜ್ ಮಾಡಿದರು. ಅದೇ ಪ್ರಕಾರ ಲೋಕದಳದವರೂ ವಿಸರ್ಜನೆ ಮಾಡಿದರು. ನೀವು ಮಾತ್ರ ನಿಮ್ಮ ಆರ್‌ಎಸ್‌ಎಸ್‌ನ್ನು ನಿಮ್ಮ ವಿದ್ಯಾರ್ಥಿ ಪರಿಷತ್ತನ್ನು ವಿಸರ್ಜನೆ ಮಾಡಲು ತಯಾರಾಗಲಿಲ್ಲ.

**ಒಬ್ಬ ಮಾನ್ಯ ಸದಸ್ಯರು** : ಇವರು ತುಂಬ ಅನುಭವ ಇರುವ ಹಳಬರು, ಆರ್‌ಎಸ್‌ಎಸ್ ಒಂದು ರಾಜಕೀಯ ಪಕ್ಷ ಹೌದು ಅಲ್ಲವೋ ಎಂಬ ಪರಿಜ್ಞಾನವೇ ಇಲ್ಲವಲ್ಲಾ ಇವರಿಗೆ. ಆರ್‌ಎಸ್‌ಎಸ್ ಯಾವತ್ತು ರಾಜಕೀಯ ಪಕ್ಷವಾಗಿತ್ತು ? ಕೆ.ಎನ್ ಕೃಷ್ಣಮೂರ್ತಿ ಆರ್‌ಎಸ್‌ಎಸ್‌ನಲ್ಲಿದ್ದವರು ಏಕೆ

ಅವರು ಇರಲಿಲ್ಲವೇ ? ಗೊತ್ತಿರಲಿಲ್ಲವೇ ಶಾಖೆಗೆ, ಅದೊಂದು ರಾಜಕೀಯ ಪಕ್ಷವಾ? ಅಯ್ಯೋ ತನ್ನ ಭಾಷಣ ಮುಗಿಸಿ,

**ಶ್ರೀ ಆರಗ ಜ್ಞಾನೇಂದ್ರ** : ಯಾವುದೇ ಹಳಸಲು ವಿಷಯ ಮಾತನಾಡುತ್ತಿದ್ದಾರೆ, ಆ ಕಾಲದ್ದು, ಇವರಿಗೆ ಅಧಿಕಾರ ಹಂಚಿಕೊಳ್ಳಲಿಕ್ಕೆ ನಮ್ಮ ಜನಸಂಘ ಬೇಕಾಗಿತ್ತು. ಬರೀ ಅವಕಾಶವಾದಿಗಳು.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೇ, ಇವರು ಬಹಳ ತ್ಯಾಗಿಗಳು ಮತ್ತೆ ಪಕ್ಷದಲ್ಲಿ ಮರಭೇದಗಳು ಹುಟ್ಟಿಕೊಂಡವು. ಮತ್ತೆ ಚರಣಸಿಂಗ್, ರಾಜನಾರಾಯಣ್ , ಮಧುಲಿಮಯೆಯವರು ಹೊರಗಡೆ ಬಂದರು. ರಾಜಕಾರಣ ಮತ್ತೆ ತನ್ನದೇ ಹಾದಿಯಲ್ಲಿ ನಡೆಯಿತು.

**ಚೇರ್ಮನ್** : ಸಮಯ ಆಯಿತು, ಮುಗಿಸಿ.

**ಶ್ರೀ ಬಿ.ಆರ್. ಪಾಟೀಲ್** : ಇಲ್ಲ ನಾನು ಇತಿಹಾಸವನ್ನು ಹೇಳಬೇಕಾಗುತ್ತದೆ. ಮಾನ್ಯ ಜಯಪ್ರಕಾಶ್ ನಾರಾಯಣರು ಜಸ್‌ಲೋಕ್ ಆಸ್ಪತ್ರೆಯಲ್ಲಿರುತ್ತಾರೆ. ಆಗ ಮೊರಾರ್ಜಿ ದೇಸಾಯಿ, ವಾಜಪೇಯಿ, ಅದ್ವಾನಿ, ಹೆಗಡೆ ನಾವೆಲ್ಲಾ ಒಟ್ಟಿಗೆ ಹೋಗಿರುತ್ತೇವೆ. ಆಗ ಜಯಪ್ರಕಾಶ್ ನಾರಾಯಣ್ ಹೇಳುತ್ತಾರೆ. ಈ ದೇಶದಲ್ಲಿ ದಲಿತರಿಗೆ ಸಾಮಾಜಿಕ ನ್ಯಾಯ ಸಿಕ್ಕಿಲ್ಲ, ಬಾಬು ಜಗಜೀವನರಾಂ ಒಂದು ಗುಡಿಸಲಿನಿಂದ ಬಂದು ಹಸಿರುಕ್ರಾಂತಿ ಮಾಡಿದ ಒಬ್ಬ ಮೇಧಾವಿ ದಲಿತ ನಾಯಕ. ಅವನಿಗೆ ದೇಶದ ಪ್ರಧಾನಮಂತ್ರಿ ಮಾಡುವ ವಚನವನ್ನು ದೇಶದ ಜನತೆಗೆ ಕೊಡಿರಿ. ಆಗ ಚಂದ್ರಶೇಖರ್ ಇದ್ದರು. ಪ್ರಧಾನಮಂತ್ರಿಯಾಗುವ ಶಕ್ತಿ ಇದ್ದವರು. ಇನ್ನೂ ಅನೇಕ ಮೇಧಾವಿಗಳಿದ್ದರು. ಆದರೆ ಜಯಪ್ರಕಾಶ್ ನಾರಾಯಣ್‌ರ ಅಂತಿಮ ಇಚ್ಛೆ ಇತ್ತು. ಈ ದೇಶದಲ್ಲಿ ಪ್ರಥಮ ಬಾರಿಗೆ ಒಬ್ಬ ದಲಿತನನ್ನು ಪ್ರಧಾನಿ ಮಾಡಬೇಕು ಅಂತ. ಅವತ್ತು ಶ್ರೀಮಾನ್ ವೈಜನಾಥ ಪಾಟೀಲರು ಗುಲ್ಬರ್ಗ ಲೋಕಸಭಾ ಅಭ್ಯರ್ಥಿಯಾಗಿದ್ದರು. ನಾವೆಲ್ಲಾ ಹೊರಟೆವು. ನಮ್ಮ ಜತೆಗೆ ಅವತ್ತು ಆರ್‌ಎಸ್‌ಎಸ್‌ನವರು ಜನಸಂಘದವರು ವಿದ್ಯಾರ್ಥಿ ಪರಿಷತ್ತಿನವರು ಜಗಜೀವನರಾಮರನ್ನು ಪ್ರಧಾನಮಂತ್ರಿ ಮಾಡುತ್ತೇವೆ. ಅಂತ ಹೇಳಿ ನಾವು ಗೋಡೆ ಮೇಲೆ ಬರೆದೆವು. ದಲಿತರ ಕೈಯಲ್ಲಿ ರಾಜ್ಯ ಕೊಡಿ ದಲಿತರ ಕೈಗೆ ಅಧಿಕಾರ ಕೊಡಿ ಅಂತ. ಆದರೆ ಮಾನ್ಯ ಅಧ್ಯಕ್ಷರೇ ಮತದಾನ ಪ್ರಾರಂಭವಾಯಿತು. ಇಡೀ ಆರ್‌ಎಸ್ ಎಸ್ ಮತ್ತು ಸಂಘ ಪರಿವಾರದವರು ಜಗಜೀವನರಾಮರನ್ನು ಸೋಲಿಸುವಂತಹ....

**(ಗೊಂದಲ)**

XX (ರೆಕಾರ್ಡ್ ಮಾಡದಂತೆ ವರದಿಗಾರರಿಗೆ ಸಭಾಧ್ಯಕ್ಷರು ಸೂಚಿಸಿದರು)

**ಛೇರ್ಮನ್** : ನೀವು ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುತ್ತಿಲ್ಲ. ನೀವು ಬಾಯಿ ಚಪಲಕ್ಕೆ ಮಾತನಾಡಿಕೊಳ್ಳಬೇಕು ಅಷ್ಟೇನೇ. ಈ ಸದನದ ಗೌರವ ಗಾಂಭೀರ್ಯವನ್ನು ಕಾಪಾಡುವುದಕ್ಕೆ ಸಹಕರಿಸಿ. ಯಾವುದೂ ರೆಕಾರ್ಡ್‌ಗೆ ಹೋಗುತ್ತಿಲ್ಲ.

**(ಗೊಂದಲ)**

ಮಾನ್ಯ ಪಾಟೀಲರೇ , ದಯಮಾಡಿ ಮುಗಿಸಿ.

**ಶ್ರೀ ಬಿ.ಆರ್. ಪಾಟೀಲ್** : ತಾವು ದಯಮಾಡಿ ಕೋಪ ಮಾಡಿಕೊಳ್ಳಬೇಡಿ ಸಾರ್.

**(ಗೊಂದಲ)**

**ಛೇರ್ಮನ್** : ಕುಳಿತುಕೊಳ್ಳಿ ಮಾನ್ಯ ಬಸವರಾಜ್ ಪ್ಲೀಸ್ ಸಿಟ್ ಡೌನ್ .

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಅದಕ್ಕೇ ನಾನು ಹೇಳಿದೆ. ಇತಿಹಾಸವನ್ನು ಮರೆತ ಜನ ಮಣ್ಣಾಗುತ್ತಾರೆ.

**(ಗೊಂದಲ)**

**ಛೇರ್ಮನ್** : ಆಯಿತು ಮುಗಿಸಿ ಮಾನ್ಯ ಬಿ.ಆರ್. ಪಾಟೀಲ್.

**ಶ್ರೀ ಬಿ.ಆರ್. ಪಾಟೀಲ್** :- ನಾನು ಬರುತ್ತೇನೆ. ಸಂವಿಧಾನ ನಮಗೆ ಗೀತೆ. ಸಂವಿಧಾನ ನಮಗೆ ಬೈಬಲ್. ಸಂವಿಧಾನವೇ ನಮಗೆ ಖುರಾನ್.

**(ಗೊಂದಲ)**

**ಛೇರ್ಮನ್** : ನೀವು ಈ ಕಡೆ ಮಾತನಾಡಿ. ಸಮಯ ಆಯಿತು ಮುಗಿಸಿ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಈ ಸಂವಿಧಾನವನ್ನು ಒಪ್ಪಿ ಪ್ರತಿಜ್ಞಾವಿಧಿಯನ್ನು ಮಾಡಿ ಚುನಾವಣೆಯಲ್ಲಿ ಗೆದ್ದು ಈ ಸದನದಲ್ಲಿ ಮತ್ತೆ ನಾವು ಸಂವಿಧಾನಬದ್ಧವಾದ ಪ್ರತಿಜ್ಞಾವಿಧಿಯನ್ನು ಮಾಡಿದ್ದೇವೆ. ನಾವು ಈ ದೇಶದ ಜಾತ್ಯಾತೀತ ಈ ವಿಚಾರಕ್ಕೆ ನಾವು ಒಪ್ಪಿ ಬದ್ದರಾಗಿ ನಾವು ಇಲ್ಲಿ ಕುಳಿತಿದ್ದೇವೆ. ಇಲ್ಲಿ ಮಾತು ಬದಲಾವಣೆಯಾಗಬಾರದು. ಇಲ್ಲಿ ಏನಾಗಿದೆ ಮಾನ್ಯ ಅಧ್ಯಕ್ಷರೇ ಟೂ ಇನ್ ಒನ್ ಶುರುವಾಗಿದೆ. ಪ್ರಾರಂಭದಲ್ಲಿ ಟೂ ಇನ್ನ ಒನ್ ರೇಡಿಯೊ ಬಂತಲ್ಲಾ, ರೇಡಿಯೊ ಬರುತ್ತಿತ್ತು. ಕ್ಯಾಸೆಟ್ಟೂ ಬರುತ್ತಿತ್ತು. ಒಂದೇ ಪಕ್ಷದಲ್ಲಿ ಒಂದು ಜಾತ್ಯಾತೀತ ಮತ್ತೊಂದು ಕೋಮುವಾದ.

**(ಗೊಂದಲ)**

**ಛೇರ್ಮನ್** : ಮುಗಿಸಿ. ನಿಮ್ಮ ಸಮಯ ಮುಗಿಯಿತು.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಅದಕ್ಕೆ ಶ್ರೀಮಾನ್ ಸಿದ್ದರಾಮಯ್ಯನವರು, ದೇವೇಗೌಡರು ಮತ್ತು ಎಂ.ಪಿ. ಪ್ರಕಾಶ್‌ರವರು, ಸಿಂಧ್ಯಾರವರು ರಾಜ್ಯದ ಸುತ್ತಲೆಲ್ಲಾ ಓಡಾಡಿ ಏನು 59 ಜನರಸದಸ್ಯರನ್ನು ಮಹಾದೇವಪ್ಪನವರನ್ನು ಹಿಡಿದುಕೊಂಡು ಬಂದರು. ಅದು ಒಬ್ಬರದೇ ಬಂಡವಾಳ ಅಲ್ಲ. ಅದಕ್ಕೆ ಬಸವಣ್ಣನವರು ಹೇಳುತ್ತಾರೆ. ಬೆಳೆ ನಿಮ್ಮ ದಾನ ಸಿದ್ದರಾಮಯ್ಯನ ದಾನ ಅದು. ಇಳೆ ನಿಮ್ಮ ದಾನ. ಬೆಳೆ ನಿಮ್ಮ ದಾನ. ಸುಳಿದು ಬೀಸುವ ಗಾಳಿ ಅದು ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಬಗೆದೊಡೆ ಕುನ್ನಿಗಳ ನಂಬೆ ರಾಮನಾಥ' ಎಂದು ಹೇಳಿ ದೇವರ ದಾಸಿಮಯ್ಯ ಹೇಳುತ್ತಾನೆ. ಇದು 59 ಜನ ಇವತ್ತು ಗೆದ್ದು ಬರಬೇಕಾಗಿದ್ದರೆ ಅದರಲ್ಲಿ ಸಿದ್ದರಾಮಯ್ಯನವರ ಪಾಲೂ ಇದೆ. ಮಹಾದೇವಪ್ಪನವರ ಪಾಲೂ ಇದೆ. ಎಂ.ಪಿ. ಪ್ರಕಾಶ್‌ರವರದೂ ಇದೆ. ಸಿಂಧ್ಯಾರವರದೂ ಇದೆ. ದೇವೇಗೌಡರದ್ದೂ ಇದೆ.

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್** :- ಅದನ್ನು ಇನ್ನೊಂದು ಸಲ ಹೇಳಿ.

**(ಗೊಂದಲ)**

**ಛೇರ್ಮನ್** : ಮುಗಿಸಿ.

**ಶ್ರೀ ಬಿ.ಆರ್. ಪಾಟೀಲ್** ಏನು ಮಾತು ? ಒಬ್ಬರು ರಾಷ್ಟ್ರಮಟ್ಟದಲ್ಲಿ ನಾಯಕರಾಗಿದ್ದಂಥವರು, ಒಬ್ಬ ರಾಷ್ಟ್ರೀಯ ಪಕ್ಷದ ಅಧ್ಯಕ್ಷರಾಗಿದ್ದಂಥವರು. ಇವತ್ತೂ ಕೂಡ ಮೌನವಾಗಿರುತ್ತಾರೆ. ನಮ್ಮಂಥವರು ನಿರಪರಾಧಿಗಳ ಮೇಲೆ ಕ್ರಮ ಕೈಗೊಂಡು ಇವತ್ತು ನಾವು ಅಪರಾಧಿ ಸ್ಥಾನದಲ್ಲಿ ನಿಂತಿದ್ದೇವೆ. ಯಾರು ಬಹಿರಂಗವಾಗಿ ಪಕ್ಷದ ಸಿದ್ಧಾಂತವನ್ನು ಮುರಿದು ಅಧಿಕಾರದಲ್ಲಿ ಕುಳಿತಿದ್ದಾರೆ. ಅವರ ಮೇಲೆ ಇವತ್ತು ಏನೇನು ಕ್ರಮ ಇಲ್ಲವೆಂದರೆ ಏನು ಇದು ? ಏನು ಮಾತು ಇದು ಅದಕ್ಕೆ 'ನುಡಿದರೆ ಮುತ್ತಿನ ಹಾರದಂತಿರಬೇಕು.'

**(ಗೊಂದಲ)**

**ಛೇರ್ಮನ್** : ಆಯಿತು. ಮುಗಿಸಿರಿ. ಕ್ಲೋಸ್ ಮಾಡಿ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೇ, Speaker Sir, you must come to my rescue.

**(ಗೊಂದಲ)**

**ಛೇರ್ಮನ್** : ಮಾನ್ಯ ಬಿ.ಆರ್. ಪಾಟೀಲರೆ, ತಾವು ಮುಗಿಸಿ. ಕ್ಲೋಸ್ ಮಾಡಿ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಇವತ್ತು ಜನರು ನೋಡುತ್ತಿದ್ದಾರೆ. ನಾವು ಯಾವ ತರಹ ಮಾತನಾಡುತ್ತಿದ್ದೇವೆ ? ಯಾವ ತರಹ ನಡೆದುಕೊಳ್ಳುತ್ತಿದ್ದೇವೆ ? ಜನರು ಸೂಕ್ಷ್ಮವಾಗಿ ನೋಡುತ್ತಿದ್ದಾರೆ. ಏನು ಇದು ? ಮೊನ್ನೆ ಮೊನ್ನೆವರೆಗೆ ನಿಮ್ಮದೆಲ್ಲಾ ಹೊಂದಾಣಿಕೆ ಒಳ ಒಪ್ಪಂದವಾಗಿತ್ತು. ಒಳ ಒಪ್ಪಂದವಾದ ಮೇಲೆ ಕೂಡ ಟಿ.ವಿ. ಯಲ್ಲಿ ನೋಡುತ್ತೇವೆ. ನಮ್ಮದೇನೂ ಇಲ್ಲ. ನಮ್ಮದೇನೂ ಇಲ್ಲ. ನಾವು ಯಾರ ಜೊತೆಗೂ ಹೋಗುವುದಿಲ್ಲ. ನಮ್ಮ ಕಡೆ ಹೇಳುತ್ತಾರೆ, ಇದು ಮಾನ್ಯ ಧರ್ಮಸಿಂಗ್ ಮತ್ತು ಖರ್ಗೆ ಸಾಹೇಬರಿಗೆ ಈ ಭಾಷೆ ಗೊತ್ತು. ಹುಡಿಕೆ ಮದುವೆ ಎನ್ನುತ್ತಾರೆ. ಅಂದರೆ ಮೊದಲನೇ ಮದುವೆಯಾಗಿ ಎರಡನೇ ಮದುವೆಯಾಗುವಾಗ ಅದು ಎಲ್ಲರ ಎದುರು ಮಾಡುವ ಮದುವೆಯಲ್ಲ.

**ಛೇರ್ಮನ್** : ಮುಗಿಸಿ ಬಿ.ಆರ್. ಪಾಟೀಲ್ . ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು.

**ಶ್ರೀ ಬಿ.ಆರ್. ಪಾಟೀಲ್** : ಈಗ ಯಾವ ಸಿದ್ಧಾಂತದ ಆಧಾರದ ಮೇಲೆ ನಾವು ಸರ್ಕಾರವನ್ನು ರಚನೆ ಮಾಡಿದ್ದೇವೆ, ಅದಕ್ಕೆ ಇವತ್ತು ಡೈವರ್ಸ್ ಕೊಡಬೇಕಾದರೂ ಕೂಡ ಮತ್ತೊಂದು ಸಲ ಕೋರ್ಟ್‌ನವರು ಇಬ್ಬರಿಗೆ ಅವಕಾಶವನ್ನು ಕೊಡುತ್ತಾರೆ. ನೀವು ಮತ್ತೊಂದು ಸಲ ವಿಚಾರ ಮಾಡಿ ಬನ್ನಿ. ಒಂದು ತಿಂಗಳು ಎನ್ನುತ್ತಾರೆ. ಕೂಡಿ ಬಾಳುವುದಕ್ಕೆ ಸಾಧ್ಯ ಇದ್ದರೆ ವಾಪಸ್ ಬರ್ರಿ. ಇಲ್ಲದಿದ್ದರೆ ಆಗ ನಿಮಗೆ ಒಪ್ಪಿಗೆ ಕೊಡುತ್ತೇವೆಂದು ಹೇಳುತ್ತಾರೆ. ಇಲ್ಲಿ ನೀವು ಡೈವರ್ಸ್ ಅಪ್ಲಿಕೇಷನನ್ನೂ ಹಾಕಲಿಲ್ಲ. ಕೋರ್ಟ್‌ನಿಂದ ನೀವು ಅವರಿಗೆ ಒಪ್ಪಿಗೆಯನ್ನೂ ಕೇಳಲಿಲ್ಲ. ನೀವು ಇದ್ದಕ್ಕಿದ್ದ ಹಾಗೆ ಒಬ್ಬ ಗಂಡನನ್ನು ಬಿಟ್ಟು ಇನ್ನೊಬ್ಬರ ಜೊತೆಗೆ ಹೋಗಿ ಮದುವೆಯಾದಿರಿ. ಈಗ ಯಾವ ಮಾತು ? ಅದಕ್ಕೆ ಇವತ್ತು ರಾಜ್ಯ ಆಳತಕ್ಕಂಥವರು, ರಾಷ್ಟ್ರ ಆಳತಕ್ಕಂಥವರು ನಾವು ಮಾತಿಗೆ ತಕ್ಕ ಹಾಗೆ

ನಡೆಯಬೇಕು. ಅದಕ್ಕೆ ಹೇಳುತ್ತಾರೆ : 'ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು. ನುಡಿದರೆ ಲಿಂಗವು ಮೆಚ್ಚಿ ಹೌದು ಹೌದು ಎನಬೇಕು.'

**ಛೇರ್ಮನ್** : ಮಾನ್ಯ ಪಾಟೀಲರೆ, ಸಮಯ ಬಹಳ ಆಯಿತು ಮುಗಿಸಿರಿ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತಿದ್ದೇನೆ, ನೀವೇನೂ ಹಿಂದು ಒಂದು ಅಜೆಂಡಾವನ್ನು ಮತ್ತೆ ನೀವು ಪ್ರತಿಪಾದನೆ ಮಾಡಿದಿರಿ. ಅದಕ್ಕೆ ನಿಮಗೂ ಹೇಳುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ** : ಇವರು ಜಾತ್ಯಾತೀತ ವಾದಿಗಳಂತೆ ಇವರಿಗೆ ಜಾತಿಯೇ ಆಹಾರ ಇವರು ಸೆಕ್ಯುಲರ್ ಅಂತೆ. ಇದು ಹೇಗೆ ಸಾರ್ ?

**(ಗೊಂದಲ)**

ಇವರು ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತಿದ್ದಾರೆ. ಇವರಿಗೆ ಜಾತಿಯೇ ಆಹಾರ.

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರ, ಇಲ್ಲ ಜಾತಿವಾದ, ಜಾತ್ಯಾತೀತವಾದ ಎರಡನ್ನೂ ಮಿಕ್ಸ್ ಮಾಡಿ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಛೇರ್ಮನ್** : ಮಾನ್ಯ ಬಿ.ಆರ್. ಪಾಟೀಲರೇ, ಮುಗಿಸಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿ ಬೇರೆಯವರದನ್ನ ಯಾರನ್ನೂರೆಕಾರ್ಡ್‌ಗೆ ಮಾಡಿಕೊಳ್ಳಬೇಡಿ.

**(ಗೊಂದಲ)**

ಮಾನ್ಯ ಪಾಟೀಲ್‌ರೇ ಕ್ಲೋಸ್ ಮಾಡಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿ.

**(ಗೊಂದಲ)**

**ಛೇರ್ಮನ್** : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪಾಟೀಲರೇ, ಕುಳಿತುಕೊಳ್ಳಿ. ಮಾನ್ಯ ರವಿ ಅವರೇ , ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

(ಮಾನ್ಯ ಛೇರ್ಮನ್ ಅವರ ಆದೇಶದ ಮೇರೆಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಭಾಷಣವನ್ನು ಮಾತ್ರ ದಾಖಲಿಸಲಾಯಿತು )

**(ಗೊಂದಲ)**

**ಛೇರ್ಮನ್** : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿ. ಅವರ ಮಾತು ಬಿಟ್ಟು ಬೇರೆಯವರ ಮಾತು ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಇವರು ಮಾನ್ಯ ಬಸವಣ್ಣನವರ ವಿರೋಧಿಗಳು ವರ್ಣಾಶ್ರಮದ ಜೊತೆ ಹೋಗಿದ್ದಾರೆ......

**(ಗೊಂದಲ)**

**ಛೇರ್ಮನ್** : ಯಾರದ್ದೂ ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ.

**ಶ್ರೀ ಸಿದ್ಧರಾಮಯ್ಯ** : ಅವರು ಕನ್‌ಕ್ಲೂಡ್ ಮಾಡಲಿ.

**(ಗೊಂದಲ)**

**ಛೇರ್ಮನ್** : ದಯಮಾಡಿ ಕುಳಿತುಕೊಳ್ಳಿ, ಯಾರದ್ದೂ ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ.

**(ಗೊಂದಲ)**

**ಛೇರ್ಮನ್** : ನೀವು ಮೇಲ್ಮನೆಯಲ್ಲಿ ಉಪ ಸಭಾಪತಿಯಾಗಿ ಕೆಲಸ ಮಾಡಿದ್ದೀರಿ, ನಾನು ನಿಂತಿದ್ದೇನೆ ? ನೀವು ಕುಳಿತುಕೊಳ್ಳಬೇಕು. ?

**ಶ್ರೀ ಆರಗ ಜ್ಞಾನೇಂದ್ರ** :- ಅವರಿಗೆ ನೀವು ಎಷ್ಟು ಸಮಯ ನಿಗದಿ ಮಾಡಿದ್ದೀರಿ ?

**(ಗೊಂದಲ)**

**ಛೇರ್ಮನ್** : ಸಾಕಷ್ಟು ಕಾಲಾವಕಾಶ ಕೊಟ್ಟಾಗಿದೆ, ದಯಮಾಡಿ ಕ್ಷಮಿಸಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಇವತ್ತೇನು ಸರ್ಕಾರ ರಚನೆ ಆಗಿದೆ, ...

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಇದು ಸಿದ್ಧಾಂತಕ್ಕೆ ಮಾಡಿದಂತಹ ದ್ರೋಹ, ಸಿದ್ಧಾಂತಕ್ಕೆ ಮಾಡಿದಂತಹ ಅಪಚಾರ. ಹಾಗಾಗಿ ..

**ಶ್ರೀ ಹೆಚ್.ಡಿ. ಬಸವರಾಜ್** : ಮಾನ್ಯ ಸಭಾಧ್ಯಕ್ಷರೆ, ತಾವು ಆದೇಶ ಕೊಟ್ಟಿದ್ದೀರಿ. ಮತ್ತೆ ಅವಕಾಶ ಕೊಡುವುದು ಬೇಡ.

**(ಗೊಂದಲ)**

**ಶ್ರೀ ಬಿ.ಆರ್. ಪಾಟೀಲ್** : ಇದನ್ನು ಸವಾಲಾಗಿ ಸ್ವೀಕಾರ ಮಾಡಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದನೆ ಸಲ್ಲಿಸುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್)** :- ಮಾನ್ಯ ಅಧ್ಯಕ್ಷರೆ, ಇವತ್ತು ಮಂಡಿಸಿದಂತಹ ವಿಶ್ವಾಸ ಮತವನ್ನು ಯಾಚಿಸಬೇಕೆಂದು ಹೇಳಿ ಏನು ಗೊತ್ತುವಳಿಯನ್ನು ಸದನದ ಮುಂದೆ ಇಟ್ಟಿದ್ದಾರೆ, ಅದನ್ನು ವಿರೋಧಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಸುತ್ತಿದ್ದೇನೆ. ಈಗಾಗಲೇ ಅನೇಕ ಹಿರಿಯ ನಾಯಕರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಮಾನ್ ಧರ್ಮಸಿಂಗ್ ಅವರು, ಮಾನ್ಯ ದೇಶಪಾಂಡೆಯವರು, ಮಾನ್ಯ ರಮೇಶ್ ಕುಮಾರ್ ಅವರು, ಶ್ರೀರಾಮಲಿಂಗಾರೆಡ್ಡಿಯವರು ಶ್ರೀ ವಾಟಾಳ್ ನಾಗರಾಜ್ ಅವರು ಹಾಗೆಯೇ ಆ ಕಡೆಗೆ ಮಾನ್ಯ ಎಂ.ಪಿ. ಪ್ರಕಾಶ್ ಅವರು : ಡಿ.ಆರ್. ಪಾಟೀಲ್ ಮಾನ್ಯ ಸಿಂಧ್ಯಾರವರು ಎಲ್ಲರೂ ಮಾತನಾಡಿದ್ದಾರೆ. ತಮ್ಮನ್ನೂ ಸೇರಿಕೊಂಡು ಮಾತನಾಡಿದ್ದಾರೆ.

**ಛೇರ್ಮನ್** : ಈಗ ನನ್ನನ್ನು ಸೇರಿಸಿಕೊಳ್ಳಬೇಡಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ತಾವು ಸಹ ಮಾತನಾಡಿದ್ದೀರಿ. ಈಗ ಇಷ್ಟೊಂದು ಜನ ಮಾತನಾಡಿದ್ದಾರೆ, ಮತ್ತು ಅನೇಕ ಮಹತ್ವದ ವಿಷಯಗಳನ್ನು ಕೂಡ ಸದನದ ಮುಂದೆ ಪ್ರಸ್ತಾಪ ಮಾಡಿದ್ದಾರೆ. ಹೊಸ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥದ್ದು ಬಹುಶಃ ನಮಗೇನೂ ಉಳಿಸಿಲ್ಲ. ಏಕೆಂದರೆ ಮಾನ್ಯ ರಮೇಶ್‌ಕುಮಾರ್ ಅವರು ರಾಮಾಯಣ, ಮಹಾಭಾರತ ಹಿಡಿದುಕೊಂಡು ಎಲ್ಲವನ್ನೂ ಕೂಡ ಅವರು ಹೇಳಿದ್ದಾರೆ. ಉಳಿದದ್ದು ಏನಾದರೂ ಕೂಡ ಹೇಳಬೇಕು ಎಂದರೆ ಮಾನ್ಯ ಬಿ.ಆರ್. ಪಾಟೀಲ್ ಅವರು ಬಸವಣ್ಣನವರನ್ನು ಬಿಡಲೇ ಇಲ್ಲ. ಅವರು ಸಂಪೂರ್ಣವಾಗಿ ಬಸವಣ್ಣನವರ ವಚನ ಮತ್ತು ಜನತಾ ಪಕ್ಷದ, ಜನತಾ (ಎಸ್) ನ ಇಡೀ ಜಾತಕವನ್ನೂ ಕೂಡ ಸದನದ ಮುಂದೆ ಇಟ್ಟಿದ್ದಾರೆ. ಅದೇ ರೀತಿಯಾಗಿ ಎಲ್ಲರೂ ಕೂಡ ತಮ್ಮ ತಮ್ಮ ದಾಟಿಯಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಮ್ಮ ಮುಂದೆ ಇರತಕ್ಕದ್ದು ಈ ಹೊಸ ಸರ್ಕಾರ ಹೇಗೆ ರಚನೆ ಆಯಿತು ? ಏನು ಕಾರಣ ? ಯಾವ ಕಾರಣಕ್ಕಾಗಿ ಇವತ್ತು ಬಿಜೆಪಿ ಮತ್ತು ಜನತಾ ದಳ (ಕೆ) ಅಂತೀರೋ, (ಎಸ್) ಅನ್ನುತ್ತೀರೋ ಅದನ್ನು ತಾವೇ ಹೇಳಬೇಕು. ಏಕೆಂದರೆ ಮಾನ್ಯ ಎಂ.ಪಿ. ಪ್ರಕಾಶ ಅವರೂ ಕೂಡ ಸ್ಪಷ್ಟವಾದಂತಹ ಅಭಿಪ್ರಾಯವನ್ನು ಇದರ ಬಗ್ಗೆ ಹೇಳಿದರು. ಮಾನ್ಯ ಸಿಂಧ್ಯಾ ಅವರೇನೋ ಸ್ಪಷ್ಟವಾದಂತಹ ನಿಲುವು ಹೇಳಿದರು. ನಾನು ಜೆಡಿ (ಎಸ್) ಗೆ ಸಂಬಂಧಪಟ್ಟಂಥವನು. ನಮ್ಮ ನಾಯಕರು ಶ್ರೀಮಾನ್ ದೇವೇಗೌಡರು. ಈ ಸದನದಲ್ಲಿ ನಮ್ಮ ನಾಯಕರು ಎಂ.ಪಿ. ಪ್ರಕಾಶ್ ಅವರು ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಅಂದರೆ ಜೆಡಿ (ಎಸ್) ನಾಯಕರು ಶ್ರೀಮಾನ್ ದೇವೇಗೌಡರು ರಾಷ್ಟ್ರಮಟ್ಟದಲ್ಲಿ ಅಧ್ಯಕ್ಷರು ಆಗಿದ್ದಾಗ, ಆ ಪಕ್ಷವನ್ನು ಪ್ರತಿನಿಧಿಸತಕ್ಕ ವ್ಯಕ್ತಿಗಳು ಈ ಸದನದಲ್ಲಿ ನಮ್ಮ ಶ್ರೀಮಾನ್ ಸಿಂಧ್ಯಾ ಅವರು, ಮನ್ಯ ಪ್ರಕಾಶ್‌ಜಿ ಅವರು, ಇನ್ನೂ 5–6 ಜನರ ಹೆಸರು ಇದೆ. ಎಷ್ಟರ ಮಟ್ಟಿಗೆ ಈ ಸಂದರ್ಭದಲ್ಲಿ ಒಪ್ಪಿಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ನಮ್ಮ ಎಂ.ಪಿ. ಪ್ರಕಾಶ್‌ಜಿ ಅವರು ಹೇಳಿದಂತೆ ಈಗಾಗಲೇ 42 ಜನ ಆಗಿದ್ದಾರೆ. ಏನು ಮಾಡುವುದು ? ಬಹುಃ ಸಂಖ್ಯಾ ಆ ಕಡೆಗೆ ಹೋದ ಮೇಲೆ ನನ್ನ ವಿಪ್‌ಗೂ ಬೆಲೆ ಇಲ್ಲ, ನನ್ನ ಮಾತಿಗೂ ಬೆಲೆ ಇಲ್ಲ ಎನ್ನತಕ್ಕಂಥ ಅಸಹಾಯಕತೆಯನ್ನು ಇಲ್ಲಿ ಪ್ರದರ್ಶನ ಮಾಡಿದರು. ಅಂದರೆ ಜೆಡಿ (ಎಸ್) ಪಕ್ಷವಂತೂ ಅಸ್ತಿತ್ವದಲ್ಲಿ ಇದೆ ಅಂದರೆ ಈಗ ಇರತಕ್ಕಂಥ ಮಾನ್ಯ ಕುಮಾರಸ್ವಾಮಿ ಅವರ ಜೊತೆಯಲ್ಲಿರತಕ್ಕ ಅಥವಾ ಅವರು ಹೇಳಿಕೊಳ್ಳತಕ್ಕ ಪಕ್ಷ ಇದು ಬೇರೆ ಎನ್ನತಕ್ಕದ್ದು ಸ್ಪಷ್ಟ. ಅಂದರೆ ಒಂದು ಜೆಡಿ (ಕೆ) ಇನ್ನೊಂದು ಜೆಡಿ (ಎಸ್).

**ಶ್ರೀ ಎಸ್. ಚಲುವರಾಯಸ್ವಾಮಿ** : ಎಲ್ಲಾ ಜೆಡಿ (ಎಸ್) ಸ್ವಾಮಿ. ಯಾವುದೂ (ಕೆ) ಇಲ್ಲ ಸ್ವಾಮಿ. ಜೆಡಿ (ಬಿ) ಇಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಆಯಿತು, ಎಲ್ಲಾ ಜೆಡಿ ಶಾಸಕರು ಎಂದು ಹೇಳೋಣ. ಜೆಡಿ ಸೆಕ್ಯುಲರ್ ಬೇಡ..

**ಮಾನ್ಯ ಸದಸ್ಯರು** : ಮಾನ್ಯ ಎಂ.ಪಿ.ಪ್ರಕಾಶ್ ಅವರೇ ಮಾನ್ಯ ಕುಮಾರಸ್ವಾಮಿ ಅವರು ಶಾಸಕಾಂಗದ ಪಕ್ಷದ ನಾಯಕರು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಅದನ್ನು ತಾವೇಕೆ ಹೇಳುತ್ತೀರಿ ಸ್ವಾಮಿ ?

**ಶ್ರೀ ಮಲ್ಲಿಕಾರ್ಜುನ ಖರ್ಗೆ** :– ಹೇಳುವಾಗ ಹೇಳಿಕೊಳ್ಳಲಿ, ಅವರು ಸಮರ್ಥರಾಗಿದ್ದಾರೆ. ಹೀಗೆ ಇವತ್ತು ಪಕ್ಷ ಒಡೆದು ಹೋಗಿ ಎರಡು ಹೋಳಾಗಿ, ಹೋಳಾದಂತಹ ಪಕ್ಷಕ್ಕೆ ಬಹುಮತ ಇದೆ, ಅದಕ್ಕಾಗಿ ಇದೇ ನಿಜವಾದಂತಹ ಪಕ್ಷ ಎಂಬುದು ಅವರ ವಾದ ಇರಬಹುದು. ಆದರೆ ನಾಳೆ ಎಲೆಕ್ಷನ್ ಕಮೀಷನ್‌ರವರು ಏನು ಮಾಡುತ್ತಾರೋ ನೋಡೋಣ. ರಾಷ್ಟ್ರೀಯ ನಾಯಕರಾದ ಶ್ರೀಮಾನ್ ದೇವೇಗೌಡರು ಯಾವ ರೀತಿಯಾಗಿ, ಯಾವ ಪಕ್ಷ ಸರಿ ಎನ್ನತಕ್ಕದ್ದು ಹೇಳುತ್ತಾರೆ, ಅದನ್ನೂ ಕೂಡ ನಾವು ಕಾದು ನೋಡೋಣ. ಇಂತಹ ಒಂದು ಸಿಚ್ಯುಯೇಷನ್‌ನಲ್ಲಿ ಈ ಸರ್ಕಾರ ಇವತ್ತು ಬಂದಿದೆ. ಇದು ಏನು ಇಬ್ಬರೂ ಜೊತೆಯಲ್ಲಿ ಸೇರಬೇಕು ಎನ್ನತಕ್ಕದ್ದು ಇತ್ತೀಚಿನ ಬೆಳವಣಿಗೆ ಅಲ್ಲ. ಅಥವಾ ಕೇವಲ ನಮ್ಮ ಕೆಲಸಗಳು ಆಗಿಲ್ಲ. ಟ್ರಾನ್ಸ್‌ಫರ್ ಆಗಿಲ್ಲ. ಪೋಸ್ಟಿಂಗ್ ಆಗಿಲ್ಲ – ಅಥವಾ ನಮಗೆ ಕಿರುಕುಳ ಇದೆ – ಎನ್ನತಕ್ಕ ದೃಷ್ಟಿಯಿಂದಲೇ ಇವರು ಒಂದು ಕಡೆ ಸೇರಿಲ್ಲ. ಇವರು ವ್ಯವಸ್ಥಿತವಾಗಿ ಸಂಚು ನಡೆಸಿ ಇಬ್ಬರೂ ಒಂದು ಕಡೆ ಸೇರಬೇಕು ಎನ್ನತಕ್ಕ ದೃಷ್ಟಿಯಿಂದಲೇ ಇದೆಲ್ಲವೂ ಕೂಡ ನಡೆದಿದೆ. ಅದಕ್ಕಾಗಿಯೇ ಇವತ್ತು ನಾನು ಬಹುಶಃ ಮೇ 2004ರ ಪತ್ರಿಕೆಗಳನ್ನೂ ಡೇಟ್‌ವೈಸ್ ತಂದಿದ್ದೇನೆ. ಮತ್ತು ಸಮಯ ಆಗುತ್ತದೆ ಹೇಳುವುದಿಲ್ಲ ಬೇಡ, ಸಾಕಷ್ಟು ಜನ ಕೂಡ ಹೇಳಿದ್ದಾರೆ. ಪ್ರತಿ ಒಂದು ದಿವಸ ಕೂಡ ಯಾರ್‍ಯಾರ ಹೇಳಿಕೆಗಳಲ್ಲಿ ಏನೇನು ಇತ್ತು ? ಯಾರ್‍ಯಾರು ಏನೇನು ಮಾತನಾಡಿದ್ದಾರೆ ? ಮತ್ತು ಯಾರ್‍ಯಾರ ಭಾವನೆ ಈ ಸಮ್ಮಿಶ್ರ ಸರ್ಕಾರವನ್ನು ಒಡೆಯಬೇಕು, ಇದರಿಂದ ಬೇರ್ಪಡಿಸಬೇಕು ಎನ್ನತಕ್ಕ ಹುನ್ನಾರಗಳು ನಡೆದಂತಹವು ಸಾಕಷ್ಟು ಉದಾಹರಣೆಗಳು ಇವೆ. ಆದರೆ ನನಗೆ ಆಶ್ಚರ್ಯ ಏನು ಅಂದರೆ ಪ್ರತಿ ಒಂದು ಪಕ್ಷಕ್ಕೂ ಕೂಡ ಒಂದು ತತ್ವ ಇರುತ್ತದೆ. ನಾವು ಪಕ್ಷ ಕಟ್ಟುವುದು ಪ್ರಜಾಪ್ರಭುತ್ವದಲ್ಲಿ ಏಕೆ ? ಒಂದು ನೀತಿ, ಒಂದು ಐಡಿಯಾಲಜಿ, ಒಂದು ಫಿಲಾಸಫಿ, ಆ ತತ್ವದ ಮೇಲೆ ನಾವು ನಡೆಯಬೇಕು. ನಾಳೆ ಅಧಿಕಾರಕ್ಕೆ ಬಂದರೆ ಆ ತತ್ವಗಳನ್ನು ಆಚರಣೆಯಲ್ಲಿ ತರಬೇಕು, ಇಂಪ್ಲಿಮೆಂಟ್ ಮಾಡಬೇಕು ಎನ್ನತಕ್ಕ ಆಸೆಯಿಂದಲೇ ನಾವು ಪಕ್ಷಗಳನ್ನು ಕಟ್ಟುತ್ತೇವೆ. ಕಮ್ಯುನಿಸ್ಟ್ ಪಕ್ಷದವರಿಗೆ, ಅವರಿಗೇ ಒಂದು ತತ್ವ ಇದೆ. ಅವರು ಅಧಿಕಾರಕ್ಕೆ ಬಂದರೆ ನಾವು ಇಂಥಿಂಥ ಪಬ್ಲಿಕ್ ಸೆಕ್ಟಾರ್ಸ್‌ಗೆ ಮಹತ್ವ ಕೊಡುತ್ತೇವೆ,. ನ್ಯಾಷನಲೈಸೇಷನ್‌ಗೆ ಬೆಂಬಲ ಕೊಡುತ್ತೇವೆ ಅಥವಾ ಈ ದೇಶದಲ್ಲಿರುವಂತಹ ಭೂ ಸುಧಾರಣೆ ಕಾನೂನಿಗೆ ನಮ್ಮ ಬೆಂಬಲ ಇದೆ ಎನ್ನತಕ್ಕ ಅನೇಕ ಪ್ರಗತಿಪರ ಕಾನೂನುಗಳಿಗೆ ಸಹಾಯ ಮಾಡತಕ್ಕದ್ದು, ಸಪೋರ್ಟ್ ಮಾಡತಕ್ಕದ್ದು ಆ ನಿಲುವನ್ನು ತಾಳಿಕೊಂಡು ಅವರು ಬಂದಿರುತ್ತಾರೆ. ಅಂದರೆ, ಅವರದೇ ಆದ ವಿಶಿಷ್ಟ ತತ್ವ ಇದೆ. ಅದೇ ರೀತಿಯಾಗಿ ಬೇರೆ ಬೇರೆ ಪಕ್ಷಗಳಿಗೂ ಇದೆ. ಇವೊತ್ತು ಬಿಜೆಪಿಯವರಿಗೆ 'ನೀವ್ಯಾಕೆ ಹೀಗೆ'? ಎಂದು ನಾನು ಅನ್ನತಕ್ಕಂಥಾದ್ದಲ್ಲ. ಅವರ ನಂಬಿಕೆಯೇ ಅದರ ಮೇಲಿದೆ. ಇವೊತ್ತು ಗೋವಾಳ್ಕರ್ ಗುರೂಜಿಯವರು ಹೇಳಿದಂಥ ಫಿಲಾಸಫಿಯೇ ಇರಬಹುದು. ಅಥವಾ ಮನು ಹೇಳಿದಂಥ ಫಿಲಾಸಫಿಯೇ ಇರಬಹುದು ಅಥವಾ ಹಿಂದುತ್ವ ಎಂದು ಅವರ ದೃಷ್ಟಿಯಲ್ಲಿ ಯಾವುದೋ ಒಂದು ಡೆಫನೆಷನ್ ಮಾಡಿಕೊಂಡು ಅವರೇನು ಹೇಳಿಕೊಳ್ಳುತ್ತಾರೋ, ಅದೇ ಇರಬಹುದು. ಆದರೆ, ನಾಳೆ ನಾವು ಅಧಿಕಾರಕ್ಕೆ ಬಂದರೆ,' ಈ ದೇಶದಲ್ಲಿ ಹಿಂದೂ ರಾಷ್ಟ್ರ ಕಟ್ಟುತ್ತೇವೆ. ಹಿಂದುತ್ವಕ್ಕೆ ನಮ್ಮ ಬೆಂಬಲ'ವೆಂದು ಹೇಳಿ, ಆ ತತ್ವವನ್ನು ಸಮಾಜದಲ್ಲಿ ರೂಢಿಸತಕ್ಕಂಥಾದ್ದು, ಸಮಾಜದಲ್ಲಿ ಅದರ ಬೇರನ್ನು ಬಿತ್ತತಕ್ಕಂಥ ಕೆಲಸವನ್ನು ನಾವು ಕೆಳಗಿನವರೆಗೆ ತೆಗೆದುಕೊಂಡು ಹೋಗಿ ಮಾಡುತ್ತೇವೆ' ಎನ್ನುವ ಮಾತನ್ನು ಒಂದು ಸಲವಲ್ಲ, ಅನೇಕ ಸಲ ಹೇಳಿದ್ದಾರೆ. ಅಂದರೆ, ಅವರದೂ ಕೂಡ

ಒಂದು ವಿಶಿಷ್ಟವಾದಂಥ ತತ್ವ. ನೀತಿ ತದನಂತರ, ಜೆಡಿ (ಎಸ್) ಯದು. ಅವರೂ ಕೂಡ ಸಮಾಜವಾದದ ಮೇಲೆ ನಂಬಿಕೆ ಇದೆ ಎನ್ನತಕ್ಕಂತ ಮಾತನ್ನು ಹೇಳಿದ್ದಾರೆ. ಆ ಮಾತುಗಳನ್ನು ನಡೆಸಿಕೊಂಡು ಬರುವ ಪ್ರಯತ್ನಗಳನ್ನು ಕೆಲವು ಸಲ ಮಾಡಿದ್ದಾರೆ. ಅದರ ಜೊತೆ ಜೊತೆಯಲ್ಲಿ ಜಾತ್ಯಾತೀತ ತತ್ವಗಳು, ಇದು ನಮ್ಮ ಮುಖ್ಯ ಗುರಿ, ಅದಕ್ಕಾಗಿ ಪಕ್ಷ ಇಬ್ಭಾಗವಾದಾಗ ಅವರು ಪಕ್ಷದ ಹೆಸರನ್ನೂ ಕೂಡ ಇಟ್ಟುಕೊಂಡಿದ್ದು ಜೆಡಿ (ಎಸ್) ಎಂದು. ಜನತಾದಳ (ಸೆಕ್ಯುಲರ್). ಅಂದರೆ, ಸೆಕ್ಯುಲರ್ ತತ್ವಜ್ಞಾನಕ್ಕೆ ನಾವು ಅಂಟುಕೊಂಡಿದ್ದೇವೆ. ಏನೇ ಬಂದರೂ ಕೂಡ ಈ ತತ್ವದಿಂದ ನಾವು ಹಿಂದೆ ಸರಿಯುವುದಿಲ್ಲ ಅಥವಾ ಬೇರೆ ಕಡೆ ಹೋಗುವುದಕ್ಕೆ ಸಾಧ್ಯವಿಲ್ಲ. ಈ ತತ್ವಗಳನ್ನು ಬಿಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತ ಗುರಿ ಇಟ್ಟುಕೊಂಡು ಧ್ಯೇಯ ಇಟ್ಟುಕೊಂಡು ಇವೊತ್ತು ಅವರು ಈ ಪಕ್ಷವನ್ನು ಹುಟ್ಟು ಹಾಕಿದ್ದಾರೆ. ಮತ್ತು ಆ ಪಕ್ಷದ ತತ್ವಗಳನ್ನೂ ಕೂಡ ಅವರ ಚುನಾವಣಾ ಮ್ಯಾನಿಫೆಸ್ಟೋದಲ್ಲಿರಬಹುದು, ಅಥವಾ ಅವರ ಪಕ್ಷದ ಸಂವಿಧಾನವೇನಿದೆ, ಅದರಲ್ಲೂ ಕೂಡ ಈ ಮಾತುಗಳಿವೆ. ಸಂವಿಧಾನದಲ್ಲಿರುವಂಥಾದ್ದನ್ನು ಬಿಟ್ಟು ಇವೊತ್ತು ಅವರ ಪೆಕ್ಷದ ತತ್ವಗಳೇನಿವೆ, ಮೂಲತತ್ವಕ್ಕೆ ಕೊಡಲಿಪೆಟ್ಟು ಹಾಕಿ ಅಧಿಕಾರಕ್ಕಾಗಿ ನಾವು ಭಾರತೀಯ ಜನತಾ ಪಾರ್ಟಿ ಜೊತೆಯಲ್ಲಿ ಹೋಗುತ್ತೇವೆಂದು ಹೇಳತಕ್ಕಂಥಾದ್ದು ಮತ್ತು ಯಾವುದೋ ಒಂದು ಕುಂಟುನೆಪಕ್ಕಾಗಿ ಯಾವುದೋ ದೇಶದಲ್ಲಿ, ರಾಜ್ಯದಲ್ಲಿ ಅನಾಹುತವಾಗಿಲ್ಲ, ಅಥವಾ ಯಾವುದಾದರೂ ದೊಡ್ಡ ತಪ್ಪುಗಳಾಗಿಲ್ಲ. ಅಥವಾ ಏನಾದರೊಂದು ಸಮಾಜದಲ್ಲಿ ದೊಡ್ಡ ಗಲಾಟೆ, ಗದ್ದಲ ಎದ್ದು ಇಡೀ ಕಾನೂನಿನ ಸುವ್ಯವಸ್ಥೆ ಎಲ್ಲವೂ ಹಾಳಾಗಿಹೋಗಿದೆ ಅಥವಾ ನೀವು ಒಪ್ಪಿಕೊಂಡಂಥ ಕಾರ್ಯಕ್ರಮಗಳು ಅನುಷ್ಠಾನಕ್ಕೆ ತಂದಿಲ್ಲ ಅಥವಾ ನೀವು ಕೊಟ್ಟಂಥ ಪ್ರೋಗ್ರಾಂಗಳನ್ನು ಜಾರಿಯಲ್ಲಿ ತಂದಿಲ್ಲ ಅಂತ ಹೇಳಿ ಏನಾದರೂ ಆಪಾದನೆ ಮಾಡಿ ಅವರು ಹೋಗಿದ್ದರೆ.. ಅದು ಬೇರೆ ಮಾತು ಅದೂ ಕೂಡ ಹೇಗೆ ಹೋದರು ಎಂದರೆ, ಆಪಾದನೆ ಮಾಡಿದರೂ ಕೂಡ ಬಿಜೆಪಿಯವರ ಜೊತೆಯಲ್ಲಿ ಹೋಗುವುದಕ್ಕೆ ಅವರಿಗೆ ನೈತಿಕ ಹಕ್ಕಿಲ್ಲ. ನಮ್ಮಿಂದ ದೂರ ಇರಬಹುದು ಅಥವಾ ನಮ್ಮನ್ನು ಅಧಿಕಾರದಿಂದ ದೂರ ಸರಿಸುವುದಕ್ಕೆ ಅವರು ಬೇಕಾದರೆ ಸ್ವತಂತ್ರವಾಗಿರಬಹುದು. ಆದರೆ, ಒಂದು ಕಡೆ ತತ್ವ ಬೇಕು, ಇನ್ನೊಂದು ಕಡೆ ಅಧಿಕಾರ ಕೂಡ ಬೇಕು. ಇದು ಹೇಗೆ ಸಾಧ್ಯ ? ಏನೋ ನಮ್ಮ ಮಾಜಿ ಡೆಪ್ಯುಟಿ ಚೀಫ್ ಮಿನಿಸ್ಟರ್ ಆದ ಶ್ರೀಮಾನ್ ಎಂ.ಪಿ. ಪ್ರಕಾಶ್ ಸಾಹೇಬರು ಸ್ವಲ್ಪ ಕಸರತ್ತು ಮಾಡಿದರು. ನೀವು ಅಷ್ಟು ಕಸರತ್ತು ಮಾಡಿದಿರಲ್ಲಾ, ಅದು ಬಹಳ ಜನರಿಗೆ ಹಿಡಿಸಲಿಲ್ಲ. ಏಕೆ ಹಿಡಿಸಲಿಲ್ಲವೆಂದರೆ, ಆದಷ್ಟು ಪ್ರಯತ್ನ ಮಾಡಿ ನಮ್ಮೆಲ್ಲರನ್ನೂ ಸುತ್ತಿ ಸುತ್ತಿ ಬಳಸಿಳ'ಈ ಕಾಲದಲ್ಲಿ ಎಲ್ಲಿ ತತ್ವ ಉಳಿದಿದೆ ? ನೀವು ಅವರ ಜೊತೆಯಲ್ಲಿ ಹೋದಿರಿ, ಅವರು ಅವರ ಜೊತೆಯಲ್ಲಿ ಹೋದರು' ಈ ರೀತಿ ಹೇಳಿಕೊಂಡು ಬಂದು, ಕೊನೆಗೆ ಆ ತತ್ವಗಳೇ ಉಳಿದಿಲ್ಲವೆಂದಾಗ, ಪಾಪ। ಅವರೇನು ಮಾಡುತ್ತಾರೆ ಅನ್ನತಕ್ಕಂತ ಒಂದು ಮಾತಿಗೆ ತಾವು ಬಂದುಬಿಟ್ಟಿರಿ. ಇವೊತ್ತು ಕೂಡ ರಾಷ್ಟ್ರೀಯ ನಾಯಕರಾದ ಶ್ರೀಮಾನ್ ದೇವೇಗೌಡರು ಹೇಳುತ್ತಾರೆ. 'ನಾನು ಸೆಕ್ಯುಲರ್ ತತ್ವ ಬಿಟ್ಟು ಇಲ್ಲ, ಬಿಜೆಪಿ ಬಾಗಿಲಿಗೆ ಹೋಗುವ ಪ್ರಶ್ನೆಯಂತೂ ಉದ್ಭವಿಸುವುದಿಲ್ಲ, ನನ್ನ ಡೆಡ್ ಬಾಡಿ ಹೋಗಬಹುದೇ ಹೊರತಾಗಿ ನಾನೆಂದೂ ಕೂಡ ಶರಣಾಗುವುದಿಲ್ಲ' ಎನ್ನುವ ಮಾತನ್ನು ಹೇಳಿದ್ದಾರೆ. ಅಂದರೆ ನೀವು ಯಾವ ವಂಶದವರು? ಏನು ಆ ಜೆಡಿ (ಎಸ್) ವಂಶದವರೇ ? ಏನು ಸ್ವತಂತ್ರವಾಗಿ ಹುಟ್ಟಿದವರೇ ? ದೇಶದ ಜನತೆಗೆ ಗೊತ್ತಾಗಬೇಕಲ್ಲಾ. ಏಕೆಂದರೆ, ನಿಮ್ಮನ್ನು ನಮ್ಮನ್ನು ಯಾವ ಜನರು ಇವೊತ್ತು ಆರಿಸಿ ತಂದಿದ್ದಾರೆ,

ನಾವೂ ಕೂಡ ಬಿಜೆಪಿ ವಿರುದ್ಧ ಹೇಳಿಕೊಂಡೇ ಬಂದಿದ್ದೇವೆ. ನೀವು ನಮ್ಮ ವಿರುದ್ಧ ಹೇಳಿರಬಹುದು, ಬಿಜೆಪಿ ವಿರುದ್ಧವೂ ಹೇಳಿದ್ದೀರಿ. ಏಕೆಂದರೆ, ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಇದ್ದಾಗ ನಾವೆಲ್ಲರೂ ಕೂಡ ಆ ಕೇಂದ್ರ ಸರ್ಕಾರದ ವಿರುದ್ಧ ಅಥವಾ ಅಲ್ಲಿರತಕ್ಕಂತ ಸರ್ಕಾರದ ಬಗ್ಗೆ ಅನೇಕ ಮಾತುಗಳನ್ನು ಆಡಿಕೊಂಡೇ ನಾವು ಬಂದಿದ್ದೇವೆ. ತಾವೂ ಕೂಡ ಆಡಿದ್ದೀರಿ. ಒಂದು ಕಡೆ ನಮ್ಮ ತಪ್ಪುಗಳನ್ನು ಹೇಳಿಕೊಂಡು ಅಥವಾ ನಮ್ಮ ಆಡಳಿತದ ಬಗ್ಗೆ ಹೇಳಿಕೊಂಡು ತಾವು ಬಂದಿರಬಹುದು. ಆದರೆ, ಇನ್ನೊಂದು ಕಡೆ ಬಿಜೆಪಿ ವಿರುದ್ಧ ಎನ್‌ಡಿಎ ಸರ್ಕಾರದ ವಿರುದ್ಧವೂ ಕೂಡ ತಾವು ಹೇಳಿಕೊಂಡು ಬಂದಿದ್ದೀರಿ ಎನ್ನುವ ಮಾತನ್ನು ಎಂದೂ ಕೂಡ ಮರೆಯಬೇಡಿ. ಏಕೆಂದರೆ, ಪಾರ್ಲಿಮೆಂಟ್ ಚುನಾವಣೆ ಮತ್ತು ಅಸೆಂಬ್ಲಿ ಚುನಾವಣೆ ಇವರೆಡೂ ಕೂಡ ಏಕಕಾಲದಲ್ಲೇ ಆದ ಕಾರಣ ತಾವು ಅವರ ವಿರುದ್ಧ ಏನು ಮಾತನಾಡಬೇಕಾಗಿತ್ತು ಅಥವಾ ಅಲ್ಲೇನು ವಿರುದ್ಧವಾಗಿ ಹೇಳಬೇಕಾಗಿತ್ತು. ಅದನ್ನು ಹೇಳಿದ್ದೀರಿ. ರಾಜ್ಯದಲ್ಲಿ ನಡೆದಂಥ ಆಡಳಿತದ ಬಗ್ಗೆ ನಮ್ಮ ವಿರುದ್ಧ ಏನು ಹೇಳಬೇಕಾಗಿತ್ತು, ಅದನ್ನೂ ಹೇಳಿದ್ದೀರಿ. ಅಂದರೆ, ಇವೊತ್ತು ಯಾವ ಆಧಾರದ ಮೇಲೆ ತಾವು ಒಂದಾಗಿದ್ದೀರಿ ? ಯಾವ ನೀತಿ ಮೇಲೆ, ಯಾವ ತತ್ವದ ಮೇಲೆ ಒಂದಾಗಿದ್ದೀರೆಂಬುದನ್ನು ಜನರಿಗೆ ನಾವು ಹೇಳಬೇಕಾಗುತ್ತದೆ. ಇವೊತ್ತು ನಮಗೆ ಮತ ಕೊಟ್ಟರು. ನಾವು ಎನ್‌ಡಿಎ ಸರ್ಕಾರದ ವಿರುದ್ಧ ಕೂಡ ಹೇಳಿಕೊಂಡು ಬಂದಿದ್ದೇವೆ. ಸೆಕ್ಯುಲರ್ ತತ್ವಗಳನ್ನು ನಾವು ರಕ್ಷಣೆ ಮಾಡುತ್ತೇವೆ. ಅದರ ಬಗ್ಗೆ ನಾವು ನಮ್ಮ ಇಡೀ ಶಕ್ತಿಯನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ತಾವೂ ಕೂಡ ಹೇಳಿದ್ದೀರಿ. ಅದಕ್ಕೆ ತಮಗೆ ವೋಟು ಕೊಟ್ಟಿದ್ದು. ಮತ್ತು ನಮ್ಮ ಪಕ್ಷಕ್ಕೆ ವೋಟು ಕೊಟ್ಟಿದ್ದು. ಈ ಒಂದು ಜಾತ್ಯಾತೀತ ತತ್ವದ ಆಧಾರದ ಮೇಲೆ ನಡೆದುಕೊಂಡು ಹೋಗತಕ್ಕಂಥ ಪಕ್ಷಗಳು ಇವು ಎಂದು ಗುರ್ತಿಸಿ ನಮಗೆ ೬೮ ಜನರನ್ನು ಆರಿಸಿ ಕೊಟ್ಟರು. ತಮಗೆ ಸುಮಾರು ೫೯ ಜನರನ್ನು ಆರಿಸಿ ಕೊಟ್ಟರು. ಉಳಿದಂತೆ, ಕೇಂದ್ರದಲ್ಲಿ ನಮ್ಮ ಸರ್ಕಾರ ಇದೆ, ಇಲ್ಲಿನ ಸರ್ಕಾರ ಸರಿಯಿಲ್ಲವೆಂದು ಹೇಳಿಕೊಂಡು, ಅವರು ೭೯ ಸೀಟುಗಳಲ್ಲಿ ಬಂದರು. ನಿಮಗೆ ಶಾಸಕರ ಸಂಖ್ಯಾಬಲ ಇರಬಹುದು. ಆದರೆ, ಜನ ಬೆಂಬಲ ನಿಮಗಿಲ್ಲ. ನಿಮಗೆ ಜನ ಬೆಂಬಲ ಎಷ್ಟಿದೆಲ್ಲ ಸ್ವಾಮಿ ? ೨೮ ಪರ್ಸೆಂಟ್ . ನಾವು ೬೮ ಸೀಟು ತೆಗೆದುಕೊಂಡು ನಮಗೆ ಜನ ಬೆಂಬಲ ಇದ್ದದ್ದು 35 ಪರ್ಸೆಂಟ್, ತಾವು ೫೯ ಸೀಟು ತೆಗೆದುಕೊಂಡು ತಮಗಿರತಕ್ಕಂಥ ಜನ ಬೆಂಬಲ ೨೧ ಪರ್ಸೆಂಟ್. ಅಂದಾಗ ಜನ ಬೆಂಬಲ ಇದೆಯೆಂದು ನೀವು ಹೇಳುತ್ತೀರಾ ? ಇವೊತ್ತು ಶಾಸಕರು ಇಲ್ಲಿ ಸೇರಿ ನಾವು ರಾಜಕೀಯ ಮಾಡಿ ತತ್ವಕ್ಕೆ ತಿಲಾಂಜಲಿ ಕೊಟ್ಟು ಅಧಿಕಾರದ ಆಸೆಗಾಗಿ ಇವೊತ್ತು ಒಂದಾಗಿರಬಹುದು. ಆದರೆ, ಜನ ಈ ತತ್ವದ ವಿರುದ್ಧ ಏನು ಮತ ಕೊಟ್ಟಿದ್ದಾರೆ, ಅವರು ಬಹುಮತದಲ್ಲಿದ್ದಾರೆಂಬ ನೆನಪನ್ನು ತಾವು ಇಟ್ಟುಕೊಳ್ಳಿ. ಪದೇ ಪದೇ ಹೇಳಿಕೊಂಡು ಎಲ್ಲಿ ಜನರಿದ್ದಾರೆ? ಏನು ? ಎಂದು ಹೇಳುವುದಕ್ಕೆ ಹೋಗಬೇಡಿ. ಇವೊತ್ತು ಯಾರು ಈ ಸೆಕ್ಯುಲರ್ ಫೋರ್ಸಸ್‌ಗೆ ವೋಟು ಕೊಟ್ಟಿದ್ದಾರೋ, ಮತ ಚಲಾಯಿಸಿದ್ದಾರೋ, ಅವರ ಪರವಾಗಿ ಅವರ ಸಂಖ್ಯಾಬಲ, ಇವೊತ್ತು ಭಾರತೀಯ ಜನತಾ ಪಾರ್ಟಿಗಿಂತಲೂ ಹೆಚ್ಚಾಗಿದೆ ಎನ್ನತಕ್ಕಂಥಾದ್ದನ್ನು ತಾವು ಮನಗಾಣಬೇಕು. ಇವೊತ್ತು ನಾವೂ ಅವರೂ ಸೇರಿ ಒಂದಾಗಿದ್ದೇವೆ ಅಂತಲ್ಲ. ನೀವೂ ಅವರೂ ಶಾಸಕರಾಗಿ ಸೇರಿ ಒಂದಾಗಿರಬಹುದು. ಆದರೆ, ನಿಮ್ಮ ಜನ ನಿಮಗೆ ವೋಟು ಕೊಟ್ಟಂತ ಮತದಾರರು, ಅವರ ಮತದಾರರು ಇನ್ನು ಮುಂದೆ ಒಂದಾಗುವುದಕ್ಕೆ ಸಾಧ್ಯವೇ ಇಲ್ಲ. ನೀವೆಷ್ಟೇ ಪ್ರಯತ್ನ ಮಾಡಿದರೂ ಅವರು ತಮ್ಮ ಹಾದಿಯನ್ನು ಹುಡುಕುತ್ತಾರೆ, ಇವರ ಮತದಾರರು ಅಥವಾ ಇವರ ಬೆಂಬಲಿಗರು ಅವರಿಗೆ ಸಹಕರಿಸಿದಂಥ ಜನರು ಅವರು ಬೇರೆ

ದಾರಿ ಹುಡುಕುತ್ತಾರೆ. ಅದಕ್ಕಾಗಿ ಇವೊತ್ತು ನಾವು ಹೇಳುತ್ತಿದ್ದೇವೆ. ಅಪವಿತ್ರ ಮೈತ್ರಿ ಹೇಗೆಂದರೆ, ಎಂದೂ ಒಂದು ಕಡೆ ಸೇರದೇ ಇರತಕ್ಕಂಥ ಜನರು... ಇದೊಂದು ವಿಚಿತ್ರ. ಏನೋ ಹೇಳುತ್ತಿದ್ದರು. ರಮೇಶ್‌ಕುಮಾರ್‌ಗೆ ಇದರ ಬಗ್ಗೆ ಜಾಸ್ತಿ ಗೊತ್ತು. ಈ ವಿಶ್ವಾಮಿತ್ರನ ಜಗತ್ತಿನಲ್ಲಿ ಪರಸ್ಪರ ವಿರುದ್ಧ ಇರತಕ್ಕಂಥ ... ಅಂದರೆ ಹುಲಿಗಳೂ ಆಡುಗಳೂ ಒಂದು ಕಡೆ ಇರುವುದು, ಇಲಿಯೂ ಬೆಕ್ಕೂ ಒಂದು ಕಡೆನೇ ಇರುವುದು. ಹಾಗೇನೇ ಇದೂ ಕೂಡ ಆಯಿತು. ವಿಶ್ವಾಮಿತ್ರನ ಜಗತ್ತಿನ ಸೃಷ್ಟಿಯನ್ನು ತಾವು ಇವೊತ್ತು ಮಾಡಿದ್ದೀರಿ. ಇದರಿದ ತಾವು ಏನು ಮಾಡಿದ್ದೀರೆಂಧರೆ, ಜನರನ್ನು ದಿಕ್ಕು ತಪ್ಪಿಸಿದ್ದೀರಿ. ಜನರು ಇವತ್ತಿನ ದಿವಸ ಯಾವ ದಾರಿ ತೋರಿಸಿದರೋ, ಅದನ್ನು ಬಿಟ್ಟಿರಿ. ಜನರು ಯಾವ ತತ್ವದ ಮೇಲೆ ನಂಬಿಕೆ ಇಟ್ಟು ನಿಮಗೆ ಅಧಿಕಾರ ಕೊಟ್ಟರೋ, ಅದನ್ನು ನೀವು ತಿರಸ್ಕರಿಸಿ ಇನ್ನೂ ಹೆಚ್ಚಿನ ಅಧಿಕಾರ ಬೇಕೆಂದು ಇವತ್ತು ನೀವಿಬ್ಬರೂ ಕೂಡ ಒಂದಾಗಿದ್ದೀರಿ. ಒಂದು ಕಾಲದಲ್ಲಿ ಏನು ಆಗಿತ್ತು? ಇದು ಸೇರತಕ್ಕಂಥದ್ದು ಅಲ್ಲ. ಪತ್ರಿಕೆಯಲ್ಲಿ ಇದೆ. ಎಲ್ಲಾ ಕಡೆಗೂ ಕೂಡ ತಾವು ನೋಡಿರಬಹುದು. ಒಂದು ಸಂದರ್ಭದಲ್ಲಿ ಬಿಜೆಪಿ ಮುಖಂಡರು ಪಕ್ಷವನ್ನೇ ಒಡೆದು, ಒಂದು ಗುಂಪನ್ನು ಮಾಡಿ ರಾಜ್ಯವನ್ನು ಕಟ್ಟಬೇಕು ಅನ್ನತಕ್ಕಂಥ ಸಂಚು ಕೂಡ ನಡೆದಿತ್ತು ಎಂಬುದು ಜಾಹೀರಾಗಿದೆ. ಅದಕ್ಕಾಗಿ ದೆಹಲಿಯಿಂದ ಅನೇಕ ಮುಖಂಡರು ಓಡಿ ಬಂದರು. ಅವರು ಬಂದು ಕೊನೆಗೆ ಹೇಳಿದರು, ನೋಡಿ ರಾಜ್ಯ ಮಟ್ಟದಲ್ಲಿ ಮಾನ್ಯ ಯಡಿಯೂರಪ್ಪನವರು ನಾಯಕರು, ಅವರು ಏನು ಮಾಡುತ್ತಾರೆ, ಅದಕ್ಕೆ ನೀವು ಮುಕ್ತವಾಗಿ ಬಿಟ್ಟುಬಿಡಿ, ದೆಹಲಿ ಮಟ್ಟದಲ್ಲಿ ಮಾನ್ಯ ಅನಂತ್‌ಕುಮಾರ್‌ರವರೆ ತಾವು ಏನು ಮಾಡಬೇಕೋ ಅದನ್ನು ಮಾಡಿ ಎಂದು ಸಮಜಾಯಿಷಿ ನೀಡಿ patch up ಮಾಡಿದರು. ಇದು ಸುಳ್ಳು ಎಂದು ಬೇಕಾದರೆ ಹೇಳಿ. ಈ ಒಡಕಿನ ಮಾತುಗಳು ನಡೆದಿರಲಿಲ್ಲ, ಒಂದು ಕಡೆ ಸೇರಿ ಕೆಲವು ಜನ ಒಂದು ಅಭಿಪ್ರಾಯ ಪಟ್ಟು, ನಾವೇ ಒಂದು ಗುಂಪು ಕಟ್ಟಬೇಕು ಎನ್ನತಕ್ಕಂಥದ್ದು ಆಗಿಲ್ಲ ಎಂದು ಬೇಕಾದರೆ ನೀವು ಆತ್ಮಸಾಕ್ಷಿಯಾಗಿ ಹೇಳಿ, ನಾವು ಒಪ್ಪಿಕೊಳ್ಳುತ್ತೇವೆ. ಇದರ ಹಿನ್ನೆಲೆ ಏನು ಎಂದು ನಾನು ಹೇಳುತ್ತಿದ್ದೇನೆ. ಇಲ್ಲಿ ಅನೇಕ ಸಾರಿ ತಾವು ಈ ಮಾತನ್ನು ಹೇಳಿದ್ದೀರಿ. ಎಂದಿನಿಂದ ಈ ಸಂಚು ನಡೆದಿದೆ ಎನ್ನುವುದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದು ಕೇವಲ ಮಾನ್ಯ ಸಿದ್ದರಾಮಯ್ಯನವರ 'ಅಹಿಂದ ' ಗುಂಪು ಬಂತು ಅಥವಾ ಇನ್ನೊಬ್ಬರ ಟ್ರಾನ್ಸ್‌ಫರ್ ಆಗಲಿಲ್ಲ, ಎಲ್ಲೋ ಪೊಲೀಸ್ ಹೆರಾಸ್‌ಮೆಂಟ್ ಆಯಿತು. ಇದು ಹಿನ್ನೆಲೆಯಲ್ಲ. ಇಂತಹ ಸಣ್ಣ ಪುಟ್ಟದ್ದಕ್ಕೆ ನೀವು ಸೆಕ್ಯೂಲರ್ ತತ್ವಕ್ಕೆ ತಿಲಾಂಜಲಿ ಕೊಡುತ್ತೀರಾ ಅಥವಾ ಯಾರೋ ಒಬ್ಬರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ, ನಿಮ್ಮ ಮಾತನ್ನು ಕೇಳಲಿಲ್ಲ ಎನ್ನುವ ಕಾರಣಕ್ಕಾಗಿ ಸಿಟ್ಟು ಬಂದು, ಪಕ್ಷದ ನೀತಿ ಅಥವಾ ತತ್ವವನ್ನೇ ಬಿಡುತ್ತೀರಾ ? ಇದು ಸಾಧ್ಯವಿಲ್ಲ. ಯಾವ ಪಕ್ಷದವರೂ ಕೂಡ ಇದನ್ನು ಮಾಡುವುದಿಲ್ಲ ಅನೇಕ ಸಾರಿ ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೂ ಕೂಡ, ಅಲ್ಲೇ ಕೂಡಿಸಿ ಆ ವ್ಯತ್ಯಾಸಗಳನ್ನು ಸರಿಪಡಿಸತಕ್ಕಂಥ ಕೆಲಸವಾಗಬೇಕಾಗಿತ್ತು. ಈಗ ಬಿಜೆಪಿಯಲ್ಲಿ ಆಗಲಿಲ್ಲವೇ ? ಬಹಳ ದೊಡ್ಡ ಪ್ರಮಾಣದಲ್ಲಿ ಅವರಲ್ಲಿ ಬಿರುಕು ಬಿಟ್ಟಿತ್ತು. ಕೊನೆಗೆ ಅವರ ಮುಖಂಡರು ಬಂದು ಒಂದು ಮಾಡಿ, ಅವರಿಗೆ ಹೇಳಿ, ಅವರನ್ನು ಒಂದು ಮಾಡಿದರು. ಆ ಸಾಧ್ಯತೆ ಕೂಡ ಜೆ.ಡಿ. (ಎಸ್)ನಲ್ಲಿತ್ತು. ಆದರೆ ಅದನ್ನು ಏಕೆ ಮಾಡಲಿಲ್ಲ ? ಒಂದು ಕಡೆ ಮಾನ್ಯ ಧರ್ಮಸಿಂಗ್‌ರವರು ಬಹಳ ಒಳ್ಳೆಯವರು ಎಂದು ಹೇಳುತ್ತೀರಿ. ಅವರು ಬಹಳ ಚೆನ್ನಾಗಿದ್ದರು, ಅವರು ಧರ್ಮರಾಯನಂತೆ ಇದ್ದರು ಎಂದು ಹೇಳುತ್ತೀರಿ. ಅವರಿಂದ ನಿಮ್ಮ ಕೆಲಸವಾದ ಮೇಲೆ ನಿಮಗೆ ಏನು ತೊಂದರೆಯಾಯಿತು?.........

(ಗೊಂದಲ)

**ಶ್ರೀ ಎನ್. ಚಲುವರಾಯ ಸ್ವಾಮಿ** : ಮಾನ್ಯ ಖರ್ಗೆ ಸಾಹೇಬರೆ, ಬರೇ ಟ್ರಾನ್ಸ್‌ಫರ್ ಒಂದೇ ಅಲ್ಲ, ಕೋ–ಆಪರೇಟಿವ್‌ನಲ್ಲಿ ಒಂದು ನಾಮಿನೇಷನ್ ವಿತ್‌ಡ್ರಾ ಮಾಡುವುದಕ್ಕೆ ನೀವು ಎರಡು ವರ್ಷ ತೆಗೆದುಕೊಂಡಿರಿ .......

(ಗೊಂದಲ)

**ಛೇರ್ಮನ್** : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ಎಲ್. ಧರ್ಮೇಗೌಡ** : ಸ್ವಾಮಿ ಧರ್ಮಸಿಂಗ್‌ರವರಿಗೆ ಇವರದೇ ಕಿರುಕುಳ. ಅವರು ಕೆಲಸ ಮಾಡುವುದಕ್ಕೆ ಇವರು ಬಿಟ್ಟರೇ ?

**ಛೇರ್ಮನ್** : ಮಾನ್ಯ ಧರ್ಮೇಗೌಡರವರೆ, ದಯವಿಟ್ಟು ಕುಳಿತುಕೊಳ್ಳಿ. ಅವರ ಮಾತನ್ನು ಕೇಳಿ.

**ಶ್ರೀ ಎಸ್.ಎಲ್. ಧರ್ಮೇಗೌಡ** : ಮನ್ಯ ಧರ್ಮಸಿಂಗ್‌ರವರು ಧರ್ಮರಾಯನಂತಹ ಮನುಷ್ಯರೇ. ಆದರೆ ಅವರು ಕೆಲಸ ಮಾಡಲು ಇವರು ಬಿಡಲಿಲ್ಲ. ಅವರಿಗೆ ಇವರದೇ ಕಿರುಕುಳ ಜಾಸ್ತಿಯಾಗಿತ್ತು. 24 ಗಂಟೆ ಕಾಲ ಪತ್ರಿಕೆಗಳಲ್ಲಿ ಚುನಾವಣೆಗೆ ಹೋಗಿ ಎಂದು ಹೇಳಿಕೆ ಕೊಡುತ್ತಿದ್ದರು...

(ಗೊಂದಲ)

**ಛೇರ್ಮನ್** :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ಎಲ್. ಧರ್ಮೇಗೌಡ** : ಅವರಿಗೆ ಇವರು ಕೆಲಸ ಮಾಡಲಿಕ್ಕೆ ಬಿಡಲಿಲ್ಲ. ಮಾನ್ಯ ಧರ್ಮಸಿಂಗ್‌ರವರಿಗೆ ಇವರ ಕಿರುಕುಳವೇ ಜಾಸ್ತಿಯಾಗಿತ್ತು ....

(ಗೊಂದಲ)

**ಶ್ರೀ ಎಸ್.ಎಲ್.ಧರ್ಮೇಗೌಡ** : ಮಾನ್ಯ ಧರ್ಮಸಿಂಗ್‌ರವರು ಒಳ್ಳೆಯವರೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಮಾನ್ಯ ಧರ್ಮಸಿಂಗ್‌ರವರಿಗೆ ಇವರ ಕಿರುಕುಳವೇ ಜಾಸ್ತಿಯಾಗಿತ್ತು. ......

**ಡಾಃ ಹೆಚ್.ಸಿ. ಬಾಲಕೃಷ್ಣ** : ಬಾಂಬೆಯವರ ಜೊತೆಗೆ ಸೇರಿ ರಾಜಕೀಯ ಮಾಡಲಿಕ್ಕೆ ಹೊರಟಿದ್ದರಿಂದಲೇ ನಿಮಗೆ ಈ ಪರಿಸ್ಥಿತಿ ಬಂದಿತು. ದಯಮಾಡಿ ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಆಯಿತಪ್ಪ, ಇವರಾರದರೂ ಈ ರೀತಿ ಮಾತನಾಡಿ ಧರ್ಮಸಿಂಗ್ ಮತ್ತು ನನ್ನ ಮಧ್ಯೆದಲ್ಲಿ ಒಡಕು ಹುಟ್ಟಿಸುತ್ತೇವೆ ಎಂಥರೆ, ಅದು ಸಾಧ್ಯವಿಲ್ಲ. ನಾವು ೪೦ ವರ್ಷಗಳಿಂದ ಒಟ್ಟಿಗೆ ಇದ್ದೇವೆ. 35 ವರ್ಷಗಳಿಂದ ಸತತವಾಗಿ ಈ ಸದನದಲ್ಲಿ ಕುಳಿತಿದ್ದೇವೆ.. ಏಕೆಂದರೆ ಬಂದಿದ್ದೇವೆ ಅಂತ ಹೇಳಿ.

**ಡಾಃ ಹೆಚ್.ಸಿ. ಬಾಲಕೃಷ್ಣ** : ಈ ನಂಬಿಕೆಯೇ ಅವರಿಗೆ ಕೈಕೊಟ್ಟಿದ್ದು.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಯಾರ ನಂಬಿಕೆ ಮೇಲೆ ಹೋಗುತ್ತೇವೆ ಎಂಬುದನ್ನೂ ಸಹ ನಾನು ಹೇಳುತ್ತೇನೆ ......

(ಗೊಂದಲ)

ಛೇರ್ಮನ್ : ಮಾನ್ಯ ದಿನೇಶ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಛೇರ್ಮನ್‌ರವರೆ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಏನಾದರೂ ಒಂದು ತತ್ವದ ದೃಷ್ಟಿಯಲ್ಲಿ ವ್ಯತ್ಯಾಸವಾದರೆ, ಪಾಲಿಸಿ ಪ್ರೋಗ್ರಾಂನಲ್ಲಿ ವ್ಯತ್ಯಾಸವಾದರೆ, ಅಥವಾ ಅಷ್ಟೊಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಭೀಕರವಾಗಿ ಕೆಟ್ಟು ಹೋಗಿ, ಹದಗೆಟ್ಟು, ಇನ್ನು ಇವರ ಕೈಯ್ಯಲ್ಲಿ ಇನ್ನೇನೂ ಆಗುವುದಿಲ್ಲ. ನಾವು ಬೇರೆ ಬೇರೆ ಹೋಗಬೇಕು ಅನ್ನತಕ್ಕಂಥ ಕಾರಣಗಳಿದ್ದರೆ, ನಾನು ಅದನ್ನು ಒಪ್ಪಿಕೊಳ್ಳುತ್ತಿದ್ದೆ. ಎಂದಾದರೂ ಮಾನ್ಯ ಮುಖ್ಯಮಂತ್ರಿಗಳಿಗೆ ಇಂಥಿಂಥ ಪ್ರೋಗ್ರಾಂಗಳನ್ನು ನೀವು ಮಾಡಿಲ್ಲ, ಅದಕ್ಕೆ ನಾವು ನಿಮ್ಮ ಜೊತೆಯಲ್ಲಿ ಇರಲಿಕ್ಕೆ ಸಾಧ್ಯವಿಲ್ಲ ಎಂದು ಬರೆದು ಕೊಟ್ಟಿದ್ದೀರಾ. ಅಥವಾ ಹೇಳಿದ್ದೀರಾ ? ಅಥವಾ ಎಂದಾದರೂ ನಮ್ಮ ಸಚಿವ ಸಂಪುಟದಲ್ಲಾಗಲಿ ಅಥವಾ ಬೇರೆ ಕಡೆ ಆಗಲಿ ಕುಳಿತಾಗ, ನೀವು ಇಂಥಿಂಥ ಕೆಲಸ ನಮ್ಮವು ಆಗಿಲ್ಲ ಎನ್ನುವಂತಾದ್ದೇನಾದರೂ ಹೇಳಿದ್ದೀರಾ. ಅಥವಾ ನಿಮ್ಮ Common Minimum Programme ಏನಿದೆ, ಅದರಲ್ಲಿ ನೀವು ಹಿಂದೇಟು ಹಾಕಿದ್ದೀರಿ, ಅದರಿಂದ ನಿಮಗೆ ಏನಾದರೂ ತೊಂದರೆಯಾಯಿತು ಎಂಬ ಬಗ್ಗೆ ಹೇಳಿದ್ದೀರಾ ? ಅನೇಕ ಜನಪರ ಖಾತೆಗಳು ನಿಮ್ಮ ಕೈಯ್ಯಲ್ಲಿದ್ದವು. ಅದು ರೆವಿನ್ಯೂ ಇರಬಹುದು, ಇಂಡಸ್ಟ್ರಿ ಇರಬಹುದು, ಫೈನಾನ್ಸ್ ಇರಬಹುದು, ಹೆಲ್ತ್ ಇರಬಹುದು, ಆರ್‌ಡಿಪಿಆರ್ ಇರಬಹುದು, ಹೈಯರ್ ಎಜುಕೇಷನ್ ಇರಬಹುದು, ಮೆಡಿಕಲ್ ಎಜುಕೇಷನ್ ಇರಬಹುದು, ಪಿಡಬ್ಲೂಡಿ ಇರಬಹುದು, ಪವರ್ ಇರಬಹುದು, ಯಾವ ಇಲಾಖೆಗಳು ನೇರವಾಗಿ ಜನರಿಗೆ.

**(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

ಸಂಬಂಧಪಟ್ಟಿದ್ದವೋ ಆ ಇಲಾಖೆಗಳ ಖಾತೆಗಳನ್ನೆಲ್ಲಾ ನಿಮ್ಮಲ್ಲೇ ಇಟ್ಟುಕೊಂಡು, ನೀವು ಕಾಂಗ್ರೆಸ್‌ನವರು ನಮಗೆ ಹೆರಾಸ್‌ಮೆಂಟ್ ಮಾಡಿದ್ದಾರೆ, ಅವರು ನಮ್ಮ ಮಾತನ್ನೇ ಕೇಳುವುದಿಲ್ಲ, ನಮ್ಮ ಕೆಲಸವೇ ಆಗುವುದಿಲ್ಲ ಎಂಬ ಕುಂಟು ನೆಪ ಹುಡುಕಿದರೆ, ಬಹುಶಃ ಈ ರಾಜ್ಯದ ಜನ ಎಂದೂ ಕೂಡ ಮೆಚ್ಚುವುದಿಲ್ಲ. ಅದಕ್ಕೆ ಶಿಕ್ಷೆ ಆಗಿಯೇ ಆಗುತ್ತದೆ ಅನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಇವತ್ತು ಇಲ್ಲಿ ಹೇಳುತ್ತಿದ್ದೇನೆ. ಇವತ್ತು ನಿಮ್ಮ ಕೈಯ್ಯಲ್ಲಿ ನೀವು ಎಲ್ಲಾ ಅಧಿಕಾರಗಳನ್ನು ಇಟ್ಟುಕೊಂಡು, ಕಾಂಗ್ರೆಸ್ ಮೇಲೆ ಇವತ್ತು ಗೂಬೆ ಕೂರಿಸತಕ್ಕಂಥದ್ದನ್ನು ಮಾಡಿದರೆ, ಇದು ಸರಿಯಲ್ಲ. ಯಾವ ರೀತಿಯಾಗಿ ಮಹಾರಾಷ್ಟ್ರ ಪ್ಯಾಟ್ರನ್ ಅನ್ನು ನೀವು ಕೇಳಿದ್ದಿರೋ, ಅದರ ಬಗ್ಗೆ ಕೂಡ ಶ್ರೀಮತಿ ಸೋನಿಯಾ ಗಾಂಧೀಜಿಯವರು ರಾಷ್ಟ್ರೀಯ ನಾಯಕರಾದ ಮಾನ್ಯ ದೇವೇಗೌಡರನ್ನು ಕರೆಸಿ, ಅವರ ಜೊತೆಯಲ್ಲಿ ಮಾತುಕತೆ ನಡೆಸಿದರು. ಅವರು ಹೇಳಿದ್ದೆಲ್ಲವನ್ನೂ ಕೂಡ ಅವರು ಕೇಳಿದರು. ಆದರೂ ಕೂಡ ಕೊನೆಗೆ ಏನಾಯಿತು ? ಎಲ್ಲಿ ತಾವು ಹೋಗಬೇಕಾಗಿತ್ತೋ, ಯಾರ ಜೊತೆಯಲ್ಲಿ ಸೇರಬೇಕಾಗಿತ್ತೋ, ಅವರ ಜೊತೆಗೆ ನೀವು ಸೇರಿದಿರಿ. ತತ್ವದ ದೃಷ್ಟಿಯಿಂದ, ನೀತಿಯ ದೃಷ್ಟಿಯಿಂದ ನಾವು ಎಂದೂ ಕೂಡ ತಿಲಾಂಜಲಿ ಕೊಡಲಿಲ್ಲ. ಏಕೆಂದರೆ, ಯಾವುದೇ ರೀತಿಯಿಂದ ಅಧಿಕಾರ ಗಿಟ್ಟಿಸಬೇಕು ಎಂಬುದು ತಮ್ಮ ಆಶಯವಾಗಿತ್ತು. by hook or crook ಇಲ್ಲದಿದ್ದರೆ ಬೇರೆ ಕಾರಣಗಳೇ ಇಲ್ಲ. ಏನು ಸಕಾರಣ ಇದೆ ಹೇಳಿ ? ಅದಕ್ಕೆ ಅಧ್ಯಕ್ಷರೆ, ನಾನು ಹೇಳುತ್ತೇನೆ, ಇವತ್ತು ಕಾರ್ಯಕ್ರಮದ ಆಧಾರದ ಮೇಲೆ Coalition Government ತೊಂದರೆಯಾಗಲಿಲ್ಲ. ಏನೇನು

ಕಾರ್ಯಕ್ರಮಗಳಿತ್ತೋ ಅದನ್ನು ನಾವು ಜಾರಿಗೆ ತಂದಿದ್ದೆವು. 3 ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ ಕೊಡುವಂತಾದ್ದು, ಶೇಕಡ 6ರ ಬಡ್ಡಿ ದರದಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸಾಲ ಕೊಡುವಂತಾದ್ದು, ಸಾವಿರಾರು ಕೋಟಿ ರೂಪಾಯಿಗಳನ್ನು ಮನ್ನಾ ಮಾಡತಕ್ಕಂಥದ್ದು, ಹೀಗೆ ಅನೇಕ ಕಾರ್ಯಕ್ರಮಗಳನ್ನು ನಾವು ಜಾರಿಗೆ ತಂದಿದ್ದೆವು. ಬಿಸಿಯೂಟ ಕಾರ್ಯಕ್ರಮ ಇತ್ಯಾದಿಗಳೆಲ್ಲವನ್ನೂ ಸಹ ನಾವು ಕಂಟಿನ್ಯೂ ಮಾಡಿದ್ದೆವು. ಏನು ಮಾಡಿದ್ದಾರೆ ಎಂದು ಅವರು ಕೇಳುತ್ತಿದ್ದಾರೆ, ಅದನ್ನು ನಾನು ಹೇಳುತ್ತಿದ್ದೇನೆ. ಇನ್ನೂ ಕಮಿಟಿಗಳ ಬಗ್ಗೆ ಹೇಳುವುದಾದರೆ, ಆರಾಧನಾ ಕಮಿಟಿಗಳು 142 Constitute ಆಗಿವೆ, . . . . . .

(ಗೊಂದಲ)

**ಶ್ರೀ ಎಸ್. ಚೆಲುವರಾಯಸ್ವಾಮಿ** : ಅದನ್ನು ಎಷ್ಟು ದಿವಸಕ್ಕೆ ಮಾಡಿದಿರಿ ಎಂಬುದನ್ನು ಹೇಳಿ. ದಯಮಾಡಿ ಅದನ್ನು ಯಾವತ್ತು ಮಾಡಿದ್ದೀರಿ ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಅಕ್ರಮ –ಸಕ್ರಮ ಸಮಿತಿ ಆಗಿವೆ, ಭೂ ನ್ಯಾಯ ಮಂಡಳಿಗಳು 95, ನಗರ ಸಭೆ 16, ಪುರಸಭೆ 35, ಪಟ್ಟಣ ಪಂಚಾಯಿತಿ 48, ಜಿಲ್ಲಾ ಗ್ರಾಹಕರ ಪರಿಷತ್ತು 27 ರಚನೆಯಾಗಿವೆ. ಇದರ ತಾಲ್ಲೂಕುವೈಸ್ ಲಿಸ್ಟ್ ಬೇಕಾದರೂ ನಾನು ಕೊಡುತ್ತೇನೆ. ನಿಮಗೆ ಇದು ಸಣ್ಣ ಮಾತು ಇರಬಹುದು. ಅನೇಕ ಸಾರಿ ಪದೇ ಪದೇ ತಾವು ಈ ಮಾತನ್ನು ಹೇಳಿದ್ದರಿಂದ, ನಾನು ಈ ಮಾತನ್ನು ಹೇಳುತ್ತಿದ್ದೇನೆ. ಕೋ-ಆಪರೇಟಿವ್‌ನಲ್ಲಿ ಎಲ್ಲಾ ನಾಮಿನೇಷನ್ಸ್, ಎಪಿಎಂಸಿ ನಲ್ಲಿ ಎಲ್ಲಾ ನಾಮಿನೇಷನ್ಸ್, ಪಿಎಲ್‌ಡಿ ಬ್ಯಾಂಕ್ ಸೇರಿದಂತೆ ಎಲ್ಲಾ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲೂ ನಾಮಿನೇಷನ್ಸ್ ಮಾಡಲಾಯಿತು. ಅದಲ್ಲದೆ, ಸಮನ್ವಯ ಸಮಿತಿಗೆ ನಮ್ಮ ಕಡೆಯಿಂದ ಮೂವರ ಹೆಸರನ್ನು ಕೊಟ್ಟಿದ್ದೆವು. ನಿಗಮ-ಮಂಡಳಿಗಳಿಗೆ ನೇಮಕಾತಿ ಆಗಲಿಲ್ಲವೆಂದು ನಿಮ್ಮ ಸೆಕ್ಯೂಲರ್ ತತ್ವಕ್ಕೆ ನೀವು ತಿಲಾಂಜಲಿ ಕೊಟ್ಟಿರಾ ? . . . . .

(ಗೊಂದಲ)

**ಶ್ರೀ ಡಿ.ಟಿ. ಜಯಕುಮಾರ್** : ಅಲ್ಲಾ ಸ್ವಾಮಿ, ಇಲ್ಲಿ ಮೇಲ್ಗಡೆ ಜೆ.ಡಿ. (ಎಸ್) ಎನ್ನುತ್ತೀರಿ, ಆದರೆ ಕೆಳಗಡೆ ಎ.ಬಿ.ಪಿ.ಜೆ.ಡಿ. ಎನ್ನುತ್ತೀರಿ ನೀವೇ ನಾಂದಿ ಹಾಡಿದಿರಿ. ಇಲ್ಲಿ ಮೇಲ್ಗಡೆ ಜೆ.ಡಿ. (ಎಸ್) ಜೊತೆಗೆ ಸಂಬಂಧ, ಕೆಳಗಡೆ ಎ.ಬಿ.ಪಿ.ಜೆ.ಡಿ. ಜೊತೆಯಲ್ಲಿ ಸಂಬಂಧ ಮಾಡಿದಿರಿ. ನಿಮಗೆ ಇಷ್ಟ ಬಂದ ಹಾಗೆ ಮಾಡಿಕೊಳ್ಳುವುದಕ್ಕೆ ನೀವು ಹೊರಟಿರಿ. . . .

(ಗೊಂದಲ)

**ಅಧ್ಯಕ್ಷರು** : ಮಾನ್ಯ ಜಯಕುಮಾರ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಆಮೇಲೆ ನಿಮ್ಮ ಸಭಾನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಮತ್ತು ನಿಮ್ಮ ಉಪ ನಾಯಕರು ಉತ್ತರ ಕೊಡುತ್ತಾರೆ. ನೀವ್ಯಾಕೆ ಮಧ್ಯೆ ಇಂಟರ್‌ಫಿಯರ್ ಮಾಡುತ್ತೀರಿ ?

(ಗೊಂದಲ)

**ಮಾನ್ಯ ಸದಸ್ಯರು** : ಎಬಿಪಿಜೆಡಿ ಜೊತೆ ಹೋದರು ಎನ್ನುವುದೊಂದು ಕಾರಣವೇ ? ಎಬಿಪಿಜೆಡಿ ಜೊತೆ ಅಗ್ರಿಮೆಂಟ್ ಆಗಿತ್ತೇ ?

**ಡಾಃ ಕೆ. ಅನ್ನದಾನಿ :** ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಅದೇ ಕಮಿಟಿ ಮುಂದುವರೆಯಲೆಂದು ಆದೇಶ ಕಳುಹಿಸಿದಿರಿ.

**ಅಧ್ಯಕ್ಷರು :** ದಯಮಾಡಿ ಸದಸ್ಯರು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡಬಾರದು.

**ಶ್ರೀ ಮಲ್ಲಿಕಾರ್ಜುನ ಖರ್ಗೆ :** ಈಗ ಮಾಡಿದ್ದೇವೆಂದರೆ, ಅದೇ ಕಮಿಟಿ ಎನ್ನುವುದು. ಮಾಡಲಿಲ್ಲವೆಂದರೆ, ನಿಮ್ಮವರೇ ಜಾಸ್ತಿ ಇದ್ದಾರೆ ಅನ್ನುವುದು ನಾವು ನಾಲ್ಕು ಕೋ-ಆರ್ಡಿನೇಶನ್ ಕಮಿಟಿ ಮಾಡಿದೆವು. ಆ ಕಡೆಯಿಂದ ನಾಲ್ಕು ಹೆಸರು ಬರಬೇಕಿತ್ತು, ಅದೂ ಬರಲಿಲ್ಲ. ಹೀಗೆ ಇಷ್ಟೆಲ್ಲಾ ಕೂಡ ಸಹಿಸಿಕೊಂಡು, ತಾಳ್ಮೆಯಿಂದ ನಡೆದರೂ ಅಂತಿಮವಾಗಿ ನೀವೇ ನಮಗೆ ತೊಂದರೆ ಕೊಟ್ಟಿರಿ ಎಂದು ಹೇಳುವುದು ಎಷ್ಟರಮಟ್ಟಿಗೆ ಸಮಂಜಸವೆಂದು ನಾನು ಕೇಳುತ್ತೇನೆ. ಇನ್ನೊಂದು ವಿಶೇಷವಾಗಿ ನಮ್ಮ ತಾಳ್ಮೆ ಎಲ್ಲಿವರೆಗೆ ಎಂದರೆ, ೭ ಗಂಟೆಯವರೆಗೆ, ೨೭ ತಾರೀಖಿನಂದು ಮೂರು ಗಂಟೆಗೆ ಕೂಡ ಶ್ರೀಮಾನ್ ಪ್ರಕಾಶ್, ಸಿಂಧ್ಯಾರವರು ಮತ್ತು ಮಹದೇವ ಪ್ರಸಾದ್‌ರವರು ಇದ್ದರು. ಇದು ಏನಾದರೂ ಆಗುತ್ತದೆ, ಆಗುತ್ತದೆ, ಆಗುತ್ತದೆಂದು ನಮ್ಮ ಜೊತೆಯಲ್ಲೇ ಅವರೂ ಕೂಡಾ ಇದ್ದರು. ತಾಳ್ಮೆಯಿಂದ ನಾವೂ ಕೂಡ ಕೂತಿದ್ದೆವು. ಮತ್ತು ಆಗ ಆ ಪತ್ರದಲ್ಲಿ ಏನು ಬಂತೆಂದು ಗೊತ್ತಿದೆ. ಮೊದಲು ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲಿ, ಯಾವ ಚರ್ಚೆಯಾಗುವುದೂ ಬೇಡ. ತದನಂತರ, ನೋಡೋಣ ಎನ್ನುವುದು ಬಂದ ಮೇಲೆ ಏನು ಮಾಡಬೇಕೆಂದು ನೀವೇ ಹೇಳಿ ಅಧ್ಯಕ್ಷರೇ ? ಯಾವ ನ್ಯಾಯ, ನೀತಿ ಮೇಲೆ ನಂಬಿಕೆ ಇಡಬೇಕೆಂದು ತಾವೇ ಹೇಳಿ ? ನೀವು ನಂಬಿಕೆ ದ್ರೋಹ ಮಾಡಿದಿರಿ, ಅವರು ಮಾಡಿದರು ಎಂದು ಹೇಳತಕ್ಕಂಥಾದ್ದು ನಾವು ಮೂರು ಗಂಟೆವರೆಗೆ ಕಾದಿದ್ದೆವು. ಇನ್ನೊಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾವಿಬ್ಬರು ಸುಮಾರು ನಲವತ್ತು ವರ್ಷಗಳಿಂದಲೂ ಜೊತೆಯಲ್ಲಿದ್ದೇವೆ. ಅನೇಕರ ಮಧ್ಯೆ ಭಿನ್ನಾಭಿಪ್ರಾಯಗಳು ಬರುತ್ತವೆ. ನಮ್ಮಿಬ್ಬರ ಮಧ್ಯೆ ಭಿನ್ನಾಭಿಪ್ರಾಯ ಇದ್ದರೂ, ಒಬ್ಬರಿಗೊಬ್ಬರು ಮಾತನಾಡಿಕೊಂಡು ಸರಿ-ತಪ್ಪು ಎಂದು ಹೇಳಿಕೊಂಡು ಬಂದಿದ್ದೇವೆ. ಆದರೆ, ಒಬ್ಬರಿಗೊಬ್ಬರು ಎಂದಿಗೂ ಕೂಡ ಬೆನ್ನಿನಲ್ಲಿ ಚೂರಿ ಹಾಕುವುದು ಮಾಡಿಲ್ಲ, ಮಾಡುವುದೂ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಆದರೆ, ಕೊನೆಗೆ ಏನಾಯಿತು ? ನಾನು ಕೇಳುತ್ತೇನೆ. ಪ್ರತಿ ದಿವಸ ಮುಂಜಾನೆ ರಾಷ್ಟ್ರೀಯ ನಾಯಕರಾದ ಶ್ರೀಮಾನ್ ದೇವೇಗೌಡರೊಂದಿಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದರು. ಒಂದು ದಿವಸವೂ ತಪ್ಪಿಲ್ಲ. ಏಕೆಂದರೆ, ಎಡವಬಾರದು. ರಾತ್ರಿ ಎಷ್ಟೇ ಹೊತ್ತಿನಲ್ಲಿ ಫೋನ್ ಮಾಡಿದರೂ ಅವರ ಸಮಸ್ಯೆಗೆ ಸ್ಪಂದಿಸತಕ್ಕಂಥಾದ್ದು ಮಾಡುತ್ತಿದ್ದರು. ಇಂತಹ ದಿವಸ ಅಂತಿಲ್ಲ. ಯಾವ ದಿವಸವೂ ಅವರೊಂದಿಗೆ ಮಾತನಾಡಿಲ್ಲ ಅಂತಿಲ್ಲ. ಹೀಗಿದ್ದಾಗ, ಕಮ್ಯುನಿಕೇಶನ್ ಗ್ಯಾಪ್ ಹೇಗೆ ಬರುತ್ತದೆ ? ಎಲ್ಲಿ ತಪ್ಪು ತಿಳಿವಳಿಕೆ ಉಂಟಾಗುತ್ತದೆ ? ಇಷ್ಟಿದ್ದರೂ ಕೂಡ ಮತ್ತೆ ನಮಗೆ ತಪ್ಪು ತಿಳಿವಳಿಕೆಯಾಯಿತು. ಯಾರೋ ಮಧ್ಯದಲ್ಲಿ . . . . ಮಧ್ಯದಲ್ಲಿ ಯಾರು ಹೇಳುತ್ತಾರೆ. ಅವರ ರಾಷ್ಟ್ರೀಯ ನಾಯಕರು ಯಾವಾಗಲೂ ಕೂಡ ಒಂದು ಮಾತು ಹೇಳುತ್ತಿದ್ದರು: 'ನಾನು ರಾಜ್ಯ ಮಟ್ಟದಲ್ಲಿ ಯಾವುದೇ ನಾಯಕರ ಜೊತೆ ಮಾತನಾಡುವುದಿಲ್ಲ. ನಾನು ಮಾತನಾಡಬೇಕಿದ್ದರೆ, ಶ್ರೀಮತಿ ಸೋನಿಯಾ ಗಾಂಧಿಯವರ ಜೊತೆಯಲ್ಲಿ, ಅಹ್ಮದ್ ಪಟೇಲ್ ಅವರ ಜೊತೆಯಲ್ಲಿ ಮತ್ತು ಎ.ಕೆ. ಆಂಟೋನಿಯವರ ಜೊತೆ ಮಾತನಾಡುತ್ತೇನೆ. ಇಲ್ಲೇನಾದರೂ ಇದ್ದರೆ, ನಾನು ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ' ಎಂದಿದ್ದರು. ಇಬ್ಬರೂ ಸಂಪರ್ಕದಲ್ಲಿದ್ದಾಗ ಅನೇಕ ಸಾರಿ ಮಾತನಾಡುವಾಗ

ವ್ಯತ್ಯಾಸಗಳು ಬರುವ ಸಾಧ್ಯತೆಗಳೆಲ್ಲಿವೆ ಅಥವಾ ಏನಾದರೂ ತಪ್ಪು ದಾರಿಯಲ್ಲಿ ನಡೆಯುವುದಕ್ಕೆ ಹೇಗೆ ಸಾಧ್ಯವಿದೆ ? ಏಕೆಂದರೆ, ಇವೊತ್ತಿನ ದಿವಸ ನಾವು ಎಷ್ಟೋ ಸಲ ಕೇಳಿದ್ದೇವೆ. 'ಎಲ್ಲವೂ ಕೂಡ ಸರಿ ಇದೆ. ಯಾವುದೇ ತೊಂದರೆ ಕೂಡ ಇಲ್ಲ'ವೆನ್ನುವ ಮಾತನ್ನು ಅವರು ಪದೇ ಪದೇ ಹೇಳಿದ್ದರು. ಈ ರೀತಿ ವಿಶ್ವಾಸ ಇಟ್ಟು ತಮ್ಮ ದಾರಿಯಲ್ಲಿ ಸುಗಮವಾಗಿ ಸಾಗಿಸಿದರು. ಆದರೆ, ಊಹಾಪೋಹದ ಮಾತು, ಏನಾದರೂ ಒಂದು ಕತೆ ಕಟ್ಟುವುದು . . . ನಾನು ಎಸ್.ಎಂ.ಕೃಷ್ಣರವರ ಮನೆಗೆ ೩೧ ನೇ ತಾರೀಖಿನಂದು ಹೋಗಿದ್ದೆ. ಯಥಾಪ್ರಕಾರ New Year Greetings ಕೊಡುವುದಕ್ಕೆ ಹೋಗಿದ್ದೆ.

(ಗೊಂದಲ)

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಬಾಂಬೆಗೆ ನಾನು ಹೋಗಿದ್ದೆನೆಂದು ಸಾಬೀತು ಮಾಡಿದರೆ, ನೀನು ರಾಜೀನಾಮೆ ಕೊಡು, ಇಲ್ಲವೇ ನಾನು ಕೊಡುತ್ತೇನೆ. ಸುಮ್ಮನೆ don't talk all those things. ಅಧ್ಯಕ್ಷರೆ, ಎಸ್.ಎಂ. ಕೃಷ್ಣರವರ ಮನೆಗೆ ಹೋಗಿದ್ದು ನಾನು ಒಂದೇ ಸಲ. ಪತ್ರಿಕೆಯವರು ಅದನ್ನು ಎರಡು ಸಲವೆಂದು ಬರೆದರು. ನಮ್ಮ ವಿರೋಧಿಗಳು ಹತ್ತು ಸಲವೆಂದು ಪ್ರಚಾರ ಮಾಡಿದರು. ನಾನು ಅವರೊಂದಿಗೆ ಮಾತನಾಡಿದ್ದು ಕೇವಲ ೧೦–೧೫ ನಿಮಿಷಗಳ ಕಾಲ ಮಾತ್ರ. ಅದು ಲೌಕಿಕವಾಗಿ. ಅದು ಎಲ್ಲಾ ಕಡೆಗಳಲ್ಲೂ ಇರುತ್ತದೆ. ಎಸ್.ಎಂ.ಕೃಷ್ಣರವರು ನಮಗೆ enemy ಯೇ ಅಥವಾ ಪಾಕಿಸ್ತಾನದವರೇ ? ನಾನು ಯಾರದಾದರೂ ಪರ್ಮಿಶನ್ ತೆಗೆದುಕೊಂಡು ಮಾತನಾಡಬೇಕೇ ? ಆದರೆ, ಅದಕ್ಕೇ ಒಂದು ಕತೆ ಸೃಷ್ಟಿ ಮಾಡಿದರು. 'ಹೋ. ಅಲ್ಲೇನೋ ನಡೆದಿದೆ, ಇಲ್ಲೇನೋ ನಡೆದಿದೆ' ಎಂದು . . .

**ಡಾಃ ಹೆಚ್.ಸಿ. ಬಾಲಕೃಷ್ಣಃ** ಮಾನ್ಯ ಅಧ್ಯಕ್ಷರೆ, ಧರ್ಮಸಿಂಗ್‌ರವರೇ ಆ ವಿಚಾರವನ್ನು ಹೇಳಿದರು. ನಾಯಕತ್ವದ ವಿಚಾರ ತೀರ್ಮಾನವಾಗಬೇಕಾದರೆ ಆ ವಿಚಾರವನ್ನು ಧರ್ಮಸಿಂಗ್‌ರವರು ಆ ಸಂದರ್ಭದಲ್ಲಿ ಡೆಲ್ಲಿಯಲ್ಲಿ ಹೇಳಿದರು.

(ಗೊಂದಲ)

**ಡಾಃ ಹೆಚ್.ಸಿ. ಬಾಲಕೃಷ್ಣ :** ನಾಯಕತ್ವ ತೀರ್ಮಾನವಾಗುವುದು ಡೆಲ್ಲಿಯಲ್ಲಿ ಎಂದು ಧರ್ಮಸಿಂಗ್‌ರವರೇ ಹೇಳಿದರು. ಬೇಕಾದರೆ ಪತ್ರಿಕೆ ತೆಗೆದು ನೋಡಿ. ಆ ವಿಚಾರವನ್ನು ನಿಮ್ಮ ನಾಯಕರೇ ಹೇಳಿದ್ದು ನಾವಲ್ಲ ಹೇಳಿದ್ದು.

**ಅಧ್ಯಕ್ಷರು :** ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗಾಗಲೇ ಎಂಟು ಗಂಟೆಯಾಗಿದೆ. ಆರು ಗಂಟೆಗೇ ಮುಗಿಯಬೇಕಾಗಿತ್ತು. ಇನ್ನು ಕೆಲವು ಮುಖಂಡರು ಮಾತನಾಡುವವರು ಇದ್ದಾರೆ. ದಯಮಾಡಿ ಅರ್ಥ ಮಾಡಿಕೊಳ್ಳಿ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಅಧ್ಯಕ್ಷರೆ, ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ನೀವೆಲ್ಲಾ ಗಾಸಿಪ್‌ಗೆ ಕಿವಿಗೊಟ್ಟು ಈ ರೀತಿಯಾಗಿ ಒಬ್ಬರ ಮೇಲೊಬ್ಬರು ಹೇಳಿಕೊಂಡು ನಮ್ಮ ಮೂಲ ತತ್ವಕ್ಕೇ ಕೊಡಲಿ ಪೆಟ್ಟು ಹಾಕತಕ್ಕಂಥಾದ್ದು ಆಗಬಾರದೆಂಬುದು ನಮ್ಮ ಉದ್ದೇಶ. ಈಗ ಹಾಕಾಯ್ತಲ್ಲಾ. ಅದಕ್ಕೋಸ್ಕರವೇ, ನಾನು ಹೇಳುವುದು, ಪ್ರತಿಯೊಂದು ಪೊಲಿಟಿಕಲ್ ಪಾರ್ಟಿಗೆ ಒಂದು ಫಿಲಾಸಫಿ ಇದ್ದಾಗ ನೀವು ಸಣ್ಣ–ಪುಟ್ಟ ಮಾತುಗಳನ್ನು ತೆಗೆದುಕೊಂಡು ಕುಂಟು ನೆಪಗಳನ್ನು ಹೇಳಿಕೊಂಡು ನಾವು ತಿಲಾಂಜಲಿ ಕೊಟ್ಟು ಯಾವ ಪಕ್ಷಗಳು ಧರ್ಮ ನಿರಪೇಕ್ಷತೆ ಮೇಲೆ ನಂಬಿಕೆ ಇಲ್ಲ, ಮತ್ತು ಈ ದೇಶದಲ್ಲಿ ಎಲ್ಲರೂ ಒಂದಾಗಿರಬೇಕೆಂಬ ಭಾವನೆ ಇಲ್ಲ. ಯಾವಾಗಲೂ ಕೂಡ ಕಾಲು ಕೆರೆದು ಜಗಳ ತೆಗೆಯತಕ್ಕಂಥ ಕೆಲಸವನ್ನೇ ಇಲ್ಲಿಯವರೆಗೆ ಭಾರತೀಯ ಜನತಾ

ಪಾರ್ಟಿಯವರು ಮಾಡಿಕೊಂಡು ಬಂದಿದ್ದಾರೆ, ಅವರ ಜೊತೆಗೆ ಹೋಗುತ್ತಿದ್ದೀರಿ. ನೀವು ಯಾವುದೇ ರಾಜ್ಯಕ್ಕೆ ಹೋಗಿ. ಇತಿಹಾಸ ತೆಗೆದು ನೋಡಿ. ಅವರಿಗೆ ಬೇಕಾದಾಗ ಅವರಿಗೆ ಅಧಿಕಾರ ಇದ್ದಾಗ ಮಾತ್ರ ಸುಮ್ಮನಿರುತ್ತಾರೆ. ಎಲ್ಲಿ ಇಲ್ಲವೋ ಅಲ್ಲಿ ಕಾಲು ಕೆರೆದು ಜಗಳ ತೆಗೆಯೋದು, ಅಲ್ಲಿಗೆ ಹೋಗೋದು. ಇಂತಹ ನೂರಾರು ಉದಾಹರಣೆಗಳಿವೆ. ಬೇಕಾದರೆ, ಇನ್ನೊಂದು ದಿವಸ ಗವರ್ನರ್ ತಮ್ಮ ಭಾಷಣಗಳನ್ನು ೧೫ ಇಲ್ಲವೇ ೨೦ನೇ ತಾರೀಖು ಮಂಡಿಸುತ್ತಾರಂತೆ. ಆಗ ಮಾತನಾಡುತ್ತೇನೆ. ಅಂದರೆ, ಈ ರೀತಿಯಾಗಿದ್ದಾಗ, ಪರಸ್ಪರ ವಿರುದ್ಧ ತತ್ವಗಳಿಂದ ಕೂಡಿರತಕ್ಕಂಥ ಪಕ್ಷಗಳು ಹೇಗೆ ಒಳ್ಳೆಯ ಆಡಳಿತ ಕೊಡಲು ಸಾಧ್ಯ ? ಹೇಗೆ ಇವರು ಸ್ಟಬಿಲಿಟಿ ಕೊಡಲು ಸಾಧ್ಯವಿದೆ ? ಮತ್ತು ಯಾವ ತತ್ವದ ಆಧಾರದ ಮೇಲೆ ಕೊಡುತ್ತಾರೆಂಬುದನ್ನು ಕೂಡ ಇವೊತ್ತು. ನಾವು ನೋಡಬೇಕಾಗುತ್ತದೆ. ಕುಮಾರಸ್ವಾಮಿಯವರು ಒಂದೆರಡು ಕಡೆಗಳಲ್ಲಿ ಹೇಳಿದ್ದಾರೆ. 'ಬಿಜೆಪಿಯವರ ತತ್ವ ಬೇರೆ, ನೀತಿ ಬೇರೆ, ಅವರದು ಅವರ ಪಾಡಿಗೆ, ನಮ್ಮದು ನಮ್ಮ ಪಾಡಿಗೆ. ನಾವು ಕೇವಲ ಆಡಳಿತ ಕೊಡುವ ಕಡೆಗೆ ಹೋಗುತ್ತೇವೆ. ಒಳ್ಳೆಯ ಆಡಳಿತ ಕೊಡಬೇಕೆನ್ನುವುದರ ಕಡೆಗೆ ನಮ್ಮ ಗಮನ ಹೊರತಾಗಿ ಅದರ ಕಡೆಗೆ ಅಲ್ಲ' ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕಾದು ನೋಡೋಣ. ಒಳ್ಳೆಯ ರೀತಿಯಿಂದ ನಡೆಸಿದರೆ we congratulate him, co-operate him and ಅಭಿವೃದ್ಧಿಪರ ನಾವು ಇದ್ದೇವೆ ಎನ್ನುವುದಕ್ಕೆ ಇಲ್ಲಿಯವರೆಗೆ ಯಾವುದೇ ಯೋಜನೆಗಳನ್ನು ತೆಗೆದುಕೊಳ್ಳಿ. ಒಂದೂ ಕೂಡ ಅಡ್ಡಗಾಲು ಹಾಕತಕ್ಕಂಥ ಕೆಲಸವನ್ನು ನಾನಾಗಲಿ, ನಮ್ಮ ಕಾಂಗ್ರೆಸ್ ಪಕ್ಷದವರಾಗಲಿ ಮಾಡಿಲ್ಲ ಎನ್ನತಕ್ಕಂಥ ನೂರಕ್ಕೆ ನೂರು ಮಾತು ನಾನು ಎಲ್ಲಿಯೇ ನಿಂತುಕೊಂಡರೂ ಹೇಳುತ್ತೇನೆ. ಆದರೆ, ಇವೊತ್ತು ನಾವು ಕೇವಲ ಒಳ್ಳೆಯ ಆಡಳಿತವನ್ನು ಕೊಡುತ್ತೇವೆಂದು ನೆಪದಲ್ಲಿ ಪಕ್ಷದ ತತ್ವವನ್ನಂತೂ ಯಾರೂ ಬಿಡುವುದಿಲ್ಲ. ಈಗ ಬಿಜೆಪಿಯವರು ಬಿಡುತ್ತಾರೆಯೇ ? ನೀವು ಬಿಟ್ಟಿರಬಹುದು. ಜೆಡಿ (ಎಸ್) ನವರು ಅಧಿಕಾರಕ್ಕಾಗಿ ಬಿಟ್ಟಿರಬಹುದು. ಆದರೆ, ಬಿಜೆಪಿಯವರು ಬಿಡುವುದಿಲ್ಲ. ಅವರಿಗೂ ಹೈಕಮಾಂಡ್ ಇದೆ. ಅವರನ್ನು ಕೇಳುವವರಿದ್ದಾರೆ. ನೀವೇನು ಮಾಡಿದ್ದೀರೆಂದು ಕೇಳುತ್ತಾರೆ. ನಾಳೆ ನೋಡೋಣ, ಯಾರಾದರೊಬ್ಬರು ಆರ್‌ಎಸ್‌ಎಸ್ ವಿರುದ್ಧ ಅಥವಾ ಯಾವುದಾದರೂ ಧಂಗೆ ನಡೆಯಿತೆಂದು ಒಂದು ಸ್ಟೇಟ್‌ಮೆಂಟ್ ಕೊಡಲಿ, ಇದನ್ನು ಇಲ್ಲವೆಂದು ಹೇಳಲಿ ಅದಕ್ಕೋಸ್ಕರ, ಅವರ ನಿಲುವೇ ಬೇರೆ ಇರುತ್ತದೆ. ಏನೋ ಇವತ್ತು ಯಡಿಯೂರಪ್ಪನವರು ಕೂಡ ಏನೇ ಮಾಡಿಯಾದರೂ ಕಾಂಗ್ರೆಸ್‌ನವರನ್ನು ತಪ್ಪಿಸಬೇಕೆಂದು ಅವರು ಡೆಪ್ಯುಟಿ ಸಿ.ಎಂ. ಹುದ್ದೆಗೆ ಒಪ್ಪಿಕೊಂಡರು. ಬಹುಶಃ ಎಲ್ಲಾ ಕಡೆ ಆಗಿದ್ದು ಹೇಗೆಂದರೆ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಇಲ್ಲಿಯವರೆಗೆ ಬಹುಸಂಖ್ಯಾತರು ಇರುವ ಪಕ್ಷದವರು ಮುಖ್ಯಮಂತ್ರಿಗಳಾಗಿದ್ದರು. ಆದರೆ, ಇವೊತ್ತು ಒಂದು ಹೊಂದಾಣಿಕೆ ಮಾಡಿಕೊಂಡು ಇಪ್ಪತ್ತು ತಿಂಗಳಿಗಾಗಿ ಮಾನ್ಯ ಕುಮಾರಸ್ವಾಮೀಜಿಯವರು, ನಂತರ ೨೦ ತಿಂಗಳಿಗಾಗಿ ಮಾನ್ಯ ಯಡಿಯೂರಪ್ಪನವರು ೨೦:೨೦ ತಿಂಗಳು ಹೀಗೆ ಸಮನಾಗಿ ಹಂಚಿಕೊಂಡಿದ್ದಾರೆ. ಈ ಇಪ್ಪತ್ತು ತಿಂಗಳಾದ ನಂತರ ಮುಂದಿನ ಇಪ್ಪತ್ತು ತಿಂಗಳು ಹೇಗಾಗುತ್ತದೆಂಬುದನ್ನು ನೋಡೋಣ. ಅಂದರೆ, ಎಷ್ಟರಮಟ್ಟಿಗೆ ಅಧಿಕಾರದ ಆಸೆಗಾಗಿ ಹೊಂದಾಣಿಕೆಗಳು ಆಗಿವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಇದು betrayal of faith and betrayal of principle ಯಾವ ತತ್ವವನ್ನು ನೀವು ನಂಬಿದ್ದಿರಿ, ಆ ತತ್ವಕ್ಕೆ ದ್ರೋಹ ಮಾಡಿದ್ದೀರಿ. ಯಾವ ಜನರು ನಿಮ್ಮನ್ನು ನಂಬಿ ಅಧಿಕಾರ ಕೊಟ್ಟಿದ್ದಾರೋ, ಆ ಜನರಿಗೆ ದ್ರೋಹ ಮಾಡಿದ್ದೀರಿ. ಯಾವ ಕಾಂಗ್ರೆಸ್ ಪಕ್ಷ ನಿಮ್ಮನ್ನು ನಂಬಿ ನಿಮ್ಮ ಜೊತೆಯಲ್ಲಿದ್ದು, ನೀವು ಹೇಳಿದ್ದನ್ನು ಕೇಳಿ ಕೆಲಸ

ಮಾಡಿದೆಯೋ, ಅದಕ್ಕೂ ಕೂಡ ದ್ರೋಹ ಮಾಡಿದ್ದೀರಿ. ಅದನ್ನು ನೀವು ಒಪ್ಪಬೇಕು.ಈ ವಿಶ್ವಾಸ ಮತವನ್ನು ಕೇಳುವುದಕ್ಕೆ ಅವರು ಏನು ಮಂಡಿಸಿದ್ದಾರೆ, ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ಇದು ಒಂದು ಅಪವಿತ್ರ ಮೈತ್ರಿ. ಅನ್ ಹೋಲಿ ಅಲಯನ್ಸ್ ಇಂತಹ ಅನ್ ಹೋಲಿ ಅಲಯನ್ಸ್ ಗೆ ನಾವು ಪಾರ್ಟಿ ಆಗುವುದು ಬೇಡ. ಈಗ ನಮ್ಮ ಬಿ.ಆರ್. ಪಾಟೀಲರು ಹೇಳಿದ ಹಾಗೆ ಲಗ್ನನೇ ಬೇರೆ ಆಗಿದೆ. ಯಾರೋ ಒಬ್ಬರು ಕೇಳಿದಾಗ ನಾನು ಅದಕ್ಕೇ ಮೊದಲೇ ಹೇಳಿದ್ದೆ. ಇದು ಸ್ಪೆಷಲ್ ಮ್ಯಾರೇಜ್ ಆ್ಯಕ್ಟ್‌ನಲ್ಲಿ ನಮ್ಮ ಲಗ್ನ ಆಗಿದೆ ಎಂದು. ಸ್ಪೆಷಲ್ ಮ್ಯಾರೇಜ್ ಆ್ಯಕ್ಟ್ ನಲ್ಲಿ ಸ್ಪೆಷಲ್ ಮ್ಯಾರೇಜ್ ಆ್ಯಕ್ಟ್ ಕಾನೂನು ಬೇರೆ ಇದೆ. ಅದರ ಪ್ರಕಾರ ಆಗಿದೆ ಎಂದು ಹೇಳಿದೆ. ಆದರೆ ಇಲ್ಲಿ ಏನಾಗಿದೆ ಎಂದರೆ, ಡೈವೋರ್ಸ್ ಆಗಿರುವುದು ತಂದೆ ತಾಯಿಯರಿಗೂ ಗೊತ್ತಿಲ್ಲ, ಬೇರೆಯವರಿಗೂ ಗೊತ್ತಿಲ್ಲ, ಅವರು ನೇರವಾಗಿ ಓಡಿ ಹೋಗಿ ಬೇರೆಯವರ ಜೊತೆಯಲ್ಲಿ ಮದುವೆ ಮಾಡಿಕೊಂಡ ಹಾಗಾಗಿದೆ. ನಮಗೆ ನೋಟೀಸ್ ಇಲ್ಲ, ಸುಡುಗಾಡೂ ಇಲ್ಲ, ಜ್ಯುಡಿಷಿಯಲ್ ಪ್ರೊಸೀಡಿಂಗ್ಸೂ ಇಲ್ಲ. ಯಾವುದೂ ಇಲ್ಲ. ಈ ಮೈತ್ರಿ ಮಾಡಿಕೊಂಡವರು ಅವರೇ ನಾಳೆ ಕೇಸ್ ಹಾಕಬಹುದು. ಏನೆಂದು, ಕಾನೂನಿನ ಪ್ರಕಾರ ನಾನೇನು ಜ್ಯುಡಿಷಿಯಲ್ ಸೆಪರೇಷನ್ ನೋಟೀಸ್ ಕೊಟ್ಟಿದ್ದೇವಾ ಎಂದು ಹೇಳಬಹುದು. ಏಕೆಂದರೆ ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಡದೆ ಹೋದ ಮೇಲೆ ಈ ರೀತಿ ಆಗಿರುವುದರಿಂದ ಇದಕ್ಕೆ ಜನ ಕೂಡ ಒಪ್ಪುವುದಿಲ್ಲ. ಮತ್ತು ವಿಶೇಷವಾಗಿ ನೀವು ಮೇಂಟನೆನ್ಸ್ ಛಾರ್ಜ್ ಕೇಳಿದರೂ ನಾವು ಕೊಡುವುದಿಲ್ಲ ಈಗ. ಈ ರೀತಿಯಾದಂಥ ಅನ್ ಹೋಲೀ ಅಲಯನ್ಸ್, ಅನ್ ಪ್ರಿನ್ಸಿಪಲ್ ಮ್ಯಾರೇಜ್, ಇದಕ್ಕೆ ಯಾರೂ ಕೂಡ ಒಪ್ಪುವುದಿಲ್ಲ, ಜನ ಕೂಡ ಇದನ್ನು ಬೆಂಬಲಿಸುವುದಿಲ್ಲ. ಇದರ ಪರಿಣಾಮ ಮುಂದೆ ಬರತಕ್ಕಂತಹ ಚುನಾವಣೆಯಲ್ಲಿ ಅವರಿಗೆ ಗೊತ್ತಾಗುತ್ತದೆ ಎನ್ನತಕ್ಕಂತಹ ಮಾತು ಈ ಸಂದರ್ಭದಲ್ಲಿ ಹೇಳಿ, ತಾವು ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ಅವರು ಒಳ್ಳೆಯ ಕೆಲಸ ಮಾಡತಕ್ಕಂತಹ ಒಂದು ನಂಬಿಕೆಯನ್ನು ನಾನು ಇಟ್ಟುಕೊಳ್ಳುತ್ತೇನೆ.

**ಅಧ್ಯಕ್ಷರು** : ಈಗ ೯–೧೦ ನಿಮಿಷ ಆಗಿದೆ. ಆರು ಗಂಟೆಗೆ ಚರ್ಚೆ ಎಲ್ಲಾ ಮುಗಿಸಬೇಕು ಎಂದು ಹೇಳಿ ಬೆಳಿಗ್ಗೆ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿದ್ದೆ. ಆದ್ದರಿಂದ ಇನ್ನೂ ಉಪ ಮುಖ್ಯಮಂತ್ರಿಗಳು ಮಾತನಾಡಬೇಕು, ಸಭಾ ನಾಯಕರು ಉತ್ತರ ಕೊಡಬೇಕು. ಆದ್ದರಿಂದ ಬಹಳ ಜನ ಹೆಸರು ಕೊಟ್ಟಿದ್ದಾರೆ. ಎಲ್ಲರಿಗೂ ಅವಕಾಶ ಕೊಟ್ಟರೆ ಇವತ್ತು ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಪಕ್ಷಗಳ ನಾಯಕರು ಸವಿಸ್ತಾರವಾಗಿ ಮಾತನಾಡಿದ್ದಾರೆ, ಈಗ ಮತ್ತೆ ಮತ್ತೆ ರಿಪಿಟೇಷನ್ ಆಗುತ್ತಿದೆ. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿರುವುದರಿಂದ ಇಲ್ಲಿಗೆ ಮುಗಿಸೋಣ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ನಾವು ರಿಪಿಟೇಷನ್ ಮಾಡುವುದಿಲ್ಲ.

**ಅಧ್ಯಕ್ಷರು** : ಹೆಗ್ಡೆಯವರೇ, 10 ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ನಮ್ಮ ಕಡೆ ಸ್ವಲ್ಪ ನೋಡಬೇಕು. ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಅಧ್ಯಕ್ಷರು** : ನಿಮ್ಮ ಪಕ್ಷದಿಂದ ಬಿ.ಆರ್. ಪಾಟೀಲರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಸಿದ್ದರಾಮಯ್ಯ** : ಬಿ.ಆರ್. ಪಾಟೀಲರು ಮಾತನಾಡಿದರೆ ನಾನು ಮಾತನಾಡಬಾರದು ಎಂದು ಏನೂ ಇಲ್ಲ. ನನ್ನ ಪರ ವಕಾಲತ್ತು ಹಾಕಿಲ್ಲ ಅವರು.

**ಅಧ್ಯಕ್ಷರು** : ವಕಾಲತ್ತು ಹಾಕಿಲ್ಲ ಆದರೆ ಅವರು ನಿಮ್ಮ ಪರವಾಗಿ ಮಾತನಾಡಿದ್ದಾರೆ. ಅವರದ್ದು ಆದ ಮೇಲೆ ನನಗೆ ಅವಕಾಶ ಕೊಡಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಅವರು ಮಾತನಾಡಲಿ; ನೀವೂ ಅವರು ಬಹಳ ಫ್ರೆಂಡ್ಸ್ ಎಂದು ಹೇಳುತ್ತೀರಿ. ನೀವು ಏಕೆ ಹೀಗೆ ಮಾಡುತ್ತೀರಿ ?

**ಅಧ್ಯಕ್ಷರು** : ಸಮಯ ಎಲ್ಲಿ ಇದೆ ?

XXX **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** : ಮಾನ್ಯ ಅಧ್ಯಕ್ಷರೆ, 27ನೇ ತಾರೀಖು ಏನು ಚರ್ಚೆ ಆಗಬೇಕಾಗಿತ್ತು, ಅದು ಇವತ್ತು ಆಗುತ್ತಿದೆ. 27 ನೇ ತಾರೀಖು ಚರ್ಚೆ ಆಗಿದ್ದರೆ ಇಂಟರೆಸ್ಟಿಂಗ್ ಆಗ್ತಿತ್ತು. ಪ್ರಾಯಶಃ ಇವತ್ತು ಮಾನ್ಯ ಪ್ರಕಾಶ್‌ರವರು ಮಾತನಾಡಿದ ಮೇಲೆ ಸ್ವಲ್ಪ ಸಪ್ಪೆ ಆಗಿ ಹೋಯಿತು, ಏಕೆಂದರೆ, ಅವರು ತೀರ್ಮಾನವನ್ನು ಹೇಳಿದ ಮೇಲೆ ಅಕೆಡಮಿಕ್ ಇಂಟರೆಸ್ಟ್‌ಗೆ ಆ್ಯಂಟಿ ಡಿಫೆಕ್ಷನ್ ಲಾ ಬಗ್ಗೆ, 91 ರ ಅಮೆಂಡ್‌ಮೆಂಟ್ ಬಗ್ಗೆ ಎಲ್ಲಾ ಚರ್ಚೆ ಮಾಡುವುದಕ್ಕೆ ಅವಕಾಶ ಇತ್ತು. ಅದಕ್ಕೆಲ್ಲಾ ಪ್ರಕಾಶ್‌ರವರು ನೀರು ಹುಯ್ದು ಬಿಟ್ಟಿದ್ದಾರೆ. ಅದಕ್ಕೆ ಅವಕಾಶ ಇಲ್ಲ. ಆದರೆ ಒಂದು ವಿಷಯ ನಮಗೆ ಇವತ್ತು ಅರಿಕೆ ಆಗಿದೆ. ಮಾನ್ಯ ಖರ್ಗೆಯವರು ಮಾತನಾಡಿದ ಮೇಲೆ. ಈ ದಿನ ಬೆಳಿಗ್ಗೆ ಈ ಸದನದಲ್ಲಿದ್ದು ಮಾನ್ಯ ಮುಖ್ಯಮಂತ್ರಿಗಳು ಓಟ್ ಆಫ್ ಕಾನ್‌ಫಿಡೆನ್ಸ್ ಮೂವ್ ಮಾಡುತ್ತಾರೆಂದು ನಾವು ಇದ್ದೆವು, ಸಾಯಂಕಾಲದವರೆಗೆ ಏಕೆ ಆಗಲಿಲ್ಲ, ಅದು ಅವರದ್ದು ತಪ್ಪು ಎನ್ನುವ ಭಾವನೆ ನಮ್ಮಲ್ಲಿ ಇತ್ತು. ಮಾನ್ಯ ಧರ್ಮಸಿಂಗ್‌ರವರು ಸಾಯಂಕಾಲದವರೆಗೂ ಓಟ್ ಆಫ್ ಕಾನ್‌ಫಿಡೆನ್ಸ್ ಮೂವ್ ಮಾಡದೆ ಇದ್ದುದು ಏನೋ ತಪ್ಪನ್ನು ಮಾಡಿದ್ದಾರೆನ್ನುವ ಭಾವನೆ ನಮ್ಮ ಮನಸ್ಸಿನಲ್ಲಿ ಇತ್ತು. ಇವತ್ತು ಮಾನ್ಯ ಖರ್ಗೆಯವರು ಹೇಳಿದರು, ಸಾಯಂಕಾಲದವರೆಗೂ ಸಂಧಾನದ ಪ್ರಕ್ರಿಯೆ ನಡೆದಿತ್ತು ಎಂದು. ಇದು ಜನತೆಗೆ ಗೊತ್ತಾಗಬೇಕು. ಇವರು ಏನು ಹೇಳದೇ ಇದ್ದರೂ ಇವತ್ತು ನಮ್ಮ ಭಾಗಕ್ಕೆ ಬಂದು ಕೂತಿದ್ದಾರೆ. ಇವತ್ತು ಏನು ಒಂದು ಎಂದರೆ, ಇವರನ್ನೆಲ್ಲಾ ಇಲ್ಲಿ ನೋಡುವುದಕ್ಕೆ ಬಹಳ ಸಂತೋಷವಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರಬಲವಾದ ವಿರೋಧ ಪಕ್ಷ ಇರಬೇಕಾಗುತ್ತದೆ. ಈ ಭಾಗ ಈಗ ಪ್ರಬಲವಾಗಿದೆ ಎಂದು ನನ್ನ ಮನಸ್ಸಿಗೆ ಬಂದಿದೆ. ನಾನು ಅದನ್ನು ಒತ್ತಿ ಹೇಳುತ್ತಿದ್ದೇನೆ. ಮೊದಲು ಇರಲಿಲ್ಲ. ಮೊದಲು ನಾವು ಹಾಗೆ ಇರಲಿಲ್ಲ. ಇವತ್ತು ಪ್ರಬಲವಾದ ವಿರೋಧ ಪಕ್ಷ ಇದೆ ಅವರನ್ನೆಲ್ಲಾ ಈ ಭಾಗದಲ್ಲಿ ನೋಡಲಿಕ್ಕೆ ಬಹಳ ಸಂತೋಷವಾಗುತ್ತಿದೆ. ಸರ್ಕಾರ ಹೋಗಿದೆ ಎಂದು ನನಗೆ ಬೇಸರ ಇಲ್ಲ. ಆದರೆ ಸರ್ಕಾರ ಹೋದ ರೀತಿ ಬೇಸರವಾಗಿದೆ. ಯಾವ ರೀತಿ ಸರ್ಕಾರ ಬದಲಾಗಿದೆ, ಅದರ ಬಗ್ಗೆ ಬೇಸರವಾಗಿದೆ. ನಾನೂ ಸಹ ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರದಲ್ಲಿ ಮಂತ್ರಿ ಆಗಿದ್ದೆ. ಅವರು ಎನ್‌ಡಿಎ ಜೊತೆ ಸೇರಿದಾಗ ನಾನು ಮಾನ್ಯ ಮೊಹಿದ್ದೀನ್‌ರವರು, ಮಾನ್ಯ ನಾಣಯ್ಯನವರು ನೇರವಾಗಿ ಅವರ ಮನೆಗೆ ಹೋಗಿ ಹೇಳಿದೆವು, ಸಾರ್ ನೀವು ಎನ್‌ಡಿಎ ಜೊತೆ ಸೇರಿರುವುದರಿಂದ ನಾವು ನಿಮ್ಮ ಜೊತೆ ಬರುವುದಕ್ಕಾಗುವುದಿಲ್ಲವೆಂದು ಹೇಳಿದೆವು. ರಾಜೀನಾಮೆ ಕೊಟ್ಟು ಬಂದ ಸಂದರ್ಭ ಇದೆ. ಮಾನ್ಯ ಪ್ರಕಾಶ್‌ರವರು ನನಗೆ ಮೊನ್ನೆ ಫೋನ್ ಮಾಡಿದ್ದರು. ನಂತರದ ದಿನಗಳಲ್ಲಿ ನಾನು ಯಾವ ಪಕ್ಷಕ್ಕೂ ಹೋಗಲಿಲ್ಲ. ಆ ಕಡೆ ಜನತಾದಳ ಎಸ್‌ಗೂ ಹೋಗಲಿಲ್ಲ, ಜೆಡಿಯುಗೂ ಹೋಗಲಿಲ್ಲ, ಕಾಂಗ್ರೆಸ್‌ಗೂ ಹೋಗಲಿಲ್ಲ. ಪಕ್ಷೇತರನಾಗಿ ಎರಡು ಬಾರಿ ಗೆದ್ದು

XXX (ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.)

ಬಂದಿದ್ದೇನೆ. ಜನ ಅದಕ್ಕೆ ಮನ್ನಣೆಯನ್ನೂ ಕೊಟ್ಟಿದ್ದಾರೆ. ಆದರೆ ಅವತ್ತು ಏನು ತಪ್ಪನ್ನು ಮಾಡಲಿಲ್ಲ, ಇವತ್ತು ಆ ತಪ್ಪನ್ನು ಪುನ: ಮಾಡಲಿಕ್ಕೆ ನಾವು ತಯಾರಿಲ್ಲ. ಮಾನ್ಯ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಗಳಾಗಿರುವುದರಿಂದ ಅವರಿಗೆ ನಾನು ಅಭಿನಂದನೆಯನ್ನೂ ಸಲ್ಲಿಸುತ್ತೇನೆ. ಒಳ್ಳೆಯ ಕೆಲಸ ಮಾಡುತ್ತಾರೆ. ಅವರು ದಿನನಿತ್ಯ ಸಭೆಗಳನ್ನು ಮಾಡಿ ಅಧಿಕಾರಿಗಳಿಗೆ ಆದೇಶಗಳನ್ನು ಕೊಡುತ್ತಿರುವುದು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅದರ ಬಗ್ಗೆ ಸಂತೋಷ ಇದೆ. ಆದರೆ ಯಾವ ಹೇಳಿಕೆಗಳನ್ನು ತಾವು ಕೊಡುತ್ತಿದ್ದೀರಿ. ದಯವಿಟ್ಟು ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ ಎಂದು ನನ್ನ ಮನಸ್ಸಿನಲ್ಲಿ ಇದೆ. ಏಕೆಂದರೆ, ಸಿದ್ಧಾಂತಗಳು ಇಲ್ಲದೆ ರಾಜಕೀಯವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಸೆಕ್ಯುಲರಿಸಂ ಬಗ್ಗೆ ನೀವೇನು ಹೇಳಿದಿರಿ, ಮಾನ್ಯ ನಾಗರಾಜ್‌ರವರು ಮತ್ತು ಕೆಲವರು ಇವತ್ತು ಹೇಳಿದರು, ನಿಮ್ಮ ಪಕ್ಷದ ಹೆಸರು ಜನತಾದಳ ಸೆಕ್ಯುಲರ್ ಎನ್ನುವಂಥದ್ದು. ಪ್ರಾಯಶ: ನೀವು ಅವರ ಜೊತೆ ಸೇರಿಕೊಂಡ ಮೇಲೆ ಒಂದು ಮೆಟ್ಟಿಲನ್ನು ಅವರು ಹತ್ತಿ (ಎಸ್) ಅನ್ನವುದು ಕಳಚಿ ಹೋಗಿದೆಯೋ ಏನೋ ನಮಗೆ ಗೊತ್ತಿಲ್ಲ. ಏಣಿಯನ್ನು ಬಿಜೆಪಿಯವರು ಒಂದೊಂದೇ ಮೆಟ್ಟಿಲು ಹತ್ತಿದ ಹಾಗೆ ನಿಮ್ಮ ಒಂದೊಂದೇ ಮೆಟ್ಟಿಲು ಕಳಚಿ ಹೋಗುತ್ತದೆಯೋ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ದಯವಿಟ್ಟು ನಿಮ್ಮ ತಂದೆಯವರು ಜನತಾ ದಳ ಸೆಕ್ಯುಲರ್ ಎಂದು ರಾಷ್ಟ್ರ ಮಟ್ಟದ ನಾಯಕರಾಗಿ, ಇವತ್ತು ನಾನು ಸಿದ್ಧಾಂತಕ್ಕೆ ಬದ್ಧನಾಗಿದ್ದೇನೆ ಎನ್ನುವಂತಹ ಮಾತನ್ನು ಹೇಳಿ, ಇವತ್ತು ತಮ್ಮ ಒಂದು ಬಣ ಪ್ರತ್ಯೇಕವಾಗಿ ಗವರ್ನರ್‌ಗೆ ಹೋಗಿ ಮನವಿಯನ್ನು ಕೊಟ್ಟು ನಾವು ಸರ್ಕಾರದ ಬೆಂಬಲವನ್ನು ವಾಪಸ್ ಪಡೆಯುತ್ತೇವೆ ಎಂದು ಹೇಳಿದಿರಿ, ನನಗೆ ನಿಮ್ಮ ಗುಂಪಿನವರು ಕೊಟ್ಟಿದ್ದರ ಬಗ್ಗೆ ಬೇಸರ ಇಲ್ಲ. ಆದರೆ ನಿಮ್ಮ ಮಾನ್ಯ ಧರ್ಮಸಿಂಗ್‌ರವರ ಮಂತ್ರಿಮಂಡಲದ ಸದಸ್ಯರು ಏನು ಹೋದರು, ಪ್ರಥಮವಾಗಿ ಅವರು ರಾಜೀನಾಮೆಯನ್ನು ಕೊಟ್ಟು ನಂತರ ಹೋಗಬೇಕಾಗಿತ್ತು. ನೇರವಾಗಿ ರಾಜಭವನಕ್ಕೆ ಹೋಗಿ ಬೆಂಬಲವನ್ನು ವಾಪಸ್ ತೆಗೆದು, ನಂತರ ನೀವು ರಾಜೀನಾಮೆ ಕಳುಹಿಸಿದಂಥ ರೀತಿ . . . .

**ಶ್ರೀ ಅಮರೇಗೌಡ ಬಯ್ಯಾಪುರ** : ಅದಕ್ಕೆ ಸಹಿ ಮಾಡಿದ ನಂತರ ಇದಕ್ಕೆ ಸಹಿ ಮಾಡಿದ್ದೇವೆ. ನಮಗೂ ಗೊತ್ತಿದೆ ನಾವು ಸರ್ಕಾರದಲ್ಲಿ ಇದ್ದು ಆ ರೀತಿ ಸೈನ್ ಮಾಡಬೇಕು ಬೇಡ ಎಂದು.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಸಹಿ ಮಾಡಿ ನೀವು ಇಟ್ಟುಕೊಂಡರೆ ಏನು ಪ್ರಯೋಜನ? ನನಗೆ ಮಾತನಾಡುವುದಕ್ಕೆ ಬಿಡಿ. ಮಂತ್ರಿ ಮಂಡಲದ ಮೇಲೆ, ಮುಖ್ಯ ಮಂತ್ರಿಗಳ ಮೇಲೆ ವಿಶ್ವಾಸ ಇಲ್ಲವೆಂದು ಆದಾಗ ನೇರವಾಗಿ ಮುಖ್ಯಮಂತ್ರಿಗಳಿಗೆ ರಾಜೀನಾಮೆ ಕೊಡುವುದು ಇದೆ. ಈಗಲೂ ನೀವು ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಮಗೆ ವಿಶ್ವಾಸ ಇದೆ ಎಂದು ಹೇಳುತ್ತೀರಿ. ಮಾನ್ಯ ಮುಖ್ಯಮಂತ್ರಿಗಳ ಮೇಲೆ ವಿಶ್ವಾಸ ಇದ್ದರೆ ರಾಜೀನಾಮೆಯನ್ನು ಕೊಡುವಾಗ ಅವರ ಹತ್ತಿರ ಹೋಗಿ ಚರ್ಚೆ ಮಾಡಿ ಯಾರ ಬಗ್ಗೆ ವಿಶ್ವಾಸ ಇಲ್ಲ ಅನ್ನುವುದನ್ನು ಚರ್ಚೆ ಮಾಡುವಷ್ಟು ಸೌಜನ್ಯ ಆದರೂ ಇರಬೇಕಾಗಿತ್ತು.

**ಶ್ರೀ ಅಮರೇಗೌಡ ಬಯ್ಯಾಪುರ** : ಮಾನ್ಯ ಹೆಗಡೆಯವರೇ ಈಲ್ಡ್ ಆದರೆ ಒಂದು ಮಾತನ್ನು ಹೇಳುತ್ತೇನೆ. ಅವರ ಬಗ್ಗೆ ನಾವು ಏನೂ ಹೇಳುವುದಿಲ್ಲ, ಅವರ ಹಿಂದೆ ಇದ್ದಂತಹವರು ಕಿರುಕುಳ ಕೊಟ್ಟಿದ್ದನ್ನು ನಾವು ಹೇಳಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ. ನಾನು ಈಲ್ಡ್ ಆಗಿಲ್ಲ, ಅವರಿಗೆ ಅವಕಾಶ ಕೊಟ್ಟಾಗ ಅವರು ಮಾತನಾಡಲಿ.

ಅಧ್ಯಕ್ಷರು : ಕೂತುಕೊಳ್ಳಿ, ಅವರಿಗೆ ಮಾತನಾಡುವುದಕ್ಕೆ ಬಿಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದು ಸಮ್ಮಿಶ್ರ ಸರ್ಕಾರಗಳ ಸಮಯ. ಸಮ್ಮಿಶ್ರ ಸರ್ಕಾರ ಹೋಗಿ ಗವರ್ನಮೆಂಟ್ ಬೈ ರೊಟೇಷನ್ ಆಗಿದೆ. ರೊಟೇಷನ್ ಹೋಗಿ ಮಿನಿಸ್ಟ್ರಿ ಬೈ ರೊಟೇಷನ್ ಆಗುವಂತಹ ಪರಿಸ್ಥಿತಿ ಬಂದಿದೆ. ಸಿನಿಮಾದಲ್ಲಿ ಸಂಗೀತಗಳು ರೀ ಮಿಕ್ಸ್, ಸಿನಿಮಾಗಳು ರೀಮಿಕ್ಸ್ ಆದ ಹಾಗೆ ಇದೂ ಸಹ ರೀಮಿಕ್ಸ್ ಆಗಲಿಕ್ಕೆ ಶುರುವಾಗಿದೆ. ಪಂಚಾಯಿತಿಗಳಲ್ಲಿ ಅಧ್ಯಕ್ಷರಿಗೆ 10 ತಿಂಗಳು, ತಾಲ್ಲೂಕು ಪಂಚಾಯಿತಿಗಳಲ್ಲಿ 10 ತಿಂಗಳು ಆದ ಹಾಗೆ, ಬೇರೆ ಕಡೆ ಎಲ್ಲಾ ಆಗಿದೆ ಎಂದು ನೀವು ಹೇಳಬಹುದು, ಆಗಿದೆ, ಅದನ್ನು ನಾನು ಒಪ್ಪುವುದಿಲ್ಲ, ಅಲ್ಲಿ ಆಗಿದ್ದನ್ನೂ ಒಪ್ಪುವುದಿಲ್ಲ, ಇದನ್ನೂ ಒಪ್ಪುವುದಿಲ್ಲ, ಆದರೆ ರಾಷ್ಟ್ರೀಯ ಹಬ್ಬ ರಿಪಬ್ಲಿಕ್ ಡೇ ಸಂದರ್ಭದಲ್ಲಿ ಮಾನ್ಯ ರಾಷ್ಟ್ರಪತಿಗಳು ರಾಷ್ಟ್ರಕ್ಕೆ ಸಂದೇಶ ಕೊಡುವಾಗ ಏನು ಹೇಳಿದ್ದಾರೆ, ಸಂಸದರು ದೇಶಕ್ಕೆ ಮಾದರಿಯಾಗಿರಬೇಕೆಂದು ಹೇಳಿದರು. ಇದರಲ್ಲಿ ಶಾಸಕರಾದ ನಾವುಗಳೂ ಕೂಡ ಬರುತ್ತೇವೆ. ಶಾಸಕರಾದವರಲ್ಲಿ ಒಂದು ಬಣ ಗೋವಾದಲ್ಲಿ ಕುಳಿತುಕೊಂಡದ್ದು ಇನ್ನೊಂದು ಬಣ ಕೊಡೈಕೆನಾಲ್‌ನಲ್ಲಿ ಕುಳಿತುಕೊಂಡದ್ದು. ಅದರ ಬಗ್ಗೆ ವಿಸ್ತಾರವಾಗಿ ಚರ್ಚೆಯಾಗಿದೆ. ಒಂದು ವೇಳೆ ಕುದುರೆ ವ್ಯಾಪಾರದ ಬಗ್ಗೆ ಅನುಮಾನವಿಲ್ಲದಿದ್ದರೆ ಅಲ್ಲಿಗೆ ಹೋಗಿ ಬಚ್ಚಿಟ್ಟುಕೊಳ್ಳುವಂಥ ಅವಶ್ಯಕತೆ ಏನಿತ್ತು, ಇದರಿಂದಾಗಿ ಶಾಸಕರ ಸ್ವಾಭಿಮಾನಕ್ಕೆ ಧಕ್ಕೆ ಬಂದಿದೆ ಎಂದು ಹೇಳಬಯಸುತ್ತೇನೆ. ನೀವು ಬೆಂಗಳೂರಿನಲ್ಲಿಯೇ ಕುಳಿತುಕೊಳ್ಳಬೇಕಿತ್ತು, ನಿಮ್ಮ ಅಭಿಪ್ರಾಯಗಳನ್ನು ಹೇಳಬೇಕಿತ್ತು; ನೇರವಾಗಿ ಮುಖ್ಯಮಂತ್ರಿಗಳಿಗೆ ರಾಜೀನಾಮೆಯನ್ನು ಕೊಟ್ಟು ನಿಮ್ಮ ನಾಯಕರ ಮುಖಾಂತರ ಹೋಗಿ ನಿಮಗೆ ಕೊಟ್ಟಿರುವ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಬೇಕಿತ್ತು. ಈ ರೀತಿ ಮಾಡಿದ್ದರೆ ಅದರ ಬಗ್ಗೆ ನನ್ನ ಎರಡು ಅಭಿಪ್ರಾಯ ಇರುತ್ತಲೇ ಇರಲಿಲ್ಲ. ಆದರೆ ಆದಂಥ ರೀತಿ ಮತ್ತು ಘಟನೆಗಳ ಬಗ್ಗೆ ಪ್ರಕಾಶ್‌ರವರು ಮತ್ತು ಸಿಂಧ್ಯಾರವರು ಮಾತನಾಡುವಾಗ ಅವರು ಹೇಳಿದರು. ಯಾವ ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರುತ್ತಾರೆ ಅವರು ನಮ್ಮನ್ನು ನೋಡುತ್ತಾರೆ. ಇವೊತ್ತು ನಾವು ಪಕ್ಷಾಂತರ ಮಾಡಿದ ಕೂಡಲೇ ಜನ ಮತ ಬದಲಾವಣೆ ಮಾಡುತ್ತಾರೆ ಎಂದಲ್ಲ, ನಾವು ಮಾತ್ರ ಬದಲಾಗಿದ್ದು. ಜನ ಬದಲಾಗುವುದಿಲ್ಲ. ಅವರ ಪ್ರಿನ್ಸಿಪಲ್ಸ್ ಬದಲಾಗುತ್ತದೆ ಎಂದು ನನಗನ್ನಿಸುವುದಿಲ್ಲ. ಅವರಿಗೆ ಹೊಂದಿಕೊಂಡು ಹೋಗುವಂಥದ್ದು ನಮ್ಮ ಕರ್ತವ್ಯ. ನಮ್ಮ ಪ್ರಿನ್ಸಿಪಲ್ಸ್ ಏನು ಎಂಬುದನ್ನು ಹೇಳಿರುತ್ತೇವೆ. 1985ರ ಮುಂಚೆ ರಿಜಿಸ್ಟ್ರೇಶನ್ ಆಫ್ ಪಾರ್ಟೀಸ್ ಇರಲಿಲ್ಲ. ಯಾವ ರಾಜಕೀಯ ಪಕ್ಷವೇ ಆದರೂ ಅವರ ನೀತಿ ನಿಯಮಗಳ ಮೇಲೆ, ಕಾರ್ಯಕ್ರಮಗಳ ಮೇಲೆ ಒಂದು ಪಾರ್ಲಿಮೆಂಟರಿ ಪಾರ್ಟಿಯಾಗಿ ರೆಕಗ್‌ನೈಸ್ ಮಾಡುತ್ತಿದ್ದರು. 1985ರ ನಂತರ ಮಾತ್ರ ಪಾರ್ಲಿಮೆಂಟರಿ ಪಾರ್ಟಿ ಲೆಜಿಸ್ಲೇಚರ್ ಪಾರ್ಟಿ, ಲೆಜಿಸ್ಲೇಚರ್ ಗ್ರೂಪ್ ಎಂದು ಪ್ರಾರಂಭವಾದಂಥದ್ದು. ಆ್ಯಂಟಿ ಡಿಫೆಕ್ಷನ್ ಲಾ ವನ್ನು ತಂದು, ಯಡಿಯೂರಪ್ಪನವರ ಸರ್ಕಾರ ಕೇಂದ್ರದಲ್ಲಿ ಇದ್ದಾಗ ಈ ಕಾನೂನಿಗೆ ತಂದಿದ್ದು. ಈಗೇನಾಗಿದೆ to circumvent the law 91 ರಲ್ಲಿ ಅಮೆಂಡ್‌ಮೆಂಟ್ ಬಂದಮೇಲೆ ಸೆಕ್ಷನ್ 3 ಅನ್ನು ಡಿಲಿಟ್ ಮಾಡಿದರು. ಯಾವ 'ಯಾವ ಕಂಡೀಶನ್‌ಗಳು ಇತ್ತು ಅವನ್ನೆಲ್ಲಾ circumvent ಮಾಡಿ ಒಂದು ಹೊಸ ಪರ್ಯಾಯ ಸರ್ಕಾರವನ್ನು ಮಾಡುವಂಥದ್ದು. ನಾವೇನು ಕಾನೂನನ್ನು ಮಾಡುತ್ತೇವೆ,

we have more sacred obligation to keep up the law. ಇದನ್ನು ನಾವು ಕಾನೂನನ್ನು ಸುತ್ತಿ ಬಳಸಿ ಮಾಡುವುದಕ್ಕೆ ಯಾವಾಗ ಪ್ರಾರಂಭ ಮಾಡುತ್ತೇವೆ ಜನ ತಪ್ಪು ಮಾಡಿದರೆ ಕಾನೂನನ್ನು ದುರುಪಯೋಗ ಮಾಡಿದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ನಮಗಿಲ್ಲ. ನಾವು, we have lost our rights. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ನಾನು ಮೊನ್ನೆ ದಿವಸ ನನ್ನ ಸ್ನೇಹಿತರ ಹತ್ತಿರ ಮಾತನಾಡುತ್ತಿದ್ದೆ, ಕೇಂದ್ರದಲ್ಲಿ ಬಿ.ಜೆ.ಪಿ ಸರ್ಕಾರ ಅಧಿಕಾರದಲ್ಲಿದ್ದಾಗ ರಾಮಮಂದಿರ ಕಟ್ಟುವ ಬಗ್ಗೆ ಚರ್ಚೆ ಪ್ರಾರಂಭವಾಗಲಿಲ್ಲ, ಈಗ ಯುಪಿಎ ಸರ್ಕಾರ ಇರುವಾಗ ಪುನ: ರಾಮಮಂದಿರ ಕಟ್ಟುವ ಬಗ್ಗೆ ಚರ್ಚೆಯಗುತ್ತಿದೆ. ಪ್ರಾಯಶ: ನನಗನ್ನಿಸುತ್ತದೆ ದತ್ತಪೀಠದ ಬಗ್ಗೆ ಮತ್ತು ಈದ್ಗಾ ಮೈದಾನದ ಬಗ್ಗೆ ಚರ್ಚೆ ಮಾಡುವುದಿಲ್ಲ, ನಿಮ್ಮ ಸರ್ಕಾರ ಇರುವಾಗ ಈ ಸಮಸ್ಯೆ ಇರುವುದಿಲ್ಲ ಎನ್ನುವ ಭರವಸೆ ನನಗಿದೆ. ಅದೇ ರೀತಿ ಇದ್ದರೆ ಸರ್ಕಾರಕ್ಕೂ ಮತ್ತು ಮುಖ್ಯಮಂತ್ರಿಗಳಿಗೂ ಬಹಳ ನಿರಾಯಾಸವಾಗಿ ಕೆಲಸವನ್ನು ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಮುಂದಿನ ದಿನಗಳಲ್ಲಿ ಯಾವ ರೀತಿ ಬದಲಾವಣೆಗಳಾಗುತ್ತವೆ ಎಂಬುದನ್ನು ನೋಡಬೇಕು. ನಮ್ಮಲ್ಲಿ ಒಂದು ಪರಿಸ್ಥಿತಿ ಏನೆಂದರೆ ತಮಗೆ ಗೊತ್ತಿದೆ, ಲೋಕಸಭೆಯಲ್ಲಿ ಮಾನ್ಯ ವಾಜಪೇಯಿಯವರ ಸರ್ಕಾರ ಬಿದ್ದಾಗ ಕೇವಲ ಒಂದು ಮತದ ಅಂತರದಿಂದ ಸರ್ಕಾರ ಬಿದ್ದುಹೋಯಿತು. ಯಾರು ಮತವನ್ನು ವಿರೋಧ ಹಾಕಿದರೋ ಅವರು ಪುನ: ನಿಮ್ಮೊಟ್ಟಿಗೆ ನಿಂತು ಚುನಾವಣೆಯಲ್ಲಿ ನಿಂತು ಗೆದ್ದು ಮಂತ್ರಿಗಳಾದರು. ಆಗ ಕಮ್ಯುನಲ್ ಆದರು. ಪುನ: ಅವರು ಹೊರಗೆ ಬಂದು ಈಗ ಅವರು ಸೆಕ್ಯುಲರ್ ಆದರು. ಇದು ಕಮ್ಯುನಲಿಸಂ ಮತ್ತು ಸೆಕ್ಯುಲರಿಸಂ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಪ್ರಾಯಶ: ಇವೊತ್ತು ಕೊಟ್ಟಂಥ ಸಮಯ ಸಾಕಾಗುವುದಿಲ್ಲ. ಆದರೆ ನನ್ನ ಸ್ನೇಹಿತರು ಹೇಳುತ್ತಿದ್ದರು, ರಾಂ ತೇರಿ ಗಂಗಾ ಮೈಲಿ ಹೋಗಮಿ ಎನ್ನುವ ಸಿನಿಮಾದ ಬಗ್ಗೆ ಹೇಳಿದರು. ಏನು ತಾವು ಮೈಲಿಯಾದರೋ ಅಥವಾ ಜೆ.ಡಿ. (ಎಸ್) ನವರು ಮೈಲಿಯಾದರೋ ನನಗೆ ಗೊತ್ತಿಲ್ಲ. ಅಂತು ಮೈಲಿಯಾಗಿದೆ. ಅದನ್ನು ಆಗಿರುವ ಬದಲಾವಣೆಯನ್ನು ಹೇಗೆ ಸಮರ್ಥನೆಯನ್ನು ಮಾಡಿಕೊಳ್ಳುತ್ತೀರಿ. ಪಾಪ, ಮಾನ್ಯ ಪ್ರಕಾಶ್‌ರವರು ಮಾತನಾಡುವಾಗ ಅವರು ಬಹಳ ನೋವಿನಿಂದ ಮಾತನಾಡುತ್ತಿದ್ದದ್ದು ನನಗೆ ಕಾಣುತ್ತಿತ್ತು. ಆದರೆ ಎಲ್ಲೋ ಒಂದು ಕಡೆ ಉಪ್ಪು ತಿಂದಿದ್ದೇನೆ ಎನ್ನುವ ಮಾತನ್ನು ಅವರು ಹೇಳಿದರು. ಹಾಗಲ್ಲ, ನೀವೂ ಸಹ ಅದಕ್ಕೆ ಕಾಂಟ್ರಿಬ್ಯೂಷನ್‌ನ್ನು ಕೊಟ್ಟಿದ್ದೀರಿ. ಅದರ ಅಭಿವೃದ್ಧಿಗೆ ಕಾಂಟ್ರಿಬ್ಯೂಷನ್‌ನ್ನು ಕೊಟ್ಟಿದ್ದೀರಿ, ಏಕೆಂದರೆ ಮಾನ್ಯ ಮಂತ್ರಿಮಂಡಲದಲ್ಲಿ ನಾನು ನೋಡುತ್ತಿದ್ದೆ, ಸಿದ್ದರಾಮಯ್ಯನವರು ಮತ್ತು ನೀವು ಮತ್ತು ಸಿಂಧ್ಯಾರವರು, ಪ್ರಾಯಶ: ನಾವು ಮಾತನಾಡುತ್ತಿದ್ದೆವು, ಅಲ್ಲೇನಾದರೂ ಕಾಂಗ್ರೆಸ್‌ನಲ್ಲಿ ಧರ್ಮಸಿಂಗ್, ಖರ್ಗೆಯವರನ್ನು ಬಿಟ್ಟರೆ ನೀವು ಮೂರು ಜನ ಮಾತ್ರ ಎಂದು ನಾವು ಚರ್ಚೆಯನ್ನು ಮಾಡುತ್ತಾ ಕುಳಿತಿದ್ದೆವು. ಇವೊತ್ತು ನನಗೆ ಖುಷಿಯಾಗಿದ್ದು ಪುನ: ನೀವೆಲ್ಲಾ ಈ ಕಡೆ ಬರುವುದಿಲ್ಲ; ಬಂದರೆ ನಮಗೆ ಬೇಸರವೇನೂ ಇಲ್ಲ. ಆದರೆ ಇದನ್ನು ನೋಡುವಾಗ ಖುಷಿಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಬಲವಾದ ವಿರೋಧ ಪಕ್ಷ ಇರಬೇಕು. ಇವರು ಇಲ್ಲಿ ಕುಳಿತಾಗ ಮುಂದೆ ಏನು ಎಂಬ ಬಗ್ಗೆ ಮಾನ್ಯ ಶ್ರೀರಾಮರೆಡ್ಡಿಯವರು ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮತ್ತೆ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಮೊನ್ನೆ ಮೊನ್ನೆಯವರೆಗೆ ಗ್ಲೋಬಲ್ ಥಿಯರಿ ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿದರು. ನಾನು ಇವೊತ್ತು ಇವೊತ್ತಿನ ಸದನದ

ಬಗ್ಗೆ ನಾನು ಬಹಳ ಸಂತೋಷವನ್ನು ಪಟ್ಟೆ. ಮಾನ್ಯ ಪ್ರಕಾಶ್‌ರವರು ಹಾಗೂ ,ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿದ ವೈಖರಿ, ಅವರು ಒಬ್ಬರಿಗೊಬ್ಬರಿಗೆ ಉತ್ತರವನ್ನು ಕೊಟ್ಟಂಥ ರೀತಿ, ಇನ್ನು ಮುಂದಿನ ದಿನಗಳಲ್ಲಿ ಇಂಥದ್ದನ್ನು ಕಾಣುವುದಕ್ಕೆ ಅವಕಾಶವಿದೆ. ಹೊಸ ಸದಸ್ಯರುಗಳಿಗೆ ಪ್ರಾಯಶ: ಇದು ಬೇಕಾಗಿತ್ತು. ಇಷ್ಟು ದಿವಸಗಳವರೆಗೆ ಇದು ಇರಲಿಲ್ಲ. ಸದನದಲ್ಲಿ ಈ ಒಂದು ಚರ್ಚೆಗೆ ಅವಕಾಶವಿರಲಿಲ್ಲ. ಇನ್ನು ಮುಂದೆ ಅದು ಇರುವಂಥದ್ದು ಇರುತ್ತದೆ. ಸರ್ಕಾರ ಬರುತ್ತದೆ, ಹೋಗುತ್ತದೆ, ಅಧಿಕಾರ ಇರುತ್ತದೆ, ಹೋಗುತ್ತದೆ ಅದು ಬೇರೆ ವಿಷಯ. ನನಗೆ ಹಿಂದಿನ ದಿನದಿ ಜೆ.ಹೆಚ್. ಪಟೇಲರ ಕಾಲವನ್ನು ನೆನಪಿಸಿಕೊಂಡರೆ ನಂತರ ಇವೊತ್ತೇ ಸದನದಲ್ಲಿ ಬದಲಾವಣೆಯನ್ನು ಕಂಡದ್ದು. ಇದೇ ಬದಲಾವಣೆಯನ್ನು ಕಂಡದ್ದು. ಈ ಬದಲಾವಣೆ ನಮಗೆ ಬೇಕಾಗಿದೆ. ಶಾಸಕರು ಭೂಗತರಾಗಿ ನೇರವಾಗಿ ಸದನಕ್ಕೆ ಬಂದದ್ದರ ಬಗ್ಗೆ ಆ ನೋವು ಶಾಶ್ವತವಾಗಿ ಮನಸ್ಸಿನಲ್ಲಿ ಉಳಿಮುಕೊಳ್ಳುವಂಥ ಪರಿಸ್ಥಿತಿ ಉಂಟಾಗಿದೆ. ಅದರ ಬಗ್ಗೆ ನೀವು ಎಷ್ಟು ರೀತಿಯಲ್ಲಿ ನಮಗೆ ಎಕ್ಸ್‌ಪ್ಲೈನ್ ಮಾಡಿದರೂ ಕೂಡ ಜನರಿಗೆ ಎಕ್ಸ್‌ಪ್ಲನೇಶನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. Mark Twain ಒಂದು ಕಡೆಯಲ್ಲಿ ಹೇಳುತ್ತಾರೆ "All you need in life is ignorance and confidence and the success is yours." Ignorance and confidence, success is yours. ಆ ಪರಿಸ್ಥಿತಿ ಉಂಟಾಗಬಾರದು. ಆ ಪರಿಸ್ಥಿತಿ ಉಂಟಾಗಿ ಸಕ್ಸಸ್ ಬಂದರೆ, success has made many of men failures. ಆ ಪರಿಸ್ಥಿತಿ ಉಂಟಾಗುತ್ತದೆ. ಈ ಬದಲಾವಣೆಯನ್ನು ಕಾಣುವಾಗ ಒಳ್ಳೆಯದಕ್ಕೆ ಹೋಗಬೇಕೇ ಹೊರತು ಕೆಟ್ಟದ್ದಕ್ಕೆ ಹೋಗಬಾರದು. ದಯವಿಟ್ಟು ಶಾಸಕರು ನಗೆಪಾಟಲಾಗುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ಹೇಳುತ್ತೇನೆ. ನನಗೆ ಮಾನ್ಯ ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಾಗ ಅವರ ಓಟ್ ಆಫ್ ಕಾನ್‌ಫಿಡೆನ್ಸ್ ಮೂವ್ ಮಾಡಿದಾಗ ಮಾನ್ಯ ಕುಮಾರಸ್ವಾಮಿಯವರೇ ನಾವೆಲ್ಲಾ ಅಲ್ಲಿಗೆ ಹೋಗಿ ಕುಳಿತಿದ್ದೆವು. ನಮ್ಮ ಕಣ್ಣಿನಲ್ಲೂ ನೀರಿತ್ತು. ಅವರ ಅಂದಿನ ಭಾಷಣ ಇವೊತ್ತಿಗೂ ನನಗೆ ನೆನಪಿದೆ. ಅದು ಪ್ರಿಂಟ್ ಆಗಿದೆ. ಕೊನೆಯ ಮಾತಿನಲ್ಲಿ ಅವರು ಹೇಳಿದರು. 'Old man is in a hurry.' ಎಂದು. ಸೀತಾರಾಂ ಕೇಸರಿ ಅವರಿಗೆ ಹೇಳಿದ್ದನ್ನು ಇವೊತ್ತಿಗೂ ನನಗೆ ನೆನಪಿದೆ. ಏಕೋ ನೀವೂ ಸಹ ಆತುರವನ್ನು ಮಾಡಿದಿರಿ ಎಂದು ನನಗೆ ಅನ್ನಿಸುತ್ತದೆ. ಅವೊತ್ತು ಅವರು ಹೇಳಿದಂಥದ್ದು. ಸರ್ಕಾರವನ್ನು ಮಾಡುವಂಥದ್ದು ನಿಮ್ಮ ಹಕ್ಕು. ಯಾರಿಗೂ ತಪ್ಪಿಸುವುದಕ್ಕೆ ಆಗುವುದಿಲ್ಲ. ಮೆಜಾರಿಟಿ ಇದೆ. ಆದರೆ ಪ್ರಜಾಪ್ರಭುತ್ವದಲ್ಲಿ ಯಾವತ್ತೂ ಬಹುಸಂಖ್ಯೆ ಮಾತ್ರ ಮುಖ್ಯವಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಹಿಂದಿನ ಸದನಗಳಲ್ಲಿ ಇದರ ಬಗ್ಗೆ ಚರ್ಚೆಯಾಗಿ ಬಿಲ್‌ನ್ನು ಪಾಸ್ ಮಾಡಿಕೊಳ್ಳೋಣ, ಅವರು ಚರ್ಚೆ ಮಾಡಲಿ ಆಮೇಲೆ ಪಾಸ್ ಮಾಡಿಕೊಳ್ಳೋಣ, ಅದಿಲ್ಲ ಎಂದದು ಇದೆ ನಾನು ಹೇಳುತ್ತೇನೆ ಆರೋಗ್ಯಕರವಾದ ಚರ್ಚೆ ಆಗ ಬೇಕಾಗುತ್ತದೆ. ನಾವು ಯಾವುದನ್ನೂ ತರಾತುರಿಯಾಗಿ ಮಾಡಬಾರದು. ಏಕೆಂದರೆ ನೀವು ಇಷ್ಟು ಸಣ್ಣ ವಯಸ್ಸಿನಲ್ಲಿ, ಏಕೆಂದರೆ ನಮಗಿಂತಲೂ ಬಹಳ ಚಿಕ್ಕವರು ನೀವು, ಮುಖ್ಯಮಂತ್ರಿಗಳಾಗಿ ತಾವು ಕುಳಿತಿರುವಂಥದ್ದನ್ನು ನೋಡಿದರೆ ನಮಗೆ ಸಂತೋಷವಾಗುತ್ತದೆ. ಆದರೆ ಆ ಮುಂದಿನ ದಿನಗಳಲ್ಲಿ 20 ತಿಂಗಳ ನಂತರ ಆಲೋಚನೆ ನಮಗೆ ಆಗುತ್ತಿದೆ. ಏನಾಗಬಹುದು ಮುಂದೆ ಎಂದು. 20 ತಿಂಗಳನಂತರ ಪುನ: ಮುಖ್ಯಮಂತ್ರಿಗಳಾಗಿ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ನಿಮಗೆ ಆಗುವುದಿಲ್ಲ. ನನಗೆ ಯಾರಾದರೂ

ಮುಖ್ಯಮಂತ್ರಿಗಳಾಗಿದ್ದಾಗ ಅವರು ಮುಂದೆ ಹೋದರೆ ದಯವಿಟ್ಟು ತಮ್ಮನ್ನೇ ಮುಂದುವರಿಸುವುದಕ್ಕೆ ಅವರು ಏನಾದರೂ ಸಪೋರ್ಟ್ ಮಾಡುತ್ತಾರೆಯೇ ಎಂದು ಕೇಳಿ, I will be very happy if they support you to continue as Chief Minister for the next 20 months, also. ಆದರೆ ನಂತರದ ದಿನಗಳನ್ನು ತಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಏನಾಗಬಹುದು ಎಂದು. ಏನಾಗಬಹುದು ಎಂದರೆ ಪುನ: ಹಿಂದೆ ಹೋಗಿ ಕುಳಿತುಕೊಳ್ಳಬೇಕಾಗುತ್ತದೆ. ಅದು ಆಗಬಾರದು. ಎಂದು ನಾನು ಹೇಳುತ್ತೇನೆ. ಇನ್ನು ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ, ಏಕೆಂದರೆ ಸಮಯ ಬಹಳ ಆಗಿದೆ. ಮಾನ್ಯ ಚಂದ್ರಶೇಖರ್‌ರವರು ಸರ್ಕಾರಕ್ಕೆ ವಿರೋಧವನ್ನು ಮಾಡಿ ಮಾನ್ಯ ವಿ.ಪಿ. ಸಿಂಗ್‌ರವರ ಸರ್ಕಾರವನ್ನು ಬೀಳಿಸುವಂಥ ಸಂದರ್ಬದಲ್ಲಿಯೂ ಸಹ ನಾನು ಅಲ್ಲಿದ್ದೆ. ಆ ಡಿಬೇಟ್‌ನ್ನು ಕೇಳುತ್ತಿದ್ದಾಗ ನಿಮ್ಮ ನಾಯಕರು ನಮ್ಮ ನಾಯಕರು ಮಾನ್ಯ ದಂಡವತೆಯವರು ಮಾತನಾಡುವಾಗ ಬಹಳ ಭಾವೋದ್ವೇಗದಿಂದ ಮಾತನಾಡಿದರು. ಅವರು ಹೇಳಿದರು ಮಾನ್ಯ ಚಂದ್ರಶೇಖರ್‌ರವರಿಗೆ "Mr. Chandrashekhar, history will repeat. History will repeat. When it repeats, it repeats with vengeance." ಎಂದು ಹೇಳಿದರು. ಅದನ್ನು ತಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕೆಂದು ತಮಗೆ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ ಹಿಂದೆ ನಾನು ಜೆ.ಹೆಚ್. ಪಟೇಲ್‌ರವರ ಎನ್.ಡಿ. ಜೊತೆ ಹೋಗುವುದಕ್ಕೆ ಒಪ್ಪದೇ ನಾನು ರಾಜೀನಾಮೆಯನ್ನು ಕೊಟ್ಟು ಬಂದೆ. ಪುನ: ಇವೊತ್ತು ಅದರ ಜೊತೆ ಹೋಗುವುದಕ್ಕೆ ನನಗೆ ಇವೊತ್ತಿಗೂ ಮನಸಿಲ್ಲ. ಆದುದರಿಂದ ಇವೊತ್ತು ಈ ಸಂದರ್ಭದಲ್ಲಿ ಹೊಸ ಸರ್ಕಾರಕ್ಕೆ ಶುಭವನ್ನು ಕೋರುತ್ತೇನೆ. ಆದರೆ ಬೆಂಬಲ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ)** : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 10.30 ಯಿಂದ ಬಹಳ ಜನ ಹಿರಿಯ ಮುಖಂಡರುಗಳು, ಮಾನ್ಯ ವಿರೋಧ ಪಕ್ಷದ ನಾಯಕರು, ಹಾಗೂ ಬೇರೆ ಬೇರೆ ಪಕ್ಷದ ಮುಖಂಡರುಗಳೆಲ್ಲಾ ಕೂಡ ಈ ವಿಶ್ವಾಸ ಕೋರತಕ್ಕಂತ ನಿರ್ಣಯದಲ್ಲಿ ಭಾಗವಹಿಸಿ ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಸ ಮಾಡಿದ್ದಾರೆ. ಸೆಕ್ಯುಲರಿಸಂ ಬಗ್ಗೆ ಕಮ್ಯುನಿಲಿಸಂ ಬಗ್ಗೆ ಸೋಷಿಯಲಿಸಂ ಬಗ್ಗೆ ಮಾರ್ಕಿಸಿಸಂ ಬಗ್ಗೆ ಈ ರೀತಿಯಾಗಿ ಎಲ್ಲಾ ವಿಚಾರಧಾರೆಗಳ ಬಗ್ಗೆ ಬೆಳಕನ್ನು ಚೆಲ್ಲತಕ್ಕಂತ ಪ್ರಯತ್ನವನ್ನೂ ಕೂಡ ಮಾಡಿದ್ದಾರೆ. ಬಹಳ ಜನರ ಅಭಿಪ್ರಾಯ, ಎಲ್ಲಿ ಸಂಖ್ಯಾಬಲ ಇದೆ ಅಲ್ಲಿ ಸರ್ಕಾರವನ್ನು ಮಾಡಿಕೊಳ್ಳಬಹುದು. ಅದಕ್ಕೆ ಯಾವುದೇ ತತ್ವ ಸಿದ್ಧಾಂತಗಳನ್ನು ನಾವು ಪಾಲನೆ ಮಾಡಬೇಕಾದಂತಹ ಅಗತ್ಯ ಇಲ್ಲ ಎಂದು ಚುನಾವಣೆ ಸಂದರ್ಭದಲ್ಲೆ ನಾವು ಜನರಿಗೆ ನಮ್ಮ ಪಕ್ಷದ ಸಿದ್ಧಾಂತಗಳನ್ನು, ಕಾರ್ಯಕ್ರಮಗಳನ್ನು ವೋಟಿಗೋಸ್ಕರ ಹೇಳಿರುತ್ತೇವೆ. ಆದರೆ ಗೆದ್ದು ಬಂದಮೇಲೆ ಅವುಗಳನ್ನೆಲ್ಲ ಪಾಲನೆ ಮಾಡಬೇಕಾದಂತಹ ಯಾವುದೇ ಬಂಧನ ಇಲ್ಲ. ಅವುಗಳನ್ನು ಯಾವಾಗ ಬೇಕಾದರೂ ಕೂಡ ಗಾಳಿಗೆ ತೂರಿ ಬಿಡಬಹುದು ಎನ್ನುವಂತಹ ರೀತಿಯಲ್ಲೆ ಕೆಲವರೆಲ್ಲಾ ಮಾತನಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲ ಇರಬೇಕು. ಯಾರಿಗೆ ಇಲ್ಲಿ ಮೆಜಾರಿಟಿ ಇರುತ್ತದೆ ಹೌಸ್‌ನಲ್ಲಿ ಅವರಿಗೆ ಮಾತ್ರ ಲೀಡರ್ ಆಗುವುದಕ್ಕೆ ಸಾಧ್ಯ ಮತ್ತು ಅದಕ್ಕೆ ಜನರು ಆಶಿರ್ವಾದ ಮಾಡಬೇಕು ಹಾಗೂ ಜನರ ಆದೇಶ ಬೇಕಾಗುತ್ತದೆ. ಇವತ್ತು ಏನು ಕರ್ನಾಟಕದಲ್ಲಿ ಒಂದು ಕ್ಷಿಪ್ರ ಬೆಳವಣಿಗೆಯಾಗಿ ಜೆಡಿಎಸ್‌ನ ಒಂದು ಗುಂಪು ಮತ್ತು ಭಾರತೀಯ ಜನತಾ ಪಕ್ಷ ಇವರಿಬ್ಬರೂ

ಸೇರಿಕೊಂಡು ಸರ್ಕಾರ ಮಾಡಿದ್ದಾರಲ್ಲಾ, ಇದಕ್ಕೆ ಜನರ ಆದೇ ಏನಿಲ್ಲ. ಮತ್ತು ಇದಕ್ಕೆ ಯಾವುದೇ ಸಿದ್ಧಾಂತದ ಚೌಕಟ್ಟು ಇಲ್ಲ. ತತ್ವಗಳೂ ಕೂಡ ಇಲ್ಲ. ನಾವು ಕಳೆದ ಚುನಾವಣೆಯಲ್ಲಿ ಹಾಗೂ ನಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೆವು, ಅದನ್ನೆಲ್ಲಾ ನಾವು ಗಾಳಿಗೆ ತೂರುವುದಕ್ಕಾಗುವುದಿಲ್ಲ. ಅಧಿಕಾರ ಬರುತ್ತದೆ ಅಧಿಕಾರ ಹೋಗುತ್ತದೆ, ಅಧಿಕಾರಕ್ಕೋಸ್ಕರ ಎಲ್ಲಾ ಗಾಳಿಗೆ ತೂರಿ ನಾವು ಪ್ರತಿಪಾದನೆ ಮಾಡಿಕೊಂಡು ಬಂದಿರತಕ್ಕಂತ, ಜನರ ಮುಂದೆ ಹೇಳಿರತಕ್ಕಂಥ ವಿಚಾರಗಳನ್ನು ಇವತ್ತು ನಾವು ಸಾಯಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ತರಹ ಮಾಡಿದರೆ ನಾವು ಜನಗಳಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ ಎನ್ನುವುದನ್ನು ಇವತ್ತು ಬಹಳ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಲಾಸ್ಟ್ ಎಲೆಕ್ಷನ್‌ನಲ್ಲಿ What is our promise to the people ? ನಮಗೆ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷ ಎರಡೂ ಕೂಡ ಸಮಾನ ವೈರಿಗಳು ಎಂದು ಹೇಳಿದ್ದೇವೆ. ೧೯೯೧ ರಲ್ಲಿ ಬಾಬ್ರಿ ಮಸೀದಿ ಧ್ವಂಸವಾದದ್ದು ಡಿಸೆಂಬರ್ ೬ ರಲ್ಲಿ ಆದಮೇಲೆ ಅಂದಿನ ಜನತಾ ದಳವಾಗಲಿ ಜನತಾದಳ (ಎಸ್) ಆಗಲಿ, ಇನ್ನು ಮುಂದೆ ಯಾವ ಕಾರಣಕ್ಕೂ ಕೂಡ ಭಾರತೀಯ ಜನತಾ ಪಕ್ಷದಂತಹ ಕೋಮುವಾದಿ ಪಕ್ಷದ ಜೊತೆ ಅಧಿಕಾರಕ್ಕೋಸ್ಕರ ಕೈ ಜೋಡಿಸಬಾರದು ಎನ್ನುವಂಥಾದ್ದು ನಮ್ಮ ನಿರ್ಣಯ. ಜೆಡಿ (ಎಸ್) ಪಕ್ಷ ಹೇಗಾಯಿತು ? ಜನತಾದಳ ಸೆಕ್ಯುಲರ್ ಪಕ್ಷ ಹೇಗೆ ಬಂತು ? ನಾವು ಜನತಾ ದಳದಲ್ಲೆ 1994 ರಿಂದ 1999 ರವರೆಗೆ ಇದ್ದೆವು. ನಮ್ಮ ಜೊತೆ ವಿ.ಪಿ. ಸಿಂಗ್ ಬಂದಮೇಲೆ ಜನತಾ ದಳ ಬೆಂಗಳೂರಿನಲ್ಲೇ ಹುಟ್ಟಿದ್ದು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಂತಹ ಕಾಲ. ಇನ್ನು ಜನತಾ ದಳ (ಎಸ್) ಹೇಗಾಯಿತು ? 1999ನೇ ಜುಲೈ 21 ನೇ ತಾರೀಖು ಅಂದುಕೊಂಡಿದ್ದೇನೆ ಹೋಟೇಲ್ ಕ್ಯಾಪಿಟಲ್‌ನಲ್ಲೆ ಎಲ್ಲರೂ ಸೇರಿಕೊಂಡು ನಿರ್ಣಯ ಮಾಡಿದೆವು. ಆಗ ಮಾನ್ಯ ಜೆ.ಹೆಚ್. ಪಟೇಲ್ ಮುಖ್ಯಮಂತ್ರಿಗಳಾಗಿದ್ದರು. ಆಗ ಮಾನ್ಯ ದೇವೇಗೌಡರು ಲೋಕಸಭಾ ಸದಸ್ಯರಾಗಿದ್ದರು. ನಾನು ಅವತ್ತು ಉಪಮುಖ್ಯಮಂತ್ರಿಯಾಗಿದ್ದೆ. ಮಾನ್ಯ ಪ್ರಕಾಶ್‌ರವರು ಡ್ರಾಫ್ಟ್ ಮಾಡಿದರು, ಅದನ್ನು ಮಾನ್ಯ ಬೈರೇಗೌಡರು ಮೂವ್ ಮಾಡಿದರು. ಮಾನ್ಯ ಬೈರೇಗೌಡರು ಇವತ್ತು ಬದುಕಿಲ್ಲ. ಅವರು ಮೂವ್ ಮಾಡಿದರು. ಆ ನಿರ್ಣಯದ ಮೇಲೆ ಮಾನ್ಯ ಪಟೇಲರು ಭಾಷಣ ಮಾಡಿದರು. ಆಗ ಮಾನು ಪಟೇಲರು ಒಂದು ಮಾತು ಹೇಳಿದರು. Congress is a curse this country, where as BJP is a cancer. ಎಂದು ಹೇಳಿದರು. ಅದಾದಮೇಲೆ ಅವರು ಜಾರ್ಜ್ ಜೊತೆಗೆ ಹೋದರು, ಬಿಜೆಪಿ ಜೊತೆ ಹೋದರು. ಅದರ ಮಾರನೇ ದಿನವೇ ನಮ್ಮ ಪಕ್ಷದಲ್ಲಿ ಎಲ್ಲರು ಹೋದರು ಬಹಳ ಜನ ಜೆಡಿ (ಯು) ಬಿಜೆಪಿ ಜೊತೆ ಹೊರಟು ಹೋದರು. ನಾವೆಲ್ಲಾ ಬೇಡ ಎಂದು ಹೇಳಿದೆವು. ಮಾನ್ಯ ಜೆ.ಹೆಚ್. ಪಟೇಲರಿಗೆ ಹೇಳಿದೆವು, ಮಾನ್ಯ ಪ್ರಕಾಶ್‌ರವರಿಗೂ ಹೇಳಿದೆವು; ಎಲ್ಲಾ ಹೋಗುತ್ತಿರುವುದನ್ನು ತಪ್ಪಿಸಿರಿ, ಭಾರತೀಯ ಜನತಾ ಪಕ್ಷಕ್ಕೆ ಅದೇ ರೀತಿ ಮಾನ್ಯ ಸಿಂಧ್ಯಾರವರಿಗೂ ಹೇಳಿದೆವು. ಮಾನ್ಯ ಪ್ರಕಾಶ್‌ರವರು ಏನು ಇವತ್ತು ತಮ್ಮ ಅಸಹಾಯಕತೆ ಹೇಳಿದರಲ್ಲಾ, ಅವತ್ತು ಕೂಡ ಅದನ್ನೇ ಹೇಳಿದರು. ಅಸಹಾಯಕತೆ, ಏನೂ ಮಾಡುವುದಕ್ಕಾಗುವುದಿಲ್ಲ, ಅಸರ್ಟ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಪಟೇಲ್ ಜೊತೆ ಏನೋ ನಮಗೆ ಸಂಬಂಧ ಇದೆ. ನಾವು ಪಟೇಲ್ ಜೊತೆ ಹೋಗಲೇಬೇಕು, ಆ ಸಿದ್ಧಾಂತ ಮೇಲೆ ಹೋದರೂ ಪರವಾಗಿಲ್ಲ ಎಂದು ಅವತ್ತು ಹೇಳಿದರು. ಮಾನ್ಯ ಸಿಂಧ್ಯರವರೂ ಕೂಡ ಅದೇ ಹೇಳಿದರು. ಎಲ್ಲಾ ಕೂಡ ಅವತ್ತು ಹೋದರು. ಇವರೆಲ್ಲಾ ಹೋದಮೇಲೆ ದೇವೇಗೌಡರು, ನಾವು ಬೊಮ್ಮಾಯಿ,

ಲಕ್ಷ್ಮಿಸಾಗರ್‌ರವರು, ಇಬ್ರಾಹಿಂರವರು ಹಾಗೂ ಮಾನ್ಯ ಮಂಜುನಾಥ್ ನಾವೆಲ್ಲಾ ಡೆಲ್ಲಿಯಲ್ಲಿ ಇದ್ದೆವು. ಇವರೆಲ್ಲಾ ಹೋದಮೇಲೆ ನಾವು ಭಾರತೀಯ ಜನತಾ ಪಕ್ಷದ ಜೊತೆ ಯಾವ ಕಾರಣಕ್ಕೂ ಹೋಗಬಾರದು ಎಂದು ಹೇಳಿ ಅವತ್ತು ನಿರ್ಣಯ ಮಾಡಿ ಜೆಡಿ (ಎಸ್) ಎಂದು ಹೊಸ ಪಾರ್ಟಿಯನ್ನು ಹುಟ್ಟು ಹಾಕಿದೆವು. ಅಂದರೆ ಜನತಾ ದಳ (ಸೆಕ್ಯುಲರ್) ಆ ಸೆಕ್ಯುಲರ್ ಎನ್ನುವುದು ಹೇಗೆ ಬಂತು ಎಂದರೆ ನಾವು ಸೆಕ್ಯುಲರಿಂ ಅನ್ನು ಮೊದಲಿನಿಂದಲೂ ಪ್ರತಿಪಾದನೆ ಮಾಡಿಕೊಂಡು ಬಂದಿದ್ದೇವೆ. ಜೆಡಿ (ಯು) ಅದದ್ದು ಹೇಗೆ ಎಂದರೆ ಜನತಾ ದಳ ಯುನೈಟೆಡ್ ಎಂದೇಳಿ ಇವರೆಲಾ ಮಾಡಿಕೊಂಡರು. ಅದಕ್ಕೋಸ್ಕರ ನಾವು ಜನತಾ ದಳ (ಎಸ್) ಎಂದು ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇವತ್ತು ಬಿಜೆಪಿಯವರು ಒಂದು ಮಾತು ಹೇಳಿದ ತಕ್ಷಣವೆ, 1977 ರಲ್ಲಿ ನಮ್ಮ ಜೊತೆ ಇರಲಿಲ್ಲವೇ? ಎಂದು. ಅದು ಸತ್ಯವಲ್ಲವೆಂದು ನಾನು ಹೇಳಿದೆನಾ ? ಅದು ಸತ್ಯವೇ 1983 ರಲ್ಲಿ 18 ಜನ ಬೆಂಬಲ ಕೊಟ್ಟಿರಲಿಲ್ಲವೇ ನಿಮಗೆ ಎಂದು ಹೇಳುತ್ತಾರೆ. ಅದು ಸತ್ಯವೇ ಆದರೆ ಬಾಬ್ರಿ ಮಸೀದಿ ಒಡೆದು ಹಾಕಿದ ಮೇಲೆ ನಮ್ಮ ಪಕ್ಷದ ನಿಲುವುಗಳು ಏನಿದೆ, ಆ ನಿಲುವಿನಲ್ಲೆ ಅವತ್ತಿನಿಂದ ಇವತ್ತಿನವರೆಗೆ ಯಾವುದೇ ಬದಲಾವಣೆಯನ್ನು ಅಧಿಕಾರಕ್ಕೋಸ್ಕರ ನಾವು ಮಾಡಿಕೊಂಡಿಲ್ಲ. ನನಗೂ 2004ರಲ್ಲಿ ಗೆದ್ದಾಗ ಬಿಜೆಪಿಯವರು ಬನ್ನಿ ಸರ್ಕಾರ ಮಾಡೋಣ ಎಂದು ಕರೆದಿದ್ದರು.

**ಶ್ರೀ ಎನ್. ಚಲುವರಾಯಸ್ವಾಮಿ** : ಮಾನ್ಯ ಸಿದ್ದರಾಮಯ್ಯನವರು ಒಂದು ವಿಚಾರ ಮರೆತುಬಿಟ್ಟರು ಎಂದು ಕಾಣುತ್ತದೆ. 2004 ರಲ್ಲೆ ಕಾಂಗ್ರೆಸ್ ಜೊತೆ ಹೋಗಬೇಕೆಂದು ಕುಳಿತುಕೊಂಡಾಗ ತಾವೂ ಬಿಜೆಪಿ ಜೊತೆ . . .

**ಶ್ರೀ ಸಿದ್ಧರಾಮಯ್ಯ** : ಇರಲಿ, ಇರಲಿ ಅದೂ ಹೇಳೋಣ. ಅದನ್ನೂ ಹೇಳುತ್ತೇನೆ.

**ಶ್ರೀ ಎನ್. ಚಲುವರಾಯಸ್ವಾಮಿ** : 2004 ರಲ್ಲಿ ಕಾಂಗ್ರೆಸ್ ಜೊತೆ ಹೋಗಬೇಕೆಂದು ನಮ್ಮ ರಾಷ್ಟ್ರೀಯ ನಾಯಕರಾದಂತಹ ಮಾನ್ಯ ದೇವೇಗೌಡರು ಹೇಳಿದಾಗ, ಕಾಂಗ್ರೆಸ್ ಜೊತೆ ಬಹಳ ಪೈಪೋಟಿ ಮಾಡಿಕೊಂಡು ಬಂದಿದ್ದೇವೆ. ಅವರ ಜೊತೆ ಹೋಗುವುದು ಕಷ್ಟವೆಂದು ಹೇಳಿದೆವಲ್ಲಾ.

**ಶ್ರೀ ಸಿದ್ದರಾಮಯ್ಯ** : ಅದನ್ನೂ ಹೇಳುತ್ತೇನೆ. ನಾನು ಬಿ.ಜೆ.ಪಿ.ಯ ಜೊತೆಗೆ ಹೋಗಬೇಕೆಂದು ಹೇಳಲಿಲ್ಲ, ಕಾಂಗ್ರೆಸ್‌ನವರ ಜೊತೆಗೆ ಹೋಗುವುದು ಬೇಡವೆಂದು ಹೇಳಿದ್ದೆ. ನೀವು ಅಲ್ಲಿ ಇರಲಿಲ್ಲ, ಸುಮ್ಮನೆ ಯಾರದೋ ಮಾತನ್ನು ಕೇಳಿಕೊಂಡು ಏಕೆ ಹೇಳುತ್ತೀರಿ. ನಾವು ಆಗ ಇದ್ದಂಥವರು ನಾನು, ಮಾನ್ಯ ಪ್ರಕಾಶ್‌ರವರು ಮತ್ತು ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಮಾನ್ಯ ಹೆಚ್.ಡಿ. ದೇವೇಗೌಡರು ಇದ್ದೆವು. ನೀವು ಇಲ್ಲದೇ ಏನೋ ಹೇಳುವುದಕ್ಕೆ ಹೋಗಬೇಡಿ. ನಾವು ಕಾಂಗ್ರೆಸ್‌ನವರ ಜೊತೆಗೆ ಅನಿವಾರ್ಯವಾಗಿ ಹೋಗಬೇಕೆಂದರೆ, ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾ ದಳವು common factor is secularism, ಅವರೂ ಕೂಡ secularism ಪ್ರತಿಪಾದನೆ ಮಾಡುತ್ತಿದ್ದಾರೆ. ನಾವೂ ಕೂಡ ಸೆಕ್ಯೂಲರಿಸಂಗೆ ಬಹಳ ಬದ್ದತೆಯಿಂದ, ಜನತೆಯ ಮುಂದೆ ಹೇಳಿಕೊಂಡು ಬಂದಿದ್ದೇವೆ. ಆ ರೀತಿಯಲ್ಲಿ ನಡೆದುಕೊಂಡು ಬಂದಿದ್ದೇವೆ. ಅವತ್ತು ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ಸರ್ಕಾರ ರಚನೆಯಾಗುವಂತಹ ಸಂದರ್ಭದಲ್ಲಿ, ನಾವು ಕಾಂಗ್ರೆಸ್ ಪಕ್ಷಕ್ಕೆ ಹೊರಗಡೆಯಿಂದ ಬೆಂಬಲವನ್ನು ಕೊಡೋಣವೆಂದು ಹೇಳಿದ್ದೆ. ನಾವು ಸರ್ಕಾರದಲ್ಲಿ

ಪಾಲುದಾರರಾಗುವುದು ಬೇಡ, ಏಕೆಂದರೆ ನಾವು ಹಿಂದಿನ ಸರ್ಕಾರವನ್ನು ತೀವ್ರವಾಗಿ ವಿರೋಧ ಮಾಡಿದ್ದೇವೆ. ಆಗ ಇದ್ದ ಶ್ರೀ ಎಸ್.ಎಂ. ಕೃಷ್ಣರವರ ಸಕಾರವನ್ನು ತೀವ್ರವಾಗಿ ವಿರೋಧವನ್ನು ಮಾಡಿದ್ದೇವೆ. ನಾನು ಸರ್ಕಾರದ ಒಳಗೆ ಹೋಗುವುದು ಬೇಡವೆಂದು ಹೇಳಿದ್ದೆ. ಇವತ್ತು ಚುನಾವಣೆಯನ್ನು ತಪ್ಪಿಸಬೇಕೆಂದರೆ, ಇನ್ನೊಂದು ಚುನಾವಣೆ ಮಾಡುವುದರಿಂದ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುತ್ತದೆನ್ನುವುದಾದರೆ, ನಾವು ಹೊರಗಡೆ ಇದ್ದು, issue bases support ಕೊಡೋಣ ಎಂದು, ಅವತ್ತೂ ಕೂಡ ನಾನು ಪ್ರತಿಪಾದನೆಯನ್ನು ಮಾಡಿದ್ದೆ. ಆಗ ಇಲ್ಲ ಕಾಂಗ್ರಸ್ ಜೊತೆ ಅನಿವಾರ್ಯವಾಗಿ ಸರ್ಕಾರ ಸೇರಲೇಬೇಕೆಂದು ಅಭಿಪ್ರಾಯಗಳು ಬಂದುದ್ದರಿಂದ, ಸರ್ಕಾರವನ್ನು ಸೇರಲೇಬೇಕಾಗಿ ಬಂತು. ನಾನು ಆಗಲೂ ಕೂಡ ಸರ್ಕಾರದಲ್ಲಿ ಮಂತ್ರಿಯಾಗುವುದಿಲ್ಲವೆಂದು ಹೇಳಿದ್ದೆ. ನಾನು ಉಪ ಮುಖ್ಯಮಂತ್ರಿಯಾಗುವುದಿಲ್ಲವೆಂದು ಹೇಳಿದ್ದೆ. ಆಗ ನಮ್ಮ ಸ್ನೇಹಿತರೆಲ್ಲಾ ಒತ್ತಾಯ ಮಾಡಿದಾಗ ಉಪ ಮುಖ್ಯಮಂತ್ರಿಯಾಗಬೇಕಾಗಿ ಬಂತು. ಆ ರೀತಿಯಾಗಿ ಸರ್ಕಾರದಲ್ಲಿ ಇದ್ದೆವು. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಆದರೆ ಒಂದು ಗುಂಪು ಬಿಜೆಪಿಯವರೊಂದಿಗೆ ಯಾವಾಗಲೂ ಕೂಡ ಅವತ್ತಿನಿಂದಲೇ ಮಾತನಾಡಿಕೊಂಡೇ ಬರುತ್ತಾ ಇತ್ತು. ಅದೂ ಕೂಡ ಸತ್ಯವಾಗಿದೆ. ಒಂದು ಕಡೆ ಜಾತ್ಯಾತೀತ ತತ್ವವನ್ನು ಪ್ರತಿಪಾದನೆ ಮಾಡುವುದು. ಇನ್ನೊಂದು ಕಡೆ ಕೋಮುವಾದಿ ಪಕ್ಷದೊಡನೆ ಸ್ನೇಹವನ್ನು ಮಾಡುವುದು. ಇದು ನಡೆದುಕೊಂಡೇ ಬಂದಿತ್ತು. ಇದು ಕಳೆದ 19-20 ತಿಂಗಳುಗಳಿಂದ ನಡೆದುಕೊಂಡೇ ಬಂದಿತ್ತು. ಇದು ಇವತ್ತು, ನೆನ್ನೆ, ಮೊನ್ನೆಯಿಂದ ಇದ್ದಕ್ಕಿದ್ದ ಹಾಗೆ ಇವರಿಗೆ ಪ್ರೀತಿ ಬಂದಿರುವುದಲ್ಲ. ಇವರಿಗೂ ಬಿ.ಜೆ.ಪಿ ಯವರಿಗೆ ನೆನ್ನೆ, ಮೊನ್ನೆ ಪ್ರೀತಿ ಬಂದಿರುವಂಥಾದ್ದಲ್ಲ. ಇವರ ಭೇಟಿ ಮಧ್ಯೆ, ಮಧ್ಯೆ ಒಂದೊಂದು ಸಾರಿ ಆಗಿದೆ. ಮಾನ್ಯ ಯಡಿಯೂರಪ್ಪನವರ ಮನೆನಲ್ಲಿ ಫೋಟೋಗೀಟೋ ಎಲ್ಲಾ ತೆಗೆದುಕೊಂಡು, ಸ್ವಲ್ಪ ದಿನ ಎಲ್ಲಾ ಓಡಾಡಿ ಬಿಟ್ಟಿದ್ದರು ಮಧ್ಯದಲ್ಲಿ. ಆದರೆ ಇಲ್ಲಿ ಜನತೆಗೆ ನಾವು ಯಾವ ವಚನವನ್ನು ಕೊಟ್ಟಿದ್ದೆವು, ಯಾವ ಸಿದ್ಧಾಂತವನ್ನು ಪ್ರತಿಪಾದನೆಯನ್ನು ಮಾಡಿದ್ದೆವು; ನಾವು ಏತಕ್ಕೋಸ್ಕರ ಜೆಡಿಎಸ್ ಪಕ್ಷವನ್ನು ಕಟ್ಟಿದ್ದೇವೆಂದು ಹೇಳಿಕೊಂಡು ಬಂದಿದ್ದೆವು, ಅದನ್ನು ಇವತ್ತು ಸಂಪೂರ್ಣವಾಗಿ ಹಿಸುಕಿ ಹಾಕುವಂತಹ ಕೆಲಸ ಕರ್ನಾಟಕ ರಾಜ್ಯದಲ್ಲಿ ನಡೆದಿದೆಯಲ್ಲಾ, ಇದಕ್ಕೆ ಈ ರಾಜ್ಯದ ಜನತೆಯ ಒಪ್ಪಿಗೆ ಇದೆಯಾ ? ಇದು ಈ ರಾಜ್ಯದ ಜನತೆಗೆ ಮಾಡುವಂತಹ ದ್ರೋಹ ಅಲ್ಲವಾ ?

**ಶ್ರೀ ಡಿ.ಟಿ. ಜಯಕುಮಾರ್** : ತಾವು ಮೈಸೂರಿನಲ್ಲಿ ಎಬಿಪಿಜೆಡಿ ಮತ್ತು ಕಾಂಗ್ರೆಸ್ ಜೊತೆಗೆ ಇವರು ಸೇರಿಲ್ಲವಾ ? ಇಲ್ಲಿ ಇವರು ಹೇಳುವುದೊಂದು ಮಾಡುವುದೊಂದು.

**ಶ್ರೀ ಸಿದ್ದರಾಮಯ್ಯ** : ಆಯಿತು, ತಾವು ಕುಳಿತುಕೊಳ್ಳಿ, ನಿಮ್ಮ ಹತ್ತಿರ ನಾವು ಸಿದ್ಧಾಂತವನ್ನು ಕಲಿಯಬೇಕಾಗಿಲ್ಲ. ನಾನು ಅವರಿಗೆ ಹೇಳುತ್ತೇನೆ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಡಿ.ಟಿ. ಜಯಕುಮಾರ್** : ಇವರು ಮೈಸೂರಿನಲ್ಲಿ ಕಾಂಗ್ರೆಸ್‌ನವರ ಜೊತೆಗೆ ಸೇರಿಲ್ಲವಾ? ಇವರು ಹೇಳುವುದೊಂದು ಮಾಡುವುದೊಂದು. 30 ವರ್ಷಗಳಿಂದ ಬೈಯ್ದುಕೊಂಡು ಬಂದರು; ಕಾಂಗ್ರೆಸ್ ಪಕ್ಷವನ್ನು ಬಯ್ದುಕೊಂಡು ಬಂದರು. ಈಗ ಮಾತನಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೇ, ಅವರಿಗೆ ನೀವು ಮಾತನಾಡುವುದಕ್ಕೆ ಟೈಮ್ ಕೊಡುವುದಾದರೆ ಕೊಡಿ. I am not yielding.

**ಶ್ರೀ ಡಿ.ಟಿ. ಜಯಕುಮಾರ್** : ಅಲ್ಲೊಂದು ಇಲ್ಲೊಂದು ತತ್ವ.

**ಶ್ರೀ ಸಿದ್ದರಾಮಯ್ಯ** : ಅಲ್ಲೊಂದು, ಇಲ್ಲೊಂದು, ಅದನ್ನು ನಿಮ್ಮ ಹತ್ತಿರ ಕಲಿಯಬೇಕಾಗಿಲ್ಲ.

**ಶ್ರೀ ಡಿ.ಟಿ. ಜಯಕುಮಾರ್** : ಕಲಿಯಬೇಕಾಗಿಲ್ಲ, ಸತ್ಯ ಸತ್ಯನೇ . .

**ಶ್ರೀ ಸಿದ್ದರಾಮಯ್ಯ** : ನಾನು ಸತ್ಯವನ್ನೇ ಹೇಳುತ್ತಿರುವುದು, ತಾವು ಕುಳಿತುಕೊಳ್ಳಿ, ನಾನು ಸತ್ಯವನ್ನು ಹೇಳುತ್ತಿರುವುದಕ್ಕೆ ನಿಮಗೆ ಈ ರೀತಿ ಆಗುತ್ತಿದೆ.

**ಶ್ರೀ ಡಿ.ಟಿ. ಜಯಕುಮಾರ್** : ಅಲ್ಲಿ ಮೈಸೂರಿನಲ್ಲಿ ಒಂದು ತತ್ವ, ಇಲ್ಲಿ ಒಂದು ತತ್ವ, ಇದನ್ನು ಹೇಳುವುದಕ್ಕೆ ಇವರಿಗೆ ಯಾವ ನೈತಿಕ ಹಕ್ಕು ಇದೆ ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ನಾನು ಇವರ ಹತ್ತಿರ ತತ್ವ ಸಿದ್ಧಾಂತವನ್ನು ಕಲಿಯಬೇಕಾಗಿಲ್ಲ. XXX ನಾನು ಕಲಿತಿರುವುದು ಸಾಕು, ನೀವು ಏನು ಕಲಿಯಬೇಕೋ ಅದನ್ನು ಕಲಿತುಕೊಳ್ಳಿ. ಮೈಸೂರಿನಲ್ಲೂ ಒಂದೇ, ಕರ್ನಾಟಕದಲ್ಲೂ ಒಂದೇ , ಭಾರತದಲ್ಲೂ ಒಂದೇ, ನಾನು ನಿಮ್ಮಿಂದ ಕಲಿಯಬೇಕಾಗಿಲ್ಲ.

**(ಗೊಂದಲ)**

**ಶ್ರೀ ಡಿ.ಟಿ. ಜಯಕುಮಾರ್** : ನೀವು 30 ವರ್ಷಗಳಿಂದಲೂ ಬೈಯ್ದುಕೊಂಡು ಬಂದಿರಿ.

**ಶ್ರೀ ಸಿದ್ಧರಾಮಯ್ಯ** : ನೀವು 20 ತಿಂಗಳುಗಳಿಂದ ಏಕೆ ಮಂತ್ರಿಗಳಾಗಿ ಇದ್ದೀರಿ ಕಾಂಗ್ರೆಸ್ ಪಕ್ಷದವರೊಂದಿಗೆ ನೀವು 30 ವರ್ಷ ಇರಲಿಲ್ಲವೇ ? ಅದರಲ್ಲಿ 20 ತಿಂಗಳು ಏಕೆ ಅಲ್ಲಿ ಮಂತ್ರಿಗಳಾಗಿದ್ದೀರಿ?

XXX ಈ ಪದಗಳನ್ನು ಮಾನ್ಯ ಅಧ್ಯಕ್ಷರ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

**ಶ್ರೀ ಡಿ.ಟಿ. ಜಯಕುಮಾರ್** : ನೀವು ಆಗಿದ್ದಿರಲ್ಲಾ . . .

**ಶ್ರೀ ಸಿದ್ಧರಾಮಯ್ಯ** : ನಾನು ಅದಕ್ಕೆ ಹೇಳುತ್ತಿದ್ದೇನೆ. ನಾನೂ ಆಗಿದ್ದೆ, ಇದು ಕಾಂಗ್ರೆಸ್‌ನವರ ಜೊತೆಗೆ ಸೇರಿರುವುದು ಹೊಸದೇನಲ್ಲಾ, ನೀವು ಯಾವ ಹಿನ್ನೆಲೆಯಿಂದ ಬಂದಿರುವುದೆಂಬುದು ಗೊತ್ತಿಲ್ಲ.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಸದಸ್ಯರುಗಳು ಮಧ್ಯೆ ಮಾತನಾಡಬೇಡಿ. ದಯವಿಟ್ಟು ಮಾತನಾಡುವವರಿಗೆ ಅವಕಾಶವನ್ನು ಕೊಡಿ. ತಾವು ಕುಳಿತುಕೊಳ್ಳಿ, ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ವಾಟಾಳ್ ನಾಗರಾಜ್** : ಕಾಂಗ್ರೆಸ್‌ನವರ ಜೊತೆಗೆ ಸೇರಿದ್ದು ಶಕ್ಯವೇ? ಮಾನ್ಯ ಸಿದ್ದರಾಮಯ್ಯನವರಿಂದ ಜಯಕುಮಾರ್, ಈಗ ಮಾನ್ಯ ಜಯಕುಮಾರ್‌ರವರು ಮಾನ್ಯ ಸಿದ್ದರಾಮಯ್ಯನವರ ಮೇಲೆ ಬಿದ್ದರೆ ಮಂತ್ರಿಪದವಿ ಗ್ಯಾರಂಟಿ ಎಂದು ಅಷ್ಟೆ.

**ಶ್ರೀ ಸಿದ್ದರಾಮಯ್ಯ** : ರಾಜಕೀಯವಾಗಿ ಎಲ್ಲಾ ಹೇಳಬಾರದು, ಮುಂದೆ ಜನಗಳ ಹತ್ತಿರ ಹೋಗಿ ಗೊತ್ತಾಗುತ್ತದೆ; ಚುನಾವಣೆ ಬಂದಾಗ ಹೋಗಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ವೈಯಕ್ತಿವಾಗಿ ಯಾರ ಯಾರ ತಪ್ಪುಗಳು ಏನು ಇದೆಯೆಂಬುದನ್ನು ಹೇಳಿಬಿಡಿ.

---

XXX (ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.)

**ಶ್ರೀ ಸಿದ್ದರಾಮಯ್ಯ** : ನಾನು ಯಾರ ಮೇಲೂ ವೈಯಕ್ತಿಕವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಫ್ಯಾಕ್ಸ್ ಏನೇನು ಎಂಬುದನ್ನು ಹೇಳಲೇ ಬೇಕಾಗುತ್ತದೆ; ಏನೇನು ಇವೆಂಟ್ಸ್ ನಡೆದಿದೆ, ಅದನ್ನು ಹೇಳಬೇಕಾಗುತ್ತದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ನಾವು ಏನೂ ಕದ್ದು ಮುಚ್ಚಿ ಮಾಡಿಲ್ಲ, ತಾವು ವೈಯಕ್ತಿಕವಾಗಿ ಹೇಳಬೇಕೆಂದರೆ ಹೇಳಿ, ಅದರ ಮೇಲೂ ಚರ್ಚೆ ಮಾಡೋಣ.

**ಶ್ರೀ ಸಿದ್ದರಾಮಯ್ಯ** : ಏನೇನು ಇವೆಂಟ್ಸ್ ನಡೆದಿದೆಯೆಂಬುದನ್ನು ಹೇಳಬೇಕು. I have got every right to narrate the events. ಕಳೆದ ನಾಲ್ಕೈದು ತಿಂಗಳುಗಳಿಂದ ಏನೇನು ನಡೆದಿದೆಯೆಂಬ ಇವೆಂಟ್ಸ್ ಹೇಳಲೇ ಬೇಕು.

**ಶ್ರೀ ವಾಟಾಳ್ ನಾಗರಾಜ್** : ಕರೆಕ್ಟ್, ಏನೇನು ಘಟನೆಗಳು ನಡೆದಿವೆ, ಅದನ್ನು ಹೇಳಬೇಕು.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಕಳೆದ 20 ತಿಂಗಳುಗಳಿಂದ ಏನೇನು ನಡೆದಿಯೆಂಬುದನ್ನು ಹೇಳಿ, ಹೊಸ ಸಮ್ಮಿಶ್ರ ಸರ್ಕಾರ ರಚನೆಯಾದಂದಿನಿಂದಲೂ ಹೇಳಿ.

**ಶ್ರೀ ಸಿದ್ದರಾಮಯ್ಯ** : ಅದು ಅಗತ್ಯ ಬಿದ್ದರೆ ಹೇಳುತ್ತೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಮಾನ್ಯ ಹೆಚ್.ಡಿ. ದೇವೇಗೌಡರ ವಿರುದ್ಧ ರಾಜಭವನದ ಮುಂದೆ ಧರಣಿಯನ್ನು ನಡೆಸಿದ್ದಿರಲ್ಲಾ, ಅಲ್ಲಿಂದಲೂ ಪ್ರಾರಂಭ ಮಾಡಿ.

**ಶ್ರೀ ಸಿದ್ದರಾಮಯ್ಯ** : ಅದನ್ನು ಅಗತ್ಯ ಬಿದ್ದರೆ ಹೇಳೋಣ. ಮಾನ್ಯ ದೇವೇಗೌಡರ ವಿರುದ್ಧ ಹೇಳಬೇಕಾದಂತಹ ಪರಿಸ್ಥಿತಿ ಬಂದರೆ ಅದನ್ನೂ ಹೇಳುತ್ತೇವೆ. ನಾವು ಹೇಳಬೇಕಾದುದನ್ನೆಲ್ಲಾ ಹೇಳುತ್ತೇವೆ. ನನಗೆ ಯಾರೂ ಕೂಡ ಡಿಕ್ಟೇಟ್ ಮಾಡುವುದಕ್ಕೆ ಆಗುವುದಿಲ್ಲ. No body can dictate me.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಮಾನ್ಯ ಸಿದ್ದರಾಮಯ್ಯನವರು ನಮ್ಮ ಹತ್ತಿರ ಮಾತನಾಡಿದ್ದರು. ನಾವು ಹೋದರೆ ಬಿಜೆಪಿಯವರ ಜೊತೆಗೆ ಹೋಗೋಣ. ಆಗ ಮುಖ್ಯಮಂತ್ರಿಯಾಗಬಹುದೆಂಬ ವಿಚಾರವನ್ನು ಅವತ್ತೇ ನಮ್ಮ ಮುಂದಿಟ್ಟಿದ್ದರು.

**ಶ್ರೀ ಸಿದ್ದರಾಮಯ್ಯ** : ಇಂಪಾಸಿಬಲ್ . . .

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಇಂಪಾಸಿಬಲ್ ಅಂದರೆ ನಾವು ಏನು ಮಾಡೋಣ? ನಾವೆಲ್ಲಾ ಚರ್ಚೆ ಮಾಡಿದ್ದೇವೆ.

**(ಗೊಂದಲ)**

**ಶ್ರೀ ಸಿ. ಚನ್ನಿಗಪ್ಪ** : ಇದೇ ಸಿದ್ದರಾಮಯ್ಯನವರು ನಮ್ಮೊಡನೆ ಚರ್ಚೆ ಮಾಡಿದ್ದಾರೆ. ಮಾನ್ಯ ದೇವೇಗೌಡರು ಇವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದರೆ, ಅದು ಆಲಿಂಗನ ಆಗುತ್ತಿತ್ತು.

**(ಗೊಂದಲ)**

**ಅಧ್ಯಕ್ಷರು** : ನಾನು 8 ಗಂಟೆಗೆ ಕಲಾಪವನ್ನು ಮುಗಿಸೋಣವೆಂದು ಇದ್ದೆ. ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಿ, ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಈಗ ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಈ ಸಭೆಗೆ ತನ್ನದೇ ಆದ ಘನತೆ ಗೌರವ ಇದೆ. ಆ ಘನತೆ ಗೌರವವನ್ನು ದಯಮಾಡಿ ಹಾಳು ಮಾಡಬೇಡಿ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೇ, ಇವತ್ತು ಇಡೀ ರಾಜ್ಯದ ತುಂಬಾ ಜನರು ಟಿ.ವಿ.ಯಲ್ಲಿ ನೋಡುತ್ತಿದ್ದಾರೆ. ನನ್ನ ರಾಜಕೀಯ ಜೀವನದಲ್ಲಿ ನಾನು ಮತ್ತು ಜಾರ್ಜ್‌ರವರು

ಬಹಳ ಹತ್ತಿರದಲ್ಲಿ ಇದ್ದೆವು, ಜಾರ್ಜ್ ಮನೆಗೆ ಬಂದು ನನ್ನನ್ನು ಕರೆದರು, ನೀನು ಪಟೇಲರ ಜೊತೆಗೆ ಬಾ ಎಂದು ಹೇಳಿದರು. ಬಿ.ಜೆ.ಪಿ. ಜೊತೆಗೆ ಹೋಗುವ ಹಾಗಿದ್ದರೆ ನಾನು ಅವತ್ತೇ ಹೋಗಬಹುದಿತ್ತು. ಜೆ.ಡಿ. (ಯು) ಜೊತೆಗೆ ಹೋಗುವ ಹಾಗಿದ್ದರೆ ನಾನು ಅವತ್ತೇ ಹೋಗುತ್ತಿದ್ದೆ. ಜಾರ್ಜ್‌ರವರು ನಮ್ಮ ಮನೆಗೆ ಬಂದು ಕರೆದರು. ಬಹಳ ವರ್ಷಗಳು ನಾನು ಜಾರ್ಜ್ ಜೊತೆಯಲ್ಲೇ ಇದ್ದದ್ದು, ಬೇರೆಯವರ ಜೊತೆ ಇದ್ದದ್ದು ಅಲ್ಲ ನಾನು ಕರ್ಪೂರಿ ಠಾಕೂರ್‌ರವರು ಪಕ್ಷ ಮಾಡಿದಾಗ ಕರ್ಪೂರಿ ಠಾಕೂರ್‌ರ ಪಕ್ಷದಿಂದ ನಾನು ಟಿಕೆಟ್ ಕೇಳಿದ್ದೆ. 1983 ರಲ್ಲಿ ಕರ್ಪೂರಿ ಠಾಕೂರ್‌ರವರ ಲೋಕದಳ ಪಕ್ಷದಿಂದ ನಾನು ಗೆದ್ದು ಬಂದದ್ದು. ಅವತ್ತು ಜಾರ್ಜ್‌ರವರು ಆ ಪಕ್ಷದ ದೊಡ್ಡ ನಾಯಕರಾಗಿದ್ದರು. ನನ್ನ ಅನೇಕ ಚುನಾವಣೆಗಳಿಗೆ ಅವರು ಬಂದು ಕ್ಯಾಂಪೇನ್ ಮಾಡಿದ್ದಾರೆ. ಹಣ ಕಳುಹಿಸಿ ಕೊಟ್ಟಿದ್ದಾರೆ. ನಮಗೂ ಅವರಿಗೂ ಅಷ್ಟೊಂದು ಸಂಬಂಧವಿತ್ತು. ಜಾರ್ಜ್‌ರವರು ತಲೆ ಆಪರೇಷನ್ ಮಾಡಿಸಿಕೊಂಡು ಬಾಂಬೆಯಲ್ಲಿದ್ದಾಗ ನಾನು ಬಾಂಬೆಗೆ ಹೋಗಿ ಹೇಳಿದೆ, ನೀವು ಬಿ.ಜೆ.ಪಿ. ಜೊತೆ ಹೋಗಿ ಬಹಳ ದೊಡ್ಡ ತಪ್ಪು ಮಾಡಿದಿರಿ ಎಂದು ಹೇಳಿದೆ. ನೀವು ಬಿ.ಜೆ.ಪಿ. ಜೊತೆ ಹೋಗಬಾರದಿತ್ತು. ನಿಮ್ಮ ರಾಜಕೀಯ ಜೀವನದಲ್ಲಿ ಇದೊಂದು ದೊಡ್ಡ ಕಪ್ಪು ಚುಕ್ಕೆ ಈ ದೇಶದಲ್ಲಿ ದೊಡ್ಡ ಹೋರಾಟ ಮಾಡಿಕೊಂಡು ಬಂದವರು ನೀವು ಅಂಥ ನೀವು ಬಿ.ಜೆ.ಪಿ ಜೊತೆ ಹೋಗಬಾರದಿತ್ತು ಎಂದು ಹೇಳಿದೆ. ಒಂದು ಕಾಲದಲ್ಲಿ ಜಾರ್ಜ್ ಬಾಂಬೆಯಲ್ಲಿ ಇದ್ದಾರೆ ಎಂದರೆ ಇಡೀ ಬಾಂಬೆ ನಡುಗುತ್ತಿತ್ತು. ಎಸ್.ಕೆ. ಪಾಟೀಲ್ ಅಂಥವರ ವಿರುದ್ಧ ಗೆದ್ದು ಬಂದಿದ್ದಂಥ ಒಬ್ಬ ದೊಡ್ಡ ಲೀಡರ್ ಅವರು. ತುರ್ತು ಪರಿಸ್ಥಿತಿಯಲ್ಲಿ ಅವರ ಇಡೀ ಕುಟುಂಬ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿತ್ತು. ಇದೆಲ್ಲಾ ಆಗಿತ್ತು. ಇಷ್ಟೆಲ್ಲಾ ಇದ್ದೂ ಕೂಡ ಅವರು ಬಿ.ಜೆ.ಪಿ ಯವರ ಜೊತೆ ಹೋದರು. ನಾನು ಅವರಿಗೆ ಹೇಳಿದೆ, ಬಿ.ಜೆ.ಪಿ ಯುವರ ಜೊತೆ ಹೋಗಬೇಡಿ ಎಂದು ಡ್ಯೂಯಲ್ ಮೆಂಬರ್‌ಶಿಪ್‌ಗೋಸ್ಕರವೇ ಅವತ್ತಿನ ಜನತಾ ಸರ್ಕಾರ ಹೋಯಿತು. ಮೊರಾರ್ಜಿಯವರ ಸರ್ಕಾರ ಹೋದದ್ದು. because of dual membership. ಜಾರ್ಜ್‌ರವರು, ಮಧುಲಿಮೆಯವರು, ಕರ್ಪೂರಿ ಠಾಕೂರ್‌ರವರು, ಚರಣ್ ಸಿಂಗ್‌ರವರು, ರಾಜನಾರಾಯಣ್‌ರವರು ಅಲ್ಲಿ ವಾದ ಮಾಡಿದ್ದರು. ಡ್ಯೂಯಲ್ ಮೆಂಬರ್‌ಶಿಪ್ ಇಟ್ಟುಕೊಳ್ಳಬಾರದೆಂದು ಹೇಳಿ ವಾದ ಮಾಡಿದರು. ಅದೇ ಒಂದು ದೊಡ್ಡ ಇಷ್ಯೂ ಆಗಿ ಅವತ್ತು ಸರ್ಕಾರವೇ ಹೊರಟು ಹೋಯಿತು. ಆದಾದಮೇಲೆ ಜಾರ್ಜ್‌ರವರು ಬಿ.ಜೆ.ಪಿ ಯವರ ಜೊತೆಯಲ್ಲಿ ದೊಡ್ಡ ಹೋರಾಟ ಮಾಡಿಕೊಂಡು ಬಂದಿದ್ದರು. ಅಂಥ ಜಾರ್ಜ್‌ರವರು ಬಂದು ನನ್ನನ್ನು ಕರೆದಾಗ ನಾನು ಹೋಗಲಿಲ್ಲ. ಈಗ ನಾನು, ದೇವೇಗೌಡರಿಗೆ ಹೇಳಿದ್ದೆನಂತೆ, ಹೋಗೋಣ, ಅವರ ಜೊತೆ ಸೇರಿಕೊಳ್ಳೋಣ ಎಂದು ಹೇಳಿದ್ದೆನಂತೆ. ಅವರ ಜೊತೆ ಹೋಗುತ್ತೇವೆ ಎಂದು ಯಾವತ್ತು ನಾನು ಬಾಲಕೃಷ್ಣರವರಿಗೆ ಹೇಳಿದ್ದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ದೇವೇಗೌಡರನ್ನು ಒಪ್ಪಿಸಿ ಎಂದು ನಮ್ಮ ಮುಂದೆಯೇ ಚರ್ಚೆಯಾಗಿತ್ತು. ಇಂಥ ವಿಚಾರಗಳು ಬಂದಾಗ ಇರುವ ವಿಚಾರವನ್ನು ಹೇಳಬೇಕಲ್ಲವೇ ?

**ಶ್ರೀ ಸಿದ್ದರಾಮಯ್ಯ** : ನನ್ನ ಕನಸು, ಮನಸ್ಸಿನಲ್ಲಿಯೂ ಕೂಡ, ಇವತ್ತಲ್ಲ, ನಾನು ರಾಜಕೀಯ ಜೀವನದಲ್ಲಿ ಇರುವವರೆಗೂ, ನಾನು ಎಲ್ಲಿಯವರೆಗೆ ರಾಜಕೀಯದಲ್ಲಿ ಇರುತ್ತೇನೋ ಅಲ್ಲಿಯವರೆಗೆ ಯಾವ ಕಾರಣಕ್ಕೂ ಕೂಡ ಭಾರತೀಯ ಜನತಾ ಪಕ್ಷದ ಜೊತೆ ಕೈಜೋಡಿಸುವುದಿಲ್ಲ, ಅಂಥ

ಯೋಚನೆಯನ್ನು ಯಾವ ಕಾಲದಲ್ಲೂ, ಯಾವ ಕಾರಣಕ್ಕೂ ಕೂಡ ಮಾಡಿಲ್ಲ ಎಂದು ಇವತ್ತು ನಾನು ಈ ಸಭೆಯಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ದೇವೇಗೌಡರಲ್ಲ, ಅನೇಕ ಜನ ಎಂ ಎಲ್ ಎ ಗಳು ಬಂದು, ನಾವು ಬಿ.ಜೆ.ಪಿ ಜೊತೆ ಹೋಗೋಣ ಎಂದು ನನಗೆ ಹೇಳಿದ್ದರು. ಅವರ ಹೆಸರುಗಳನ್ನೆಲ್ಲಾ ಈಗ ನಾನು ಬಹಿರಂಗಪಡಿಸಲು ಹೋಗುವುದಿಲ್ಲ. ಯಾರ್‍ಯಾರು ಹೇಳಿದ್ದರು ಎನ್ನುವುದನ್ನೆಲ್ಲಾ ಈಗ ನಾನು ಹೇಳಲು ಹೋಗುವುದಿಲ್ಲ. ಆ ಹೆಸರುಗಳನ್ನೆಲ್ಲಾ ಹೇಳುವುದಕ್ಕೆ ಹೋಗಬಾರದು.

**ಶ್ರೀ ಡಿ.ಟಿ. ಜಯಕುಮಾರ್** : ಎಸ್.ಎಂ. ಕೃಷ್ಣರವರ ಮನೆಗೆ ಹೋಗಿದ್ದರಲ್ಲಾ, ಅವರ ಮನೆಗೆ ಹೋಗಿದ್ದು ಏಕೆ ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ನಿಜ ಅದು. ಎಸ್.ಎಂ. ಕೃಷ್ಣರವರ ಮನೆಗೆ ಹೋಗಿದ್ದು ನಿಜ. ಅದರಲ್ಲಿ ಮುಚ್ಚುಮರೆ ಏನಿಲ್ಲ. ಎಸ್.ಎಂ. ಕೃಷ್ಣರವರ ಮನೆಗೆ ಹೋಗಿದ್ದು ನಿಜ. ನಾನೇನು ಸುಳ್ಳು ಹೇಳುತ್ತಿದ್ದೇನೆಯೇ ? ನಾನು ಎಸ್.ಎಂ. ಕೃಷ್ಣ ಅವರ ಮನೆಗೆ ಹೋಗಿರಲಿಲ್ಲ ಎಂದು ಹೇಳುವುದಿಲ್ಲ. ಹೋಗಿದ್ದೆ, ಅವರನ್ನು ಭೇಟಿಯಾಗಿದ್ದೆ. What is wrong in that ? ದೇವೇಗೌಡರು ವಾಜಪೇಯಿಯವರನ್ನು ಭೇಟಿ ಮಾಡಿದ್ದರು. ವಾಜಪೇಯಿಯವರನ್ನು ಭೇಟಿ ಮಾಡಿದ ತಕ್ಷಣ ಅವರ ಸೆಕ್ಯುಲರಿಸಂ ಹೊರಟು ಹೋಯಿತೇ?

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಅವರು ಹೇಳಿ ಬಿಟ್ಟು ಹೋಗಿದ್ದರು.

**ಶ್ರೀ ಸಿದ್ದರಾಮಯ್ಯ** : ನಾನು ನಿನಗೆ ಹೇಳಿ ಬಿಟ್ಟು ಹೋಗಬೇಕಾಗಿತ್ತೇನು ?

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಜನಕ್ಕಾದರೂ ಗೊತ್ತಾಗಬೇಕಲ್ಲವೇ ?

**ಶ್ರೀ ಸಿದ್ದರಾಮಯ್ಯ** : ಜನರಿಗೆ ಹೇಳಿ ಬಿಟ್ಟೇ ಹೋಗಿದ್ದುದು. ನಾನೇನೂ ಕದ್ದು ಹೋಗಿರಲಿಲ್ಲ. ನಾನು ಕಾಲು ತೋರಿಸಲಿಕ್ಕೆ ಅಲ್ಲಿಗೆ ಡಾಕ್ಟರ್‌ರವರ ಹತ್ತಿರ ಹೋಗಿದ್ದುದು ನಿಜ. ಅಲ್ಲಿ ಅವರನ್ನು ಭೇಟಿ ಮಾಡಿದ್ದುದು ನಿಜ. ಅವರ ಮನೆಯಲ್ಲಿ ಊಟ ಮಾಡಿದ್ದು ನಿಜ, ಮಾತನಾಡಿದ್ದು ನಿಜ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ರಾಜಕೀಯ ಮಾತನಾಡಲು ಹೋಗಿದ್ದಿರಿ.

**ಶ್ರೀ ಸಿದ್ದರಾಮಯ್ಯ** : ರಾಜಕೀಯವನ್ನೂ ಮಾತನಾಡಿರುತ್ತೇವೆ. ಸುಮ್ಮಸುಮ್ಮನೆ ಹಲೋ-ಹಲೋ ಎಂದು ಹೇಳಿ ಬರುವುದಕ್ಕಾಗುತ್ತದೆಯೇ ರಾಜಕೀಯವನ್ನೂ ಮಾತನಾಡಿರುತ್ತೇವೆ. ನಾನು ಇಲ್ಲ ಎಂದು ಹೇಳಿದೆನೇನು ? ನಿಮ್ಮ ತರಹ ಏನೂ ಮಾಡಲು ಹೋಗಿಲ್ಲ ನಾನು. ನಿಮ್ಮ ಸಿದ್ಧಾಂತ, ತತ್ವಗಳನ್ನೆಲ್ಲಾ ನೋಡಿದ್ದೇನೆ ಬಿಡ್ರಿ.

**ಅಧ್ಯಕ್ಷರು** : ಸಿದ್ದರಾಮಯ್ಯನವರೇ, ಅವರ ಜೊತೆ ಏನು ಮಾತು ? ನೇರವಾಗಿ ಈ ಕಡೆ ನೋಡಿ ಮಾತನಾಡಿ.

**(ಗೊಂದಲ)**

**ಶ್ರೀ ಮಹದೇವ** : ಮೊದಲು ಅವರ ಬಾಯಿ ಮುಚ್ಚಿಸಿ ನೀವು.

(ಗೊಂದಲ)

**ಅಧ್ಯಕ್ಷರು** : ಇನ್ನು ಮುಂದೆ ನಮ್ಮ ಎಲೆಕ್ಟೋರಲ್ ಲಾಗಳನ್ನು ಬೇರೆ ಮಾಡಿ, ಎಲ್ಲಾ ಪಕ್ಷಗಳಲ್ಲಿ ಯಾರು ಭುಜಬಲರಿದ್ದಾರೆ ಅಂಥವರು ಮಾತ್ರ ಅಸೆಂಬ್ಲಿಗೆ ಬರಬೇಕು ಎಂದು ಮಾಡೋಣ. ಅಲ್ಲಿಯವರೆಗೂ ದಯಮಾಡಿ ಈ ಸಭಾ ಗೌರವವನ್ನು ಉಳಿಸಿ. ಫೈಲ್ವಾನ್‌ಗಿರಿ ಆಮೇಲೆ ಮಾಡುವಿರಿ, ನಾನು ಹೇಳಿದ ಹಾಗೆ ಬದಲಾವಣೆಯಾದ ಮೇಲೆ ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೇ, ನಾನು ಎಸ್.ಎಂ. ಕೃಷ್ಣರವರನ್ನು ಬಾಂಬೆಯಲ್ಲಿ ಭೇಟಿ ಮಾಡಿದ್ದು ನಿಜ, ಊಟ ಮಾಡಿದ್ದೂ ನಿಜ. ಹಾಗಂದ ಮಾತ್ರಕ್ಕೆ, ಅವರ ಜೊತೆ ಮಾತನಾಡಿದ ಮಾತ್ರಕ್ಕೆ, ನಾನು ಪ್ರತಿಪಾದನೆ ಮಾಡಿಕೊಂಡು ಬಂದಿದ್ದಂಥ ಸಿದ್ಧಾಂತವನ್ನು ಗಾಳಿಗೆ ತೂರಿಬಿಡುತ್ತೇನೆ ಎಂದು ನಾನು ಅವರಿಗೆ ಹೇಳುವುದಕ್ಕೆ ಹೋಗಿರಲಿಲ್ಲ. ಅಥವಾ ಅದನ್ನು ಅರಬ್ಬೀ ಸಮುದ್ರಕ್ಕೆ ಎಸೆದುಬಿಟ್ಟು ಬಂದಿರಲಿಲ್ಲ. ಕಾಂಗ್ರೆಸ್‌ನವರ ಜೊತೆ ಮಾತನಾಡುವುದೇ ಒಂದು ಅಪರಾಧವೆಂದರೆ ಹೇಗೆ ? ಕಾಂಗ್ರೆಸ್‌ನವರ ಜೊತೆ ಸರ್ಕಾರದಲ್ಲೇ ಇದ್ದೇವೆ. ಹಾಗಿರುವಾಗ ಕಾಂಗ್ರೆಸ್‌ನವರ ಜೊತೆ ಮಾತನಾಡಬೇಡವೇ ? 20 ತಿಂಗಳು ಅವರ ಜೊತೆಯಲ್ಲಿ ಸರ್ಕಾರ ಮಾಡಿಕೊಂಡು ಇದ್ದೇವೆ. ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಇದೆ, ಎಲ್ಲಾ ಮಾತನಾಡಿಕೊಂಡಿದ್ದೇವೆ. ಅವರ ಜೊತೆಯಲ್ಲಿ ಸೇರಿ ಸರ್ಕಾರ ಮಾಡಿಬಿಟ್ಟು, ಅವರ ಜೊತೆಯಲ್ಲಿ ಮಾತನಾಡಬೇಡಿ, ಇವರ ಜೊತೆ ಮಾತನಾಡಿದರೆ ಅಪರಾಧ ಇವರ ಜೊತೆ ಮಾತನಾಡಿದರೆ ಅದು ಇವರ ವಿರುದ್ಧ, ಇವರ ಜೊತೆ ಮಾತನಾಡಿದರೆ ಕಾಂಗ್ರೆಸ್ಸಿಗೆ ಹೊರಟು ಹೋಗುತ್ತಾರೆ ಎಂದರೆ ಹೇಗೆ ? ಅನೇಕ ಜನ ಕಾಂಗ್ರೆಸ್ ಸ್ನೇಹಿತರ ಜೊತೆ ನಾನು ಮಾತನಾಡಿದ್ದೇನೆ. ಆದರೆ ಇವತ್ತಿನವರೆಗೆ ಯಾವತ್ತೂ ಕೂಡ ನಾನು ಕಾಂಗ್ರೆಸ್ ಸೇರುತ್ತೇನೆ ಎಂದಾಗಲೀ ಅಥವಾ ಕಾಂಗ್ರೆಸ್ ಸೇರತಕ್ಕಂತ ಉದ್ದೇಶ ಇದೆ ಎಂದಾಗಲೀ ಎಲ್ಲೂ ಕೂಡ ಮಾತನಾಡಿಲ್ಲ, ಯಾರ ಜೊತೆಯಲ್ಲೂ ಕೂಡ ನಾನು ಆ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಆ ಬಗ್ಗೆ ಬೆಂಗಳೂರಿನಲ್ಲಾಗಲೀ, ಬಾಂಬೆಯಲ್ಲಾಗಲೀ, ದೆಹಲಿಯಲ್ಲಾಗಲೀ ಅಥವಾ ಎಲ್ಲೂ ಕೂಡ ಇವತ್ತಿನವರೆಗೆ ಮಾತನಾಡಿಲ್ಲ. ಎಲ್ಲಿ ಫಾರಿನ್‌ಗೆ ಹೋಗೇ ಇಲ್ಲ ಲಂಡನ್‌ಗೆ ಎಲ್ಲಿ ಹೋಗುವುದು . .

**ಅಧ್ಯಕ್ಷರು** : ತಾವು ಪ್ರಾರಂಭಿಸಿ ಈಗಾಗಲೇ ಅರ್ಧ ಗಂಟೆಯಾಯಿತು, ಬೇಗ ಮುಗಿಸಬೇಕು.

**ಶ್ರೀ ಸಿದ್ದರಾಮಯ್ಯ** : ಇರಲಿ, ಇರಲಿ, ನನ್ನ ಪ್ರಕರಣ ವಿಶೇಷವಾದಂಥಾದ್ದು. ದಯಮಾಡಿ ನನಗೆ ಸ್ವಲ್ಪ ಟೈಂ ಕೊಡಬೇಕು. ಈಗಾಗಲೇ ಸಾಕಷ್ಟು ಟೈಂ ಆಗಿಬಿಟ್ಟಿದೆ, ಇನ್ನೂ ಒಂದು ಗಂಟೆಯಾಗಲಿ, ತೊಂದರೆಯೇನೂ ಆಗುವುದಿಲ್ಲ, ಈ ರೀತಿಯ ಒಂದು ಬೆಳವಣಿಗೆಯಾಗಿದೆಯಲ್ಲಾ, ಅದರಿಂದ ನನಗೆ ಏಕೆ ನೋವಾಗುತ್ತದೆ ಎಂದರೆ, ಈಗ ದೇವೇಗೌಡರು ಏಕೆ ನೋವಿನಿಂದ ಹೇಳಿಕೊಳ್ಳುತ್ತಾರೆ? ಅವರು ಇದನ್ನು ಒಪ್ಪಿಕೊಂಡಿದ್ದಾರೆಯೇ ? ಅವರೂ ಬಹಳ ನೋವಿನಿಂದ ಹೇಳುತ್ತಿದ್ದಾರೆ, ಅನೇಕ ಕಡೆಗಳಲ್ಲಿ ಅತ್ತುಬಿಟ್ಟಿದ್ದಾರೆ. ಇವತ್ತು ಮೌಲ್ಯಗಳೆಲ್ಲಾ ಹಾಳಾಗಿ ಬಿಟ್ಟವೆ, ಇದೊಂದು ಕರಾಳ ದಿನ ಎಂದೆಲ್ಲಾ ಹೇಳಿದರು. ನನ್ನ ಜೀವನದಲ್ಲಿ ಇಂಥ ಪರಿಸ್ಥಿತಿ ಬರುತ್ತದೆ ಎಂದು ನಾನು ಎಣಿಸೇ ಇರಲಿಲ್ಲ ಎಂದು ಹೇಳಿದರು. ಅವರು ಏಕೆ ಆ ರೀತಿ ಹೇಳುತ್ತಿದ್ದಾರೆ ? ಏಕೆಂದರೆ, ನಾವು ಅವರೆಲ್ಲಾ ಸೇರಿ ಈ ಪಕ್ಷ ಕಟ್ಟಿದೆವು. ನಾನು ಐದು ವರ್ಷಗಳು ಈ ಪಕ್ಷದ ಅಧ್ಯಕ್ಷನಾಗಿ, ಇಡೀ ರಾಜ್ಯದಲ್ಲೆಲ್ಲಾ ನಾವೂ ಕೂಡ ಓಡಾಡಿದ್ದೇವೆ. ಪಕ್ಷ ಕಟ್ಟಲಿಕ್ಕೆ ಹಳ್ಳಿ ಹಳ್ಳಿಗಳಿಗೆ ಹೋಗಿದ್ದೇವೆ, ಪಕ್ಷ ಕಟ್ಟಿದ್ದೇವೆ. 1999 ರಲ್ಲಿ ಜೆ ಡಿ (ಯು) ಮತ್ತು ಜೆ ಡಿ (ಎಸ್) ಎಂದು ಆದಾಗ ಈ ಪಕ್ಷದಲ್ಲಿ ನಾವು ಕೇವಲ

ಬೆರಳೆಣಿಕೆಯಷ್ಟು ಜನ ಮಾತ್ರ ಇದ್ದೆವು. ಆಮೇಲೆ ಪ್ರಕಾಶ್ ಮತ್ತು ಸಿಂಧ್ಯಾರವರು ಜೆ.ಡಿ. (ಯು) ಬಿಟ್ಟು ನಮ್ಮ ಜೊತೆಗೆ ಬಂದರು. ಕೊನೆಗೆ ಮೂರು ಅಥವಾ ಎರಡು ತಿಂಗಳು ಇದ್ದಾಗ ಪಕ್ಷಕ್ಕೆ ಬಂದರು. ನಾವು ಅದಕ್ಕೋಸ್ಕರ ಅಧಿಕಾರದ ಹಿಂದೆ ಹೋಗಲಿಲ್ಲವೆಂದು ಇಡೀ ರಾಜ್ಯದಲ್ಲಿ ನಾವು ಹೇಳಿಕೊಂಡು ಬಂದಿದ್ದೇವೆ. ಜೆ.ಡಿ.(ಯು) ಜೊತೆಗೆ ಅದಕ್ಕೋಸ್ಕರ ಹೋಗಲಿಲ್ಲವೆಂದು ಹೇಳಿಕೊಂಡು ಬಂದಿದ್ದೇವೆ. ಇವತ್ತು ಅದೆಲ್ಲವನ್ನೂ ಸಂಪೂರ್ಣವಾಗಿ ಗಾಳಿಗೆ ತೂರಿಬಿಟ್ಟು ಈ ಪಕ್ಷ ಇವತ್ತು ನಾಶವಾಗತಕ್ಕಂಥ ಪರಿಸ್ಥಿತಿಗೆ ಬಂದಿದೆಯಲ್ಲಾ ಅದು ನಮಗೆ ನೋವು ಆಗುತ್ತಿದೆ ಶ್ರೀ ಎಂ.ಟಿ. ಕೃಷ್ಣಪ್ಪನವರೇ ಜೆ.ಡಿ.(ಎಸ್) ಆದಾಗ ನೀವು 1999 ರಲ್ಲಿ ಸದಸ್ಯರಾಗಿರಲಿಲ್ಲ, ಕಳೆದ ಚುನಾವಣೆಯಲ್ಲಿ ಕರ್ನಾಟಕದಲ್ಲಿ ೫೮ ಜನ ಗೆಲ್ಲಬೇಕಾದರೆ ನಾವು secularism ಅನ್ನು ಜನರ ಮುಂದೆ ಪ್ರತಿಪಾದನೆ ಮಾಡಿದ್ದೆವು. ಸಾಮಾಜಿಕ ನ್ಯಾಯವನ್ನು ಪ್ರತಿಪಾದನೆ ಮಾಡಿದ್ದೆವು. ಜನತಂತ್ರದ ವಿಕೇಂದ್ರೀಕರಣ ಎಂದು ಜನರ ಮುಂದೆ ಹೇಳಿದ್ದೆವು. ಬಡವರ ಪರವಾದಂಥ, ರೈತರ ಪರವಾದಂಥ ಕಾರ್ಯಕ್ರಮಗಳನ್ನು ಜನರಿಗೆ ಕೊಡುತ್ತೇವೆಂದು ಹೇಳಿದ್ದೆವು. ನಮ್ಮನ್ನು ನಂಬಿ ಈ ರಾಜ್ಯದ ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ರೈತರು ಎಲ್ಲಾ ಜಾತಿಯ ಜನ ನಮಗೆ ವೋಟು ಕೊಟ್ಟರು. ಒಂದು ವೇಳೆ ನಾವು ಅವತ್ತು ಈ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದರೆ ಅಥವಾ ಬಿ.ಜೆ.ಪಿ ಜೊತೆಗೆ ಹೋಗುತ್ತೇವೆನ್ನುವ ಮುನ್ಸೂಚನೆ ಕೊಟ್ಟಿದ್ದರೆ, ದಲಿತರಾಗಲೀ, ಹಿಂದುಳಿದವರಾಗಲೀ, ಅಲ್ಪಸಂಖ್ಯಾತರಾಗಲೀ ಈ ಪಕ್ಷಕ್ಕೆ ವೋಟು ಕೊಡುತ್ತಿರಲಿಲ್ಲ ಮತ್ತು ನಾವು ೫೮ ಜನ ಗೆಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಎನ್ನುವುದನ್ನು ನಾವು ಇವತ್ತು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ನೀವು ಬಿ.ಜೆ.ಪಿ. ಜೊತೆ ಹೋಗಿದ್ದೀರಲ್ಲಾ, ಇವತ್ತು ಅಲ್ಪಸಂಖ್ಯಾತರ ಹಾಗೂ ಹಿಂದುಳಿದವರ ಪರಿಸ್ಥಿತಿ ಏನು ? All minority people are panic today in the State. ಏನಾಗುತ್ತದೆ ಎನ್ನತಕ್ಕಂಥ ಭಯದಲ್ಲಿ ಇದ್ದಾರೆ. .. ನಿಮಗೆ ಏನಾಗುತ್ತದೆ? panic ನಲ್ಲಿದ್ದಾರೆ ಇವತ್ತು. ಇವತ್ತು ಆ ವರ್ಗದ ಜನರಿಗೆ ನಾವು ದ್ರೋಹ ಮಾಡಿ ಬಿ.ಜೆ.ಪಿ. ಜೊತೆಗೆ ಅಧಿಕಾರಕ್ಕೋಸ್ಕರ ಸರ್ಕಾರ ಮಾಡುತ್ತೇವೆಂದು ಹೇಳಿದರೆ ಇದು ಜನ ದ್ರೋಹ ಆಗುವುದಿಲ್ಲವೇ ? ಜನರ ಆದೇಶಕ್ಕೆ ವಿರುದ್ಧವಾಗಿ ನಾವು ನಡೆದುಕೊಂಡಿರುವುದಲ್ಲವೇ ? ಇದು ಇಲ್ಲಿ ಬಹಳ ಮುಖ್ಯವಾಗಿ ಚರ್ಚೆಯಾಗುತ್ತಿರತಕ್ಕಂಥದ್ದು, ಹೊರಗೆ ಜನ ಚರ್ಚೆ ಮಾಡುತ್ತಿರತಕ್ಕಂತದ್ದು. ರಾಜ್ಯದ ಜನತೆ ಇವತ್ತು ಇದನ್ನು ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಿದ್ದಾರೆ. ಅಧಿಕಾರಕ್ಕೋಸ್ಕರ, ಸ್ವಾರ್ಥಗೋಸ್ಕರ ಅವಕಾಶವಾದಿ ರಾಜಕಾರಣವನ್ನು ಬಿ.ಜೆ.ಪಿ. ಯವರು ಮತ್ತು ಜನತಾ ದಳ (ಎಸ್) ನ ಒಂದು ಗುಂಪಿನ ಜನ ಮಾಡುತ್ತಿದ್ದಾರೆಂದು ಇಡೀ ರಾಜ್ಯದಲ್ಲಿ ಇವತ್ತು ಎಲ್ಲರೂ ಮಾತನಾಡುತ್ತಿದ್ದಾರೆ.

ಶ್ರೀ ಎಂ.ಪಿ. ವೆಂಕಟೇಶ್‌: ನಿಮ್ಮನ್ನು ಕರೆದಿದ್ದರೆ ಬಿ.ಜೆ.ಪಿ.ಗೆ ಹೋಗಬಹುದಾಗಿತ್ತಾ ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಶ್ರೀ ವೆಂಕಟೇಶ್‌ರವರೇ, ಈ ಸಲ ನಿಮಗೆ ಟಿಕೇಟ್ ಕೊಡುವುದಕ್ಕೆ ಮುಂಚೆ ಹೇಗಿದ್ದಿರಿ ಎಂಬುದನ್ನು ಸ್ವಲ್ಪ ಜ್ಞಾಪಕ ಮಾಡಿಕೊಳ್ಳಿ. ಕುಳಿತುಕೊಳ್ಳಿರಿ. ಅದಕ್ಕಿಂತ ಹಿಂದೆ ಬಹಳ ಗೆದ್ದಿದ್ದೀರಿ. ಕುಳಿತುಕೊಳ್ಳಿರಿ. ಆವತ್ತು ಟಿಕೇಟ್ ಕೊಡುವ ದಿನ ಆವತ್ತು ಏನಾಗಿತ್ತು ಎಂಬುದನ್ನು ಸ್ವಲ್ಪ ಜ್ಞಾಪಕ ಮಾಡಿಕೊಳ್ಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ನೀವು ಯಾರು ಪಾರ್ಟಿ ಕಟ್ಟಿದವರಲ್ಲ. ನಿಮಗೆ ಪಕ್ಷದ ಸಿದ್ಧಾಂತ ಗೊತ್ತಿಲ್ಲ. ಯಾವ್ಯಾವ ಪಾರ್ಟಿಗಳು ಯಾವ್ಯಾವ ಪಾರ್ಟಿಗೆ ಹೋಗುತ್ತೀರಿ, ಯಾವ ಪಕ್ಷ, ಸಿದ್ಧಾಂತ ನಿಮಗೆ ಏನು ಗೊತ್ತಿದೆ ?

(ಗೊಂದಲ)

**ಅಧ್ಯಕ್ಷರುಃ** ಮಾನ್ಯ ಸಿದ್ಧರಾಮಯ್ಯನವರೆ, ನೀವು ಇವತ್ತಿನ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರೂ ವಿಚಾರ ಇದ್ದರೆ ಪ್ರತಿಪಾದನೆ ಮಾಡಿ. ಏತಕ್ಕೆ ವೈಯಕ್ತಿಕವಾಗಿ ಮಾತನಾಡುತ್ತೀರಿ ? No. ದಯಮಾಡಿ ಇವತ್ತಿನ ಪ್ರಸ್ತುತ ವಿಚಾರದ ಬಗ್ಗೆ ಮಾತನಾಡಿ.

(ಗೊಂದಲ)

**ಶ್ರೀ ಸಿದ್ಧರಾಮಯ್ಯಃ** ಮಾನ್ಯ ಅಧ್ಯಕ್ಷರೆ, ನಾನು ವೈಯಕ್ತಿಕವಾಗಿ ಯಾರ ಮೇಲೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇರುವ ವಿಚಾರ ಹೇಳಿದೆ ಅಷ್ಟೆ. Interfere ಆಗದೇ ಹೋದರೆ ಅದನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ವರೆಗೆ ಆ ವಿಚಾರದಲ್ಲಿ ಯಾರ ಬಗ್ಗೆಯೂ ನಾನು ಮಾತನಾಡುವುದಕ್ಕೆ ಹೋಗಿಲ್ಲ. ನಾನು ಮಾತನಾಡುವುದು issues ಮೇಲೆ, events ಮೇಲೆ, ಮತ್ತು ideology ಮೇಲೆ ಮಾತನಾಡುತ್ತಿದ್ದೇನೆ ಹೊರತು ವೈಯಕ್ತಿಕವಾಗಿ ನನಗೆ ಯಾರ ಮೇಲೂ ದ್ವೇಷವಿಲ್ಲ. ಏಕೆಂದರೆ, ಯಾರೂ ಕೂಡ ರಾಜಕಾರಣ ಮಾಡುವುದಕ್ಕೆ ನಮಗೆ ಆಹ್ವಾನ ನೀಡಿರಲಿಲ್ಲ. ನಾವು ನಮ್ಮ ತೆವಲಿಗೋಸ್ಕರ ಈ field ಗೆ ಬಂದಿದ್ದೇವೆ. ನಾವು ಒಂದು commitment ಎಂದು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಅದರಿಂದ, ನಾವು ಯಾವ್ಯಾವುದೋ ಕಾರಣಕ್ಕೋಸ್ಕರ ಏನೇನೋ ಮಾಡುವುದಕ್ಕಾಗುವುದಿಲ್ಲ. ಈ ಪಕ್ಷವನ್ನು ಕಟ್ಟಲಿಕ್ಕೆ ನಾವೆಲ್ಲಾ ಪ್ರಯತ್ನ ಮಾಡಿದ್ದೇವೆ. ೫೮ ಜನರನ್ನು ಗೆಲ್ಲಿಸಲಿಕ್ಕೆ ಇಡೀ ಹಿಂದುಳಿದವರು, ಅಲ್ಪಸಂಖ್ಯಾತರು, ದಲಿತರು, ಹೀಗೆ ಎಲ್ಲರೂ ನಮಗೆ ವೋಟು ಕೊಟ್ಟಿದ್ದಾರೆ. 'ಇವರು ಅಹಿಂದಾ ಸಮಾವೇಶಕ್ಕೆ ಹೋದರು, ಅದರಲ್ಲಿ ನಮ್ಮ ವೈರಿಗಳೆಲ್ಲಾ ಇದ್ದುಬಿಟ್ಟಿದ್ದರು, ಅದಕ್ಕಾಗಿ ಸಿದ್ದರಾಮಯ್ಯನವರ ಮೇಲೆ ಕ್ರಮ ತೆಗೆದುಕೊಂಡೆವು ' ಎಂದು ಇಲ್ಲಿ ಬಹಳ ಜನ ಪ್ರಸ್ತಾಪ ಮಾಡಿ ಹೇಳಿದರು. ಅಹಿಂದಾ ಸಮಾವೇಶ ಅನ್ನತಕ್ಕಂಥದ್ದು – ನಾನೇನು ಅಹಿಂದಾವನ್ನು ಹುಟ್ಟು ಹಾಕಿದಂಥದ್ದು ಅಲ್ಲ. ಅದು 1998 ನೇ ಇಸವಿಯಲ್ಲಿ ಹುಟ್ಟಿತು. ಕೋಲಾರದಲ್ಲಿ ಇದು 1998 ರಲ್ಲಿ ಮೊದಲನೇ ಸಮಾವೇಶ ಆಗಿರುವಂಥದ್ದು. ಅವತ್ತು ನಾನು, ಶ್ರೀ ಜಾಲಪ್ಪನವರು, ಬೇರೆ ಬೇರೆ ಪಕ್ಷದವರು ಎಲ್ಲಾ ಅದರಲ್ಲಿ ಸೇರಿದ್ದೆವು. 1998 ರಲ್ಲಿ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದರು. ಅವತ್ತು ನಾನು ಉಪ ಮುಖ್ಯಮಂತ್ರಿಯಾಗಿದ್ದೆ. ಅವತ್ತು ಶ್ರೀ ದೇವೇಗೌಡರೂ ಸಹ ಪಾರ್ಟಿಯಲ್ಲಿದ್ದರು. ಅವತ್ತು ಅದು indiscipline ಆಗಲಿಲ್ಲವೇ ? ಆವತ್ತು ಅದು ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾಗಿಲ್ಲವೇ? ಹುಬ್ಬಳ್ಳಿಯಲ್ಲಿ ಅಹಿಂದಾ ಸಮಾವೇಶ ಮಾಡಿದರು, ಅಲ್ಲಿ ನಾನು ಭಾಗವಹಿಸಿದೆ ಅನ್ನುವುದೇ ಒಂದು ನೆಪ ಅಷ್ಟೆ. ಅದೊಂದು ನೆಪವಾಯಿತಷ್ಟೆ. ನಾನು ಮಾಡಿದ ಅಪರಾಧವೇನು? ಏನೂ ಅಪರಾಧ ಮಾಡಿರಲಿಲ್ಲ. ಎರಡು ಬಜೆಟ್ ಮಂಡಿಸಿ ಹಣಕಾಸು ಮಂತ್ರಿಯಾಗಿ 14 ತಿಂಗಳು ಉಪಮುಖ್ಯಮಂತ್ರಿಯಾಗಿ ಈ ರಾಜ್ಯದ ಜನತೆಗೆ ದ್ರೋಹ ಮಾಡತಕ್ಕಂಥ ಯಾವ ಕೆಲಸವನ್ನೂ ಮಾಡಲಿಲ್ಲ ಅಥವಾ ಸಂಪನ್ಮೂಲ ಕ್ರೋಢೀಕರಣ ಮಾಡುವುದರಲ್ಲಿ ಬಹಳ ವಿಫಲವಾಗಿಬಿಟ್ಟಿದ್ದೇನೆಂದು

ಇಡೀ ರಾಜ್ಯದ ಜನ ಅದನ್ನೇನೂ ಹೇಳಲಿಲ್ಲ. ಆರ್ಥಿಕ ತಜ್ಞರು ಅದರ ಬಗ್ಗೆ ಆ ತರಹದ್ದು ಏನೂ ಬರೆಯಲಿಕ್ಕೆ ಹೋಗಲಿಲ್ಲ. As a matter of fact, ನಾನು ಹಣಕಾಸು ಮಂತ್ರಿಯಾಗಿದ್ದಾಗ ಎರಡು ಸಲ Planning Commission ನವರು Fiscal incentives ಕೊಟ್ಟಿದ್ದಾರೆ. ೨೬೦ ಕೋಟಿ ರೂಪಾಯಿಗಳು, ೨೬೦ ಕೋಟಿ ರೂಪಾಯಿಗಳು ಎರಡು Fiscal incentives ಕೊಟ್ಟಿದ್ದಾರೆ. ಸುಮ್ಮ ಸುಮ್ಮನೆ Planning Commission ನವರು ಕೊಡುತ್ತಾರೆಯೇ ? ನಾನು ಏನೂ ತಪ್ಪೇ ಮಾಡಿರಲಿಲ್ಲ. ಪಾಪ, ಶ್ರೀ ಸಿಂಧ್ಯಾರವರಿಗೆ ಬಜೆಟ್ ಮಂಡನೆ ಮಾಡಲಿಕ್ಕೇ ಬಿಟ್ಟಿಲ್ಲವಲ್ಲಾ. ಯಾವುದು ಬಜೆಟ್ ಇಡೀ ರಾಜ್ಯದಲ್ಲಿ ಎಲ್ಲಾ ಮೂಲೆಗಳಿಂದ ಎಲ್ಲಾ ವರ್ಗಗಳಿಂದ ಅದು ಉತ್ತಮವಾದಂಥ ಬಜೆಟ್ ಎಂದು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅದರಿಂದೇನೂ ನಾನು ಬಹಳ ಉಬ್ಬಿಹೋಗಿಬಿಟ್ಟಿದ್ದೇನೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇರತಕ್ಕಂಥ ಸಂಪನ್ಮೂಲಗಳ ಇತಿಮಿತಿಯಲ್ಲಿ ಒಳ್ಳೆಯ ಆಯವ್ಯಯ ಮಂಡಿಸಿದ್ದಾರೆಂದು Planning Commission ನವರು ಹೇಳಿದರು, ಕೇಂದ್ರದ ಹಣಕಾಸು ಮಂತ್ರಿಗಳಾದ ಶ್ರೀ ಚಿದಂಬರಂ ರವರೂ ಸಹ ಹೇಳಿದ್ದರು. ಅದೇ ರೀತಿ ಅನೇಕ ಜನ ಆರ್ಥಿಕ ತಜ್ಞರು ಕೂಡ ಹೇಳಿದ್ದಾರೆ. ಅದರ ಬಗ್ಗೆ ನಾನು ಬಹಳ ವಿಸ್ತಾರ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ನನ್ನನ್ನು Leader of Legislature party ಯಿಂದ ತೆಗೆದರು. ನನಗೆ ಒಂದು Notice ಸಹ ಕೊಡದೆ ಹಾಗೆಯೇ ತೆಗೆದುಹಾಕಿಬಿಟ್ಟರು. ಅದಕ್ಕಾಗಿಯೇ ನನಗೆ ಆದಂತೆ ಶ್ರೀ ಪ್ರಕಾಶ್‌ರವರಿಗೂ ಕೂಡ ಆಗಬಾರದೆಂದು ನಾನು ಹಿಂದಿನ ಸಭೆಯಲ್ಲಿ ಹೇಳಿದ್ದೆ. ಅದೇನೋ ಪ್ರಕಾಶ್‌ರವರನ್ನು ಸಿಂಧ್ಯಾರವರು ನಮ್ಮ ಲೀಡರ್ ಎಂದು ಹೇಳುತ್ತಾರೆ ಆದರೆ ಮಾನ್ಯ ಪ್ರಕಾಶ್‌ರವರು ಏಕೋ ನನಗೆ ಬೇಡ ಎಂದು ಹೇಳುತ್ತಿದ್ದಾರೆ.ಹೋಗಲಿ ಬಿಡಿ. ಅವರಾಗಿಯೇ ಬೇಡ ಎಂದು ಹೇಳಿದರೆ ನಾವೇನು ಮಾಡುವುದಕ್ಕಾಗುತ್ತದೆ? ಈಗ ನಾನು ಯಾವ ಕುರಿಯನ್ನೂ ಅವರಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರೇ ಒಪ್ಪಿಕೊಳ್ಳುತ್ತಿರುವಾಗ ನಾನ್ಯಾಕೆ ಕುರಿ ಎಂದು ಅವರಿಗೆ ಹೇಳಲಿ. . . . ಪಾಪ, ಅವರು ಅವರ ಅಭಿಪ್ರಾಯ ಹೇಳಿದ್ದಾರೆ. ನನ್ಯಾಕೆ ಅವರ ಅಭಿಪ್ರಾಯದ ವಿರುದ್ಧವಾಗಿ ಹೋಗಲಿ ? ಅವರು -- ಎಂಎಲ್‌ಎಗಳು ಹೆಚ್ಚಾಗಿ ಅವರ ಕಡೆಗೆ ಹೋಗಿಬಿಟ್ಟಿದ್ದಾರೆ ನಾನೇನು ಮಾಡುವುದಕ್ಕಾಗುತ್ತದೆ? ನಾನು Whip ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. Whip ಕೊಟ್ಟಿದ್ದರೆ ಅದರ ಕಥೆ ಬೇರಯೇ ಆಗುತ್ತಿತ್ತು. Legal ಆಗಿ ಅದು ಬೇರೆ ತರಹ ಆಗುತ್ತಿತ್ತು. ಆದರೆ ನನಗೆ ಆದ ಹಾಗೆ ಆಗಬಾರದೆಂದು ಹೇಳಿದಾಗ ಅದು ನಿಮ್ಮ ನಿರ್ಣಯವನ್ನು question ಮಾಡುತ್ತೇನೆಂಬ ಅಭಿಪ್ರಾಯ ಅಲ್ಲ. Question ಮಾಡಲಿಕ್ಕೆ ನಾನು ಹೋಗಲೇ ಇಲ್ಲ. Court ಗೂ ಹೋಗಲಿಲ್ಲ. ಆ Chair ಗೆ ಗೌರವ ಕೊಟ್ಟು ನಾನು ಎಲ್ಲಿಗೂ ಹೋಗಲಿಲ್ಲ. ಆದರೆ ಅದು ಆಗಬಾರದು. ಹಾಗಾದರೆ ಒಂದು ಪಕ್ಷದ ಕಾನೂನು ನಿಯಮಾವಳಿಗಳು ಇವೆಲ್ಲವುಗಳನ್ನು ಮಾಡಿಕೊಳ್ಳುವುದು ಏಕೆ ? ಹಾಗಾದರೆ ಬಿ.ಜೆ.ಪಿ. ನಾವೆಲ್ಲಾ ಸೇರಿಕೊಂಡು majority ಇದೆಯೆಂದು Governor ಹತ್ತಿರ ಹೋಗಿ ಇವರು ಕೊಟ್ಟರು. ಹಾಗಾದರೆ ಇಲ್ಲಿ ಸಾಬೀತಾಗಬೇಕೆಂದು ಏಕೆ ಹೇಳಿದರು ? On the floor of House ಸಾಬೀತಾಗಬೇಕೆಂದು Governor ಏಕೆ ಹೇಳಿದರು ? ಹಾಗೆಯೇ ಕೊಟ್ಟುಬಿಡಬಹುದಾಗಿತ್ತಲ್ಲವೇ ? ನಮಗೆ majority ಇದೆ, ನಮಗೆ ಈಗಲೇ ಸರ್ಕಾರ ರಚಿಸುವುದಕ್ಕೆ invite ಮಾಡಿ ಎಂದು ಹೇಳಿದ ತಕ್ಷಣ Governor ರವರು invite ಮಾಡಬಹುದಾಗಿತ್ತಲ್ಲವೇ?

ಆದರೆ ಹಾಗೆ ಮಾಡಲಿಲ್ಲ. On the floor of the House majority ಇದೆಯೋ ಇಲ್ಲವೋ ಎನ್ನುವುದನ್ನು ನೀವು prove ಮಾಡಬೇಕೆಂದು ಹೇಳಿದರು. ಹಾಗೆಯೇ ನಾವು ನಿಯಮಾವಳಿಗಳಲ್ಲಿ ಶ್ರೀ ಪ್ರಕಾಶ್‌ರವರನ್ನು ತೆಗೆಯುವುದಕ್ಕಾಗಲೀ ನನ್ನನ್ನು ತೆಗೆಯಲಿಕ್ಕಾಗಲೀ ನಮಗೆ ಒಂದೂ notice ಇಲ್ಲ. Legislature Party Leader meeting ಕರೆಯಬೇಕೆಂದು ಕಾನೂನಿನಲ್ಲಿ ಇದ್ದರೂ ಕೂಡ ಆ ಕಾನೂನೇ ಇಲ್ಲ.। ದಬಾದುಬಿ ಮಾಡಿ ಸಿದ್ದರಾಮಯ್ಯನವರನ್ನು ತೆಗೆದುಹಾಕಿದ್ದೇವೆ, ಪ್ರಕಾಶ್‌ರವರನ್ನು ಮಾಡಿದ್ದೇವೆ, ಈಗ ಕುಮಾರಸ್ವಾಮಿಯವರನ್ನು Leader ಮಾಡಿದ್ದೇವೆ ಎಂ.ಪಿ. ಪ್ರಕಾಶ್‌ರವರನ್ನು ತೆಗೆದುಹಾಕಿದ್ದೇವೆ ಎಂದು ಹೀಗೆ ಹೇಳಿಬಿಟ್ಟರೆ ಮುಗಿದೇ ಹೋಯಿತು. ಇವೆಲ್ಲಾ ಕರ್ನಾಟಕದ ಚರಿತ್ರೆಯಲ್ಲಿ ಹೋಗುತ್ತದೆ. ಇಂಥ ಸಂಪ್ರದಾಯಗಳು, ಇಂಥ ಪರಂಪರೆಗಳು, ಆಗಬಾರದೆನ್ನತಕ್ಕಂಥದ್ದೇ ನಮ್ಮೆಲ್ಲರ ಉದ್ದೇಶವಾಗಿದೆ. ಯಾರು ಮುಖ್ಯಮಂತ್ರಿಗಳು ಆಗುತ್ತಾರೆ ಯಾರು ಆಗುವುದಿಲ್ಲವೆನ್ನುವುದು ಮುಖ್ಯವಲ್ಲ. ಮುಖ್ಯಮಂತ್ರಿ ಆಗುವವರು ಆಗಲಿ. ಕುಮಾರಸಾಮಿಯವರು ಮುಖ್ಯಮಂತ್ರಿ ಆಗುವುದನ್ನೂ ಯಾರೂ ತಡೆಯುವುದಕ್ಕಾಗುವುದಿಲ್ಲ. ಇಲ್ಲಿ ಸ್ಪೀಕರ್‌ರವರು ಅವರನ್ನು leader ಎಂದು ಹೇಳಿಬಿಟ್ಟಿದ್ದಾರೆ. ಪ್ರಮಾಣವಚನ ತೆಗೆದುಕೊಂಡು ಆಗಿಬಿಟ್ಟಿದೆ. ಇಲ್ಲಿ Majority ಸಹ ಆಗುತ್ತದೆ. ಮುಖ್ಯಮಂತ್ರಿ ಆಗುತ್ತಾರೆ. ಅದನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. ಅದಕ್ಕೆ ಅಸೂಯೆ ಪಡಬೇಕಾದದ್ದು ಏನೂ ಇಲ್ಲ. ಆದರೆ ನಾವೇ ನಿರ್ಮಾಣ ಮಾಡಿರತಕ್ಕಂಥ ಕಾನೂನುಗಳು ನಾವೇ ಒಪ್ಪಿಕೊಂಡಿರತಕ್ಕಂತ ಮೌಲ್ಯಗಳು ನಾವೇ ಒಪ್ಪಿಕೊಂಡಿರತಕ್ಕಂತ ಸಿದ್ಧಾಂತಗಳನ್ನು ಅಧಿಕಾರಕ್ಕೋಸ್ಕರ ಗಾಳಿಗೆ ತೂರಿ ಅದನ್ನು ಸ್ವಾರ್ಥಕ್ಕೋಸ್ಕರ ಅಧಿಕಾರಕ್ಕೋಸ್ಕರ ಹಿಚುಕಿ ಹಾಕುತ್ತೇವೆಂದು ಮಾಡತಕ್ಕಂಥ ಕೆಲಸ ಇದೆಯಲ್ಲಾ ಇದನ್ನು ಕರ್ನಾಟಕದ ಜನರು ಯಾವ ಕಾರಣಕ್ಕೂ ಸಹಿಸುವುದಿಲ್ಲ, ಕ್ಷಮಿಸುವುದಿಲ್ಲವೆನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ತಮಗೆ ತಿಳಿಸಬಯಸುತ್ತೇನೆ. ಇನ್ನು ಇವರು ಕಾನೂನು ವಿಚಾರ ಎತ್ತಿರತಕ್ಕಂಥದ್ದು ಬೇರೆ ವಿಚಾರ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾನ್ಸ್‌ಟಿಟ್ಯೂಷನ್‌ನಲ್ಲಿ ಬಹಳ ವ್ಯಾಲಿಡ್ ಪಯಿಂಟ್ ರೈಸ್ ಮಾಡಿದ್ದಾರೆ. ಅದು ನಿಮ್ಮ ಮುಂದಿದೆ. ನೀವು ತೀರ್ಪು ಕೊಡಬೇಕು. ಅದು ಸ್ವಲ್ಪ ತ್ವರಿತವಾಗಿ ಕೊಟ್ಟರೆ ಬಹಳ ಒಳ್ಳೆಯದು ಅಂತ ಅನ್ನತಕ್ಕಂಥದ್ದು ನನ್ನ ಮನವಿ ಬಹಳ ತ್ವರಿತವಾಗಿ ಕೊಟ್ಟರೆ ಆ ಹೈಕೋರ್ಟ್ ಡಿಸಿಷನ್ ಕೂಡ ಅದೇ ತರಹ ಇದೆ. ತ್ವರಿತವಾಗಿ ಕೊಟ್ಟರೆ ಬಹಳ ಒಳ್ಳೆಯದು ಅಂತ ಅನ್ನತಕ್ಕಂಥದ್ದು ನನ್ನ ಭಾವನೆ. ಆದರೆ, ಅಹಿಂದದಲ್ಲಿ ನಾನು ಭಾಗವಹಿಸಿದೆ ಎಂದು ಹೇಳಿ ನನಗೆ ಎಲ್ಲಾ ಡಿಸಿಪ್ಲಿನರಿ ಆಕ್ಷನ್‌ಗಳು ಕೂಡ ಆಗುತ್ತವೆ. ಪಕ್ಷದಿಂದ ಸಸ್ಪೆಂಡ್ ಮಾಡಿದ್ದೇವೆಂದು ಹೇಳಿ ನನಗೇನೂ ನೋಟೀಸ್ ಬರಲಿಲ್ಲ. ಲೀಡರ್ ಆಫ್ ಲೆಜಿಸ್ಲೇಚರ್ ಪಾರ್ಟಿಯಿಂದ ತೆಗೆದು ಹಾಕಿದರು. ಅದಕ್ಕೂ ನಾನು ಏನು ಮೀಟಿಂಗ್ ಕರೆಯಬೇಕಾಗಿತ್ತು. ಆ ಮೀಟಿಂಗ್ ಕರೆಯುವುದಕ್ಕೂ ಆಗಲಿಲ್ಲ, ಮಾಡಲಿಲ್ಲ. ನನ್ನ ಮೇಲೆ ಅವಿಶ್ವಾಸ ನಿರ್ಣಯವನ್ನೂ ಕೂಡ ತರಲಿಲ್ಲ. ಈಗ ಕುಮಾರಸ್ವಾಮಿಯವರು ಮತ್ತು ಇವರು ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾಗಿ, ಪಕ್ಷದ ಆದೇಶಕ್ಕೆ ವಿರುದ್ಧವಾಗಿ, ಜನರ ಆದೇಶಕ್ಕೆ ವಿರುದ್ಧವಾಗಿ ಗೌರ್ನರ್ ಹತ್ತಿರ ಹೋದವರು ಇನ್ನೂ ಸರ್ಕಾರದಲ್ಲೇ ಇದ್ದಾರೆ. ಸರ್ಕಾರದಿಂದ ಹೊರಗಡೆ ನಾವು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಪತ್ರ ಕೊಡತಕ್ಕಂಥದ್ದು ಅದು does it not amount to indiscipline ? ಒಂದು ವೇಳೆ, ದೇವೇಗೌಡರು ನನ್ನ ಮೇಲೆ ಕ್ರಮ ಏನು ತೆಗೆದುಕೊಂಡರು. ಅದೇ ಕ್ರಮವನ್ನು

ಕುಮಾರಸ್ವಾಮಿಯವರ ಮೇಲೆ ತೆಗೆದುಕೊಂಡಿದ್ದರೆ, ಇವತ್ತು ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಕರ್ನಾಟಕದಲ್ಲಿ, ಏಕೆ ತೆಗೆದುಕೊಳ್ಳಲಿಲ್ಲ ? ದೇವೇಗೌಡರ ಗೌರ್ನರ್‌ರವರಿಗೆ (ರಾಜ್ಯಪಾಲರಿಗೆ) ಪತ್ರ ಬರೆದಿದ್ದಾರೆ. A few MLAs- that is the word used by Mr.Devegowda. That is the word used in his letter by Devegowda. ಅದು ನಾನು ಹೇಳಿರುವುದಲ್ಲ. ನಾನು ಪತ್ರವನ್ನು ಅವತ್ತು ಓದಿದೆ ಇಲ್ಲಿ. ಅವರೇ, ದೇವೇಗೌಡರೇ ಹೇಳಿರುವುದು. ಪದಗಳು ನನ್ನವಲ್ಲ. ನಾನು ಇವತ್ತೂ ಪ್ರಕಾಶ್‌ರವರೇ ನಮ್ಮ ಲೀಡರ್ ಎಂದು ಹೇಳುತ್ತಿದ್ದೇನೆ. ಪ್ರಕಾಶ್‌ರವರೇ ನಮ್ಮ ಲೀಡರ್. not Mr. Kumara Swamy. ನಾನು ಹೇಳಿದ್ದಲ್ಲ ದೇವೇಗೌಡರು ಹೇಳಿದ್ದು.

**SRI K.R. RAMESH KUMAR** : we are all his well-wishers.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಅವರು ಹೇಳಲಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಈಗ ನಾಯಕರು ಎಂದು ಹೇಳಿ ನೀವು ಹೇಳಿದ್ದಕ್ಕೆ ಧನ್ಯವಾದಗಳು. ಆದರೆ, ತಿರುಗಿ ನೋಡುತ್ತೇನೆ ನನಗೆ ಹಿಂಬಾಲಕರೇ ಇಲ್ಲ. ನಾಯಕರಾಗುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾನು ಅವರು ಹೇಳುವವರೆಗೆ ಹಾಗೆ ಅಂದುಕೊಂಡಿದ್ದೆ. ಅವರೇ ಲೆಜಿಸ್ಲೇಚರ್ ಪಾರ್ಟಿ ಲೀಡರ್ ಎಂದು ಅಂದುಕೊಂಡಿದ್ದೆ. ಈಗ ಅವರು ಹೇಳಿದ ನಮೇಲೆ ಬಿಟ್ಟುಬಿಟ್ಟೆ. ಅವರೇ ಕೈಬಿಟ್ಟು ಬಿಟ್ಟಿದ್ದಾರೆ ನನಗೇಕಪ್ಪ ಎಂದು ಇದು ಎಂದು ಬಿಟ್ಟೆ. ನಾನು ಈಗ ಬಿಟ್ಟುಬಿಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವಾದರೂ ಒಬ್ಬರು ಹಿಂಬಾಲಕರಾಗಿದ್ದಿರಿ.

ಶ್ರೀ ಸಿದ್ಧರಾಮಯ್ಯ : ಇಲ್ಲ, ನಾವೆಲ್ಲಾ ಇದ್ದೆವು.

ಶ್ರೀ ವಾಟಾಳ್ ನಾಗರಾಜ್ : ಅವರು ನನಗೆ ಯಾರೂ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಸಿದ್ಧರಾಮಯ್ಯ : ನಾವೆಲ್ಲಾ ೧೦–೧೫ ಜನ ಅವರಿಗೆ ಇದ್ದೆವು.

ಶ್ರೀ ವಾಟಾಳ್ ನಾಗರಾಜ್ : ಯಾರೂ ಇಲ್ಲ ಎಂದು ಹೇಳುತ್ತಾರೆ.

(ಗೊಂದಲ)

ಈಗ ನೀವೂ ಅದನ್ನೂ ಕಳೆದುಕೊಂಡುಬಿಟ್ಟಿರಿ.

ಶ್ರೀ ಸಿದ್ಧರಾಮಯ್ಯ : ಅಲ್ಲಲ್ಲ, ವಾಟಾಳ್‌ರವರೆ, . . .

ಅಧ್ಯಕ್ಷರು : ಸಿದ್ಧರಾಮಯ್ಯನವರೆ, ದಯಮಾಡಿ ಬೇಗ ಮುಗಿಸಿ.

ಶ್ರೀ ಸಿದ್ಧರಾಮಯ್ಯ : ನಾವೆಲ್ಲಾ ಅವರಿಗೆ 10–15 ಜನ ಇದ್ದೆವು.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಸಿದ್ಧರಾಮಯ್ಯ : ಪಾಪ, ಅವರು ನನಗೆ ಯಾರೂ ಇಲ್ಲವೆಂದು ಅವರೇ ಭಾವಿಸಿಕೊಂಡುಬಿಟ್ಟಿದ್ದಾರೆ. ಇವತ್ತು ಅತ್ಯಂತ ದುರಂತ ನಾಯಕ ಇವರು. ನಾನು ಹೇಳಿದೆ ನಮ್ಮ ಲೀಡರ್ ನೀವು ಪ್ರಕಾಶ್, ನಾನೇ ಒಪ್ಪಿಕೊಳ್ಳುತ್ತಿದ್ದೇನಪ್ಪ ಲೀಡರ್ ನಮ್ಮನ್ನು ತೆಗೆದುಹಾಕಿ ನೀವು ಬಂದಿದ್ದರೂ ಪರವಾಗಿಲ್ಲ, ನೀವೇ ನಮ್ಮ ಲೀಡರ್ ಎಂದು ಒಪ್ಪಿಕೊಂಡೆ. ಪಾಪ, ಸಿಂಧ್ಯಾ ಕೂಡ ಇವತ್ತು ಏನೋ ಗಟ್ಟಿಯಾಗಿ ನಮ್ಮ ಲೀಡರ್ ಅವರೇ ಎಂದು ಹೇಳಿದರು. ಈಗ ಮದುವೆ ಗಂಡೆ

ಬೇಡ ಎಂದಾಗ ನಾವೇನು ಮಾಡುವುದಕ್ಕಾಗುತ್ತದೆ ? ನಮಗೇನೂ ಬೇಡ ಎಂದು ಕುಳಿತುಕೊಂಡಾಗ ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ಇವತ್ತು ಹೇಗೆ ದೇವೇಗೌಡರು ಉಲ್ಲೇಖ ಮಾಡಿರತಕ್ಕಂಥ ಪದಗಳನ್ನು ಮಾತ್ರ ಹೇಳಿದ್ದೇನೆಯೇ ಹೊರತು ನಾನು ಬೇರೆ ಏನೂ ಹೇಳಿಲ್ಲ. ದೇವೇಗೌಡರು ರಾಜ್ಯಪಾಲರಿಗೆ ಬರೆದಿರತಕ್ಕಂಥ ಪತ್ರದಲ್ಲಿ ಅವರು, ಪ್ರಕಾಶ್‌ರವರು ಲೆಜಿಸ್‌ಲೇಚರ್ ಪಾರ್ಟಿ ಲೀಡರ್, ಇನ್ನೂ ಅವರೇನೇ ಲೀಡರ್, ಕುಮಾರಸ್ವಾಮಿಯವರನ್ನು ಲೀಡರ್ ಎಂದು ನೀವು ರೆಕಗ್ನೈಸ್ ಮಾಡಬೇಡಿ. ಅದು ಅವರು ಒಂದು ಗುಂಪು ಕೊಟ್ಟಿರತಕ್ಕಂಥ ಪತ್ರಕ್ಕೆ ಯಾವುದೇ ಮಾನ್ಯತೆ ಕೊಡಬೇಡಿ – ಎಂದು ಹೇಳಿ ರಾಷ್ಟ್ರೀಯ ಅಧ್ಯಕ್ಷರು ಬರೆದಿರತಕ್ಕಂಥದ್ದು. ಅದಕ್ಕೆ ಇವತ್ತು ಇಡೀ ರಾಜ್ಯದಲ್ಲಿ ಜನ ಈ ವಿಭಿನ್ನವಾದಂಥ ನಡವಳಿಕೆಗಳಿದ್ದಾವಲ್ಲಾ, ನನಗೊಂಥು ರೀತಿ ಟ್ರೀಟ್‌ಮೆಂಟ್, ಕುಮಾರಸ್ವಾಮಿಯವರಿಗೊಂದು ತರಹ ಟ್ರೀಟ್‌ಮೆಂಟ್. ಈ ಟ್ರೀಟ್‌ಮೆಂಟ್ ಎಲ್ಲಾ ನೋಡಿದ ಮೇಲೆಯೇ ಇವತ್ತು ರಾಜ್ಯದ ಜನತೆಗೆ ಎಲ್ಲೋ ಒಂದು ಕಡೆ ದೇವೇಗೌಡರದು ಅವರಿಗೆ ಆಶೀರ್ವಾದ ಇದೆ ಎನ್ನತಕ್ಕಂಥದ್ದು ಜನಜನಿತವಾಗಿಬಿಟ್ಟಿದೆ. ನಾವು ಹೇಳುವುದಲ್ಲ. ನಾನು ಹೇಳಿರುವುದಲ್ಲ. ಇಡೀ ರಾಜ್ಯದ ಜನ ಹಾಗೆ ಮಾತನಾಡುತ್ತಿದ್ದಾರೆ. ಏಕೆಂದರೆ, ೧೮ನೇ ರಾರೀಖಿನಿಂದ ಇವತ್ತಿನವರೆಗೆ 3ನೇ ತಾರೀಖಿನವರೆಗೆ ಸ್ಪೀಕರ್‌ರವರು ಇಲ್ಲಿ ಲೀಡರ್ ಆಫ್ ದಿ ಲೆಜಿಸ್ಲೇಚರ್ ಪಾರ್ಟಿ ಎಂದು ಡಿಕ್ಲೇರ್ ಮಾಡುವವರೆಗೆ ಯಾವುದೇ ಒಂದು ಯಾರ ಮೇಲೂ ಕೂಡ ಒಂದು ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಲಿಲ್ಲ. ಒಬ್ಬರ ಮೇಲೂ ಕುಮಾರಸ್ವಾಮಿಯವರ ಮೇಲಾಗಲಿ, ಅಥವಾ ಬೇರೆ ಯಾರಾದರೂ ಎಂಎಲ್‌ಎಗಳ ಮೇಲಾಗಲಿ ಅಲ್ಲಿಗೆ ಹೋಗಿದ್ದವರ ಯಾರ ಮೇಲೂ ಕೂಡ ಡಿಸಿಪ್ಲೀನರಿ ಆಕ್ಷನ್ ತೆಗೆದುಕೊಳ್ಳಲಿಲ್ಲ. ತಿಪ್ಪಣ್ಣರವರು ಅಧ್ಯಕ್ಷರು. ಅವರು, he was nominated by Mr. Devegowda, National President within a minute he would have been removed, because he was appointed by Mr. Devegowda.

**ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು** : ಇದು ನ್ಯಾಷನಲ್ ಪಾರ್ಟಿ ರೆಕಗ್ನೇಷನ್ ಆಗಿದೆಯೇ ಅಥವಾ ರಾಜ್ಯ ಮಟ್ಟದಲ್ಲಿ . . .

(ಗೊಂದಲ)

**ಶ್ರೀ ಸಿದ್ಧರಾಮಯ್ಯ** : ಅದು ನಮ್ಮ ಪಾರ್ಟಿಯ ಬಗ್ಗೆ ಹೇಳುತ್ತಿರುವುದು, ನಾನು ನಿಮ್ಮ ಬಿಜೆಪಿ ಬಗ್ಗೆ ಹೇಳುತ್ತಿಲ್ಲ. ನಾನು ಜೆಡಿ (ಎಸ್) ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ನಿಮ್ಮ ಬಿಜೆಪಿ ಬಗ್ಗೆ ಹೇಳುತ್ತಿಲ್ಲ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು** : ನಾನು ತಮ್ಮದೇ ಕೇಳಿದ್ದು. ನಾನು ನ್ಯಾಷನಲ್ ಅಥವಾ ರಿಜಿನಲ್ ಎಂದು ಕೇಳಿದೆ.

(ಗೊಂದಲ)

**ಶ್ರೀ ಸಿದ್ಧರಾಮಯ್ಯ** : ನನಗೆ ಅನ್ಯಾಯವಾಗಿದೆ ಎಂದು ನೀವು ನಿಲ್ಲಲಿಲ್ಲವಲ್ಲಾ ಅದಕ್ಕೆ ಅವರು ನಿಂತುಕೊಳ್ಳುತ್ತಿದ್ದಾರೆ ಅಷ್ಟೆ.

**ಶ್ರೀ ಸಿ. ಚನ್ನಿಗಪ್ಪ** : ಮಾನ್ಯ ರಾಷ್ಟ್ರ ನಾಯಕರಾದ ದೇವೇಗೌಡರವರದು ಬೀದಿ ಬೀದಿಯಲ್ಲಿ ಮೆರವಣಿಗೆ ಮಾಡಿದಾಗ 46 ಜನ ಶಾಸಕರು, ತಮ್ಮ ನೈತಿಕ ಹಕ್ಕನ್ನು, ಈ ರಾಜ್ಯದ ಜನರು ಆಶೀರ್ವಾದ ಮಾಡಿದ್ದರಲ್ಲಾ ಅದನ್ನು ತೋರಿಸುವುದಕ್ಕೋಸ್ಕರ ಒಟ್ಟಾಗಿ ಸನ್ಮಾನ್ಯ ಕುಮಾರಸ್ವಾಮಿಯವರನ್ನು

ಎಂ.ಪಿ.ಪ್ರಕಾಶ್ ಸಾಹೇಬ್ರು ಇವತ್ತು ಆಶೀರ್ವಾದ ಮಾಡಿದ್ದಾರೆ. ದೇವಾನುದೇವತೆಗಳು ಒಪ್ಪಿಕೊಂಡಿದ್ದಾರೆ. ನೀವೇನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಸಿದ್ದರಾಮಯ್ಯ : ಹೌದು ಸತ್ಯ ಹೇಳುತ್ತಿದ್ದಾರೆ.

ಶ್ರೀ ಸಿ. ಚನ್ನಿಗಪ್ಪ : ಹೌದು 100 ಪರ್ಸೆಂಟ್ ರೈಟ್.

ಶ್ರೀ ಸಿದ್ದರಾಮಯ್ಯ : ಕರೆಕ್ಟ್. ಆಯಿತು ತಾವು ಸತ್ಯ ಹೇಳುತ್ತಿದ್ದೀರಿ. ಅದಕ್ಕೆ ನನ್ನದೇನೂ ತಕರಾರು ಇಲ್ಲ. ಅದಕ್ಕೋಸ್ಕರ ಸಿದ್ದರಾಮಯ್ಯನವರು ಅಹಿಂದದಲ್ಲಿ ಭಾಗವಹಿಸಿದರು ಎಂಬ ಕಾರಣಕ್ಕೋಸ್ಕರ.

ಅಧ್ಯಕ್ಷರು : ಸಿದ್ದರಾಮಯ್ಯನವರೇ ಬೇಗ ಮುಗಿಸಿ 9-20 ಆಯಿತು.

ಶ್ರೀ ಸಿದ್ದರಾಮಯ್ಯ : ಸಿದ್ದರಾಮಯ್ಯ ಅಹಿಂದದಲ್ಲಿ ಭಾಗವಹಿಸಿದರು ಅನ್ನುವುದಕ್ಕೋಸ್ಕರ ನಾವು 46 ಜನರು ಸೇರಿಕೊಂಡು ಸಿದ್ಧಾಂತ ಅದು 'ಏನಾದರೂ ಆಗಲಿ ನಾವು ಬಿಜೆಪಿಯವರ ಜೊತೆಗೆ ಹೋಗೇ ಹೋಗುತ್ತೇವೆ, ಸಿದ್ದರಾಮಯ್ಯನವರ ದ್ವೇಷಕ್ಕೋಸ್ಕರ ಈ ಕೆಲಸ ಮಾಡಿದ್ದೇವೆ ಎಂದು ಜನರ ಮುಂದೆ ಹೇಳಿ. ಈಗ ಜನರಿಗೆ ಗೊತ್ತಾಗಿದೆ ಅದಕ್ಕೋಸ್ಕರ ಮಾಡಿರುವುದು ಎಂದು ಗೊತ್ತಾಗಿದೆ.

ಶ್ರೀ ಸಿ. ಚನ್ನಿಗಪ್ಪ : ಪದೇ ಪದೇ ಪ್ರತಿಕೃತಿಗೆ ಚಪ್ಪಲಿಯಲ್ಲಿ ಹೊಡೆದರಲ್ಲಾ ಆ ಜನರು ಹೇಳುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ : ನಾವು ಯಾರೂ ಚಪ್ಪಲಿಯಲ್ಲಿ ಹೊಡೆಯಿರಿ ಎಂದು ಯಾರಿಗೂ ಹೇಳುವಷ್ಟು ನೀಚರಾಜಕಾರಣ ಮಾಡಿದವರಲ್ಲ ನಾನು. ಖಂಡಿಸುವುದು ಮಾಡಿದ್ದೇವೆ, ಸಣ್ಣ ರಾಜಕೀಯ ಮಾಡುವುದು ನಮಗೆ ಗೊತ್ತಿಲ್ಲ. ಮತ್ತೆ ನನ್ನ ರಾಜಕೀಯ ಜೀವನದಲ್ಲಿ ಯಾವತ್ತೂ ಕೂಡ ನಾನು ಯಾವ ಪಕ್ಷದಲ್ಲಿ ಇದ್ದೇನೆ ಆ ಪಕ್ಷಕ್ಕೆ ಪಕ್ಷ ದ್ರೋಹ ಕೂಡ ಇವತ್ತಿನವರೆವಿಗೂ ಮಾಡಿಲ್ಲ ಮುಂದೇನೂ ಕೂಡ ಮಾಡಲ್ಲ ಎನ್ನತಕ್ಕಂಥದ್ದನ್ನು ನನ್ನ 25 ವರ್ಷದ ರಾಜಕೀಯ ಇತಿಹಾಸದಲ್ಲಿ ಮಾಡಿಲ್ಲ. ನಾನು ಯಾವತ್ತು ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಇದ್ದು ರಾಮಕೃಷ್ಣ ಹೆಗಡೆಯವರ ವಿರುದ್ಧ ಬಂಡಾಯ ಏನೂ ಮಾಡಿರಲಿಲ್ಲ, ಬೊಮ್ಮಾಯಿರವರ ಸರ್ಕಾರದಲ್ಲಿ ಇದ್ದಾಗಲೂ ಅವರ ವಿರುದ್ಧ ಬಂಡಾಯ ಏನೂ ಮಾಡಿರಲಿಲ್ಲ, ಯಾವತ್ತೂ ಕೂಡ ಅದನ್ನು ಮಾಡೇ ಇಲ್ಲ. ಮತ್ತೆ ನಾವು ಇವತ್ತು ಪಕ್ಷ ಕಟ್ಟಿದವರಿಗೆ ನಮ್ಮನ್ನು ಪಕ್ಷವಿರೋಧಿ ಚಟುವಟಿಕೆ ಮಾಡಿದರು ಎಂದು ಇಡೀ ರಾಜ್ಯದ ತುಂಬಾ ಡಂಗೂರ ಹೊಡೆದರು. ಪಕ್ಷ ವಿರೋಧಿ ಚಟುವಟಿಕೆ ಮಾಡಿದರು, ದೇವೇಗೌಡರವರನ್ನು ಹೀನಾಯಮಾನವಾಗಿ ಬೈಯ್ದರು ಎಂದು ಹುಬ್ಬಳ್ಳಿನಲ್ಲಿ ದೇವೇಗೌಡರವರ ಬಗ್ಗೆ ಒಂದು ಮಾತು ಚಕಾರ ಎತ್ತಿಲ್ಲ ನಾನು. ಅದು ದೇವೇಗೌಡರ ವಿರುದ್ಧ ಮಾಡಿದ ಸಭೆನೂ ಅಲ್ಲ. ನಾವು ಒಂದು ಶೋಷಿತ ಸಮುದಾಯದಿಂದ ಬಂದಂಥವನಾಗಿ ನಾನು ಇನ್ನೊಬ್ಬರ ಮರ್ಜಿನಲ್ಲಿ ಕೆಲಸ ಮಾಡಬೇಕಾದಂಥ ಅಗತ್ಯವಿಲ್ಲ. ಇನ್ನೊಬ್ಬರ ಗುಲಾಮಾರಾಗಿರುವುದಕ್ಕೆ ಸಾಧ್ಯವಿಲ್ಲ, ಸಾಮಾಜಿಕ ನ್ಯಾಯದ ಬಗ್ಗೆ ಕಳೆದ 25 ವರ್ಷದಿಂದ ಪ್ರತಿಪಾದನೆ ಮಾಡಿಕೊಂಡೇ ಬಂದಿದ್ದೇನೆ, ಇವತ್ತು ಹಿಂದುಳಿದವರು, ದಲಿತರು ಅಲ್ಪಸಂಖ್ಯಾತರ ಪರ ಧ್ವನಿ ಎತ್ತತಕ್ಕಂಥ ಕೆಲಸ ಅಹಿಂದ ಮೂಲಕ ಮಾಡಿದ್ದೇವೆಯೇ ಹೊರತು ಅದು ಯಾವುದೇ ಪಕ್ಷ ವಿರೋಧಿ ಚಟುವಟಿಕೆ ಅಲ್ಲ ಅಥವಾ ಸಮ್ಮಿಶ್ರ ಸರಕಾರದ ವಿರುದ್ಧ ಮಾಡಿದಂಥ ಕುತಂತ್ರನೂ ಕೂಡ ಅಲ್ಲ. ಪಿತೂರಿನೂ

ಅಲ್ಲ. ಈಗಲೂ ಆ ಧ್ವನಿಯನ್ನು ಎತ್ತೇ ಎತ್ತುತ್ತೇನೆ. ಅದರಿಂದ ಎಷ್ಟೇ ಶಿಕ್ಷೆ ರಾಜಕೀಯವಾಗಿ ಆಗಬಹುದು. ಎಷ್ಟೇ ಅನ್ಯಾಯ ಆಗಬಹುದು, ಆದರೆ ಹಿಂದುಳಿದವರ ಬಗ್ಗೆ ದಲಿತರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ಬಡವರ ಬಗ್ಗೆ, ರೈತರ ಬಗ್ಗೆ ಧ್ವನಿ ಎತ್ತತಕ್ಕಂಥದ್ದನ್ನು ಅದನ್ನು ಬಾಯಿ ಮುಚ್ಚಿಸತಕ್ಕಂಥದ್ದನ್ನು ಯಾರಿಂದಲೂ ಕೂಡ ಸಾಧ್ಯವಿಲ್ಲ, ನಾವು ಯಾರ ಗುಲಾಮರೂ ಕೂಡ ಅಲ್ಲ ಎನ್ನತಕ್ಕಂಥ ಮಾತನ್ನು ಅತ್ಯಂತ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಾವು ಯಾರ ಗುಲಾಮರು ಅಲ್ಲ, ನೀವು ಹೋಗಬೇಡಿ ಅಂದರೆ ಹೋಗದೇ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ದೇವೇಗೌಡರವರು ನೀವು ಆ ಸಭೆಗೆ ಹೋಗಬೇಡಿ ಎಂದು ನನಗೆ ಹೇಳಿದರು. ಒಂದು ಹಂತದಲ್ಲಿ ಹೋಗು ಎಂದು ಹೇಳಿದರು, ಇನ್ನೊಂದು ಹಂತದಲ್ಲಿ ಹೋಗಬೇಡ ಎಂದು ಹೇಳಿದರು, ದೇವೇಗೌಡರವರು ಪ್ರಜಾವಾಣಿಗೆ ಇಂಟರ್‌ವ್ಯೂ ಕೊಟ್ಟರು. ಅದರಲ್ಲಿ ಅಲ್ಲಿಗೆ ನನ್ನನ್ನು ಕರೆದಿದ್ದರೆ ಹೋಗುತ್ತಿದ್ದೆ. ಎಂದು ಹೇಳಿದರು, ನನ್ನನ್ನು ಅಹಿಂದ ಸಮಾವೇಶಕ್ಕೆ ಕರೆದಿದ್ದರೆ ಹೋಗುತ್ತಿದ್ದೆ, ಆದರೆ ಅವರು ನನ್ನನ್ನು ಕರೆಯಲಿಲ್ಲ, ಸಿದ್ದರಾಮಯ್ಯ ಹೋಗುವುದು ತಪ್ಪೇನಿಲ್ಲವೆಂದು ಹೇಳಿದರು.ಆಮೇಲೆ ಏನೇನು ಕಿತಾಪತಿಗಳು, ಕುತಂತ್ರಗಳು, ಎಲ್ಲೆಲ್ಲಿ ತೀರ್ಮಾನಗಳಾದವು ಗೊತ್ತಿಲ್ಲ. ಇವತ್ತು ನಾನು ಒಟ್ಟಾರೆ ಹೇಳತಕ್ಕಂಥದ್ದು ಕುಮಾರಸ್ವಾಮಿಗಳೂ ಕೂಡ ನಾವು ಏಕೆ ಕಾಂಗ್ರೆಸ್ ಜೊತೆ ಮಾಡಿದ್ದ ಸಮ್ಮಿಶ್ರ ಸರಕಾರದಿಂದ ವಾಪಸ್ ಏಕೆ ಬಂದೆವು ಎನ್ನುವ ಕಾರಣ ಹೇಳಿಲ್ಲ. ದೇವೇಗೌಡರವರೂ ಕೂಡ ಹೇಳಿಲ್ಲ, ಇವತ್ತೂ ಕೂಡ ಅವರ ಜೊತೆಗೆ ಇರಬೇಕಾಗಿತ್ತು ಎಂದು ಅವರು ವಾದ ಮಾಡುತ್ತಿದ್ದಾರೆ. ಈ ಘಳಿಗೆಯವರೆವಿಗೂ ಇದೇ ಹೇಳುತ್ತಿದ್ದಾರೆ, ಆ ದಿವಸ 27 ನೇ ತಾರೀಖು ಸಂಜೆ ಮೂರೂವರೆ ತನಕ ಪಾಪ ರಾಜಿ ಆಗುತ್ತೆ ರಾಜಿ ಆಗುತ್ತೆ ಎಂದು ಹೇಳುತ್ತಿದ್ದರು; ರಾಷ್ಟ್ರೀಯ ಅಧ್ಯಕ್ಷರ ಆದೇಶ ಇಲ್ಲ, ಪಕ್ಷದ ಆದೇಶ ಇಲ್ಲ, ಜನರ ಆದೇಶ ಇಲ್ಲ, ಇವತ್ತು ಸ್ವಾರ್ಥಕ್ಕೋಸ್ಕರ, ಅಧಿಕಾರಕ್ಕೋಸ್ಕರ, ಅವಕಾಶವಾದಿ ರಾಜಕಾರಣ ಇದು ಎಂದು ಹೇಳಬೇಕೋ ಬೇಡವೋ ? ನಾವು ಕಟ್ಟಿದಂಥ ಪಕ್ಷಕ್ಕೆ ಈ ಪಕ್ಷವನ್ನು ಬೆಂಬಲಿಸಿ ಆಶೀರ್ವಾದ ಮಾಡಿದಂಥ ಜನರಿಗೆ ದ್ರೋಹ ಮಾಡತಕ್ಕಂಥ ಕೆಲಸ ಅಲ್ಲವೆ ? ಹೀಗಾಗಿ ಈ ದ್ರೋಹವನ್ನೇ ನಾವು ಇವತ್ತು ಖಂಡಿಸುತ್ತಿರುವುದು ಅದರಿಂದಾಗಿ ಈ ಸಮ್ಮಿಶ್ರ ಸರಕಾರ ಇದೆಯಲ್ಲಾ ಇದೊಂದು ಅನೈತಿಕ ಅಪವಿತ್ರವಾದಂಥ ಜನರ ಆದೇಶ ಇಲ್ಲದೇ ಇರತಕ್ಕಂಥ ಒಂದು ಸರ್ಕಾರ ಈಗ ಬಂದಿದೆ. ಇದರ ವಿರುದ್ಧ ನಾವು ಇವತ್ತು ಇಲ್ಲಿ ವಿರುದ್ಧವಾಗಿ ಓಟು ಹಾಕುವುದು ಅಷ್ಟೇ ಇಲ್ಲ, ನಾನು ನಮ್ಮ ಸ್ನೇಹಿತರಿಗೆ ಹೇಳಿದ್ದೆ, ನನಗೆ ವಿಪ್ ಕೊಟ್ಟರೂ ಕೂಡ ಈ ಸರ್ಕಾರದ ವಿರುದ್ಧವಾಗಿ ನಾನು ಓಟು ಹಾಕಿಯೇ ತೀರುತ್ತೇನೆ. ನನ್ನ ಸದಸ್ಯತ್ವ ಹೋದರೂ ಪರವಾಗಿಲ್ಲ. . ಆದರೆ ಮಾನ್ಯ ಕುಮಾರಸ್ವಾಮಿಯವರು ಆತ್ಮಸಾಕ್ಷಿಗೆ ಮತ ಕೊಡಿ ಎಂದು ಹೇಳುತ್ತಾರೆ. ನನ್ನ ಆತ್ಮಸಾಕ್ಷಿ ಏನು ಹೇಳುತ್ತದೆ ಎಂದರೆ ಈ ಅಪವಿತ್ರವಾದಂಥ, ಅನೈತಿಕವಾದಂಥ, ಜನಾದೇಶಕ್ಕೆ ವಿರುದ್ಧವಾದಂಥ, ನಾವು ಎಲ್ಲರೂ ಕಟ್ಟಿದಂಥ ಪಕ್ಷಕ್ಕೆ ದ್ರೋಹ ಮಾಡಿದ್ದಾರೆ, ಆದುದರಿಂದ ಈ ಸಮ್ಮಿಶ್ರ ಸರಕಾರಕ್ಕೆ , ಈ ಅವಕಾಶವಾದಿ ಸರ್ಕಾರಕ್ಕೆ, ಸ್ವಾರ್ಥಕ್ಕೋಸ್ಕರ ಮಾಡಿರತಕ್ಕಂಥ ಸರ್ಕಾರಕ್ಕೆ ಯವತ್ತೂ ಓಟು ಕೊಡುವುದಿಲ್ಲ ಎನ್ನತಕ್ಕಂಥ ತೀರ್ಮಾನ ಮಾಡಿದ್ದೆ. ಇವತ್ತೂ ಕೊಡುತ್ತಿರಲಿಲ್ಲ. ವಿಪ್ ಕೊಟ್ಟಿದರೂ ಕೂಡ ಕೊಡುತ್ತಿರಲಿಲ್ಲ. ಇವತ್ತು ನಾನು ವಿರೋಧ ಮಾಡುತ್ತಿದ್ದೇನೆ. ಈ ರಾಜ್ಯದ ಜನತೆ ಇವತ್ತು ಕರ್ನಾಟಕದಲ್ಲಿ, ಈಗಾಗಲೇ ನಮ್ಮ ಬಿ.ಆರ್. ಪಾಟೀಲ್‌ರವರು, ನಾವು ಇದನ್ನು ಸವಾಲಾಗಿ ಸ್ವೀಕಾರ ಮಾಡುತ್ತೇವೆಂದು ಹೇಳಿದರು. ಜಾತ್ಯಾತೀತ ಶಕ್ತಿಗಳನ್ನು ಇವತ್ತು ಯಾರೂ

ಕೂಡ ಅದನ್ನು ಜಾತ್ಯಾತೀತ ತತ್ವವನ್ನು, ನಾಶ ಮಾಡುವುದಕ್ಕಾಗುವುದಿಲ್ಲ. ಪಕ್ಷ ಪಕ್ಷಾಂತರ ಆದ ತಕ್ಷಣಕ್ಕೆ ನಾಶ ಮಾಡುವುದಕ್ಕೆ ಆಗುವುದಿಲ್ಲ. ಅದು ಜೀವಂತವಾಗಿರುತ್ತದೆ. ಇವತ್ತು ಕರ್ನಾಟಕದ ಜನತೆ ಜಾತ್ಯಾತೀತ ತತ್ವದ ಪರವಾಗಿ ಇದ್ದಾರೆ ಹೊರತು ಕೋಮವಾದಿಗಳ ಶಕ್ತಿಗಳ ಪರವಾಗಿ ಇಲ್ಲ. ಯಡಿಯೂರಪ್ಪನವರು ಆಗಲೇ ಹೇಳಿದರು, 28 ಪರ್ಸೆಂಟ್ ತೆಗೆದುಕೊಂಡು 79 ಜನ ಗೆದ್ದು ಬಂದಿದ್ದೇವೆಂದು ಹೇಳಿದರು. 28 ವರ್ಸ್‌ಸ್ ಅದರ್ಸ್, ಅದುದರಿಂದ ಆ ಶಕ್ತಿಗಳನ್ನು ನಾವು ಕರ್ನಾಟಕದಲ್ಲಿ ಮತ್ತೆ ಒಗ್ಗೂಡಿಸತಕ್ಕಂಥ ಕೆಲಸ ಮಾಡೇ ಮಾಡುತ್ತೇವೆ, ನಾಳೆ ಇವರು ಏನಾಗುತ್ತದೆ ನೋಡೋಣ, ಕಾನೂನಿನ ಸಮರದಲ್ಲಿ ಏನಾಗುತ್ತದೆಂಬುದು ನನಗೆ ಗೊತ್ತಿಲ್ಲ, ಏನಾದರೂ ಆಗಲಿ, ಕರ್ನಾಟಕದಲ್ಲಿ ಮಾತ್ರ ಜಾತ್ಯಾತೀತ ತತ್ವವನ್ನು ಜೀವಂತವಾಗಿರಸಲಿಕ್ಕೆ, ಜನರು ಏನು ಈ ತತ್ವಕ್ಕೆ ಪರವಾಗಿ ಇದ್ದಾರೆ, ಆ ಜನರ ಆಶೀರ್ವಾದ ಏನು ಇದೆ, ಆ ಜನರಿಗೆ ದ್ರೋಹ ಮಾಡತಕ್ಕಂಥ ಕೆಲಸ ನಾವು ಮಾಡಲಿಕ್ಕೆ ತಯಾರಿಲ್ಲ. ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸತಕ್ಕಂಥ ಆ ಪಕ್ಷವನ್ನು ಮತ್ತೆ ಆ ತರಹದ ಪಕ್ಷವನ್ನು ಕಟ್ಟತಕ್ಕಂಥ ಕೆಲಸವನ್ನು ನಾವು ಕರ್ನಾಟಕದಲ್ಲಿ ಮಾಡುತ್ತೇವೆ, ಅದನ್ನು ಸವಾಲಾಗಿ ಸ್ವೀಕಾರ ಮಾಡುತ್ತೇವೆ. ಮುಂದಿನ ಚುನಾವಣೆಗೆ ಹೋಗಿ ಜನರಿಗೆ ಗೊತ್ತಾಗುತ್ತದೆ. ಜನರು ನಿಮಗೆ ತಕ್ಕ ಪಾಠ ಹೇಳುತ್ತಾರೆ.. ಒಟ್ಟಾರೆ ಏನೆಂದರೆ, ಬಿಜೆಪಿ ಏನು ಇದೆ, ಇದನ್ನು ಕರ್ನಾಟಕದಲ್ಲಿ ಬೆಳಸಲಿಕ್ಕೆ ನೀವು ಸಹಕಾರಿಯಾಗುತ್ತಿದ್ದೀರಿ, ಕರ್ನಾಟಕದಲ್ಲಿ ಬಿಜೆಪಿ ಬೆಳಸಲಿಕ್ಕೆ, ಕರ್ನಾಟಕದಲ್ಲಿ ಯಾವ ಕಾರಣಕ್ಕೂ ಕೂಡ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ, ಇವತ್ತು ಅವರು ಅಧಿಕಾರಕ್ಕೆ ಬರಲಿಕ್ಕೆ ನೀವು ಸಹಕಾರಿಗಳಾಗಿದ್ದೀರಿ. ಅದನ್ನು ಬೆಳಸಲಿಕ್ಕೆ ಸಹಕಾರಿಗಳಾಗಿದ್ದೀರಿ, ಈ ರಾಜ್ಯಕ್ಕೆ ದೊಡ್ಡ ಅಪಾಯ ಇದೆ, ನೀವು ಅದಕ್ಕೆ ಜವಾಬ್ದಾರಿಯಾಗುತ್ತೀರಿ ಎನ್ನುವ ಮಾತನ್ನು ಇವತ್ತು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಮುಂದೆ ಆಗತಕ್ಕಂಥ ಅನಾಹುತಗಳು, ಸಮಾಜದಲ್ಲಿ ಆಗತಕ್ಕಂಥ ಅನಾಹುತಗಳು, ದಲಿತರ ಮೇಲೆ ಆಗತಕ್ಕಂಥ ದಬ್ಬಾಳಿಕೆಗಳು, ಅಲ್ಪಸಂಖ್ಯಾತರ, ಮೇಲೆ ಆಗತಕ್ಕಂಥ ದಬ್ಬಾಳಿಕೆಗಳು, ಹಿಂದುಳಿದವರ ಮೇಲೆ ಆಗತಕ್ಕಂಥ ಅನ್ಯಾಯ, ಇದಕ್ಕೆಲ್ಲಾ ನೀವು ಜವಾಬ್ದಾರಿಯಾಗುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ನಿರ್ಣಯವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ಯಡಿಯೂರಪ್ಪನವರೆ, ಇವರು ಮಾತನಾಡಲಿ . .

**ಶ್ರೀ ಡಿ.ಕೆ. ಶಿವಕುಮಾರ್** : ಅವರು ರಿಪ್ಲೈ ಮಾಡುತ್ತಾರಾ ?

**ಅಧ್ಯಕ್ಷರು** : ರಿಪ್ಲೈ ಮಾಡುವುದು ಚೀಫ್ ಮಿನಿಸ್ಟರ್. . .

**ಶ್ರೀ ಬಿ.ಎಸ್. ಯಡಿಯೂರಪ್ಪ** : ಸಿ.ಎಂ. ರವರು ರಿಪ್ಲೈ ಮಾಡುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ** : ಸಮಯ ನಿಗದಿ ಮಾಡಿದ್ದು ಬಿಜೆಪಿಗೆ ಎರಡೂವರೆ ಗಂಟೆ ಅಂತ. ಇವರು ಹತ್ತತ್ತು ಗಂಟೆ ತೆಗೆದುಕೊಂಡರೆ. .

**ಅಧ್ಯಕ್ಷರು** : ಅವರು ಮಾತನಾಡಲಿ, ಅವರ ಇದರಲ್ಲಿ ಈಶ್ವರಪ್ಪನವರೊಬ್ಬರೇ ಮಾತನಾಡಿದ್ದು, ಮಾತನಾಡಲಿ, ಆ ನಂತರ ಒಬ್ಬರಿಬ್ಬರಿಗೆ ಕೊಡುತ್ತೇನೆ. ಯಡಿಯೂರಪ್ಪರವರಿಗೆ ಕೊಟ್ಟಿದ್ದೇನೆ . . .

**(ಗೊಂದಲ)**

**ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ** : ನಮಗೆ ಅವಕಾಶ ಕೊಡಬೇಕು. .

**ಅಧ್ಯಕ್ಷರು** : ದಯಮಾಡಿ ಕುಳಿತುಕೊಳ್ಳಿ . . ನಿಮ್ಮ ಅಗ್ರನಾಯಕರೆಲ್ಲರೂ ಮಾತನಾಡಿದ್ದಾರೆ. ನಿಮಗೆ ಒಂದೇ ಒಂದು ಪದವನ್ನು ಉಳಿಸದ ರೀತಿಯಲ್ಲಿ ಮಾತನಾಡಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. .

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಸನ್ಮಾನ್ಯ ಸಭಾಧ್ಯಕ್ಷರೆ, ಎಲ್ಲರೂ ಹೀಗೇಕೆ ಮಾಡುತ್ತಿದ್ದಾರೆ ? ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಸವರಾಜ ರಾಯರೆಡ್ಡಿ** : ತಾವೇನು ರಿಪ್ಲೈ ಮಾಡುತ್ತಿದ್ದೀರಾ ?

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನೇಕೆ ರಿಪ್ಲೈ ಮಾಡಲಿ ? ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಮಾಡುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ** : ನೀವು ಈಗ ಮಾತನಾಡುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ನಾವು ಏನು ಹೇಳುತ್ತೇವೆಂದರೆ ಈ ಸದನವನ್ನು ನಾಳೆಯವರೆಗೂ ಮುಂದುವರಿಸಬಹುದೆಂದು ನಾವು ಹೇಳುತ್ತಿದ್ದೇವೆ. ಸದನವನ್ನು ಮುಂದುವರಿಸಿದರೆ ಎಲ್ಲರೂ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ.

**ಅಧ್ಯಕ್ಷರು** : ಮಾನ್ಯ ಯಡಿಯೂರಪ್ಪನವರೇ, ತಾವು ಮಾತನಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಈ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಬೇಕೆಂಬ ನಿರ್ಣಯವನ್ನು ಮಂಡನೆ ಮಾಡಿ ಮಾತನಾಡಿದಂಥ ಸಂದರ್ಭದಲ್ಲಿ ಬಹಳ ಉಪಯುಕ್ತವಾದಂಥ ಚರ್ಚೆ ಇದರ ಬಗ್ಗೆ ಆಗಿದೆ. ಚರ್ಚೆಯ ಸಂದರ್ಭದಲ್ಲಿ ಬಂದಿರತಕ್ಕಂಥ ಅಭಿಪ್ರಾಯವನ್ನು ನೋಡಿದರೆ 100 ಕ್ಕೆ 100ರಷ್ಟು ಸನ್ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದ ಸಚಿವ ಸಪುಟದಲ್ಲಿ ವಿಶ್ವಾಸ ಇದೆ ಎನ್ನತಕ್ಕಂಥ ಅಭಿಪ್ರಾಯ ವ್ಯಕ್ತವಾಗುತ್ತಿರುವಂಥದ್ದು ಬಹಳ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಜನಾದೇಶದ ಹಿನ್ನೆಲೆಯಲ್ಲಿ . .

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮನ್ಯ ಯಡಿಯೂರಪ್ಪನವರೆ,

**ಶ್ರೀ ಬಿ.ಎಸ್. ಯಡಿಯೂರಪ್ಪ** : ದಯಮಾಡಿ ನಾನು ಮಾತನಾಡುವುದಕ್ಕೆ ಬಿಡಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ತಾವು ಈಗ ಸರ್ಕಾರದ ಪರವಾಗಿ ಮಾತನಾಡುತ್ತಿದ್ದೀರಾ? ನಾನು ಏನು ಹೇಳುತ್ತಿದ್ದೇನೆಂದರೆ, ತಾವು ಸರ್ಕಾರದ ಪರವಾಗಿ ಮಾತನಾಡುತ್ತಿದ್ದರೆ ತಮ್ಮ ರಿಪ್ಲೈಯನ್ನು ಆಮೇಲೆ ಮಾಡಬೇಕಾಗುತ್ತದೆ. My appeal to you is, if you are replying on behalf of the Government ತಾವು ಅನಂತರ ಮಾಡಬೇಕಾಗುತ್ತದೆ. ಪದ್ಧತಿ ಇರುವುದೇ ಹಾಗೆ. ಆದ್ದರಿಂದ, ಈಗ ಮಾಡುವುದಕ್ಕೆ ಬರುವುದಿಲ್ಲ. ತಾವು ಮತ್ತು ಮುಖ್ಯಮಂತ್ರಿಗಳು ಅನಂತರ ರಿಪ್ಲೈ ಮಾಡಿ. ನಿಮ್ಮ ಪಾರ್ಟಿಯ ಇನ್ನೊಬ್ಬ ಮೆಂಬರ್ ಬೇಕಾದರೆ ಮಾತನಾಡಬಹುದು. Because you are in Government...

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಮ್ಮ ಪಾರ್ಟಿಯಿಂದ ಇನ್ನು ಯಾರೂ ಮಾತನಾಡುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಹಾಗಾದರೆ ತಾವು ಅನಂತರ ಮಾತನಾಡಿ. He has to wait.

ಅಧ್ಯಕ್ಷರು : ಸಭಾನಾಯಕರು ಮಂಡನೆ ಮಾಡಿದ್ದಾರೆ ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು he is a part of Government.

ಅಧ್ಯಕ್ಷರು : ನನಗೆ ಗೊತ್ತಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಮಾತನಾಡುವುದಕ್ಕೆ ನನ್ನ ವಿರೋಧ ಇಲ್ಲ. He is a part of Government . He is Deputy Chief Minister. ಅವರು ಉತ್ತರ ಕೊಡುವುದಾದರೆ ಕೊಡಲಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಉತ್ತರ ಕೊಡುವುದನ್ನು ಬಿಟ್ಟು ಭಾರತೀಯ ಜನತಾಪಕ್ಷದ ನಾಯಕರಾಗಿ ಮಾತನಾಡುವುದಕ್ಕೆ ಸಾಧ್ಯವಿಲ್ಲ. ಅವರು ಉಪ ಮುಖ್ಯಮಂತ್ರಿಗಳಾಗಿ ನಮ್ಮ ಚರ್ಚೆಗೆ ಉತ್ತರ ಕೊಡುವುದಾದರೆ ನಾವು ಸ್ವಾಗತ ಮಾಡುತ್ತೇವೆ. ಮತ್ತೆ ಅವರ ಉತ್ತರವನ್ನು ನಾವು ಕೇಳುತ್ತೇವೆ.

(ಗೊಂದಲ)

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ಅಧ್ಯಕ್ಷರೆ, ನಾನು ಡಿಕ್ಟೇಟ್ ಮಾಡುತ್ತಿಲ್ಲ. ಅವರು ಸರ್ಕಾರದ ಒಂದು ಭಾಗ. He is a Deputy Chief Minister.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಶ್ರೀರಾಮರೆಡ್ಡಿಯವರು ಮಾನ್ಯ ಅಧ್ಯಕ್ಷರಿಗೆ ಅಡ್ವೈಸ್ ಮಾಡುವ ಮಟ್ಟಕ್ಕೆ ಹೋಗಿದ್ದಾರೆ. ಇದರ ಬಗ್ಗೆ ನಿಜವಾಗಿಯೂ ಕೂಡ ಯೋಚನೆ ಮಾಡಬೇಕು . . . ಇದು ಅಕ್ಷಮ್ಯ ಅಪರಾಧ ಸಭಾಪೀಠಕ್ಕೆ ಮಾರ್ಗದರ್ಶನ ಮಾಡಬಾರದು.

ಅಧ್ಯಕ್ಷರು : ತಮ್ಮ ಮಾತನ್ನು ನಿಲ್ಲಿಸಿ. ದಯವಿಟ್ಟು ತಾವು ಕುಳಿತುಕೊಳ್ಳಿ. Let him participate.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆಂಬುದಾದರೂ ನಮಗೆ ಹೇಳಬೇಕಲ್ಲವೆ ?

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುತ್ತೇನೆಂದು ಹೇಳಿದರೆ ನಾವು ಸ್ವಾಗತ ಮಾಡಿ ಕುಳಿತುಕೊಳ್ಳುತ್ತೇವೆ. ಮತ್ತೆ ನಿಮ್ಮ ಉತ್ತರವನ್ನು ನಾವು ಕೇಳುತ್ತೇವೆ. ಹಾಗೆಯೇ ನಿಮ್ಮ ಉತ್ತರವನ್ನು ಕೇಳುವುದಕ್ಕೆ ನಾವು ಉತ್ಸುಕರಾಗಿದ್ದೇವೆ. ನೀವು ಉತ್ತರ ಕೊಡುವುದಾದರೆ ನಾವು ಕುಳಿತುಕೊಂಡು ಕೇಳುತ್ತೇವೆ. ನೀವು ಈಗ ಉತ್ತರ ಕೊಡುತ್ತಿದ್ದೀರಾ ?

ಶ್ರೀ ಬಿಎಸ್. ಯಡಿಯೂರಪ್ಪ : ಹೌದು. ನಾನು ಉತ್ತರ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಉತ್ತರ ಕೊಡಿ.

**ಶ್ರೀ ಎಸ್.ಎಸ್. ಧರ್ಮೇಗೌಡ** : ಮಾನ್ಯ ಅಧ್ಯಕ್ಷರೆ, ನಮಗೊಂದು ಅನುಮಾನ ಈಗ ಬರುತ್ತಿದೆ. ತಾವು ದಯವಿಟ್ಟು ಇದರ ಬಗ್ಗೆ ನೋಡಬೇಕಾಗುತ್ತದೆ. ಕೆಲವು ಶಿಷ್ಟಾಚಾರಗಳನ್ನು ಗಾಳಿಗೆ ತೂರತಕ್ಕಂಥ ಕೆಲಸ ಇಲ್ಲಿ ಆಗುತ್ತಿದೆ. ತಾವು ಪೀಠದಲ್ಲಿ ಎದ್ದು ನಿಂತುಕೊಂಡರು ಅವರು ಕುಳಿತುಕೊಳ್ಳುವುದಿಲ್ಲವೆಂದರೆ ಹೇಗೆ ? ಈ ರೀತಿಯಾದರೆ ಈ ಸಭೆಯನ್ನು ನಡೆಸುವುದಾದರೂ ಹೇಗೆ? ಸನ್ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿ ಮಾತನಾಡುತ್ತಿದ್ದಾರೆಯೇ ಹೊರತು ಪಕ್ಷದ ಅಧ್ಯಕ್ಷರಾಗಿ ಬಂದು ಅಲ್ಲಿ ಮಾತನಾಡುತ್ತಾರೆಯೇ ?

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಶಿವಕುಮಾರ್‌ರವರೆ, ಒಂದು ನಿಮಿಷ. ರಿಪ್ಲೈನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೆ. ಆದರೆ ನನ್ನ ಪಾರ್ಟಿಯ ನಿಲುವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್** : ಒಂದು ನಿಮಿಷ ಇರಿ. ಈಗ ಇನ್ನೂ ಡಿಬೇಟ್ ಮುಗಿದಿಲ್ಲ. ಈಗ ತಾವು ಚರ್ಚೆಗೆ ಭಾಗವಹಿಸುವುದಾದರೆ ತುಂಬಾ ಸಂತೋಷ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರ ಆದೇಶದಂತೆ ಮಾತನಾಡುವುದಕ್ಕೆ ನಾನು ನಿಂತಿದ್ದೇನೆ.

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ತಾವು ನಿಂತುಕೊಳ್ಳಬಹುದು. ಮತ್ತೆ ಚರ್ಚೆ ಕೂಡ ಮಾಡಬಹುದು ಹಾಗೆಯೇ ನಾವು ಇದುವರೆಗೆ ಏನೇನು ಮಾತನಾಡಿದ್ದೇವೆ ಅದಕ್ಕೆಲ್ಲಾ ಪ್ರತಿ ಉತ್ತರ ಕೂಡ ಮಾಡಬಹುದು. ಆದರೆ, ಸರ್ಕಾರದ ರಿಪ್ಲೈನ್ನು ಮಾನ್ಯ ಮುಖ್ಯಮಂತ್ರಿಯವರು ಕೊಡುತ್ತಾರೆ. ತಾವು ತಮ್ಮ ಪಕ್ಷದ ಪರವಾಗಿ ಏನು ಬೇಕಾದರೆ ಮಾತನಾಡಿ ನಾವು ಬೇಡವೆಂದು ಹೇಳುವುದಿಲ್ಲ. ಆದರೆ, ತಾವು ರಿಪ್ಲೈ ಮಾಡುತ್ತಿದ್ದೇನೆಂದು ಹೇಳಿದ್ದಕ್ಕೆ ನಾವು ಈ ರೀತಿ ಹೇಳಿದ್ದೇವಷ್ಟೆ. ಏಕೆಂದರೆ ಇದರ ಬಗ್ಗೆ ಚರ್ಚೆ ಇನ್ನೂ ಮುಗಿದಿಲ್ಲ. ಇನ್ನು ನಾವೆಲ್ಲಾ ಇದರ ಬಗ್ಗೆ ಮಾತನಾಡಬೇಕಾಗಿದೆ. ತಾವು ತಮ್ಮ ಪಕ್ಷದ ಪರವಾಗಿ ಏನಾದರು ಬೇಕಾದರೂ ಮಾತನಾಡಿ.

**ಅಧ್ಯಕ್ಷರು** : ಮಾನ್ಯ ಯಡಿಯೂರಪ್ಪನವರೆ, ತಾವು ಮಾತನಾಡಿ.

(ಗೊಂದಲ)

**ಶ್ರೀ ಎಸ್. ಕುಮಾರ್ ಬಂಗಾರಪ್ಪ** : ನಾವು ಮಾತನಾಡಿದ ಮೇಲೆ ತಾವು ಮಾತನಾಡಿ. ನಾನು ಸಾಕಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಇಲ್ಲಿ ಕಾನೂನು ಪಂಡಿತರು ಬಹಳ ಜಾಸ್ತಿ ಜನ ಆಗಿದ್ದಾರೆ. ಇದೊಂದು ದೊಡ್ಡ ಸಮಸ್ಯೆ ಕೂಡ ಆಗಿದೆ.

**ಶ್ರೀ ಎಸ್. ಕುಮಾರ್ ಬಂಗಾರಪ್ಪ** : ತಾವು ತಪ್ಪು ತಿಳಿದುಕೊಳ್ಳಬೇಡಿ. ದಯಮಾಡಿ ನಾನು ಹೇಳುವುದನ್ನು ಕೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರು ಹೇಳಿದ ಮೇಲೆ ನಾನು ಮಾತನಾಡುತ್ತೇನೆ.

(ಗೊಂದಲ)

**ಶ್ರೀ ಎಸ್. ಕುಮಾರ್ ಬಂಗಾರಪ್ಪ** : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಪಕ್ಷದ ಪರವಾಗಿ ಮಾತನಾಡುತ್ತೇನೆಂದು ಹೇಳಿದರು. ಆದ್ದರಿಂದ ನಾವೂ ಸಹ ಇದರ ಬಗ್ಗೆ

ಮಾತನಾಡಬೇಕಾಗಿದೆ. ಅನಂತರ ಅವರು ರಿಪ್ಲೈ ಕೊಡಲಿ. ಏಕೆಂದರೆ ನಾವೂ ಸಹ ಕೆಲವು ವಿಚಾರ ಮಾತನಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು : ಆಯಿತು. ಅವರು ರಿಪ್ಲೈ ಕೊಡುತ್ತಿಲ್ಲ. ಅವರು ಚರ್ಚೆಯಲ್ಲಿ ಭಾಗವಹಿಸುತ್ತಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಕುಮಾರ್ ಬಂಗಾರಪ್ಪ : ನಾವು ಮೊದಲು ಮಾತನಾಡುತ್ತೇವೆ. ಅನಂತರ ಅವರು ಮಾತನಾಡಲಿ.

(ಗೊಂದಲ)

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ಅವರು ಈ ರಾಜ್ಯದ ಉಪ ಮುಖ್ಯಮಂತ್ರಿಗಳು. on behalf of the Government ರಿಪ್ಲೈ ಕೊಡುವುದಿದ್ದರೆ ಈಗ ಹೇಳಲಿ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈ ರೀತಿಯಾದರೆ ಹೇಗೆ ? ಸಭೆಯನ್ನು ನಡೆಯುವುದಕ್ಕೆ ನೀವು ಬಿಡುತ್ತಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನಾವು ಹೇಳುವುದನ್ನು ತಾವು ಸ್ವಲ್ಪ ಕೇಳಿ. Why you are losing your patience ? ನಾವು ಹೇಳುವುದನ್ನು ಸ್ವಲ್ಪ ನಿಧಾನವಾಗಿ ಕೇಳಿ.

ಅಧ್ಯಕ್ಷರು : ಸಭೆ ನಡೆಯಬೇಕೇ ಅಥವಾ ಬೇಡವೇ ?

ಶ್ರೀ ಅಂಜನಮೂರ್ತಿ : ಒಂದೇ ಸಾರಿ ಈ ರೀತಿಯಾದರೆ ಹೇಗೆ ? ನಾವು ಹೇಳುವುದನ್ನು ತಾವು ಸ್ವಲ್ಪ ಕೇಳಿ. Don't lose your patience. Being a Speaker don't loose your patience.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಪ್ರತಿಯೊಬ್ಬರೂ ನಿಂತುಕೊಂಡು ಮಾತನಾಡಿದರೆ ಈ ಸಭೆ ನಡೆಯಬೇಕೇ ಅಥವಾ ಬೇಡವೇ ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಅಂಜನಮೂರ್ತಿ : ಮತ್ತೆ ತಾವು ಅದೇ ಮಾತನ್ನು ಹೇಳುತ್ತಿದ್ದೀರಿ. ನಾವು ಹೇಳುವುದನ್ನು ತಾವು ಸ್ವಲ್ಪ ಕೇಳು ಸ್ವಾಮಿ.

(ಗೊಂದಲ)

ಅಧ್ಯಕ್ಷರು : ಅವರು ಪಕ್ಷದಿಂದ ಮಾತನಾಡುತ್ತಿದ್ದಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅಂಜನಮೂರ್ತಿ : ಇದು ನಿಜವಾಗಿಯೂ ಕೂಡ ದೊಡ್ಡ ದುರಂತ.

ಶ್ರೀ ಎಸ್.ಎಲ್. ಧರ್ಮೇಗೌಡ : ಮಾಜಿ ಸಚಿವರು ಈ ರೀತಿ ಮಾತನಾಡಿದರೆ ಹೇಗೆ? ಮಾನ್ಯ ಅಧ್ಯಕ್ಷರಿಗೆ ನಾನು ಹೇಳುವುದನ್ನು ಕೇಳು ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಸಚಿವರಾಗಿರತಕ್ಕಂಥವರು ಮಾನ್ಯ ಅಧ್ಯಕ್ಷರಿಗೆ ಕೇಳು ಎಂದು ಸಿಂಗ್ಯುಲರ್ ವರ್ಡ್‌ನಲ್ಲಿ ಮಾತನಾಡುತ್ತಿದ್ದಾರೆ. ಈ ಸಭೆಯ ಶಿಷ್ಟಾಚಾರ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೂ ಕೂಡ ಚರ್ಚೆಯಲ್ಲಿ ಭಾಗವಹಿಸುತ್ತೇನೆ. ಆಗಬಹುದಲ್ಲವೆ ?

**ಅಧ್ಯಕ್ಷರು** : ನಾನು ಈಗ ಮಾನ್ಯ ಯಡಿಯೂರಪ್ಪನವರನ್ನು ಮಾತನಾಡುವುದಕ್ಕೆ ಹೇಳಿದ್ದೇನೆ. ನೀವೆಲ್ಲಾ ಕುಳಿತುಕೊಳ್ಳಿ. Let him participate in the discussion.

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನು ಹೇಳತಕ್ಕಂಥದ್ದನ್ನು ರಿಪ್ಲೈ ಎಂದು ತೆಗೆದುಕೊಳ್ಳಿ. ಇಲ್ಲದಿದ್ದರೆ ಚರ್ಚೆಯಲ್ಲಿ ಭಾಗವಹಿಸಿದ್ದಾರೆಂದಾದರೂ ತೆಗೆದುಕೊಳ್ಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಒಂದು ನಿಮಿಷ. ಸನ್ಮಾನ್ಯ ಯಡಿಯೂರಪ್ಪನವರು part and parcel of Government. ಆದ್ದರಿಂದ ತಾವು ಹೇಳಿದ ಮೇಲೆ ಅವರು ಹೇಳುವುದನ್ನು ರಿಪ್ಲೈ ಎಂದು ಈಗ ಕನ್ಸೀಡ್ ಮಾಡಿಕೊಳ್ಳಬೇಕಾಗುತ್ತದೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಮಾತನಾಡುವುದಕ್ಕೆ ತಾವು ಕರೆದಿದ್ದೀರಿ.

(ಗೊಂದಲ)

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಯಡಿಯೂರಪ್ಪನವರು ಮಾತನಾಡಿದರೆ ಅದು ರಿಪ್ಲೈ ಎಂದು ತಾವು ಕನ್ಸೀಡ್ ಮಾಡಬೇಕಾಗುತ್ತದೆ. ಅನಂತರ ಬೇರೆ ಮೆಂಬರ್ಸ್ ಮಾತನಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಳ್ಳುವುದು ನಿಮಗೆ ಬಿಟ್ಟಿದ್ದು. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. He is part and parcel of the Government ಅವರು ಏನು ಹೇಳುತ್ತಾರೆಯೋ ಅದು ರಿಪ್ಲೈ ಎಂದು ಕನ್ಸೀಡ್ ಆಗುತ್ತದೆ. ತಾವು ಮಾತನಾಡಿದರೆ ಆಮೇಲೆ ಯಾರನ್ನೂ ಕರೆಯುವುದಕ್ಕೆ ಬರುವುದಿಲ್ಲ.

**ಶ್ರೀ ಎನ್. ಧರ್ಮಸಿಂಗ್** : ಮಾನ್ಯ ಅಧ್ಯಕ್ಷರೆ, ಅವರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಮತ್ತೆ ಇದರ ಬಗ್ಗೆ ಮುಖ್ಯಮಂತ್ರಿಯವರೂ ಕೂಡ ಮಾತನಾಡುತ್ತಾರೆ. ಆದ್ದರಿಂದ, ಇದಕ್ಕಿಂತ ಮುಂಚೆ ಮಾನ್ಯ ಶಿವಕುಮಾರ್‌ರವರು ಮತ್ತು ಮಾನ್ಯ ಕುಮಾರ್ ಬಂಗಾರಪ್ಪನವರು ಹಾಗೂ ಮಾನ್ಯ ದಿನೇಶ್ ಗುಂಡುರಾವ್‌ರವರು ಮಾತನಾಡಬೇಕಾಗಿದೆ. ಇವರೆಲ್ಲರೂ ಐದೈದು ನಿಮಿಷ ಮಾತನಾಡುತ್ತಾರೆ. ಅನಂತರ ಅವರು ಮಾತನಾಡಲಿ.

**ಅಧ್ಯಕ್ಷರು** : ಮಾನ್ಯ ಯಡಿಯೂರಪ್ಪನವರೆ, ತಾವು ಕೊನೆಯಲ್ಲಿ ಮಾತನಾಡುತ್ತೀರಾ?

**ಶ್ರೀ ಎನ್ ಧರ್ಮಸಿಂಗ್** : ಅವರು ಆಮೇಲೆ ಮಾತನಾಡಲಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ತಾವು ಯಾವ ರೀತಿಯಾಗಿ ಆದೇಶ ಕೊಡುತ್ತೀರೋ ಆ ಪ್ರಕಾರ ನಾನು ಮಾತನಾಡುತ್ತೇನೆ.

**ಅಧ್ಯಕ್ಷರು** : ಹಾಗಾದರೆ ಅವರೆಲ್ಲಾ ಮಾತನಾಡಲಿ. ಅನಂತರ ತಾವು ಮಾತನಾಡಿ. ಈಗ ಮಾನ್ಯ ಶಿವಕುಮಾರ್‌ರವರು ಮಾತನಾಡಿ.

**ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರ್)** : ಸನ್ಮಾನ್ಯ ಅಧ್ಯಕ್ಷರೆ, ಬಹಳ ಒತ್ತಡದ ಮಧ್ಯೆಯೂ ಕೂಡ ನನಗೆ ಮಾತನಾಡುವುದಕ್ಕೆ ತಾವು ಕರೆದಿದ್ದೀರಿ. ಬೆಳಿಗ್ಗೆ 10-30 ಗಂಟೆಯಿಂದ ಇಷ್ಟು ಜನ ಶಾಸಕರುಗಳು, ಮಾಧ್ಯಮದವರು ಎಲ್ಲರೂ ನಿಮಗೆ ಸಹಕಾರ ಕೊಡುತ್ತಿರುವುದನ್ನು ನೋಡಿದರೆ ಅವರಿಗೇನೋ ಅದೃಷ್ಟ ಬರುತ್ತಿದೆ ಎಂದು ಕಾಣುತ್ತದೆ.

**ಅಧ್ಯಕ್ಷರು** : ಎಲ್ಲರಿಗೂ ಅದೃಷ್ಟಬಂದರೆ ಸಾಕು. ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಅಧ್ಯಕ್ಷರೆ, ನಾನು ಈ ಮನೆಗೆ 1989 ರಲ್ಲಿ ಬಂದಿರುತ್ತೇನೆ. 4 ಬಾರಿ ಇಲ್ಲಿ ಸದಸ್ಯನಾಗಿರುತ್ತೇನೆ. ಎಷ್ಟೋ ಜನ ಯುವಕರನ್ನು ನೋಡಿದ್ದೇನೆ, ಹಿರಿಯರನ್ನು ನೋಡಿದ್ದೇನೆ, ಎಲ್ಲಾ ಸದಸ್ಯರುಗಳನ್ನು ನೋಡಿದ್ದೇನೆ. ವಿರೋಧ ಪಕ್ಷದ ಸಂಖ್ಯೆ ಕಡಿಮೆ ಇದ್ದಾಗ, ಜಾಸ್ತಿ ಇದ್ದಾಗ ನೋಡಿದ್ದೇನೆ. ಆದರೆ ಆಡಳಿತ ಪಕ್ಷದಲ್ಲಿ, ಏನು ಇವತ್ತು ಆಡಳಿತ ಪಕ್ಷ ಇದೆ, ಎಲ್ಲಾ ನಾಯಕರುಗಳ ಆದಿಯಾಗಿ ಎಲ್ಲಾ ಶಾಸಕರುಗಳ್ಲಲ್ಲಿ ಬಹಳ ದೊಡ್ಡ ನಗುಮುಖ, ಸಂತೋಷ, ಕಳೆ, ಈ ಲೈಟ್‌ನ್ನು ಮೇಲುಗಡೆ ಹಾಕಿದರೂ ಕೂಡ ಮುಖ್ಯಮಂತ್ರಿಗಳಿಂದ ಆದಿಯಾಗಿ ನಮ್ಮ ಮಾನ್ಯ ಯಡಿಯೂರಪ್ಪನವರ ಮುಖಗಳು ಏನು ಹೊಳೆಯುತ್ತಿವೆ, ಒಂದು ತೇಜಸ್ಸು, ನಾನು ಹೇಳುವುದನ್ನು ದಯಮಾಡಿ ಒಂದು ನಿಮಿಷ ಕೇಳಿ.

**ಒಬ್ಬ ಮಾನ್ಯ ಸದಸ್ಯರು** : ಅದನ್ನು ನೀವು ಕಳೆದುಕೊಂಡಿಬಿಟ್ಟಿದ್ದೀರಲ್ಲಾ ?

**ಶ್ರೀ ಡಿ.ಕೆ. ಶಿವಕುಮಾರ** : ನನ್ನ ಮುಖದಲ್ಲೂ ಹೊಳೆಯುತ್ತಿದೆ. ನಾನು ಅದನ್ನು ಹೇಳುತ್ತಿದ್ದೇನೆ. ಹಾಗಾಗಿ ನಿಮ್ಮ ಮುಖದಲ್ಲಿ ಹೊಳೆಸೋಣ ಎಂದು.

**ಒಬ್ಬ ಮಾನ್ಯ ಸದಸ್ಯರು** : ಹಾಗಾದರೆ ಧರ್ಮಸಿಂಗ್‌ರವರು ಇಳಿದ ಬಗ್ಗೆನಾ ?

**ಅಧ್ಯಕ್ಷರು** : ನೀವು ಮಾತನಾಡಿ, ಮಧ್ಯೆದಲ್ಲಿ ಸದಸ್ಯರುಗಳು ಈ ರೀತಿ ಮಾತನಾಡುವುದು ಸರಿಯಲ್ಲ.

**ಶ್ರೀ ಡಿ.ಕೆ ಶಿವಕುಮಾರ್** : ಎಲ್ಲರ ಮುಖದಲ್ಲಿ ಕಳೆ ಇದೆ. ಬಹಳ ಸಂತೋಷ. ಇಲ್ಲಿ ಏನು ವಿಚಿತ್ರ ಕಾಣುತ್ತಿದೆ ಎಂದರೆ, ಮೆಜಾರಿಟಿ ಎಲ್ಲಾ ಮೈನಾರಿಟಿಯಾಗಿದೆ. ಸೀನಿಯರ್ಸ್ ಎಲ್ಲಾ ಜ್ಯೂನಿಯರ್ಸ್ ಆಗಿದ್ದಾರೆ, ಜೂನಿಯರ್ಸ್ ಎಲ್ಲಾ ಸೀನಿಯರ್ಸ್ ಆಗಿದ್ದಾರೆ. ಫ್ರಂಟ್ ಬೆಂಚ್‌ನಲ್ಲಿ ಕುಳಿತವರೆಲ್ಲರೂ ಬ್ಯಾಕ್‌ಬೆಂಚ್‌ಗೆ ಹೊರಟು ಹೋಗಿದ್ದೇವೆ. ಬ್ಯಾಕ್‌ಬೆಂಚ್‌ನವರೆಲ್ಲರೂ ಫ್ರಂಟ್‌ಬೆಂಚ್‌ಗೆ ಬಂದಿದ್ದಾರೆ. ಇದೊಂದು ವಿಶೇಷವಾದದ್ದು. ಆದರೆ ನಾನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಅವರ ನೀತಿನೋ ಸಿದ್ಧಾಂತನೋ ಅವರು ಪಟ್ಟ ಶ್ರಮನೋ ಕಾರ್ಯಾಧ್ಯಕ್ಷರಾದ ಮೇಲೆ ನೀಡಿದ ಬೇಕಾದಷ್ಟು ಸ್ಟೇಟ್‌ಮೆಂಟ್‌ಗಳೆಲ್ಲವನ್ನೂ ನಾವು ನೋಡಿದ್ದೇವೆ. ಅವರು ಪಟ್ಟ ಶ್ರಮ. ಸಂಘಟನೆ ಇವೆಲ್ಲಾ ಪ್ರಜಾಪ್ರಭುತ್ವದಲ್ಲಿ ಕೆಲವರು ಕೆಲವು ಸಂದರ್ಭಗಳಲ್ಲಿ ಒಪ್ಪಬೇಕಾಗುತ್ತದೆ. ಒಂದು ಗುರಿಯನ್ನು ಏನು ಇಟ್ಟುಕೊಂಡಿದ್ದರು. ಆ ಗುರಿಯನ್ನು ಇವತ್ತು ಅವರು ತಲುಪಿದ್ದಾರೆ. ನಮ್ಮ ಪಕ್ಷ ಅದನ್ನು ಅಭಿನಂದಿಸದೆ ಹೋದರೂ ಕೂಡ ವೈಯಕ್ತಿಕವಾಗಿ ಆ ಸ್ಥಾನಕ್ಕೆ ಒಂದು ಚಿಕ್ಕ ವಯಸ್ಸಿನಲ್ಲಿ ಬಂದಾಗ ಬಹುಶ: ನಾವು ಪ್ರಾಮಾಣಿಕವಾಗಿ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಆದರೆ ಅವರು ಮಾಡಿದಂಥ ಶೈಲಿ ಏನಿತ್ತು, ಕಾರ್ಯತಂತ್ರ, ಎಂತೆಂಥ ಸೀನಿಯರ್ಸ್‌ಗಳನ್ನೆಲ್ಲಾ, ಎಷ್ಟು ಜನ ಸೀನಿಯರ್ಸ್ ಎಂ.ಪಿ. ಪ್ರಕಾಶ್‌ನವರು, ಸಿದ್ದರಾಮಯ್ಯನವರು . . ಕಳೆದ ಚುನಾವಣೆಯ ಇನ್ನೂ ನಮ್ಮ ಕಡೆ ಎಲ್ಲಾ ಪೋಸ್ಟರ್ಸ್‌ಗಳು ಇವೆ, ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಇಂದಿರಾಗಾಂಧಿ, ರಾಜೀವ್‌ಗಾಂಧಿ, ಸೋನಿಯಾಗಾಂಧಿಯರನ್ನು ಬಿಟ್ಟರೆ- ಚುನಾವಣೆಗೆ ನಾವು ಹೋಗುವುದಿಲ್ಲ. ನಮ್ಮ ಅಧ್ಯಕ್ಷರ ಮುಖವನ್ನು ಬಿಟ್ಟು ನಾವು ಯಾರ ಮುಖವನ್ನು ಹಾಕಿ ಕೊಳ್ಳುವುದಿಲ್ಲ. ಹಾಗೆ ನಮ್ಮ ಪೋಸ್ಟರ್ಸ್‌ಗಳು ಈಗಲೂ ಕೂಡ ಹಳ್ಳಿಗಳ ಕಡೆ ಇದೆ. ಮಂಜುನಾಥ್‌ರವರದ್ದು, ಸಿಂಧ್ಯಾಸಾಹೇಬರದ್ದು, ಎಂ.ಪಿ ಪ್ರಕಾಶ್, ದೇವೇಗೌಡರದ್ದು, ಸಿದ್ರಾಮಯ್ಯನವರದ್ದು ಎಲ್ಲಾ ಹಿರಿಯರದ್ದು, ಎಲ್ಲ ಕಡೆ ಪೋಸ್ಟರ್ ಗಳು ಇವತ್ತಿಗೂ ಕೂಡ ರಾರಾಜಿಸುತ್ತಿವೆ. ಎಲ್ಲಾ ಸೀನಿಯರ್ಸ್‌ದ್ದು,

ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯರದ್ದು ಪೋಸ್ಟರ್ ಅನ್ನು ನಾನು ಎಲ್ಲೂ ನೋಡಿಲ್ಲ. ಅವರ ರಾಮನಗರ ಕ್ಷೇತ್ರವೊಂದನ್ನು ಬಿಟ್ಟು. ಇಂತಹ ಸಂದರ್ಭದಲ್ಲಿ ಇಂತಹ 'ಪೋಸ್ಟರ್‌ಗಳನ್ನು ದೂರಮಾಡಿ ಈ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕಾದರೆ ಬಹುಶ: ತಾವು ತಮ್ಮ ಅಧ್ಯಕ್ಷತೆಯಲ್ಲಿ ಅವರಿಗೆ ಒಂದು ಸ್ಪೇಷಲ್ಲಾಗಿ ಮಾಡಿದಂಥ ಕಾರ್ಯತಂತ್ರಕ್ಕೆ ಒಂದು ಡಾಕ್ಟರೇಟ್ ಕೊಟ್ಟರೆ ತಪ್ಪಾಗಲಾರದು. ಆ ಡಾಕ್ಟ್ ರೇಟ್‌ಗೆ ಅವರು ಅಭಿನಂದನಾರ್ಹರು, ಅದಕ್ಕೆ ತಾವು ರೆಕ್ಮೆಂಡ್ ಮಾಡಬೇಕೆಂದು ತಮ್ಮಲ್ಲಿ ನಾನು ಒಂದು ಮನವಿಯನ್ನು ಮಾಡುತ್ತೇನೆ. ಒಂದು ನಿಮಿಷ ಸದಸ್ಯರಗಳು, ಡಾಕ್ಟ್‌ರೇಟ್ ಕೊಡಿ ಎಂದು ಕೇಳುತ್ತಿದ್ದೇನೆ, ಸುಮ್ಮನೆ ಇರಿ, ತಾವೆಲ್ಲಾ ಏಕೆ ತಲೆ ಕೆಡಿಸಿಕೊಳ್ಳುತ್ತೀರಿ. ಮಾನ್ಯ ಮೊಯ್ಲಿಯವರಿಗೆ ಕೊಟ್ಟರು, ಯಾವ ಯೂನಿವರ್ಸಿಟಿಯಾದರು ಆಗಬಹುದು. ಕೊಡಬಹುದು ಏನೂ ತೊಂದರೆ ಇಲ್ಲ.

**ಶ್ರೀ ಸಿ. ಚನ್ನಿಗಪ್ಪ** : ಯೂನಿವರ್ಸಿಟಿಯವರು ಮಾತ್ರ ಹೇಳಬೇಕು. ನೀವಲ್ಲ.

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು** : ಸ್ಪೀಕರು ಕೊಡುವುದಕ್ಕೆ ಬರುವುದಿಲ್ಲ. ಗೌರ್ನರು ಕೊಡಬೇಕಾಗುತ್ತದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಸದನದ ಇತಿಹಾಸದಲ್ಲಿ ಇದ್ದರೆ ಶಿವಕುಮಾರ್‌ರವರು ದಯಮಾಡಿ ಈ ಸಭೆಯ ಮುಂದೆ ಮಂಡಿಸಬೇಕು.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಅಲ್ಲ ಯಾವುದೇ ವಿಚಾರಕ್ಕೆ ಡಾಕ್ಟ್‌ರೇಟ್ ಕೊಡುವ ಅವಶ್ಯಕತೆ ಏನಾದರೂ ಇದೆಯಾ ? ಇಲ್ಲಿ ಅದಕ್ಕೆ ಅವಕಾಶ ಇದೆಯಾ ?

**(ಗೊಂದಲ)**

**ಶ್ರೀ ಡಿ.ಕೆ. ಶಿವಕುಮಾರ್** : ಈ ಎಲ್ಲಾ ಮುಖಂಡರುಗಳನ್ನು ಬಲಿ ತೆಗೆದುಕೊಂಡಿದ್ದನ್ನು ನೋಡಿ ನಮ್ಮ ಮಾಜಿ ಮುಖ್ಯಮಂತ್ರಿಗಳು ನನಗೆ ರೇಗಿಸುತ್ತಿದ್ದರು. ನಿಮ್ಮ ಶ್ಲೋಕಗಳು ಏನಿಲ್ಲವೇ ಎಂದು ರೇಗಿಸುತ್ತಿದ್ದರು. ನನಗೆ ಭಗವತ್‌ಗೀತೆಯ ಒಂದು ಶ್ಲೋಕ ನೆನಪಿಗೆ ಬರುತ್ತದೆ.

ಅಶ್ವಂ ನೈವ, ಗಜಂ ನೈವ ವ್ಯಾಘ್ರಂ ನೈವ ನೈವಚಾ
ಗಜಾಪುತ್ರಂ ಬಲೀಂ ದದ್ಯಂ ದೇವದುರ್ಬಲ ಘಾತುಕಾ

ಇದರ ಅರ್ಥ ಏನೆಂದರೆ, ನನ್ನ ಕ್ಷೇತ್ರದಲ್ಲಿ ಒಂದು ಕಪಾಳಮ್ಮ ಎಂದು ಒಂದು ದೇವರು ಇದೆ. ನಾನು ಏನೇ ಮಾಡಬೇಕಾದರೂ ಚುನಾವಣೆಗೆ ಅರ್ಜಿ ಹಾಕುವ ಮುಂಚಿತವಾಗಿ ಕೂಡ ಅಲ್ಲಿಗೆ ಹೋಗಿ ಪೂಜೆ ಮಾಡುತ್ತೇವೆ. ನಿಮ್ಮ ಕಡೆ ನೀವು ಚಾಮುಂಡೇಶ್ವರಿ ಪೂಜೆ ಮಾಡಬಹುದು. ಹೆಣ್ಣು ದೇವತೆಗಳೂ ಕೂಡ ಇವೆ. ಆ ಶ್ಲೋಕದ ಅರ್ಥ ಏನೆಂದರೆ, ದೇವರಲ್ಲಿ ಕೂಡ ತಾರತಮ್ಯ ಇರುತ್ತದಂತೆ, ಭಗವಂತನಲ್ಲಿ ಕೂಡ ತಾರತಮ್ಯ ಎಂದು. ದೇವರು ಬಲಿ ತೆಗೆದುಕೊಳ್ಳುವಾಗ ಅಶ್ವ ಕುದುರೆಯನ್ನು ಬಲಿತೆಗೆದುಕೊಳ್ಳುವುದಿಲ್ಲವಂತೆ, ಆನೆಯನ್ನು ಬಲಿತೆಗೆದುಕೊಳ್ಳುವುದಿಲ್ಲವಂತೆ, ಸಿಂಹವನ್ನು ಬಲಿತೆಗೆದುಕೊಳ್ಳುವುದಿಲ್ಲವಂತೆ, ಹುಲಿಯನ್ನು ಬಲಿ ತೆಗೆದುಕೊಳ್ಳುವುದಿಲ್ಲವಂತೆ, ಆದರೆ ಬಲಿ ತೆಗೆದುಕೊಳ್ಳುವಾಗ ಕೋಳಿ, ಕುರಿ, ಮೇಕೆ, ಅಪ್ಪಿತಪ್ಪಿದರೆ ಪಾಪ ನಮ್ಮ ಎಂ.ಪಿ. ಪ್ರಕಾಶ್, ಬಸವಣ್ಣನವರಂಥವರನ್ನು . . . ಹಾಗೆ ಇವತ್ತು ಬಲಿ ತೆಗೆದುಕೊಳ್ಳುವಾಗ ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದಂಥ ನಮ್ಮ ಸಿದ್ದರಾಮಯ್ಯನವರನ್ನು, ಮಂಜುನಾಥ್ ಸಾಹೇಬರನ್ನು, ಸಿಂಧ್ಯಾ ಸಾಹೇಬರನ್ನು,

ಎಂ.ಪಿ.ಪ್ರಕಾಶ್‌ರವರನ್ನು ಬಲಿ ತೆಗೆದುಕೊಂಡಿದ್ದಾರೆ.

**ಶ್ರೀ ಡಿ.ಟಿ. ಜಯಕುಮಾರ್** : ಇದರಲ್ಲಿ ನಿಮ್ಮ ಪಾತ್ರವೂ ಇದೆ.

**ಶ್ರೀ ಡಿ.ಕೆ. ಶಿವಕುಮಾರ್** : ಬಲಿ ತೆಗೆದುಕೊಳ್ಳುವಾಗ ಚಲುವರಾಯಸ್ವಾಮಿಯನ್ನು ಬಲಿ ತೆಗೆದುಕೊಳ್ಳಲಿಲ್ಲ. ಚನ್ನಿಗಪ್ಪರವರನ್ನು ಮತ್ತು ರೇವಣ್ಣನವರನ್ನು ಬಲಿ ತೆಗೆದುಕೊಳ್ಳಲಿಲ್ಲ. ಆಲಂಗೂರು ಶ್ರೀನಿವಾಸರವರನ್ನು ಮತ್ತು ಬಲಿಷ್ಟರನ್ನು ಬಲಿ ತೆಗೆದುಕೊಳ್ಳಲಿಲ್ಲ. ಪಾಪ ದಲಿತ ವರ್ಗಕ್ಕೆ ಸೇರಿದವರನ್ನು, ಹಿಂದುಳಿದ ವರ್ಗಕ್ಕೆ ಸೇರಿದವರನ್ನು ಬಲಿ ತೆಗೆದುಕೊಂಡಿದ್ದಾರೆ. ಬಹಳ ಸಂತೋಷ ಇದೊಂದು ರಾಜಕಾರಣ ತಂತ್ರ ನಾನು ಬೇಡವೆಂದು ಹೇಳುವುದಿಲ್ಲ. ಒಂದು ಮೆಟ್ಟಲಿಗೆ ಏರಬೇಕಾದರೆ ಕೆಲವೊಂದು ಕಾರ್ಯರೂಪವನ್ನು ಮಾಡಬೇಕಾಗುತ್ತದೆ. ಅದರಲ್ಲಿ ಯಶಸ್ವಿಯಾಗಿದ್ದಾರೆ ಬಹಳ ಸಂತೋಷ. ಅದರ ಬಗ್ಗೆ ನಾನು ತಕರಾರಕ್ಕೆ ಹೋಗುವುದಿಲ್ಲ. ಚಾಣಿಕ್ಯನನ್ನು ಮೀರಿಸಿದ್ದಾರೆ ಬಹಳ ಸಂತೋಷ. ಗುಡ್ ಅದನ್ನು ಉಳಿಸಿಕೊಂಡು ಹೋಗಿ ಎಂದು ನಮ್ಮ ಆಶೆ.

**ಒಬ್ಬ ಮಾನ್ಯ ಸದಸ್ಯರು** : ನೀವೂ ಅದಕ್ಕೇ ಕಾಯುತ್ತಿದ್ದೀರಿ.

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಅಧ್ಯಕ್ಷರೆ, ನಾನು ಜಾಸ್ತಿ ಹೊತ್ತು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವತ್ತು ನಾನು ಬಹಳ ಕಡಿಮೆ ಮಾತನಾಡುತ್ತೇನೆ. ಇಲ್ಲಿ ಏನಾಗಿದೆ ಎಂದರೆ, ನಾನು ಎಲ್ಲರ ಭಾಷಣವನ್ನು ಕೇಳಿದ್ದೇನೆ. ಬೇರೆಯವರು ಏನು ಮಾತನಾಡಿಲ್ಲ ಅದನ್ನು ಮಾತ್ರ ಮಾತನಾಡುತ್ತೇನೆ. ಒಂದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದರು. ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದಂಥ ಗೌರವಾನ್ವಿತ ಶ್ರೀ ದೇವೇಗೌಡರು ಒಂದು ಅಪೀಲ್ ಮಾಡಿಕೊಂಡಿದ್ದಾರೆ. ಎಲ್ಲಾ ಶಾಸಕರುಗಳಿಗೆ 27ನೇ ತಾರೀಖಿನ ಮುಂಚಿತವಾಗಿಯೂ ಕೂಡ ಮಾಡಿಕೊಂಡಿದ್ದಾರೆ, ಅದು ಆದ ಮೇಲೆಯೂ ಮಾಡಿದ್ದಾರೆ. ಹಿಂದು ಪತ್ರಿಕೆಯಲ್ಲಿ ಸಂದರ್ಶನ ಕೊಟ್ಟಿದ್ದಾರೆ. ಏನೆಂದರೆ,

> The former Prime Minister maintained that he was neither a party to his son's understanding with the B.J.P. nor he did not motivate his son to align with the B.J.P. "I will not associate with the communal forces either in my dream or even on my death bed."

ಎಂದು ಒಂದು ಸಂದರ್ಶನವನ್ನು ಕೊಟ್ಟಿದ್ದಾರೆ . ಇದಾದ ಮೇಲೆ .

Mr. Gowda told The Hindu, there are still 72 hours for the party MLAs to retrace the steps. Knowing them well, I am confident that they will care for my words. They have taken a hasty decision thus far. I am sure good sense will prevail upon them and they will return. I have struggled for the victory of each one of the MLAs and hope they will

remember that." ಅವರು ಪಟ್ಟಂಥ ಶ್ರಮ ಅದೆಲ್ಲವನ್ನೂ ಹೇಳಿದ್ದಾರೆ. ಇದನ್ನು ನೆನೆಸಿಕೊಂಡರೆ, ಅವರು ಹೇಳಿಕೊಂಡಿರುವ ರೀತಿ ಅವರು ಕೇಳಿಕೊಂಡಿರುವ ರೀತಿ . . . ಏಕೆಂದರೆ ಆತ್ಮಸಾಕ್ಷಿ ಮತ ಎಂದು ನಮ್ಮ ಮುಖ್ಯಮಂತ್ರಿಗಳು ಹೇಳಿದ್ದರಿಂದ ನಾನು ಈ ಪದವನ್ನು ತಮಗೆ ಹೇಳುತ್ತಿದ್ದೇನೆ. ನನಗೆ ನಮ್ಮ ಮೇಸ್ಟ್ರು ಹೇಳುತ್ತಿದ್ದರು.

"ತ್ರೇತದೋಳ್ ಗುರುವು ಶಿಷ್ಯಂಗೆ ಜಂಗಿಸಿ ವಿದ್ಯೆ ಕಲಿಸಿ ಮಹಾಪ್ರಸಾದದಿಂದ

ದ್ವಾಪರದೋಳ್ ಗುರುವು ಶಿಷ್ಯಂಗೆ ದಂಡಿಸಿ ವಿದ್ಯೆ ಕಲಿಸಿ ಮಹಾಪ್ರಸಾದದಿಂದ

ಆದರೆ ಕಲಿಯುಗದೋಳ್ ಗುರುವು ಶಿಷ್ಯಂಗೆ ವಂದಿಸಿ ವಿದ್ಯೆ ಕಲಿಸಿ ಮಹಾಪ್ರಸಾದದಿಂದ.

ಆದರೆ ತ್ರೇತಾಯುಗದ ಕಾಲದಲ್ಲಿ, ರಾಮನ ಕಾಲದಲ್ಲಿ ಗುರುವು ಶಿಷ್ಯಂಗೆ ಚೆನ್ನಾಗಿ ಜಜ್ಜಿದ್ದನಂತೆ, ಅವನು ಏನೇ ಮಾಡಿದರೂ ಕೂಡ ವಿದ್ಯೆ ಕಲಿಸುತ್ತಿರುವ ಗುರುವಿನ ಪ್ರಸಾದವೆಂದು ಸ್ವೀಕಾರ ಮಾಡುತ್ತಿದ್ದನಂತೆ.

**ಶ್ರೀ ಬಿ.ಸಿ. ಪಾಟೀಲ್ :** ಅಲ್ಲ ತಾವು ಹೇಳಿದ್ದನ್ನು ಆ ಕೃಷ್ಣನ ಕಾಲದ್ದು ಹೇಳಿ ದಯಮಾಡಿ. ಮಾನ್ಯ ಸಭಾಧ್ಯಕ್ಷರೆ ಹೇಳಿ, ಈ ಕಡೆ ಅಡ್ರೆಸ್ ಮಾಡುತ್ತಿದ್ದೀರಲ್ಲಾ.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ :** ಯಾವ ಮೇಸ್ಟ್ರು, ಯಾವ ಸ್ಕೂಲ್‌ನಲ್ಲಿ ಇದನ್ನು ಎಲ್ಲಿ ಹೇಳಿಕೊಟ್ಟರೆಂದು ಇಲ್ಲಿ ಹೇಳಬೇಕು.

**(ಗೊಂದಲ)**

ಶ್ರೀ ಡಿ.ಕೆ. ಶಿವಕುಮಾರ್ :

"ತ್ರೇತದೋಳ್ ಗುರುವು ಶಿಷ್ಯಂಗೆ ಜಂಗಿಸಿ ವಿದ್ಯೆ ಕಲಿಸಿ ಮಹಾಪ್ರಸಾದದಿಂದ

ದ್ವಾಪರ್‌ದೋಳ್ ಗುರುವು ಶಿಷ್ಯಂಗೆ ದಂಡಿಸಿ ವಿದ್ಯೆ ಕಲಿಸಿ ಮಹಾಪ್ರಸಾದದಿಂದ

ಆದರೆ ಕಲಿಯುಗದೋಳ್ ಗುರುವು ಶಿಷ್ಯಂಗೆ ವಂದಿಸಿ ವಿದ್ಯೆ ಕಲಿಸಿ ಮಹಾಪ್ರಸಾದದಿಂದ"

ಅಂದರೆ ತ್ರೇತಾಯುಗದ ಕಾಲದಲ್ಲಿ ರಾಮನ ಕಾಲದಲ್ಲಿ ಜಜ್ಜುತ್ತಿದ್ದರಂತೆ. ಶಿಷ್ಯನಿಗೆ ಹೊಡೆದು ಬಡಿಯುತ್ತಿದ್ದಾಗ ಅವನು ಇದು ಮಹಾ ಪ್ರಸಾದವೆಂದು ಸ್ವೀಕಾರ ಮಾಡುತ್ತಿದ್ದನಂತೆ. ಕೃಷ್ಣನ ಕಾಲ ಬಂತಂತೆ, ಆಗ ದಂಡಿಸುತ್ತಿದ್ದರಂತೆ ಏನು ಮಹಾಪ್ರಸಾದವೆಂದನಂತೆ, ಆದರೆ ಕಲಿಯುಗದೋಳ್ ಗುರುವು ಶಿಷ್ಯನಿಗೆ ಕೈಮುಗಿದುಬಿಟ್ಟು ಬೇಡ ಕಣ್ರೋ ಏನೋ ನನಗೆ ಸಂಬಳವನ್ನು ಕೊಡುತ್ತಿದ್ದಾರೆ ಅದಕ್ಕಾಗಿ ನೀವು ಓದಿರೋ ಎಂದು ಹೇಳಿ ಹಾಗೆಯೇ ಗೌಡರ ಪರವಾಗಿ ಇವರೆಲ್ಲರಿಗೂ ಕೈ ಮುಗಿದು ಇವತ್ತಾದರೂ ಕೂಡ ಈ ಆತ್ಮಸಾಕ್ಷಿ ಮತವನ್ನು ಬಿಜೆಪಿ ಸರ್ಕಾರದ ವಿರುದ್ಧ ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನನಗೆ ನಂಬಿಕೆ ಇದೆ, ಏನು ಮಾಡುವುದಕ್ಕಾಗುತ್ತದೆ, ಸೆಕ್ಯುಲರ್ ತತ್ವ ಉಳಿಸುತ್ತಾರೆಂದು ಇವತ್ತು ಕೂಡ ಅವರು ಬಿಜೆಪಿಯವರ ಜೊತೆ ಅಸೋಸಿಯೇಟ್ ಮಾಡುವುದು ಬೇಡ ಅನ್ನುವಂತಹ ವಾದವಿತ್ತೆಂದರೆ ಅವರು ಇವತ್ತು ಏನು ಈ ಒಂದು ಕ್ರಮವನ್ನು ಇದರ ಮೇಲೆ ಕೈಗೊಂಡಿದ್ದಾರೆ ಪ್ರಾಮಾಣಿಕವಾಗಿ ಇವರನ್ನು ಎಕ್ಸ್‌ಪೆಲ್ ಮಾಡುತ್ತೇವೆಂದು ಏನು ನಾವು ಮಾಧ್ಯಮದಲ್ಲಿ ಓದುತ್ತೇವೆ. ಎಕ್ಸ್‌ಪೆಲ್‌ನ್ನು ಇವತ್ತೂ ಕೂಡ ಮಾಡಿದರೆ ಐ ಸಲ್ಯೂಟ್ ಹಿಸ್ ಡಿಸಿಷನ್. ಈ ಸೆಕ್ಯುಲರ್ ಈ ದೇಶದ ಸಮಗ್ರತೆ ಜಾತ್ಯಾತೀತದ ತತ್ವಕ್ಕೆ ಏನು ಗೌರವವನ್ನು ಕೊಡುತ್ತಾರೆಂದು ಹೇಳುತ್ತಾರೆ ಅದನ್ನು ಈ ಸಂದರ್ಭದಲ್ಲಿ ಎಕ್ಸ್‌ಪೆಲ್ ಮಾಡಿದಾಗ ಮಾತ್ರ ನಾವು

ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎಕ್ಸ್‌ಪೆಲ್ ಮಾಡಲಿಲ್ಲವೆಂದರೆ ಹೇಗೆ ನಾವು ಒಪ್ಪಿಕೊಳ್ಳುವುದಕ್ಕಾಗುತ್ತದೆ.? ಇವತ್ತು ನಾವು ಆತ್ಮಸಾಕ್ಷಿ ಮತವನ್ನು ಈ ಸರ್ಕಾರದ ವಿರುದ್ಧ ತಾವು ಕೊಡಬೇಕೆಂದು ಅವರು ಹೇಗೆ ಅಪೀಲ್ ಮಾಡಿಕೊಂಡರು ಹಾಗೆಯೇ ಮತ್ತೆ ನಾನು ಇವರನ್ನು ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಬಹಳ ಜನರು ನಮ್ಮ ಮುಖ್ಯಮಂತ್ರಿಗಳ ವಿಚಾರ ಮಾತನಾಡಿದರು. ಅವರ ಧರ್ಮರಾಯನ ಧರ್ಮತ್ವ, ದಾನಶೂರಕರ್ಣನ ಧಾನತ್ವ, ಎಲ್ಲವನ್ನೂ ಹೇಳಿದರು. ಅವರು ಬಹಳ ಜನರಿಗೆ ಸಹಾಯವನ್ನು ಮಾಡಿದರು, ಮತ್ತೊಂದು ಎಂದು ಬೇಕಾದಷ್ಟು ಹೇಳಿದರು. ನಾನು ಸ್ವಲ್ಪ ತಿಳಿದುಕೊಂಡಿದ್ದೇನೆ. ಏನು ಈ ಸರ್ಕಾರ ಇಷ್ಟರಮಟ್ಟಿಗೆ ಬರಬೇಕಾದರೆ ಕಾರಣವೇನು ಎನ್ನುವುದನ್ನೂ ಕೂಡ ನಾವೆಲ್ಲರೂ ಹಿಂದೆ ನೋಡಿದಾಗ ನಮ್ಮ ಎಲ್ಲಾ ಶಾಸಕರುಗಳು ಬಹಳ ಒಳ್ಳೆಯ ಲಾಟರಿಯನ್ನು ಹೊಡೆದಿದ್ದಾರೆ. ಅವರು ಯು.ಡಿ.ಮಿನಿಸ್ಟರ್ ಆಗಿದ್ದರು ಅಧ್ಯಕ್ಷರೇ ಬಿಡಿಎನಲ್ಲಿ ಅವರು ಎಷ್ಟರಮಟ್ಟಿಗೆ ಸಹಾಯ ಮಾಡಿದ್ದಾರೆ. ಅವರ ಧರ್ಮತ್ವ ಎಷ್ಟು ಇತ್ತು. ಧಾನತ್ವ ಎಷ್ಟು ಇತ್ತು. ಹೃದಯಶ್ರೀಮಂತಿಕೆ ಎಷ್ಟು ಇತ್ತು. ಇಲ್ಲಿ ಪಟ್ಟಿ ಇದೆ ಮಾನ್ಯ ಅಧ್ಯಕ್ಷರೆ, ಸ್ಟೇ ಸೈಟನ್ನು ನಮ್ಮ ಶಾಸಕರಿಗೆ ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ಕಾಂಗ್ರೆಸ್‌ನವರಿಗೆ ಇಬ್ಬರಿಗೆ ಅಥವಾ ಮೂವರಿಗೆ ಅವಕಾಶ ಸಿಕ್ಕಿರಬಹುದು. ಆಲ್ಕೋಡ್ ಹನುಮಂತಪ್ಪ ಎಂಎಲ್ಎ ಅವರಿಗೆ 50 ಇಂಟು 80 ಸೈಟ್. ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ 50 ಇಂಟು 80, ಮಲ್ಲಿಕಾರ್ಜುನ ಖುಬಾ 50 ಇಂಟು 80. ಶ್ರೀ ಪುಟ್ಟೇಗೌಡ 50 ಇಂಟು 80 ಶ್ರೀ ರೇವುನಾಯಕ್ ಬೆಳಮಗಿ 50 ಇಂಟು 80 ಸೈಟ್. ಶ್ರೀ ದರ್ಶನಾಪೂರ್‌ಗೆ, ಶ್ರೀ ಶ್ರೀರಾಮುಲುರವರಿಗೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಸಾರ್.

(ಗೊಂದಲ)

**ಶ್ರೀ ಹೆಚ್.ಡಿ. ಬಸವರಾಜು** : ಯಾರ್ಯಾರಿಗೆ ಕೊಟ್ಟಿದ್ದಾರೆಂಬುದರ ಬಗ್ಗೆ ಶ್ವೇತಪತ್ರ ಹೊರಡಿಸಿ ಅದು ಇಡೀ ರಾಜ್ಯದ ಜನರಿಗೆ ಗೊತ್ತಾಗಬೇಕು.

(ಗೊಂದಲ)

**ಶ್ರೀ ಎನ್. ಚಲುವರಾಯಸ್ವಾಮಿ** : ಸನ್ಮಾನ್ಯ ಸಭಾಧ್ಯಕ್ಷರೆ . . .

**ಒಬ್ಬ ಮಾನ್ಯ ಸದಸ್ಯರು** : ಕಿರುಕುಳ ಹೇಗಾಯಿತು ಅಂದರೆ ನಮಗೆ ಅದರ ಬಗ್ಗೆ ಹೇಳುತ್ತೇನೆ.

(ಗೊಂದಲ)

**ಶ್ರೀ ಸಿ.ಎಸ್. ಪುಟ್ಟೇಗೌಡ** : ನಾವು ಅದಕ್ಕಾಗಿ ಪ್ರಶಂಸೆ ಪಡುತ್ತೇವೆ.

(ಗೊಂದಲ)

**ಶ್ರೀ ಎನ್. ಚಲುವರಾಯಸ್ವಾಮಿ** : ಸನ್ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ವೈಯಕ್ತಿಕವಾದ ವಿಷಯದ ಬಗ್ಗೆ ಮಾತನಾಡಿದರೆ ತಪ್ಪಾಗುತ್ತದೆ.

**ಶ್ರೀ ಸಿ.ಎಸ್. ಪುಟ್ಟೇಗೌಡ** : ಮಾನ್ಯ ಅಧ್ಯಕ್ಷರೆ, ಇಲ್ಲಿ ನನ್ನ ಹೆಸರು ಬಂದಿರುವುದರಿಂದ ನಾನು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

**ಶ್ರೀ ಎನ್. ಚಲುವರಾಯಸ್ವಾಮಿ** : ಇಲ್ಲಿ ವೈಯಕ್ತಿಕವಾದ ವಿಚಾರವನ್ನು ಮಾತನಾಡಿದರೆ ಯಾರೂ ಕೂಡ ಸಹಿಸುವುದಿಲ್ಲ. ಯಾರ ಮನೆಯಿಂದ ಕೊಟ್ಟಿಲ್ಲ. ಧರ್ಮಸಿಂಗ್‌ರವರ ಶ್ರೀ ಶಿವಕುಮಾರ್ ಮನೆಯಿಂದ ಕೊಟ್ಟಿಲ್ಲ. ಅದು ಈ ರಾಜ್ಯದ ಒಬ್ಬ ಶಾಸಕರಿಗೆ ಸಿಗಬೇಕಾಂತಹ

ಹಕ್ಕು. ಎಲ್ಲರಿಗೂ ನಿವೇಶನವನ್ನು ಕೊಟ್ಟಿದ್ದಾರೆ. ಆ ಬಗ್ಗೆ ಮಾತನಾಡಬೇಕಾದರೆ 3ನೇ ಭಾರಿ ಆಯ್ಕೆಯಾಗಿ ಬಂದಿರುವ ಒಬ್ಬ ಶಾಸಕರು ಗೌರವಯುತವಾಗಿ ಮಾತನಾಡುವುದನ್ನು ಕಲಿತುಕೊಳ್ಳಿ. ಇವರಪ್ಪನ ಮನೆಯಿಂದ ಕೊಟ್ಟಿಲ್ಲ.

(ಗೊಂದಲ)

**ಶ್ರೀ ಸಿ.ಎಸ್. ಪುಟ್ಟೇಗೌಡ** : ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

**ಅಧ್ಯಕ್ಷರು** : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿ.ಎಸ್. ಪುಟ್ಟೇಗೌಡ** : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಹೇಳುತ್ತೇನೆ.

**ಅಧ್ಯಕ್ಷರು** : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿ.ಎಸ್. ಪುಟ್ಟೇಗೌಡ** : ಮಾನ್ಯ ಅಧ್ಯಕ್ಷರೆ, ಇಲ್ಲಿ ನನ್ನ ಹೆಸರು ಮಾನ್ಯ ಶಿವಕುಮಾರ್‌ರವರು ಹೇಳಿರುವುದರಿಂದ ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಎಲ್ಲರೂ ಒಂದು ನಿಮಿಷ ಯೀಲ್ಡ್ ಆದರೆ, ನನ್ನ ಹೆಸರು ಬಂದಿರುವುದರಿಂದ ನಾನು ಮಾತನಾಡಬೇಕಾಗಿದೆ.

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ** : ಮಾನ್ಯ ಅಧ್ಯಕ್ಷರೆ . . .

**ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ,** : ಇವರ ಮನೆ ಕೆಲಸಕ್ಕೆ ಬಂದಿದ್ದೇವಾ, ನಾವು ಶಾಸಕರಾಗಿ ಗೆದ್ದು ಬಂದಿದ್ದೇವೆ, ನೀವು ಕುಳಿತುಕೊಳ್ಳಿ, ಪ್ರಪಂಚಕ್ಕೆ ಇಲ್ಲದ ಶಾಸಕರಲ್ಲ. ನನ್ನ ಹೆಸರನ್ನು ಕೂಡ ಉಚ್ಚಾರ ಮಾಡಿದರು. ತಾವು ಸ್ಪೀಕರ್ ಇದ್ದಾಗ ಈ ಸದನದಲ್ಲಿ ಚರ್ಚೆಯಾಗುವಾಗ ನಾನು ಸದನದೊಳಗಡೆ ಒಂದು ದಿವಸ ಹಿಂದುಗಡೆ ಕುಳಿತುಕೊಂಡು ಹೇಳಿದ್ದೆ. ಪಾಪ 3 ಅಡಿ 6 ಅಡಿ ಜಾಗ ಹೂಳುವುದಕ್ಕೂ ಇಲ್ಲದಿರುವ ಶಾಸಕರೂ ಇಲ್ಲಿದ್ದಾರೆ. ಎಂದು. ನಿಜ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈ ಸಂಪ್ರದಾಯವನ್ನು ಬೆಳೆಸಿದರು. ಬಹುಶ: ಹನುಮಂತಯ್ಯನವರ ಕಾಲದಿಂದಲೂ ಕೂಡ ಸದಾಶಿವನಗರದಲ್ಲಿರತಕ್ಕಂತಹ ಮಾನ್ಯ ಗಣ್ಯ ರಾಜಕಾರಣಿಗಳೆಲ್ಲರೂ ಶಾಸಕರೆಲ್ಲರೂ ಕೂಡ ಸೈಟನ್ನು ಪಡೆದುಕೊಂಡಿದ್ದಾರೆ. ಇಲ್ಲಿ ನಮ್ಮ ಹೆಸರನ್ನು ವಿಶೇಷವಾಗಿ ಹೇಳುವಂತಹ ಅಗತ್ಯವೇನೂ ಇಲ್ಲ. ಈ ಬೆಂಗಳೂರು ನಗರದಲ್ಲಿ ಜಮೀನನ್ನು ಲೂಟಿ ಮಾಡಿರುವವರಲ್ಲಿ ಯಾರು ಫಸ್ಟ್ ಸೆಕೆಂಡ್ ಎಂಬುದನ್ನು ತೆಗೀರಿ ನೋಡೋಣ.

(ಗೊಂದಲ)

**ಶ್ರೀ ಸಿ.ಎಸ್. ಪುಟ್ಟೇಗೌಡ** : ಒಂದು ನಿಮಿಷ ತಾಳಿ. ಯಾರ್‍ಯಾರು ಸ್ವಾಮಿ, ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ದಯಮಾಡಿ ಪ್ಲೀಸ್ ಯಾರ್‍ಯಾರು ಪುಣ್ಯಾತ್ಮರು ಈ ಸದನದಲ್ಲಿ...

(ಗೊಂದಲ)

**ಶ್ರೀ ಎಂ.ಟಿ. ಕೃಷ್ಣಪ್ಪ** : ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಈ ಬೆಂಗಳೂರಿನಲ್ಲಿ ಲೂಟಿಯಾಗಿರುವುದು.

(ಗೊಂದಲ)

**ಒಬ್ಬ ಮಾನ್ಯ ಸದಸ್ಯರು** : ಇವರ ಬಗ್ಗೆ ಎನ್‌ಕ್ವಯರಿಗೆ ಹಾಕಿಸಿ.

(ಗೊಂದಲ)

**ಅಧ್ಯಕ್ಷರು** : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಅಧ್ಯಕ್ಷರು** : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಯಡಿಯೂರಪ್ಪನವರೆ..

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ. . .

**ಶ್ರೀ ಸಿ.ಎಸ್. ಪುಟ್ಟೇಗೌಡ** : ಮಾನ್ಯ ಯಡಿಯೂರಪ್ಪ, ನಾವು ನಮ್ಮ ಕಷ್ಟವನ್ನು ಹೇಳಿಕೊಳ್ಳಬೇಕಾಗಿದೆ. ನಾನು ಬೆಳಗಿನಿಂದಲೂ ಮಾತನಾಡಿಲ್ಲ, ನಾನು ಒಂದು ನಿಮಿಷ ಇದರ ಬಗ್ಗೆ ಮಾತನಾಡಬೇಕಾಗಿದೆ. ನಾವು ನಮ್ಮ ಊರಿನಿಂದ ಇಲ್ಲಿಗೆ ಕಾರನ್ನು ತೆಗೆದುಕೊಂಡು ಬರಬೇಕಾದರೆ 500–00 ರೂಪಾಯಿಗಳು ಡೀಸೆಲ್‌ಗಾಗಿ ಖರ್ಚು ಆಗುತ್ತದೆಂದು ನಾವು ಬಸ್ಸಿನಲ್ಲಿ ಜೀವದ ಹಂಗನ್ನು ತೊರೆದು ಪ್ರಯಾಣಿಸುವಂತಹ ಶಾಸಕನಿಗೆ ಒಂದು ಸೈಟನ್ನು ಕೊಟ್ಟರೆ ತಪ್ಪೇ? ಲೂಟಿ ಮಾಡಿ ಇಲ್ಲಿ ಕೋಟಿಗಟ್ಟಲೆ ರೂ. ಬೆಲೆಬಾಳುವ ಸೈಟು ಮನೆಗಳನ್ನು ಇವರು ಮಕ್ಕಳು ಹಾಗೂ ಮರಿಮಕ್ಕಳ ಹೆಸರಿನಲ್ಲಿ ಇಟ್ಟುಕೊಂಡಿದ್ದಾರಲ್ಲಾ . . . ಇದು ಸರಿನಾ ? ಕೂಲಿ ಮಾಡಿಕೊಂಡವರು ಸೈಟನ್ನು ತೆಗೆದುಕೊಂಡರೆ ಇದರ ಬಗ್ಗೆ ಮಾತ್ರ ಚರ್ಚೆಯಾಗುತ್ತದೆ. ದಯಮಾಡಿ ಮರ್ಯಾದಸ್ಥರ ಹೆಸರನ್ನು ಎತ್ತಬೇಕಾದರೆ ಶಾಸನಸಭೆಯಲ್ಲಿ ಗಂಭೀರವಾಗಿ ಹತ್ತುಸಾರಿ ಯೋಚನೆ ಮಾಡಲಿ.

(ಗೊಂದಲ)

**ಅಧ್ಯಕ್ಷರು** : ಮಾನ್ಯ ಶಿವಕುಮಾರ್‌ರವರೇ . . .

**ಶ್ರೀ ಎನ್. ಚಲುವರಾಯಸ್ವಾಮಿ** : ಮಾನ್ಯ ಸದಸ್ಯರು ಕ್ಷಮಾಪಣೆಯನ್ನು ಕೇಳಬೇಕು. ದಯಮಾಡಿ ಅವರು ಕ್ಷಮಾಪಣೆಯನ್ನು ಕೇಳಬೇಕು. ಶಾಸಕರ ಹೆಸರನ್ನು ಹೇಳತಕ್ಕಂತಹ ಕೆಲಸ ಮಾಡಬಾರದು.

(ಗೊಂದಲ)

**ಶ್ರೀ ಸಿ. ಚನ್ನಿಗಪ್ಪ** : ಮಾನ್ಯ ಅಧ್ಯಕ್ಷರೆ, ಇವರಷ್ಟು, ಆಸ್ತಿ ಮಾಡಿರುವವರು ಬೆಂಗಳೂರಿನಲ್ಲಿ ಯಾರೂ ಇಲ್ಲ. ನೀನು ಕೋಟ್ಯಾಧಿಪತಿ ಕಣಪ್ಪಾ.

(ಗೊಂದಲ)

**ಅಧ್ಯಕ್ಷರು** : ಎಲ್ಲರು ಕುಳಿತುಕೊಳ್ಳಿ, ಯಾಕಪ್ಪಾ ಇಷ್ಟೊಂದು ಎಮೋಷನಲ್ ಆಗುತ್ತೀರಿ ? ಮಾನ್ಯ ಶಿವಕುಮಾರ್‌ರವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಡಿ.ಕೆ. ಶಿವಕುಮಾರ್** : ಮಾನ್ಯ ಅಧ್ಯಕ್ಷರೆ, ಈಗ ಒಂದು ನಿಮಿಷ.

**ಅಧ್ಯಕ್ಷರು** : ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಡಿ.ಕೆ. ಶಿವಕುಮಾರ್** : ಆಯಿತು.

**ಅಧ್ಯಕ್ಷರು** : ನೋಡಿ ವೈಯಕ್ತಿಕವಾಗಿ ಯಾರ ಹೆಸರನ್ನೂ ಹೇಳತಕ್ಕಂತಹ ಅಗತ್ಯವಿಲ್ಲ. ಈಗ ಏನಾಗಿದೆ. ಕಾನೂನಿನ ಪ್ರಕಾರ ಡಿಸ್‌ಕ್ರಿಷನರಿ ಖೋಟಾ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಅಧಿಕಾರವಿದೆ.

(ಗೊಂದಲ)

ದಯಮಾಡಿ ಎಲ್ಲರೂ ಕೇಳಿ. ಅದಕ್ಕೋಸ್ಕರ ಹೀಗೆ ಅವರು ತೆಗೆದುಕೊಂಡಿದ್ದಾರೆ. ಇವರು ತೆಗೆದುಕೊಂಡಿದ್ದಾರೆಂದು ಹೇಳುವಂತಹ ಅಗತ್ಯವಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಈ ಭೂಹಗರಣದ ಬಗ್ಗೆ ಈ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ. ಈ ಕಡೆಯವರು ಹಾಗೂ ಆ ಕಡೆಯವರು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿಮಗೆ ಧೈರ್ಯವಿದ್ದರೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಉಪ ಮುಖ್ಯಮಂತ್ರಿಗಳಲ್ಲಿ ಈ ಪೀಠದಿಂದ ಕುಳಿತು ಹೇಳುತ್ತೇನೆ. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಲಿ. ಯಾರ್ಯಾರು ಆಪಾದಿತರು ಇದ್ದಾರೆ. ಕಾನೂನಿಗೆ ವಿರುದ್ಧವಾಗಿ ಯಾರು ಜಮೀನನ್ನು ಮಾಡಿಕೊಂಡಿದ್ದಾರೆ. ಅವರೆಲ್ಲರ ಆಸ್ತಿಗಳನ್ನು ತೆಗೆದುಕೊಂಡು ಬಿಟ್ಟು ಕಾನೂನಿನ ಪ್ರಕಾರ ಅದನ್ನು ತೆಗೆದುಕೊಳ್ಳುವಂತಹ ಧೈರ್ಯವಿದ್ದರೆ ಅದನ್ನು ಮಾಡಿ. ಈ ಪೀಠದಿಂದ ಕುಳಿತು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** :- ಅಧ್ಯಕ್ಷರು ಈಗ ನನಗೆ ಸೂಚನೆ ಕೊಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ರಾಜ್ಯದಲ್ಲಿ — — — —

(ಗೊಂದಲ)

**ಅಧ್ಯಕ್ಷರು** : ಇಲ್ಲಿ ಕೇಳಿರಿ, ಇತ್ತೀಚೆಗೆ ನೀವೆಲ್ಲಾ ಪ್ರೈಮರಿ ಸ್ಕೂಲ್ ಮಕ್ಕಳ ತರಹ ಆಗಿಬಿಟ್ಟಿದ್ದೀರಿ, ಏತಕ್ಕೆ ಹೀಗೆ ಆಗುತ್ತಿದೆ, ಸಭಾನಾಯಕರು ನಿಂತು ಮಾತನಾಡುತ್ತಿದ್ದಾರೆ, ನೀವೆಲ್ಲಾ ಸುಮ್ಮನೆ ಲಲಲಲಾ ಅಂತೀರಿ, ಸಭಾನಾಯಕರು ಗಂಭೀರವಾದ ವಿಚಾರವನ್ನು ಕುರಿತು ಮಾತನಾಡುತ್ತಾರೆ, ದಯಮಾಡಿ ಎಲ್ಲರೂ ಕೇಳಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** :- ಅಧ್ಯಕ್ಷರು ನನಗೆ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಈ ರಾಜ್ಯದಲ್ಲಿ ಆಗಿರತಕ್ಕಂಥ ಭೂಹಗರಣಗಳು, ಗಣಿಗಾರಿಕೆಯ ಹೆಸರಿನಲ್ಲಿ ಆಗರತಕ್ಕಂಥ ಲೂಟಿಯ ಬಗ್ಗೆ ಅಧ್ಯಕ್ಷರು ನಮಗೆ ಇವತ್ತು ಸೂಚನೆಯನ್ನು ಕೊಟ್ಟಿದ್ದಾರೆ, ಈ ಸರ್ಕಾರ ಎಷ್ಟು ದಿವಸ ಇರುತ್ತದೆಯೋ ಎಷ್ಟು ದಿವಸ ಮುಂದುವರಿಯುತ್ತದೆಯೋ ಎಂಬುದು ನನ್ನ ಮುಂದೆ ಪ್ರಶ್ನೆ ಇಲ್ಲ. ಈ ರಾಜ್ಯದಲ್ಲಿರುವ ಯಾವನೇ ಒಬ್ಬ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದರೆ ನನ್ನನ್ನು ಹಾಗೂ ನನ್ನ ಕುಟುಂಬದ ಸಮೇತ ಇದನ್ನು ತನಿಖೆ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ.

(ಗೊಂದಲ)

**ಅಧ್ಯಕ್ಷರು** : ಈಗ ಮಾತನಾಡಿ, ವೈಯಕ್ತಿಕ ವಿಚಾರಗಳ ಬಗ್ಗೆ ಮಾತನಾಡಬೇಡಿ, ಅದು ಡಿಸ್ಕ್ರಿಷನರಿ ಕೋಟಾ, ಅದರ ಬಗ್ಗೆ ಮಾತನಾಡುವ ಅಗತ್ಯವಿಲ್ಲ.

(ಗೊಂದಲ)

**ಮಾನ್ಯ ಸದಸ್ಯರೊಬ್ಬರು** : ತಾವೇನು ಸಿ.ಬಿ.ಐ ತನಿಖೆ ಎಂದು ಹೇಳುತ್ತಿದ್ದೀರಾ ?

(ಗೊಂದಲ)

**ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** :- ಈಗ ರಾಜ್ಯದಲ್ಲಿ ಒಂದು ಸಲ ಒಬ್ಬ ಹಿರಿಯ ರಾಜಕಾರಣಿಯ ಬಗ್ಗೆ ಸಿ.ಬಿ.ಐ. ತನಿಖೆಗೆ ಒಪ್ಪಿಸಲಾಗಿತ್ತು. ಅವರು ಹಿರಿಯ ರಾಜಕಾರಣಿಗಳಾಗಿದ್ದು ಅವರ ಹೆಸರನ್ನು ಹೇಳಲಿಕ್ಕೆ ಸಾಧ್ಯವಿಲ್ಲ, ಅವರು ಈಗ ಸದನದಲ್ಲಿಲ್ಲ, ಈ

ವಿಷಯ ನಮ್ಮ ಹಿರಿಯ ಸಚಿವರಾದ ಶ್ರೀ ಸಿಂಧ್ಯಾ, ಎಂ.ಪಿ. ಪ್ರಕಾಶ್ ಹಾಗೂ ಸಿದ್ಧರಾಮಣ್ಣನವರಿಗೂ ಗೊತ್ತಿದೆ. ಹಾಗಾಗಿ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ, ರಾಜ್ಯಸರ್ಕಾರ ಯಾವುದೇ ಕಾರಣಕ್ಕೂ ಈ ರಾಜ್ಯದ ಆಸ್ತಿಯನ್ನು ದುರುಪಯೋಗಪಡಿಸಿಕೊಳ್ಳಲಿಕ್ಕೆ, ಲಪಟಾಯಿಸಲಿಕ್ಕೆ ಅವಕಾಶವನ್ನು ಕೊಡಲಿಕ್ಕೆ ಸಿದ್ಧವಿಲ್ಲ, ಇವತ್ತು ಅಧ್ಯಕ್ಷರು ನಮಗೆ ಸೂಚನೆಯನ್ನು ಕೊಟ್ಟಿದ್ದಾರೆ, ಆ ಸೂಚನೆಯನ್ನು ನಾನು ಇವತ್ತು ಈ ಸದನದ ಸಭಾನಾಯಕನಾಗಿ ಈ ಒಂದು ಕೆಲಸಕ್ಕೆ ತಕ್ಷಣವೇ ಚಾಲನೆಯನ್ನು ಕೊಡುವಂತಹ ಕೆಲಸವನ್ನು ಪ್ರಾರಂಭ ಮಾಡುತ್ತೇನೆಂದು ಹೇಳಬಯಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್** : ಆಯಿತು, ಅಧ್ಯಕ್ಷರೆ,

**ಶ್ರೀ ಎನ್. ಚಲುವರಾಯಸ್ವಾಮಿ** : ಶ್ರೀ ಧರಂಸಿಂಗ್ ಅವರು ಸ್ವಂತ ಸೈಟುಗಳನ್ನು ಕೊಟ್ಟಿದ್ದಾರೆಯೆ ? ಇದರ ಬಗ್ಗೆ ಕ್ಷಮಾಪಣೆ ಕೇಳಬೇಕು, 'ಇನ್ನೊಬ್ಬರ ಹೆಸರನ್ನು ಹೇಳುವುದು ಸರಿಯೇ ? ಶಾಸಕರಿಗೆ ಸೈಟುಗಳನ್ನು ಕೊಡುವಂತಹದು ಹೆಗಡೆಯವರ ಕಾಲದಿಂದ ಬಂದಿದೆ, ಇದರ ಬಗ್ಗೆ ಅವರು ಕ್ಷಮಾಪಣೆ ಕೇಳಬೇಕು.

**ಅಧ್ಯಕ್ಷರು** : ಚಲುವರಾಯಸ್ವಾಮಿಯವರೆ, ಮತ್ತೆ ಅದೇ ವಿಷಯ ಮಾತನಾಡಬೇಡಿ,

**ಶ್ರೀ ಎನ್. ಚಲುವರಾಯಸ್ವಾಮಿ** : ಪ್ರತ್ಯೇಕವಾಗಿ ಶಾಸಕರ ಹೆಸರನ್ನು ಸದನದಲ್ಲಿ ಹೇಳಿರುವುದು ಸರಿಯಿಲ್ಲ, ಅವರ ಸ್ವಂತ ಸೈಟನ್ನು ಕೊಟ್ಟಿದ್ದರೆ ಅದರ ಬಗ್ಗೆ ಹೇಳಲಿ, ಇಲ್ಲದಿದ್ದರೆ ಇದರ ಬಗ್ಗೆ ಕ್ಷಮಾಪಣೆ ಕೇಳಬೇಕು.

**ಅಧ್ಯಕ್ಷರು** : ಮಾತನಾಡಿ, ಈಗ ವೈಯಕ್ತಿಕ ರೆಫರೆನ್ಸ್ ಮಾಡಿ ಮಾತನಾಡಬೇಡಿ,

**(ಗೊಂದಲ)**

**ಶ್ರೀ ಡಿ.ಕೆ. ಶಿವಕುಮಾರ್** : ಅಧ್ಯಕ್ಷರೆ, ಈಗ ನಾನು ಏನು ಹೇಳಬೇಕೆಂದಿದ್ದೇನೆ ಎಂಬುದನ್ನು ಅವರು ಕೇಳಲಿ. ನನ್ನ ಅಭಿಪ್ರಾಯವೇನೆಂದರೆ, ನನ್ನ ಬಳಿ ಈಗ ಲಿಸ್ಟ್ ಇದೆ, ಅದರ ಬಗ್ಗೆ ಈಗ ನಾನು ಏನೂ ಹೇಳಲಿಕ್ಕೆ ಹೋಗುವುದಿಲ್ಲ ಆ ಲಿಸ್ಟನ್ನು ನಾನು ಈಗ ಓದಲಿಕ್ಕೆ ಹೋಗುವುದಿಲ್ಲ, ಅವರಿಗೆ ಈಗಾಗಲೇ ಟೆನ್‌ಷನ್ ಆಗುತ್ತಿದೆ.

**(ಗೊಂದಲ)**

**ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ)** : ಅದರ ಬಗ್ಗೆ ಮಾನ್ಯ ಧರಂಸಿಂಗ್ ಅವರು ಹೇಳಲಿ, ಪಕ್ಷದ ಮುಖ್ಯಮಂತ್ರಿಗಳಿಗೆ ಅವಮಾನವಾಗುತ್ತಿದೆ, ಅವರು ಅವರ ಸ್ವಂತ ಸೈಟಿನಿಂದ ಕೊಟ್ಟಿಲ್ಲ, ಈ ರೀತಿ ಮಾತನಾಡಿ ಸದನಕ್ಕೆ ಅವಮಾನ ಮಾಡುತ್ತಿದ್ದಾರೆ.

**ಅಧ್ಯಕ್ಷರು** : ಚನ್ನಿಗಪ್ಪನವರೇ, ದಯಮಾಡಿ ಕುಳಿತುಕೊಳ್ಳಿ, ಆ ರೀತಿಯಾಗಿದ್ದರೆ ಆ ಸೈಟುಗಳು ಕ್ಯಾನ್ಸಲ್ ಆಗುತ್ತದೆ.

**ಶ್ರೀ ಸಿ. ಚನ್ನಿಗಪ್ಪ** : ಅವರ ಪಕ್ಷದ ಮುಖ್ಯಮಂತ್ರಿ ಆಗಿದ್ದವರು ಈ ಬಗ್ಗೆ ಹೇಳಲಿ,

**(ಗೊಂದಲ)**

**ಅಧ್ಯಕ್ಷರು** :- ಈಗ ಯಾರೂ ಇಲ್ಲಿ ವೈಯಕ್ತಿಕ ರೆಫರೆನ್ಸ್ ಮಾಡುವುದು ಬೇಡ.

**ಶ್ರೀ ಡಿ.ಕೆ. ಶಿವಕುಮಾರ್** : ನಾನು ಕ್ಯಾನ್ಸಲ್ ಮಾಡಿ ಎಂದು ಹೇಳುತ್ತಿಲ್ಲ, ಒಬ್ಬ ಶಾಸಕರಿಗೆ ಏನು ಸಿಕ್ಕಬೇಕೋ ಎಂದಿದೆಯೋ............

**ಶ್ರೀ ಚಲುವರಾಯಸ್ವಾಮಿ** : ಕ್ಯಾನ್ಸಲ್ ಮಾಡಲಿಕ್ಕೆ ನಿಮಗೇನು ಹಕ್ಕಿದೆ ? ನೀವು ಏಕೆ ಹಾಗೆ ಮಾತನಾಡುತ್ತೀರಿ,

(ಗೊಂದಲ)

**ಶ್ರೀ ಸಿ. ಚೆನ್ನಿಗಪ್ಪ** : ನಿಮ್ಮ ಮುಖ್ಯಮಂತ್ರಿಗಳಿಗೆ ನೀವೇ ಅವಮಾನ ಮಾಡುತ್ತೀರಾ ?

(ಗೊಂದಲ)

**ಅಧ್ಯಕ್ಷರು** : ಮಾತನಾಡಲಿಕ್ಕೆ ಬಿಡಿ.

**ಶ್ರೀ ಸಿ. ಚೆನ್ನಿಗಪ್ಪ** : ನೀವು ಆ ಲಿಸ್ಟನ್ನು ಓದಿ, ಜನಗಳಿಗೂ ಗೊತ್ತಾಗಲಿ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್** : ಅಧ್ಯಕ್ಷರೆ, ಮುಖ್ಯಮಂತ್ರಿಗಳು ಶಾಸಕರಿಗೆ ಏನು ಅರ್ಹತೆಯಿದೆ ಅದನ್ನು ಬಿ.ಜೆ.ಪಿ. ಹಾಗೂ ಜನತಾದಳದ ಶಾಸಕರಿಗೆ ಕೊಟ್ಟಿದ್ದಾರೆ, ನಮಗೂ ಕೊಟ್ಟಿದ್ದಾರೆ. ನನಗೂ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಸಿ. ಚನ್ನಿಗಪ್ಪ** : ಅಧ್ಯಕ್ಷರೆ, ಆ ಮಾತನ್ನು ಮುಖ್ಯಮಂತ್ರಿಗಳು ಹೇಳಲಿ, ಇವರೇಕೆ ಆ ಮಾತು ಹೇಳುತ್ತಿದ್ದಾರೆ, ? ಈ ಸರ್ಕಾರದ ಸ್ಥಿತಿಗೆ ನೀವೇ ಕಾರಣ, ಮಾನ್ಯ ಮುಖ್ಯಮಂತ್ರಿಗಳು ಏನೂ ಅನ್ಯಾಯ ಮಾಡಿಲ್ಲ, ನಿಮ್ಮಂತಹವರಿಂದ ಹೀಗಾಗಿರುವುದು — —

(ಗೊಂದಲ)

**ಶ್ರೀ ಡಿಕೆ. ಶಿವಕುಮಾರ್** : ತಪ್ಪಿಲ್ಲ,

**ಅಧ್ಯಕ್ಷರು** : ಈಗಾಗಲೇ 10.00 ಗಂಟೆ ಆಯಿತು. ದಯಮಾಡಿ ಬೇಗ ಮಾತನಾಡಿ ಮುಗಿಸಿ.

**ಶ್ರೀ ಸಿ. ಚನ್ನಿಗಪ್ಪ** : ಒಬ್ಬರ ಹೆಸರಿನಲ್ಲಿ ಮೂರು ಮೂರು ಸೈಟುಗಳನ್ನು ತೆಗೆದುಕೊಂಡಿದ್ದಾರೆ, ಅದರ ಬಗ್ಗೆ ಸ್ವಲ್ಪ ಕೇಳಿ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್** : ನನಗೆ ಮಾತನಾಡಲಿಕ್ಕೆ ಬಿಡದಿದ್ದರೆ ಹೇಗೆ ಅಧ್ಯಕ್ಷರೇ,

**ಅಧ್ಯಕ್ಷರು** :– ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಸಿ. ಚನ್ನಗಪ್ಪ** : 27 ನೇ ತಾರೀಖು ಶಾಸಕರಿಗೆ ಏನು ಆಮಿಷ ಒಡ್ಡಿದ್ದರು ಅದರ ಬಗ್ಗೆ ಪ್ರಮಾಣ ಮಾಡಿ ಹೇಳಲಿ.

(ಗೊಂದಲ)

**ಅಧ್ಯಕ್ಷರು** : ಮಾತನಾಡಿ.

**ಶ್ರೀ ಡಿ.ಕೆ. ಶಿವಕುಮಾರ್** : ಅಧ್ಯಕ್ಷರೇ, ನಾನು ಏನು ಹೇಳಲಿಕ್ಕೆ ಬಯಸುತ್ತೇನೆಂದರೆ, ಒಂದು ನಿಮಿಷ ನಾನು ಮಾತನಾಡಿ ಮುಗಿಸಿಬಿಡುತ್ತೇನೆ, ಪ್ಲೀಸ್,

**ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ)** : ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಧರಂಸಿಂಗ್ ಅವರು ಯಾರ್ಯಾರಿಗೆ ಸೈಟುಗಳನ್ನು ಕೊಟ್ಟಿದ್ದಾರೆಂಬ ಬಗ್ಗೆ ಸಂಪೂರ್ಣ ವಿವರವನ್ನು ಸದನದಲ್ಲಿ ಮಂಡಿಸಬೇಕೆಂದು ಶ್ರೀ ಶಿವಕುಮಾರ್‌ರವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

(ಗೊಂದಲ)

ಮಾನ್ಯ ಸದಸ್ಯರೊಬ್ಬರು : ದಯಮಾಡಿ ಶಿವಕುಮಾರ್ ಅವರು ಯಾರ್ಯಾರಿಗೆ ಸೈಟುಗಳನ್ನು ಧರಂಸಿಂಗ್ ಕೊಟ್ಟಿದ್ದಾರೆಂಬ ಬಗ್ಗೆ ವಿವರವನ್ನು ಸದನದಲ್ಲಿ ಮಂಡಿಸಬೇಕು.

(ಗೊಂದಲ)

**ಅಧ್ಯಕ್ಷರು** : ಯಡಿಯೂರಪ್ಪನವರೇ, ನಿಮ್ಮ ಚೀಫ್ ವಿಪ್ ಯಾರಿದ್ದಾರೆ ?

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)***: ದಯವಿಟ್ಟು ಈ ಭಾಗದಲ್ಲಿರುವ ಸದಸ್ಯರುಗಳು ದಯವಿಟ್ಟು ಸಹಕರಿಸಬೇಕು. ಅಧ್ಯಕ್ಷರೆ, ನಿಮ್ಮ ಸೂಚನೆಯಂತೆ ಮುಖ್ಯಮಂತ್ರಿಗಳು ಎದ್ದುನಿಂತು ಈ ವಿಷಯದಲ್ಲಿ ಸಮಗ್ರವಾಗಿ ತನಿಖೆಯನ್ನು ಮಾಡಿಸುತ್ತೇನೆಂದು ಹೇಳಿದ ಮೇಲೆ, ಆ ಬಗ್ಗೆ ಚರ್ಚೆಯನ್ನು ಅಲ್ಲಿಗೇ ನಿಲ್ಲಿಸಿ, ಉಳಿದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸದನ ಬೇರೆ ದಾರಿ ಹಿಡಿಯುತ್ತದೆ. ಇದರಿಂದ ಒಳ್ಳೆಯದಾಗಲಿಕ್ಕಿಲ್ಲ, ಪ್ರಾರಂಭದ ದಿವಸವೇ ಈ ರೀತಿ ಆಗಬಾರದು, ಒಂದು ಬಾರಿ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟ ಮೇಲೆ ಬೇರೆ ವಿಷಯಗಳ ಚರ್ಚೆಗೆ ದಯಮಾಡಿ ಅವಕಾಶ ಮಾಡಿಕೊಡಬೇಕು.

(ಗೊಂದಲ)

**ಅಧ್ಯಕ್ಷರು** : ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಜಿ.ಟಿ. ದೇವೇಗೌಡ (ಹುಣಸೂರು)** : ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ, ಅದರ ಬಗ್ಗೆ ನೀವ್ಯಾಕೆ ಮಾತನಾಡುತ್ತೀರಿ, ಬಿಡಿ. ಅವರೇ ತನಿಖೆ ಮಾಡಿ ಏನು ಬೇಕೋ ಆ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತಾರೆ, ನೀವ್ಯಾಕೆ ಮಾತನಾಡುತ್ತೀರಿ ಬಿಡಿ.

**ಅಧ್ಯಕ್ಷರು** : ಶಿವಕುಮಾರ್ ಅವರೇ ಮಾತನಾಡಿ, ವೈಯಕ್ತಿಕ ರೆಫರೆನ್ಸ್ ಬೇಡ,

**ಶ್ರೀ ಡಿ.ಕೆ. ಶಿವಕುಮಾರ್** : ಪಾಪ, ಅವರು ಭೂಹಗರಣವನ್ನಾದರೂ ಮಾಡಲಿ, ಗಣಿಗಾರಿಕೆಯ ಬಗ್ಗೆಯಾದರೂ ಮಾಡಲಿ, ಬಹಳ ಸಂತೋಷ, ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿದ್ದಾರೆ, ಬಹಳ ಸಂತೋಷ, ಅದರ ಬಗ್ಗೆ ಏನು ಬೇಕಾದರೂ ಮಾಡಲಿ, ನನ್ನದೇನು ಹೇಳುತ್ತಿದ್ದೇನೆಂದರೆ, _.

(ಗೊಂದಲ)

**ಅಧ್ಯಕ್ಷರು** : ಈ ಕಡೆಯ ಆಡಳಿತ ಪಕ್ಷದ ಸದಸ್ಯರು ಬಹಳ ಹದ್ದುಮೀರಿ ವರ್ತಿಸುತ್ತಿದ್ದೀರಿ, ನಾನು ಇದನ್ನು ಸಹಿಸುವುದಿಲ್ಲ, ಪದೇ ಪದೇ ಅಬ್ಜೆಕ್ಟ್ ಮಾಡುವುದು, ಈಗಾಗಲೇ 10.00 ಗಂಟೆಯಾಗಿದೆ, ಓಟು ಆಗಬೇಕು, ನೀವೆಲ್ಲಾ ಎಷ್ಟು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ದಯಮಾಡಿ ಮಾತನಾಡಿ. There should be no interruption.

**ಶ್ರೀ ಡಿ.ಕೆ. ಶಿವಕುಮಾರ್** : ಅಧ್ಯಕ್ಷರೇ, ರಾಮಕೃಷ್ಣ ಪರಮಹಂಸರು ಒಂದು ಮಾತನ್ನು ಹೇಳುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರು ಏನು ಹೇಳುತ್ತಾರೆ ಅಂದರೆ ಈ ಪ್ರಪಂಚದಲ್ಲಿ ನಾಲ್ಕು ತರಹದ ಕ್ರೈಮ್ ಇದೆಯಂತೆ. ಒಂದು ಮರ್ಡರ್, ಎರಡನೆಯದು ರೇಪು, ಮೂರನೇಯದು ಕಳ್ಳತನ ಇಲ್ಲ ದರೋಡೆ, ನಾಲ್ಕನೆಯದು ಕಾನ್ಸ್‌ಪಿರೆಸಿ, ಈ ಮರ್ಡರ್ ಮಾಡಬೇಕಾದರೆ ಆಸ್ತಿಗೋಸ್ಕರ, ಹೆಣ್ಣಿಗೋಸ್ಕರ, ಅಧಿಕಾರಕ್ಕೋಸ್ಕರ ಈ ತರಹ ಒಂದು ರೀಸನ್ ಇದೆಯಂತೆ, ಈ ಕಳ್ಳತನ

ಮಾಡಬೇಕಾದರೆ, ದರೋಡೆ ಮಾಡಬೇಕಾದರೆ ಹೊಟ್ಟೆಪಾಡಿಗೋಸ್ಕರ, ಅನ್ ಎಂಪ್ಲಾಯ್‌ಮೆಂಟ್‌ಗೋಸ್ಕರ ಅದಕ್ಕೂ ಏನೋ ಒಂದು ರೀಸನ್ ಇದೆಯಂತೆ, ಈ ರೇಪು, ರೇಪು ಮಾಡಬೇಕಾದರೆ ಒಂದು ಹೆಣ್ಣಿಗೋಸ್ಕರ, ಕಾಮ ತೀರಿಸಿಕೊಳ್ಳುವುದಕ್ಕೋಸ್ಕರ ಮಾಡುತ್ತಾರಂತೆ, ಅದಕ್ಕೂ ಒಂದು ರೀಸನ್ ಇದೆಯಂತೆ, ಕಾನ್ಸಫಿರೆಸಿ ಮಾಡಬೇಕಾದರೆ ದೇಶ ದೇಶಕ್ಕೆ, ಅಣ್ಣ ತಮ್ಮಂದಿರಿಗೆ ತಂದು ಇಕ್ಕುವುದು, ಅಪ್ಪ ಮಕ್ಕಳಿಗೆ ತಂದು ಇಕ್ಕುವುದು ಇಲ್ಲ ಏನೋ ಒಂದು ಲಾಭಕ್ಕಂತೆ, ಈ ನಾಲ್ಕು ಮಾಡಿದರೂ ಕೂಡ ಯಾವುದೋ ಒಂದು ಕಾರಣ ಇರುತ್ತದೆಯಂತೆ, ಈ ನಾಲ್ಕು ಜನರನ್ನು ಕ್ಷಮಿಸು, ಈ ನಾಲ್ಕೂ ಕ್ರೈಮ್‌ಗಳು ಇವೆಯಲ್ಲಾ ಈ ನಾಲ್ಕು ಕ್ರೈಮ್‌ಗಳನ್ನು ಮಾಡಿದವರನ್ನು ಕ್ಷಮಿಸಬಹುದಂತೆ, ಆದರೆ ಉಪಕಾರ ಪಡೆದುಕೊಂಡು ಉಪಕಾರದ ಸ್ಮರಣೆ ಇಲ್ಲದೇ ಇರುತ್ತಾರಲ್ಲಾ ಅವರನ್ನು ಕ್ಷಮಿಸಬೇಡ ಅಂತ ಹೇಳಿ ರಾಮಕೃಷ್ಣ ಪರಮಹಂಸರು ಹೇಳುತ್ತಾರೆ. ಅದನ್ನು ನಾನು

**ಶ್ರೀ ಎನ್ ಚಲುವರಾಯಸ್ವಾಮಿ** : ಮಾನ್ಯ ಅಧ್ಯಕ್ಷರೇ, ಪದೇ ಪದೇ ಅದನ್ನೇ ಹೇಳುತ್ತಿದ್ದೀರಿ, ನಿಮ್ಮ ತಂತ್ರ, ಈ ಸರ್ಕಾರ ಹೋಗಲಿಕ್ಕೆ, ಧರ್ಮಸಿಂಗ್‌ರವರ ಸರ್ಕಾರ ಹೋಗಲಿಕ್ಕೆ ಡಿ.ಕೆ. ಶಿವಕುಮಾರ್ ಕಾರಣ ತಂತ್ರಗಾರಿಕೆ ಮಾಡುವುದರಲ್ಲಿ ನಿಪುಣರು ಶ್ರೀ ಡಿ.ಕೆ ಶಿವಕುಮಾರ್‌ರವರು, ಇವತ್ತು ಬಿ.ಜೆ.ಪಿ ಯವರಲ್ಲ, ಜಾತ್ಯಾತೀತ ಜನತಾದಳದವರಲ್ಲ, ಈ ಬಗ್ಗೆ ತಂತ್ರಗಾರಿಕೆ ಮಾಡಿದವರು ಶ್ರೀ ಡಿ.ಕೆ. ಶಿವಕುಮಾರ್‌ರವರು, ಹೈಕಮಾಂಡ್‌ನವರು ಅದಕ್ಕೆ ಅವರಿಗೆ ಪ್ರಶಸ್ತಿ ಕೊಡುತ್ತಾರೆ. ಕಾಂಗ್ರೆಸ್ಸಿನ ಹೈಕಮಾಂಡ್ ಅವರಿಗೆ ಪ್ರಶಸ್ತಿ ಕೊಡುತ್ತಾರೆ. ಇವತ್ತು ನಾವು ಅವರಿಗೆ ಉಪಕಾರ ಮಾಡಿದ್ದೇವೆ. ಜನಾದೇಶ ಅವರ ವಿರುದ್ಧವಾಗಿದ್ದರೂ ಸಹ ದೇವೇಗೌಡರ ನಾಯಕತ್ವದಲ್ಲಿ, ದೇವೇಗೌಡರಿಗೋಸ್ಕರ ಕಾಂಗ್ರೆಸ್ಸಿಗೆ ಆಡಳಿತ ಮಾಡುವುದಕ್ಕೆ 20 ತಿಂಗಳು ಅವಕಾಶ ಮಾಡಿಕೊಟ್ಟಿದ್ದು ಜಾತ್ಯಾತೀತ ಜನತಾದಳ ಅವರ ಋಣದಲ್ಲಿ ನಾವು ಇಲ್ಲ.

(ಗೊಂದಲ)

**ಶ್ರೀ ಸಿ. ಚನ್ನಿಗಪ್ಪ** : ಅವರು ಪಕ್ಷದ್ರೋಹಿ, ಗುರುದ್ರೋಹಿ,

(ಗೊಂದಲ)

**ಅಧ್ಯಕ್ಷರು** : ಮಾನ್ಯ ಶಿವಕುಮಾರ್‌ರವರೇ, ತಾವು 5 ನಿಮಿಷದಲ್ಲಿ ಮುಗಿಸಬೇಕು. 5 ನಿಮಿಷ ಕೊಟ್ಟಿದ್ದೇನೆ ಅಷ್ಟೇ ನಿಮಗೆ ,

**ಶ್ರೀ ಡಿ.ಕೆ. ಶಿವಕುಮಾರ್** : ಇದು ಹೇಗೆ ಆಗಿದೆಯೆಂದರೆ ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಹಿಂದೆ ನಾವು ಮಾಡಿದ್ದೆವಲ್ಲಾ ಮಾನ್ಯ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಆಗ ನನಗೆ ಯಾರೋ ಕೇಳಿದರು, ಒಂದು ಗಂಡು ಹೆಣ್ಣು ಕಳೆದುಕೊಂಡಿದ್ದ, ಒಂದು ಹೆಣ್ಣು ಗಂಡು ಕಳೆದುಕೊಂಡಿರುತ್ತಾಳೆ, ನಮ್ಮ ಹಳ್ಳಿಗಳಲ್ಲಿ ಇಬ್ಬರಿಗೂ ಕೂಟಿಕೆ ಅಂತ ಮಾಡುತ್ತಾರೆ. ಹಾಗೆ ಇಲ್ಲಿ ವಿಧಾನಸೌಧದಲ್ಲಿ ಕೂಟಿಕೆ ನಡೆಯಿತು, ಹಾಗೆ ಕೂಟಿಕೆಯಾದಂಥವರಿಗೆ ಇಬ್ಬರಿಗೂ ಮಕ್ಕಳು ಇದ್ದರು. ಆ ಮಕ್ಕಳು ಅವನನ್ನು ಅಪ್ಪ ಅನ್ನಲಿಲ್ಲ, ಅನ್ನುವುದಕ್ಕೆ ಇಲ್ಲ ನಮ್ಮಪ್ಪ ಅಂತ ಈ ಹೆಣ್ಣು ಮಕ್ಕಳು ಅವ್ವ ಅಂತ ಅನ್ನಲಿಲ್ಲ. ಈ ಪರಿಸ್ಥಿತಿಗೆ ಬಂತು, ಕಡೆಗೆ ಮೊನ್ನೆ 27ನೇ ತಾರೀಖಿಗೆ ಡೈವರ್ಸ್ ಆಯಿತು, ಈ ಡೈವರ್ಸ್ ಆದುದ್ದರಿಂದ, ಈ ಡೈವರ್ಸ್ ಆದಂತಹ ಕೇಸನ್ನು ನಮ್ಮ ಬಿ ಜೆ ಪಿ ಯವರು ಏಜ್ ಬಹಳ ಡಿಫರೆನ್ಸ್ ಇತ್ತು. ಆದರೂ ಕೂಡ ಡೈವರ್ಸ್ ಆದದ್ದನ್ನು ಬಹಳ ದಿನದಿಂದ ಕಾಯ್ದುಕೊಂಡಿದ್ದರು.

ಹುಡುಕಿ ಮತ್ತೆ ಇವರು ಹೊಸದಾಗಿ ಡೈವರ್ಸ್ ಆದಂತಹ ಕೇಸನ್ನು ಇವರು ಇನ್ನೊಂದು ಸಲ ಮದುವೆ ಮೊನ್ನೆ ಮೂರನೇ ತಾರೀಖು 12 ಗಂಟೆ 21 ನಿಮಿಷದಲ್ಲಿ ಮದುವೆಯಾಗಿದೆ. ಬಹಳ ಸಂತೋಷ. ಮದುವೆ ಸಾಲದು ಅಂತ ಹೇಳಿ ರಿಜಿಸ್ಟರ್ ಕೂಡ ಆಗಿದೆ. 20 ತಿಂಗಳು 20 ತಿಂಗಳು ಅಂತ ಅಗ್ರಿಮೆಂಟ್ ಕೂಡ ಆಗಿದೆ. ಬಹಳ ಸಂತೋಷ ನಮಗೆ, ಈ ರಿಜಿಸ್ಟರ್ ಮ್ಯಾರೇಜ್, ನಮಗೇನೋ ಸಂತೋಷ. ಆದರೆ ರಾಜ್ಯದ ಜನತೆಗೆ ಇದು 40 ತಿಂಗಳು ಇರುವುದಿಲ್ಲ ಎನ್ನುವುದು ನಂಬಿಕೆ ಇದೆ. ಅವರಿಗೆ ಅನುಮಾನ ಇದೆ. ಬಹುಶ : ಅವರು ಹನಿಮೂನ್‌ಗೆ ಹೋಗುವುದಕ್ಕಿಂತ ಮುಂಚೆಯೇ ಮತ್ತೆ ಡೈವರ್ಸ್ ಆಗಬಹುದು ಅಂತ ನಾನು ಅಂದುಕೊಂಡಿದ್ದೇನೆ. ಡೈವರ್ಸ್ ಆದ ಮೇಲೆ ಮತ್ತೆ ಬೇರೆ ಎಲ್ಲೂ ರಿಲೀಫ್ ಇಲ್ಲ. ಆದ್ದರಿಂದ ನಾನು ಇವರಿಗೆ ಹೇಳುವುದು ಇಷ್ಟೇ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮಸಿಂಗ್ ಸರ್ಕಾರ ಹೋಗಲು ಇವರೇ ಕಾರಣ. ನೀವೇ ಕಾರಣ ಮಹಾಸ್ವಾಮಿ, ನಿಮ್ಮಿಂದಲೇ ಸರ್ಕಾರ ಹೋಗಿದ್ದು. ಮಾನ್ಯ ಧರ್ಮಸಿಂಗ್‌ರವರು ಬಹಳ ಒಳ್ಳೆಯವರು. ನಿಮ್ಮಿಂದಲೇ ಹೋಗಿದ್ದು.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೇ, ಮುಗಿಸಿದ್ದೀರಿ ತಾನೇ ?

**ಶ್ರೀ ಡಿ.ಕೆ ಶಿವಕುಮಾರ್** : ಮಾನ್ಯ ಅಧ್ಯಕ್ಷರೇ, ಎರಡು ನಿಮಿಷಕ್ಕೆ ಮುಗಿಸಿ ಬಿಡುತ್ತೇನೆ ಬಿಡಿ. ಇನ್ನೂ ಏನೇನೋ ಇದ್ದರೂ ಸುಮ್ಮನೆ ಏಕೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಈ ಸರ್ಕಾರ ಉಳಿಯುವುದಿಲ್ಲ. ಅವರ ಸಿದ್ಧಾಂತಕ್ಕೆ ಗೌರವ ಇಲ್ಲ. ಒಂದು ನೀತಿ ಇಲ್ಲ. ಇವರು ಏನೇ ಒಳ್ಳೆಯದು ಮಾಡುತ್ತೇನೆಂದರೂ ಬಿ ಜೆ ಪಿ ಯವರು ಇವರನ್ನು ಬಿಡುವುದಿಲ್ಲ. ಅದು ಮಾತ್ರ ಗ್ಯಾರಂಟಿ, ಇದು ಸಾಧ್ಯವೇ ಇಲ್ಲ. ಏಕೆಂದರೆ ಪಾಪ ಅವರಿಗೆ ಬೇಕಾದಷ್ಟು ಅಜೆಂಡಾ ಇದೆ. ಬಹಳ ದಿನದಿಂದ ಪಾಪ ಅವರು ಅಧಿಕಾರ ನೋಡಿಲ್ಲ. ಇವರಾದರೂ ಎರಡು ಮೂರು ಸಲ ಅಧಿಕಾರ ನೋಡಿದ್ದಾರೆ. ಇವರಿಗೆ ಏನೂ ತೊಂದರೆ ಇಲ್ಲ. ಅವರು ಅಧಿಕಾರ ನೋಡಿಲ್ಲ. ಬಹಳ ಅಪಾಯ ಇದೆ. ಈಗಲಾದರೂ ಕೂಡ ನಾನು ಈ ಸಂದರ್ಭದಲ್ಲಿ ಇದಕ್ಕೆ ತೀರ್ಪು ಏನಪ್ಪ ಅಂದರೆ ಜನರ ಮುಂದೆ ಹೋಗಬೇಕು. ಆದ್ದರಿಂದ ನಾವೆಲ್ಲಾ ಮುಂದೆ ಜನರ ಮುಂದೆ ಹೋಗಿ ಜನರ ಬಹುಮತ ತೆಗೆದುಕೊಂಡು ಈ ರಾಜ್ಯದಲ್ಲಿ ಅವರು ಸರ್ಕಾರ ರಚನೆ ಮಾಡಲಿ ಅಂತ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ವಿರುದ್ಧ ಮತವನ್ನು ನಾನು ಚಲಾಯಿಸುತ್ತೇನೆ.

**ಶ್ರೀ ಹೆಚ್. ಆಂಜನೇಯ (ಭರಮಸಾಗರ)**: ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ 10–30 ರಿಂದ ನಾನು ಈ ಸದನದಲ್ಲಿ ಕುಳಿತುಕೊಂಡು ಹಿರಿಯ ಸದಸ್ಯರೆಲ್ಲರೂ ಮಾತನಾಡಿದ ಮಾತುಗಳನ್ನು ಕೇಳಿದ್ದೇನೆ. ತಾವು ಪ್ರಥಮವಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಶಾಸಕರಿಗೆ ಹೆಚ್ಚು ಸಮಯವನ್ನು ನೀಡದೆ ಬಹಳಷ್ಟು ವರ್ಷಗಳ ಕಾಲ ಆಡಳಿತ ಮಾಡಿರತಕ್ಕಂಥ ಅನುಭವಿ ರಾಜಕಾರಣಿಗಳನ್ನು ಮಾತನಾಡಿಸಿದ್ದೀರಿ. ಅದರ ಜೊತೆಯಲ್ಲಿ ನಮ್ಮಂತಹ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರಿಗೂ ಕೂಡ ಈ ಸಂದರ್ಭದಲ್ಲಿ ಈ ಸದನದಲ್ಲಿ ಮಾತನಾಡತಕ್ಕಂಥ ಒಂದು ಅವಕಾಶವನ್ನು ತಾವು ಕಲ್ಪಿಸಿಕೊಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಸರ್ಕಾರ ಬಂದಾಗ ಹೊಸ ನಾಯಕ ಈ ಒಂದು ರಾಜ್ಯದ

ಮುಖ್ಯಮಂತ್ರಿಗಳಾದಾಗ ನಾವು ಅವರನ್ನು ಅಭಿನಂದಿಸಿ ಮಾತನಾಡತಕ್ಕಂತ ಒಂದು ಸಂಪ್ರದಾಯ ಇದೆ. ಮಾನ್ಯ ಯುವ ನಾಯಕರಾಗಿರತಕ್ಕಂಥ ಶ್ರೀ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ನಮಗೆಲ್ಲರಿಗೂ ಕೂಡ ಬಹಳ ಸಂತೋಷವಾಗಿದೆ, ಯುವಕರಿಗೆ, ಅವರ ನಾಯಕತ್ವಕ್ಕೆ ನಮ್ಮಗಳ ಸಂಪೂರ್ಣವಾದ ಬೆಂಬಲವನ್ನು ನಾವು ಕೊಡುತ್ತಿದ್ದೇವೆ. ಅದರಲ್ಲೂ ಕೂಡ ಜೆ.ಡಿ. (ಯು) ಪಕ್ಷದ ಒಬ್ಬ ಶಾಸಕಾಂಗ ಪಕ್ಷದ ಉಪನಾಯಕನಾಗಿ ನಾನು ಅವರ ನೇಮಕವನ್ನು ಮತ್ತು ಮುಖ್ಯಮಂತ್ರಿಗಳಾಗಿರುವುದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅದೇ ರೀತಿಯಾಗಿ ಹೋರಾಟಕ್ಕೆ ಮತ್ತೊಂದು ಹೆಸರಾಗಿರತಕ್ಕಂಥ ಶ್ರೀಮಾನ್ ಯಡಿಯೂರಪ್ಪನವರು ಈ ರಾಜ್ಯದಲ್ಲಿ ಬಡವರ ಪರವಾಗಿ ದಲಿತರ ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೆ. ಅವರು ಇವತ್ತು ಈ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಅವರನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಅವರನ್ನೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಅದೇ ರೀತಿಯಾಗಿ 18 ತಿಂಗಳ ಕಾಲ ಎಲ್ಲರ ಕಾಟವನ್ನು ಸಹಿಸಿಕೊಂಡು ಉತ್ತಮವಾದ ಆಡಳಿತವನ್ನು ನೀಡಿದಂತಹ ಇಂದಿನ ವಿರೋಧಪಕ್ಷದ ನಾಯಕರು ಮತ್ತು ಆಗಿನ ಮುಖ್ಯಮಂತ್ರಿಗಳೂ ಆಗಿದ್ದಂತಹ ಶ್ರೀಮಾನ್ ಧರ್ಮಸಿಂಗ್‌ರವರನ್ನೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆದಂತಹ ಅನೇಕ ಘಟನೆಗಳನ್ನು ಮತ್ತು ಮಾತನಾಡತಕ್ಕಂಥ ಶೈಲಿಯನ್ನು ನೋಡಿದಾಗ ನನಗೆ ಒಂದು ನಮೂನೆ ಭಯವಾಗುತ್ತಿದೆ. ಯಾರಿಗೂ ಕೂಡ ಮುಕ್ತವಾಗಿ ಮಾತನಾಡತಕ್ಕಂಥ ಅವಕಾಶವೇ ಇಲ್ಲವೇನೋ ಎನ್ನತಕ್ಕಂಥ ಒಂದು ವಾತಾವರಣ ಇವತ್ತು ನಿರ್ಮಾಣವಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಕುಮಾರಸ್ವಾಮಿಯವರ ಆಡಳಿತ ಬಹಳ ಚೆನ್ನಾಗಿ ನಡೆಯಬೇಕು ಅನ್ನುವುದಾದರೆ ಪ್ರಬಲವಾದ ಒಂದು ವಿರೋಧಪಕ್ಷ ಬೇಕು. ಈ ರಾಜ್ಯದಲ್ಲಿ 57 ವರ್ಷಗಳ ಕಾಲ ಈ ರಾಜ್ಯವನ್ನು ಆಳಿದಂತಹ ಜನ ಏನು ಇದ್ದಾರೆ ಕಾಂಗ್ರೆಸ್ಸಿಗರು ಇವತ್ತು ವಿರೋಧಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಿದ್ದಾರೆ. ಘಟಾನುಘಟಿಗಳು ಇದ್ದಾರೆ. ಕುಮಾರಸ್ವಾಮಿಯವರು ಪ್ರಾರಂಭದಲ್ಲಿ ಬಹಳ ವಿನಯದ ಮಾತುಗಳನ್ನು ಹೇಳಿದರು. ಬಹಳ ವಿವೇಚನೆಯಿಂದ ಮಾತನಾಡಿದರು. ನಿಮ್ಮೆಲ್ಲರ ಅನುಭವವನ್ನು ನನಗೆ ಧಾರೆ ಎರೆಯಿರಿ ನಿಮ್ಮ ಸಹಾಯವನ್ನು ನನಗೆ ನೀಡಿ. ನಿಮ್ಮ ಮಾರ್ಗದರ್ಶನ ನನಗೆ ನೀಡಿ ಎಂದು ಬಹಳ ಸೌಜನ್ಯದಿಂದ ಅವರು ಕೇಳಿದ್ದಾರೆ. ಅದಕ್ಕೆ ಪ್ರತಿಯಾಗಿ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಅಷ್ಟೇ ಸೌಜನ್ಯದಿಂದ ನಾವು ನಿಮಗೆ ಬೆಂಬಲವನ್ನು ಕೊಡುತ್ತೇವೆ. ಒಳ್ಳೆಯ ಕೆಲಸವನ್ನು ಮಾಡಿದಾಗ ಎನ್ನತಕ್ಕಂಥ ಮಾತನ್ನು ಮಾನ್ಯ ಧರ್ಮಸಿಂಗ್‌ರವರು , ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಹೇಳಿದ್ದಾರೆ. ಅದೇ ರೀತಿ ಹಿರಿಯರಾಗಿರತಕ್ಕಂಥ ಮಾನ್ಯ ಖರ್ಗೆ ಸಾಹೇಬರು ಇರಬಹುದು, ರಮೇಶ್‌ಕುಮಾರ್‌ರವರು ಇರಬಹುದು ಎಲ್ಲಾ ಹಿರಿಯ ನಾಯಕರುಗಳು ಕೂಡ ಅವರಿಗೆ ಮಾರ್ಗದರ್ಶನ ಮಾಡಲಿಕ್ಕೆ ತಯಾರಾಗಿದ್ದಾರೆ. ಅವರಿಗೆ ಒಂದು ಬದ್ಧತೆ ಇದೆ. ಯಾರಿಗೆ ಅಂದರೆ ಮಾನ್ಯ ಯಡಿಯೂರಪ್ಪನವರಿಗೆ ಇದೆ. ಅದೇ ರೀತಿಯಾಗಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರಿಗೂ ಬದ್ಧತೆ ಇದೆ ಬಹಳಷ್ಟು ಜನ ಒಳಗಡೆ ಮತ್ತು ಹೊರಗಡೆ ಮಾತನಾಡತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಕುಮಾರಸ್ವಾಮಿಯವರು ಬಹಳ ಚಿಕ್ಕ ವಯಸ್ಸಿನವರು, ಆಡಳಿತದಲ್ಲಿ ಅನುಭವವಿಲ್ಲ, ಅವರಿಂದ ಒಳ್ಳೆಯ ಆಡಳಿತವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವೇ

ಎನ್ನುವ ಅಪಸ್ವರದ ಮಾತುಗಳನ್ನು ಈ ಸಂದರ್ಭದಲ್ಲಿ ಅಲ್ಲಿ ಇಲ್ಲಿ ಕೇಳುತ್ತಿರುವುದನ್ನು ನಾನು ಕೇಳಿದ್ದೇನೆ. 1984 ರಲ್ಲಿ ಆಗಿನ ಪ್ರಧಾನಮಂತ್ರಿಗಳಾಗಿದ್ದ ಒಬ್ಬ ಧೀರ ಮಹಿಳೆಯಾಗಿದ್ದ ಶ್ರೀಮತಿ ಇಂದಿರಾಗಾಂಧಿ ಹತ್ಯೆಯಾದಾಗ ರಾಜೀವ್ ಗಾಂಧಿಯವರು ಪ್ರಧಾನಮಂತ್ರಿಗಳಾಗಿ ಬಂದರು. ಪ್ರಧಾನ ಮಂತ್ರಿಗಳಾಗಿ ಬಂದಾಗ ಇದೇ ಜನ ಏನು ಹೇಳಿದರೆಂದರೆ, ಒಬ್ಬ ಪೈಲೆಟ್ ಆಗಿದ್ದಂತಹವನು ಈ ದೇಶದ ಪ್ರಧಾನಿಯಾಗಿ ಇನ್ನು ಯಾವ ರೀತಿಯಾಗಿ ಆಳಬಲ್ಲ ಎನ್ನತಕ್ಕಂತಹ ಸಂಶಯದ ಮಾತುಗಳನ್ನು ಹೇಳಿದರು. ಅದೇ ರಾಜೀವ್ ಗಾಂಧಿಯವರು ಒಳ್ಳೆಯ ಆಡಳಿತವನ್ನು ನೀಡಿ "ಮಿಸ್ಟರ್ ಕ್ಲೀನ್" ಎಂದು ಅನ್ನಿಸಿಕೊಂಡರು. ಅದೇ ರೀತಿಯಾಗಿ ಕುಮಾರಸ್ವಾಮಿಯವರು ಕೂಡ ರಾಜಕೀಯ ಹಿನ್ನೆಲೆಯಿಂದ ಬಂದಿರತಕ್ಕಂಥವರು, ಅವರ ತಂದೆಯವರು ಪ್ರಧಾನಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ, ರೈತರ ಪರವಾಗಿ ಹೋರಾಟ ಮಾಡಿದ ಚರಿತ್ರೆ ಇದೆ, ಅಂತಹ ಒಂದು ಚರಿತ್ರಾರ್ಹ ಕುಟುಂಬದಿಂದ, ಅಂತಹ ಹಿನ್ನೆಲೆಯಿಂದ ಬಂದಿರತಕ್ಕಂಥ ಕುಮಾರಸ್ವಾಮಿಯವರೂ ಕೂಡ ಇವತ್ತು ಈ ರಾಜ್ಯದಲ್ಲಿ ಉತ್ತಮವಾದ ಆಡಳಿತವನ್ನು ನೀಡುವುದರ ಮೂಲಕ ಈ ನಾಡಿನ ಎಲ್ಲಾ ವರ್ಗದವರ ಜನಮನ್ನಣೆಯನ್ನು ಗಳಿಸಿಕೊಳ್ಳುತ್ತಾರೆ ಎನ್ನುವ ನಂಬಿಕೆ ನಮಗಿರುವುದರಿಂದ, ಅವರ ನಾಯಕತ್ವವನ್ನು ಇವತ್ತು ಬೆಂಬಲಿಸುತ್ತಿದ್ದೇವೆ. ಇವತ್ತು ಈ ರಾಜ್ಯದಲ್ಲಿ ಬಡವರಿರಬಹುದು ದಲಿತರಿರಬಹುದು, ರೈತರು ಇರಬಹುದು, ಅಲ್ಪಸಂಖ್ಯಾತರು ಇರಬಹುದು, ತುಳಿತಕ್ಕೆ ಒಳಗಾಗಿರುವವರು ಇರಬಹುದು, ಶೋಷಿತರು ಇರಬಹುದು, ಅಂತಹ ಎಲ್ಲಾ ವರ್ಗದವರಿಗೂ ಕೂಡ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂತ ದಿಕ್ಕಿನಲ್ಲಿ ಇವತ್ತು ಅವರನ್ನು ಕೆಲಸಕಾರ್ಯಗಳಲ್ಲಿ ತೊಡಗಿಸುತ್ತೇವೆ ಎನ್ನುವ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೂ ಕೂಡ ಅವರು ಬದ್ಧರಾಗಿದ್ದಾರೆನ್ನುವ ಮಾತನ್ನೂ ಈ ಸಂದರ್ಭದಲ್ಲಿ ನಾನು ವಿಶ್ಲೇಷಣೆ ಮಾಡುತ್ತೇನೆ. ಅವರು ಇವತ್ತು ಬೆಳಿಗ್ಗೆ ಮಾತನಾಡುತ್ತಾ ವಿಶ್ವಗುರು ಬಸವಣ್ಣನವರನ್ನು ಜ್ಞಾಪಿಸಿಕೊಂಡು ಕಾಯಕವೇ ಕೈಲಾಸವೆನ್ನುವುದನ್ನು ಹೇಳಿದರು. ಹನ್ನೆರಡನೆ ಶತಮಾನದಲ್ಲಿ ಏನು ಬಸವಣ್ಣನವರು ಸಾರಿದಂತಹ ಕಲ್ಯಾಣ ಕ್ರಾಂತಿ, ಅವರು ಪ್ರತಿಪಾದಿಸಿಕೊಂಡು ಬಂದಿರುವ ಸಮಾಜವಾದ, ಜಾತ್ಯಾತೀತ ಸಮಾಜವನ್ನು ಕಟ್ಟಿದಂತಹ ಬಸವಣ್ಣನವರನ್ನು ಇವತ್ತು ಜ್ಞಾಪಿಸಿಕೊಳ್ಳುವುದರ ಮೂಲಕ ಈ ದೇಶಕ್ಕೆ ಆದರ್ಶ ಪ್ರಾಯರಾಗಿರತಕ್ಕಂಥ ರಾಷ್ಟ್ರಪಿತ ಮಹತ್ಮಾಗಾಂಧಿಜಿಯವರು, ಭಾರತದ ನವನಿರ್ಮಾಪಕ, ಪಂಡಿತ್ ಜವಹರ್‌ಲಾಲ್ ನೆಹರುರವರು, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ: ಅಂಬೇಡ್ಕರ್‌ರವರು ಮೌಲಾನಾ ಕಲಾಂ ಅಜಾದ್‌ರವರು, ಇನ್ನೂ ಮುಂತಾದ ನಾಯಕರ ತತ್ವ ಸಿದ್ಧಾಂತಗಳೆನ್ನು ಅವರು ಒಪ್ಪಿಕೊಂಡು ರಾಜಕೀಯವನ್ನು ಮಾಡುತ್ತಾರೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಅಧ್ಯಕ್ಷರು** : ಆಂಜನೇಯರವರೇ, ಬೇಗ ಮಾತನಾಡಿ ಮುಗಿಸಿ.

**ಶ್ರೀ ಹೆಚ್. ಆಂಜನೇಯ** : ಎಲ್ಲರಿಗೂ ಒಂದೊಂದು ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಹೊಸದಾಗಿ ಬಂದಿರುವ ನಮ್ಮಂತಹ ಯುವಕರು ಮಾತನಾಡುತ್ತಾರೆ. ಅದರಲ್ಲೂ ಕೂಡ ದಲಿತವರ್ಗದಿಂದ ಬಂದವರು ನಾವು, ಒಂದೆರಡು ನಿಮಿಷ ಮಾತನಾಡುವುದಕ್ಕೆ ದಯವಿಟ್ಟು ಜಾಸ್ತಿ ಕೊಡಿ ಸರ್, ಆದುದರಿಂದ ಎಲ್ಲಾ ವರ್ಗದ ಜನರನ್ನು ಯಾರು ಕಷ್ಟದಲ್ಲಿದ್ದಾರೆ, ಎಲ್ಲಾ ವರ್ಗದ ಜನರ ಸರ್ವತೋಮುಖ ಅಭಿವೃದ್ಧಿಯನ್ನು ಮಾಡುತ್ತಾ ಈ ಸಮಾಜ ಮುಖ್ಯವಾಹಿನಿಯಲ್ಲಿ

ತರುವುದಕ್ಕೆ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರು ಕಂಕಣಬದ್ಧರಾಗಿ ಕೆಲಸ ಮಾಡುತ್ತಾರೆನ್ನತಕ್ಕಂಥ ಆಶಯವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. 27ನೇ ತಾರೀಖು ಒಂದು ಘಟನೆ ನಡೆಯಿತು. ತಾವೆಲ್ಲಾ ನೋಡಿರಬಹುದು, ತಾವು 45 ಜನ ಶಾಸಕರ ಗುಂಪನ್ನು ರಚಿಸಿಕೊಂಡು, ಒಬ್ಬ ನಾಯಕನ ಮೇಲೆ ವಿಶ್ವಾವಿಲ್ಲವೆಂದು, ಅವರು ಅವಿಶ್ವಾಸತಂದಂತಹ ಸಂದರ್ಭದಲ್ಲಿ ಒಬ್ಬ ನಾಯಕನನ್ನು ಆಯ್ಕೆ ಮಾಡಿಕೊಳ್ಳತಕ್ಕಂಥ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಂವಿಧಾನಬದ್ಧವಾಗಿ ಕುಮಾರಸ್ವಾಮಿಯವರು, ಆ ಪಕ್ಷದ ನಾಯಕರಾಗಿ ಆಯ್ಕೆಯಾದರು. ನಾಯಕರಾಗಿ ಆಯ್ಕೆಯಾಗಿರುವ ಬಗ್ಗೆ ತಮಗೆ ಪತ್ರವನ್ನು ಕೊಟ್ಟರು, ರಾಜ್ಯಪಾಲರ ಭವನಕ್ಕೆ ಹೋಗಿ ಪತ್ರವನ್ನು ಕೊಟ್ಟರು, ಅದನ್ನು ತಾವು ಅವರೆ ಈ ಸದನದ ನಾಯಕರು ಎಂದು ಮಾಡಿದಾಗ, ಅದಕ್ಕೆ ಅಪಸ್ವರ ಎತ್ತಬೇಕಾದವರು ಯಾರು, ಆ ಪಕ್ಷದ ನಾಯಕರು ಎತ್ತಬೇಕಾಗಿತ್ತು. ಆ ಪಕ್ಷದ ನಾಯಕರಾಗಿದ್ದಂತಹ, ಶಾಸಕಾಂಗ ಪಕ್ಷದ ನಾಯಕರಾಗಿದ್ದಂತಹ ಮಾನ್ಯ ಉಪ ಮುಖ್ಯಮಂತ್ರಿಗಳಾಗಿದ್ದಂತಹ ಎಂ.ಪಿ.ಪ್ರಕಾಶ್‌ರವರು ಎತ್ತಬೇಕಾಗಿತ್ತು. ಆದರೆ ಅವರು ಆ ಬಗ್ಗೆ ಚಕಾರವನ್ನು ಎತ್ತಲಿಲ್ಲ, ಮೌನವನ್ನು ವಹಿಸಿಕೊಂಡಿದ್ದರು. ನಾನು ಶಾಸಕಾಂಗಪಕ್ಷದ ನಾಯಕನಲ್ಲವೆಂದು ಇವತ್ತು ಅವರು ಹೇಳಿದರು, ಕುಮಾರಸ್ವಾಮಿಯವರು ಶಾಸಕಾಂಗಪಕ್ಷದ ನಾಯಕರೆಂದು ಹೇಳುವುದರ ಮೂಲಕ ತಮ್ಮ ಹೃದಯ ಶ್ರೀಮಂತಿಕೆಯನ್ನು ವ್ಯಕ್ತಪಡಿಸಿದರು. ಆದರೆ ಕಾಂಗ್ರೆಸ್ಸಿನ ಬಹಳ ದೊಡ್ಡ ದೊಡ್ಡ ನಾಯಕರು ಅದನ್ನೇ ದೊಡ್ಡ ಪ್ರಶ್ನೆಯನ್ನಾಗಿ ಮಾಡಿ ತಮ್ಮ ಘನತೆಗೆ ದಕ್ಕೆತರತಕ್ಕಂಥ ಕೆಲಸವನ್ನು ಮಾಡುವುದರ ಮೂಲಕ ಬಾವಿಗೆ ಬಿದ್ದರು. ಇದೇನು ನಡೆಯಿತಲ್ಲಾ ಇಂತಹ ಘಟನೆಯನ್ನು ಪ್ರಜಾಸತ್ತಾತ್ಮಕವಾಗಿ, ಪ್ರಜಾಪ್ರಭುತ್ವವನ್ನು ಪ್ರತಿಪಾದಿಸಿಕೊಂಡು ಬಂದಿರತಕ್ಕಂಥವರು ಯಾರೂ ಕೂಡ ಕ್ಷಮಿಸಲಾರರು. ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಇವತ್ತು ಈ ಸದನವನ್ನು ನಿಷ್ಪಕ್ಷಪಾತವಾಗಿ ನಡೆಸಿಕೊಂಡು ಬಂದಿದ್ದೀರಿ, ಈ ಸದನಕ್ಕೆ ಘನತೆ ಗೌರವವನ್ನು ತಂದುಕೊಟ್ಟಿದ್ದೀರಿ, ನಿಮ್ಮನ್ನು ನೋಡಿದರೆ ನಮಗೆ ರಾಷ್ಟ್ರಪಿತ ಮಹಾತ್ಮಾಗಾಂಧಿಜಿಯವರ ನೆನಪು ಬರುತ್ತದೆ, ಇವತ್ತು ವಿಧಾನಸೌಧದಲ್ಲಿ ಎಂತಹ ಒಂದು ದೊಡ್ಡ ಕ್ರಾಂತಿಯನ್ನು ನೀವು ಮಾಡಿದ್ದೀರೆಂದು ಹೇಳಿದರೆ, ಯಾವ ಅಧ್ಯಕ್ಷರು ಮಾಡಲಾರದಂತಹ ಒಂದು ಕ್ರಾಂತಿಯನ್ನು ಇವತ್ತು ಮಾಡುವುದರ ಮೂಲಕ ತಮ್ಮ ನಿಷ್ಠೆಯನ್ನು ಇವತ್ತು ವ್ಯಕ್ತಪಡಿಸಿದ್ದೀರಿ, ಅಂತಹ ಆದರ್ಶಪ್ರಾಯರಾದಂತಹ ಅಧ್ಯಕ್ಷರನ್ನು ಪಡೆದಿರತಕ್ಕಂಥವರು ನಾವು ಧನ್ಯರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನಿಮಗೂ ಹಾಗೂ ಎಲ್ಲಾ ಸದಸ್ಯರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ. ಬಸವರಾಜ ರಾಯರೆಡ್ಡಿ (ಯಲಬುರ್ಗಾ)** : ಸನ್ಮಾನ್ಯ ಅಧ್ಯಕ್ಷರೆ, ಈ ನೂತನ ಸರ್ಕಾರದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ರಾಜ್ಯಪಾಲರ ಆದೇಶದಂತೆ ವಿಶ್ವಾಸ ಮತ ನಿರ್ಣಯವನ್ನು ಈ ಸದನದಲ್ಲಿ ಇವತ್ತು ಮಂಡಿಸಿದ್ದಾರೆ. ಇವತ್ತು ನಾನು ಮಾತನಾಡುವುದಕ್ಕೆ ಅನುವು ಮಾಡಿಕೊಟ್ಟಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ, ಏಕೆಂದರೆ ನಾನು ತಿಳಿದುಕೊಂಡಿದ್ದೆ, ನಾನು ನಮ್ಮ ಸ್ನೇಹಿತರಿಗೆ ಹೇಳುತ್ತಿದ್ದೆ, ಇದೇನು ಇವತ್ತು ಮಾತನಾಡುವುದಕ್ಕೆ ಸಿಗುತ್ತದೆಯೋ ಇಲ್ಲವೋ ಎಂದು, ನನಗೆ ಒಂದು ಗಾದೆ ನೆನಪಾಗುತ್ತಿತ್ತು, ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲು ಮಟ್ಟ ನೀರೆಂದು, ಅಲ್ಲಿ ನಾವು ರೂಲಿಂಗ್ ಪಾರ್ಟಿಯಲ್ಲಿದ್ದಾಗ ಸಿಗಲಿಲ್ಲ, ವಿರೋಧಪಕ್ಷದಲ್ಲಿದ್ದಾಗಲಾದರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನನಗೆ ಬಹಳ

ಸಂತೋಷವಾಗಿದೆ. ಇವತ್ತಿನ ದಿವಸ ಏನು ಕುಮಾರಸ್ವಾಮಿಯವರು ಅತ್ಯಂತ ಕಿರಿಯ ವಯಸ್ಸಿನಲ್ಲಿ ಮತ್ತು ಕರ್ನಾಟಕ ರಾಜ್ಯದ ವಿಧಾನಸಭಾ ಇತಿಹಾಸದಲ್ಲಿ ಮೊಟ್ಟಮೊದಲನೆ ಭಾರಿ ವಿಧಾನಸಭೆ ಸದಸ್ಯರಾದವರು ಮುಖ್ಯಮಂತ್ರಿಗಳಾಗಿರುವುದು ಹಿಸ್ಟರಿಗೆ ಹೋಗುತ್ತದೆ, ಮತ್ತು ಮಂತ್ರಿಗಳಾಗದೆ ಇರುವವರು ಇವತ್ತಿನವರೆಗೆ ಮುಖ್ಯಮಂತ್ರಿಗಳಾಗಿರುವುದಿಲ್ಲ, ಈಗ ಅವರ ಅದೃಷ್ಟ ಅವರು ಆಗಿರಬಹುದು. ಆದರೆ ಇವತ್ತಿನ ದಿವಸ ಯಾವ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ ಹೇಗೆ ಆಗಿದ್ದಾರೆಂಬುದನ್ನು ನಾವು ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಕೆಲವು ಜನ ಹೊಸದಾಗಿ ವಿಧಾನಸಭಾ ಸದಸ್ಯರಾದವರು ಮತ್ತು ಜೆಡಿಎಸ್‌ನ ಸದಸ್ಯರು, ಬೇರೆ ಬೇರೆ ವಿಧಾನಸಭಾ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಸನ್ಮಾನ್ಯ ಕುಮಾರಸ್ವಾಮಿಯವರು ಚಾಣಕ್ಯ ನೀತಿಯನ್ನು ಅನುಸರಿಸಿ ಮುಖ್ಯಮಂತ್ರಿಯಾದರೆನ್ನುವ ಮಾತನ್ನು ಹೇಳಿದರು, ನಾನು ಇದನ್ನು ಸರ್ವಸಮ್ಮತ ಒಪ್ಪುವುದಿಲ್ಲ. ಚಾಣಕ್ಯ ನೀತಿ ಹೇಗಿತ್ತು ? ಚಾಣಕ್ಯ ನೀತಿ ನಂದ ವಂಶ ಕ್ರಿ.ಪೂ. 3ನೇ ಶತಮಾನದಲ್ಲಿ ಅರಾಜಕತೆ ಮಾಡಿದಂತಹ ಸಂದರ್ಭದಲ್ಲಿ ಚಂದ್ರಗುಪ್ತಮೌರ್ಯ ತಕ್ಷಶಿಲೆಯಲ್ಲಿ ಚಾಣಕ್ಯನನ್ನು ಭೇಟಿ ಮಾಡಿ, ಈ ನಂಧ ವಂಶವನ್ನು ಹೇಗೆ ಮುಗಿಸಬೇಕೆಂದು ಚಾಣಕ್ಯರ ಸಲಹೆ ಪಡೆದು, ಚಾಣಕ್ಯ ನೀತಿಯನ್ನು ಅನುಸರಿಸಿ ಅರಾಜಕರಾಗಿದ್ದ ನಂದ ವಂಶರನ್ನು ಮುಗಿಸಿದರು. ಚಾಣಕ್ಯನ ಇನ್ನೊಂದು ಹೆಸರು ಕೌಟಿಲ್ಯ. ಕೌಟಿಲ್ಯ ನೀತಿ ಎಂದು ಕರೆಯುತ್ತೇವೆ, ಆದರೆ ಲ್ಲಿ ಕೌಟಿಲ್ಯ ನೀತಿಯ ಮೂಲಕ ಸರ್ಕಾರವಾಗಲಿಲ್ಲ, ಇದು ಕುಟಿಲ ನೀತಿಯ ಮೂಲಕ ಸರ್ಕಾರವಾಗಿದೆ. ಅದಕ್ಕಾಗಿ ಇವರನ್ನು ನಾವು ವಿರೋಧಿಸಬೇಕಾಗಿದೆ. ಇದು ಕುಟಿಲನೀತಿಯ ಸರ್ಕಾರ ಅದಕ್ಕಾಗಿ ವಿರೋಧಿಸಬೇಕಾಗಿದೆ. ಏನು ಆ ಕುಟಿಲ ನೀತಿ ? 2004 ರ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೂ ಕೂಡ ಬಹುಮತ ಬರಲಿಲ್ಲ. ಆ ವಿಶೇಷವಾದ ಸಂದರ್ಭದಲ್ಲಿ ಕಾಂಗ್ರೆಸ್ ಕೋಮುವಾದಿ ಶಕ್ತಿಯನ್ನು ದೂರವಿಡಬೇಕೆಂಬ ಒಂದೇ ಕಾರಣಕ್ಕಾಗಿ ಪರಸ್ಪರ ವಿರೋಧವಾಗಿದ್ದ ಜಾತ್ಯಾತೀತ ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸರ್ಕಾರ ಮಾಡಿತೇ ಹೊರತು ಕೇವಲ ಅಧಿಕಾರಕ್ಕಲ್ಲ, ಇಲ್ಲಿ ಕಾಂಗ್ರೆಸ್ ಬಹಳ ತ್ಯಾಗ ಮಾಡಿದೆ. ಎಲ್ಲಾ ಪ್ರಮುಖ ಖಾತೆಗಳನ್ನು ಜೆಡಿಎಸ್‌ಗೆ ಬಿಟ್ಟು ಕೊಟ್ಟಿತು. ಧರಂಸಿಂಗ್‌ರ ನಾಯಕತ್ವದಲ್ಲಿ ಸರ್ಕಾರವಾದ ಮೇಲೆ ಅಧ್ಯಕ್ಷರೇ, 2005-06ರ ಸಾಲಿನಲ್ಲಿ ಅತ್ಯಂತ ಒಳ್ಳೆಯ ಬಜೆಟನ್ನು ಈ ಸರ್ಕಾರ ಜನರಿಗೆ ಕೊಟ್ಟಿತು, ಅದರ ಪಾಲುದಾರರು ನೀವೂ ಕೂಡ ಆಗಿದ್ದಿರಿ ಅವತ್ತಿನ ದಿವಸ. ಆ ದಿವಸ ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿಗಳು ಹಣಕಾಸಿನ ಮಂತ್ರಿಗಳು. ಅತ್ಯಂತ ಭದ್ರಬುನಾದಿಯನ್ನು ಹಾಕುವಂತಹ ಆರ್ಥಿಕವ್ಯವಸ್ಥೆಯನ್ನು ತಂದುಕೊಟ್ಟಿತು. ಈ ಎಲ್ಲಾ ಒಳ್ಳೆಯ ಕೆಲಸ ಮಾಡಿದ್ದು ಧರ್ಮಸಿಂಗ್ ನೇತೃತ್ವದ ಸರ್ಕಾರ. ಸುಮಾರು 20 ವರ್ಷಗಳ ನಂತರ ಮೊಟ್ಟಮೊದಲ ಬಾರಿಗೆ ಸರ್‌ಪ್ಲಸ್ ಬಜೆಟನ್ನು ಧರ್ಮಸಿಂಗ್ ನೇತೃತ್ವದ ಸರ್ಕಾರ ಮಂಡಿಸಿತು. ಅದರ ಜೊತೆಗೆ ಕಳೆದ ವರ್ಷ ಅತಿ ಹೆಚ್ಚಿನ ಯೋಜನಾ ಗಾತ್ರ ಸುಮಾರು 13,555 ಕೋಟಿ ರೂಗಳನ್ನು ತೆಗೆದುಕೊಂಡು ಬಂತು. ಮತ್ತು ಆರ್ಥಿಕ ಶಿಸ್ತನ್ನು ತಂದುಕೊಟ್ಟಿತು. ಏನು ಕೇಂದ್ರ ಸರ್ಕಾರ Fiscal Responsibility Act - ನ್ನು ಜಾರಿಗೆ ತಂದಿತ್ತೋ ಅದನ್ನು ಇಲ್ಲಿ ಅನುಷ್ಠಾನಗೊಳಿಸುವ ಮೂಲಕ ಅತ್ಯಂತ ಆರ್ಥಿಕ ಶಿಸ್ತನ್ನು ತಂದುಕೊಟ್ಟಿದ್ದರೆ ಇಡೀ ರಾಷ್ಟ್ರದಲ್ಲಿ ಧರ್ಮಸಿಂಗ್ ನೇತೃತ್ವದ ಸರ್ಕಾರ. ಅಷ್ಟೇ ಅಲ್ಲ, ಏನು ಕೇಂದ್ರ ಸರ್ಕಾರ ಈ Fiscal Responsibility Act - ನ್ನು ತಂದಿತ್ತೋ ಅದೇ ಅದನ್ನು ಜಾರಿ ಮಾಡಲಿಕ್ಕೆ ಆಗಲಿಲ್ಲ. ಆದರೆ ಕರ್ನಾಟಕ ಸರ್ಕಾರ ಮಾಡಿದೆ. ಅದನ್ನು ತಾವು

ತಿಳಿದುಕೊಳ್ಳಬೇಕಾಗುತ್ತದೆ, ಇಲ್ಲಿ ಆರಾಜಕತೆ ಇರಲಿಲ್ಲ. ಲೂಟಿ ಆಗಲಿಲ್ಲ. ಸ್ಕ್ಯಾಂಡಲ್ಸ್ ಗಳಾಗಲಿಲ್ಲ. ಅದರ ಜೊತೆಗೆ ಏನು ಜೆಡಿಎಸ್ ಹೇಳುತ್ತಾ ಬಂತಲ್ಲಾ ನಾವು ರೈತರ ಪರವಾಗಿದ್ದೇವೆ ನಾವು ಮಣ್ಣಿನ ಮಕ್ಕಳು ಅಂತ ಆ ಮಣ್ಣಿನ ಮಗನಿಗೆ ಧರ್ಮಸಿಂಗ್ ಮತ್ತು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಾಡಿದ್ದೇನು ? 6 ಪರ್ಸೆಂಟಿನಲ್ಲಿ ನಾವು ಬಡ್ಡಿ ಕೊಟ್ಟಿದ್ದೇವೆ. ಬಡ್ಡಿ ಮನ್ನಾ ಮಾಡಿದ್ದೇವೆ. 1040 ಕೋಟಿ ರೂ ಇವತ್ತು ಬಡ್ಡಿ ಮನ್ನಾ ಆಗಿದೆ. ಅಧ್ಯಕ್ಷರೇ ಏನು ಹಿಂದೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು, ಆ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಬಡ್ಡಿ ಮನ್ನಾ ಆಯಿತು. 1983ರಿಂದ 1994 ರವರೆಗೆ ವಿವಿಧ ಹಂತದಲ್ಲಿ ಬಡ್ಡಿ ಮನ್ನಾ ಆಯಿತು. ಹಾಗೆ ಒಟ್ಟು ಬಡ್ಡಿ ಮನ್ನಾ ಆಗಿದ್ದು ಸುಮಾರು 500ಕೋಟಿ ರೂ ಆದರೆ ಕಳೆದ ಒಂದು ವರ್ಷದಲ್ಲಿ 1040 ಕೋಟಿ ರೂಗಳ ಬಡ್ಡಿ ಮನ್ನಾ ಈ ರಾಜ್ಯದ ರೈತರಿಗೆ ಇಲ್ಲಿನ ಸರ್ಕಾರ ಮಾಡಿದೆ. ಬಡವರಿಗೆ ಮೂರು ರೂಗೆ ಕೆಜಿ ಅಕ್ಕಿ ಕೊಟ್ಟಿದ್ದೇವೆ. ಮುರಾರ್ಜಿ ದೇಸಾಯಿ ವಸತಿ ಶಾಲೆಗಳು 43 ರ ಜೊತೆ ಕಳೆದ ವರ್ಷ 30 ಒಟ್ಟು 73 ಪ್ರಾರಂಭವಾಗಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 150 ಹೈಸ್ಕೂಲುಗಳನ್ನು ಕೊಟ್ಟರು ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಹೇಳುತ್ತಾ ಹೋದರೆ, ಗಂಟೆಗಟ್ಟಲೆ ಬೇಕಾಗುತ್ತದೆ. ಒಟ್ಟಾರೆ ಧರ್ಮಸಿಂಗ್ ಮತ್ತು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜನಪರವಾದಂತಹ ಕಾರ್ಯಕ್ರಮ ಮಾಡಿತು. ಇದರ ಜೊತೆಗೆ ಸಿದ್ದರಾಮಯ್ಯನವರು ಒಳ್ಳೆಯ ಆರ್ಥಿಕ ಬಜೆಟ್ ಕೊಟ್ಟಿದ್ದರಿಂದ ಇಡೀ ಕರ್ನಾಟಕವಷ್ಟೇ ಅಲ್ಲ ಭಾರತ ಸರ್ಕಾರ ನಮ್ಮನ್ನು ಮೆಚ್ಚಿ ಟೂ ಇನ್‌ಸೆಂಟೀವ್ಸ್ ಕೊಟ್ಟಿದೆ. ಫಿಸ್ಕಲ್ ಇನ್‌ಸೆಂಟೀವ್ಸ್, 185 ಕೋಟಿ ರೂ. ಒಮ್ಮೆ, 250 ಕೋಟಿ ರೂ ಒಮ್ಮೆ ಕೊಟ್ಟಿತು. ಇದನ್ನು ಸಹಿಸಲು ಸಾಧ್ಯವಾಗಲಿಲ್ಲ ಕೆಲವು ಜೆಡಿಎಸ್ ಜನರಿಗೆ. ಸಿದ್ದರಾಮಯ್ಯ ಬಹಳ ಪಾಪ್ಯುಲರ್ ಆಗುತ್ತಾರೆ. ಆದ್ದರಿಂದ ಅವರನ್ನು ಮೂಲೆಗುಂಪು ಮಾಡುವ ತಂತ್ರ ಅಲ್ಲಿನ ಕೆಲವು ಜನರಿಗೆ ಪ್ರಾರಂಭವಾಯಿತು. ಅವರು ಕೇವಲ ಅಹಿಂದ ಸಮಾರಂಭವೊಂದರಲ್ಲಿ ಭಾಗವಹಿಸಿದರು ಅಂತ ಹೇಳಿ ಈ ದುರಾಲೋಚನೆ ಮುಂದಾಲೋಚನೆ ಇತ್ತಲ್ಲಾ ಇದರಿಂದ ವಿಚಾರ ಮಾಡಿ ಉಪ ಮುಖ್ಯಮಂತ್ರಿ ಹುದ್ದೆಯಿಂದ ತೆಗೆದದ್ದಲ್ಲದೆ ನಿಮ್ಮನ್ನು ಏಕಾಯೇಕಿ ಜೆಡಿಎಸ್‌ನಿಂದ ತೆಗೆದುಹಾಕಿದ್ದೇವೆ ಎಂಬ ಮಾತು ಆಡಿದರು. ಇದು ಇಷ್ಟು ಹೊತ್ತು ನಾನು ಹೇಳಿದ ಕುಟಿಲ ನೀತಿ, ಇದು ಕೌಟಿಲ್ಯ ನೀತಿಯಲ್ಲ. ಕೌಟಿಲ್ಯ ಒಳ್ಳೆ ಅರ್ಥಶಾಸ್ತ್ರಜ್ಞ ಆಗಿದ್ದ. ಇದು ಕುಟಿಲ ನೀತಿ, ಅಷ್ಟೇ ಅಲ್ಲದೆ ಇವತ್ತಿನ ದಿವಸ ಜಿಲ್ಲಾ ಪಂಚಾಯ್ತಿ , ತಾಲ್ಲೂಕು ಪಂಚಾಯ್ತಿ ಚುನಾವಣೆಗಳಾಯ್ತು. ಆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ಅತಿಹೆಚ್ಚಿನ ಬಹುಮತವನ್ನು ಈ ರಾಜ್ಯದ ಜನ ಕೊಟ್ಟರು. ಸುಮಾರು 103 ತಾಲ್ಲೂಕಿನಲ್ಲಿ ಕಾಂಗ್ರೆಸ್‌ನವರಾದ ನಾವು ತಾಲ್ಲೂಕು ಪಂಚಾಯ್ತಿ ಮಾಡಿದ್ದೇವೆ. ಇವತ್ತು ಕಾಂಗ್ರೆಸ್ ಪರವಾಗಿದ್ದಾರೆ. ಇದನ್ನು ಜೆಡಿಎಸ್‌ಗೆ ಸಹಿಸಲು ಆಗಲಿಲ್ಲ. ಎಲ್ಲಿ ಕೆಲವು ಅತಂತ್ರಪರಿಸ್ಥಿತಿ ಜಿಲ್ಲಾ ಪಂಚಾಯ್ತಿಗಳಿದ್ದವು ಅಲ್ಲಿ ಸಿದ್ದರಾಮಯ್ಯನವರ ಜೊತೆಗೆ ಹೊಂದಾಣಿಕೆ ಮಾಡಬೇಕು, ಸಂಪೂರ್ಣವಾಗಿ ಆಯಾ ಜಿಲ್ಲೆಗೇ ಬಿಟ್ಟುಕೊಡುತ್ತೇವೆ ಎಂಬ ನಿಲುವನ್ನು ನಮ್ಮ ಪಕ್ಷದಲ್ಲಿ ತೆಗೆದುಕೊಂಡರು. ಇದರಲ್ಲಿ ತಪ್ಪೇನಿದೇ? ಜಿಲ್ಲಾಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ನಮಗೂ ಜೆಡಿಎಸ್‌ಗೂ ಮೈತ್ರಿ ಆಗಿರಲಿಲ್ಲ. ಆದರೆ ಈ ಒಂದು ನೆಪವನ್ನೊಡ್ಡಿ ಮೈತ್ರಿ ಮಾಡಬಾರದು ಅಂತ ಬ್ಲಾಕ್ ಮೈಲ್ ಅನ್ನು ಪ್ರಾರಂಭ ಮಾಡಿದರು. ಅದರ ಜೊತೆಗೆ ಈ ಧರ್ಮಸಿಂಗ್‌ರವರ ಸರ್ಕಾರ ತೆಗೆಯಬೇಕಾಗಿದ್ದರೆ ಅರಾಜಕತೆ ಮೇಲೆ ತೆಗೆಯಬಹುದಿತ್ತು. ಸ್ಕ್ಯಾಂಡಲ್ ಇದ್ದರೆ ತೆಗೆಯಬಹುದಿತ್ತು, ದುರಾಡಳಿತ ಇದ್ದರೆ ತೆಗೆಯಬಹುದಾಗಿತ್ತು. ಆದರೆ ಇಂತಹ

ಒಳ್ಳೆಯ ಸರ್ಕಾರವನ್ನು ತಮ್ಮ ವ್ಯಕ್ತಿಗತವಾದ ಆಸೆ ಆಮಿಷಗಳಿಗೆ ಇವತ್ತು ಜೆಡಿಎಸ್‌ನ ಕೆಲವು ನಾಯಕರು ತೆಗೆದುಹಾಕಿದರು. ಇವತ್ತಿನ ದಿವಸ ಜೆಡಿಎಸ್ ಮೂರು ಭಾಗ ಆಗಿದೆ, ಅಧ್ಯಕ್ಷರೇ, ನಾನೂ ಜನತಾದಳಲ್ಲಿದ್ದು 5 ಸಾರಿ ಅಲ್ಲಿಂದ ಗೆದ್ದುಬಂದವನು. ನನಗೆ ಗೊತ್ತು ಈ ಜನತಾ ದಳ. ಎ ಟು ಜೆಡ್ ಆಯಿತು. ಈಗ ಎಸ್‌ಕ್ಯೂಬ್ ಆಗಿದೆ. ಒಂದು, ಜನತಾದಳ ಸಿದ್ದರಾಮಯ್ಯ. ಇನ್ನೊಂದು ಜನತಾದಳ ಸಿಂಧ್ಯಾ ಮತ್ತು ಕುಮಾರಸ್ವಾಮಿಯವರು ಅವತ್ತು ಕೋಮುವಾದಿ ಶಕ್ತಿಯಾದ ಬಿಜೆಪಿ ಜತೆ ನಾವು ಹೋಗುವುದಿಲ್ಲ ಎಂದು ಹೇಳಿದ್ದರು, ಆದರೆ ಇವತ್ತು ಭಾರತೀಯ ಜನತಾ ಪಕ್ಷದ ಜೊತೆಗೆ ಹೋಗಿ ಅವರೂ ಕೂಡ ಜೆಡಿಎಸ್ಸೆ, ಇದೇನು ಹಾಗೆಂದರೆ, ಜೆಡಿ ಎಸ್ ಸ್ಯಾಪ್ರನ್. ಅಂದರೆ ಮೂರು ಜೆಡಿಎಸ್ ಆದುವು. ಈ ಮೂರು ಭಿನ್ನವಾದ ಗುಂಪುಗಳು ಇವತ್ತು ಜೆಡಿಎಸ್‌ನಲ್ಲಿವೆ. ಹೀಗಾಗಿ ಕುಮಾರಸ್ವಾಮಿಯವರ ನಾಯಕತ್ವದ ಜೆಡಿ ಸ್ಯಾಪ್ರನ್ ಏನಿದೆ ಇದರದು ಅತ್ಯಂತ ಅಪವಿತ್ರ ಮೈತ್ರಿಯ ಸರ್ಕಾರ. ಇವತ್ತು ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾರೆ, ಸಂತೋಷ. ಅದರಿಂದ ನನಗೇನೂ ಹೊಟ್ಟೆಕಿಚ್ಚಾಗಲಿ ಲುಕ್ಸಾನಾಗಲಿ ಇಲ್ಲ. ಯುವಕರಾಗಿ ಮೊದಲನೇ ಬಾರಿಗೆ ಇತಿಹಾದ ದಾಖಲೆ ಮಾಡಿದ್ದಾರೆ. ಆದರೆ ಅಧ್ಯಕ್ಷರೇ, ಸಿಂಧ್ಯಾ ಅವರನ್ನು ನಾವು ಮೆಚ್ಚಬೇಕು ಅಧ್ಯಕ್ಷರೇ. ಅವರು ಅರ್ಥಸಚಿವರಾಗಿ ಈ ವರ್ಷ ಸುಮಾರು 16, 123 ಕೋಟಿ ರೂಗಳ ಯೋಜನಾ ಗಾತ್ರಕ್ಕೆ ಈಗಾಗಲೇ ಮಂಜೂರಾತಿ ನೀಡಿ ನಿಮ್ಮ ಕೈಗೆ ಕೊಡುತ್ತಾ ಇದ್ದಾರೆ. ಇಂತಹ ಒಂದು ಒಳ್ಳೆಯ ಆಡಳಿತ ಕೊಟ್ಟಂತಹ ಜನರಿಗೆ ದ್ರೋಹ ಬಗೆದಿದ್ದೀರಿ.ಕೇವಲ ಅಧಿಕಾರದ ಆಮಿಷಕ್ಕಾಗಿ. ಮತ್ತು ಅದರ ಜೊತೆಗೆ ಭಾರತೀಯ ಜನತಾ ಪಕ್ಷದ ನಮ್ಮ ಸನ್ಮಿತರು ಮತ್ತು ನಮ್ಮ ಹಿರಿಯ ನಾಯಕರಾದ ಯಡಿಯೂರಪ್ಪನವರು ಸಿದ್ಧಾಂತಕ್ಕೆ ಮೌಲ್ಯಕ್ಕೆ ಬೆಲೆ ಕೊಟ್ಟಿದ್ದನ್ನು ಬಹಳ ಸಲ ಹೇಳಿದ್ದಾರೆ. ನಾನು ಹೌದು ಇರಬಹುದು, ಸಿದ್ಧಾಂತಕ್ಕೆ ಅವರು ಬಹಳ ಕಟ್ಟು ಬಿದ್ದಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಅವರ ಇತ್ತೀಚಿನ ಹೇಳಿಕೆ, ಬಹಳ ದಿವಸದಿಂದ ಅಲ್ಲ. ಕೇವಲ ಒಂದು ವಾರದ ಹೇಳಿಕೆಗಳು. ಕೇವಲ ಒಂದು ವಾರದ ಹೇಳಿಕೆಯನ್ನು ಇಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. "ಬಿಜೆಪಿ ಅಧ್ಯಕ್ಷರಾದ ಜಗದೀಶ್ ಶೆಟ್ಟರ್‌ರವರು ಬೆಳಗಾವಿಯಲ್ಲಿ ಹೇಳಿದ್ದು. ರಾಜ್ಯದಲ್ಲಿ ಬಿಜೆಪಿ ಯನ್ನು ಹೋಳುಮಾಡಲು ಯಾರಿಂದಲೂ ಸಾಧ್ಯವಿಲ್ಲ. ಕಾಂಗ್ರೆಸ್ ಜೆಡಿ(ಎಸ್) ಮೈತ್ರಿ ಮುರಿದುಬಿದ್ದರೂ ಪರ್ಯಾಯ ಸರ್ಕಾರ ರಚನೆಗೆ ನಾವು ತಯಾರಿಲ್ಲ". ಇದು ಜನವರಿ 11, ಮತ್ತು ಅದರ ಜೊತೆಗೆ ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಜೆಡಿ(ಎಸ್) ಒಂದು ಭ್ರಷ್ಟ ಪಕ್ಷ. ಅವರು ಹೇಳಿದ್ದು ಹೇಳುತ್ತೇನೆ. ಜೆಡಿ(ಎಸ್) ಒಂದು ಭ್ರಷ್ಟ ಪಕ್ಷ. ಆ ಭ್ರಷ್ಟ ಪಕ್ಷದ ಜೊತೆಗೆ ನಾನೆಂದೂ ಕೂಡ ಹೊಂದಾಣಿಕೆಯನ್ನು ಮಾಡಿಕೊಳ್ಳುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಶಂಕರಮೂರ್ತಿಯವರು ಹೇಳಿದ್ದಾರೆ.

**ಅಧ್ಯಕ್ಷರು** : ಮುಗಿಸಪ್ಪಾ.

**ಶ್ರೀ ಬಸವರಾಜ ರಾಯರೆಡ್ಡಿ** : ಹೀಗಾಗಿ ಇವತ್ತು ಅಪವಿತ್ರ ಮೈತ್ರಿಯಾಗಿದೆ. ಮತ್ತು ಅದರ ಜೊತೆಗೆ ನನಗೆ ಒಂದು ಪುರಂದರ ದಾಸರ ವಚನ ನೆನಪಾಗುತ್ತದೆ. 'ಆಚಾರವಿಲ್ಲದ ನಾಲಿಗೆ, ನಿನ್ನ ನೀಚ ಬುದ್ಧಿಯ ಬಿಡು" ಎಂದು ಹೇಳಿದ್ದಾರೆ. ಅಲ್ಲ, ಒಂದು ವಾರದೊಳಗಾಗಿ ನೀವು ಭ್ರಷ್ಟರು, ನಾವು ನಿಮ್ಮ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ವಿಧಾನಸಭೆ ವಿಸರ್ಜನೆಗೆ ನಾವು

ತಯಾರಿದ್ದೇವೆನ್ನುವಂಥ ಮಾತನ್ನು ಹೇಳಿ ಏಕೆ ಈ ರೀತಿ ಮಾಡಿದಿರೋ ನಮಗೆ ಗೊತ್ತಾಗುತ್ತಿಲ್ಲ ಯಡಿಯೂರಪ್ಪನವರೇ, ಇವತ್ತು ನೀವು ವಿಧಾನಸಭೆ ವಿಸರ್ಜನೆಗೆ ಒತ್ತಾಯವನ್ನು ಮಾಡಬೇಕಾಗಿತ್ತು. ನಿಮ್ಮ ಮಾತನ್ನು ನೀವು ಉಳಿಸಿಕೊಳ್ಳಬೇಕಾಗಿತ್ತು. ಆದರೆ ಏನೊ ಒಂದು ಸಾರಿ ಅಧಿಕಾರವನ್ನು ಅನುಭವಿಸೋಣ ಎನ್ನುವಂಥ ವ್ಯಕ್ತಿಗತವಾದ ಆಮಿಷಕ್ಕೆ ಹೋಗಿದ್ದೀರಲ್ಲಾ....

**ಅಧ್ಯಕ್ಷರು** : ಮುಗಿಸಿರಿ ಬೇಗ.

**ಶ್ರೀ ಬಸವರಾಜ ರಾಯರೆಡ್ಡಿ** :–ಮುಗಿಸುತ್ತೇನೆ. ಹೀಗಾಗಿ ದಯಮಾಡಿ ನೀವು ನೀತಿ ನಿಯಮ ಎಲ್ಲವನ್ನೂ ಮುರಿದಿದ್ದೀರಿ. ಮತ್ತು ಅದರ ಜೊತೆಗೆ ನಮ್ಮ ನೂತನ ಮುಖ್ಯಮಂತ್ರಿಗಳು ಇಲ್ಲಿದ್ದೀರಿ. ನಾನು ಎಲ್ಲರೂ ಹೇಳಿದ್ದನ್ನೇ ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ.ಆದರೆ ಕೆಲವು ಜನ ನಮ್ಮ ಶಾಸಕರುಗಳು ನಡೆದುಕೊಂಡಿರುವಂಥ ರೀತಿಯ ಬಗ್ಗೆ ಈ ಕುದುರೆ ವ್ಯಾಪಾರವಾಗಬಾರದು ಎಂದು ಹೇಳಿ . . . . .

**ಅಧ್ಯಕ್ಷರು** : ನಿಮಗೆ ಕೊಟ್ಟಿದ್ದು ಹತ್ತು ನಿಮಿಷ. 15 ನಿಮಿಷ ಆಗಿ ಹೋಯಿತು. ಇದೇನಿದು? ಸುಮ್ಮನೆ ಹೇಳಿದ್ದೇ ಹೇಳೋ ಕಿಸಬಾಯಿ ದಾಸ ಎನ್ನುವ ಹಾಗೆ ಹೇಳಿದ್ದನ್ನೇ ಹೇಳುತ್ತಿದ್ದೀರಲ್ಲಾ.

**ಶ್ರೀ ಬಸವರಾಜ ರಾಯರೆಡ್ಡಿ** : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪೂಜಾ ಸಮಯದಲ್ಲಿ ನಮ್ಮ ವೆಂಕಟೇಶ್‌ರವರ ಫೋಟೋ ಬಂದಿದೆ. ಈ ಸಾರಿ ಅವರು ನಿಮಗೆ ಚಡ್ಡಿಯನ್ನು ಬಿಚ್ಚಿಸುತ್ತಾರೆ. ಮೊನ್ನೆ ಅಂಗಿ ಬಿಚ್ಚಿದ್ಯಲ್ಲಾ, ಚಡ್ಡಿ ಬಿಚ್ಚಿಸುತ್ತಾರೆ. ನಮ್ಮ ಬ್ರದರ್ ಇದ್ದಾರೆ, ಜಮೀರ್-ಪಾಷಾ ಮತ್ತು ಅನ್ಸಾರಿ. ಅವರು ಇಸ್ಲಾಂ ಧರ್ಮಕ್ಕೆ ಸೇರಿದವರು. ಅಲ್ಲಿ ಚಂಡಿಕಾ ಹೋಮದಲ್ಲಿ ಭಾಗವಹಿಸಿದ್ದಾರೆ. ಮೊನ್ನೆ ತಾನೇ ಅವರು ಹಜ್‌ಗೆ ಹೋಗಿದ್ದಾರೆ.

ಈ ಹಂತದಲ್ಲಿ ಮಾನ್ಯ ಸದಸ್ಯರು ಹಿಂದಿ ಭಾಷೆಯಲ್ಲಿ ಮಾತನಾಡಿದರು –

" ಹಜ್ ಮೆ ಕ್ಯಾ ಕರತೇ ಹೈ, ಲಬ್ಬೈಕ್ ಕರಕೇ ಅತೇ ಹೈ
ಅವ್‌ಕಾ ಅಭಿರುಧ್ ಚಲೇ ಗಯೇ, ಲಬ್ಬೈಕ್ ಕರ್‌ಕೇ
ಆ–ಗಯಾ ಹಜ್ ಮೆ, ದೇಖೋ ಇಸ್‌ಮೆ ಕ್ಯಾ ಹೈ ?
ಮಾಫ್ ಕರೇಗಾ, ಕಭೀ ನಹೀ ಇಸ್ಲಾಂ ಕಭೀ ಆಪ್‌ಕೋ
ಮಾಫ್ ನಹೀ ಕರೇಗಾ "

ಅದಕ್ಕಾಗಿ ಅಧಿಕಾರದ ಆಸೆಗಾಗಿ ನೀವು ತೂರಬೇಡಿ. ನಾನು ಹೊಸ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ದಯಮಾಡಿ ತಾವು ಕುಟುಂಬ ರಾಜಕಾರಣದಿಂದ ಹೊರಗೆ ಬರಬೇಕು. ಒಂದು ಒಳ್ಳೆಯ ಅಧಿಕಾರ ತಮಗೆ ಸಿಕ್ಕಿದೆ. ತಾವು ಪತ್ರಿಕೆಯಲ್ಲಿ ಹೇಳಿದ್ದೀರಿ. "ತಾಯಿ ಆದರ್ಶ, ತಂದೆ ಸ್ಫೂರ್ತಿ, ಪತ್ನಿ ನನ್ನ ಶಕ್ತಿ " ಎನ್ನುವ ಮಾತನ್ನು ತಾವು ಹೇಳಿದ್ದೀರಿ. ದಯಮಾಡಿ ರಾಜಕಾರಣವನ್ನು ಕುಟುಂಬಕ್ಕೆ ಸೀಮಿತಗೊಳಿಸಬೇಡಿ. ಆದರ್ಶ ಮಹಾತ್ಮಾಗಾಂಧಿಯವರದ್ದು ಇರಲಿ. ಜಯಪ್ರಕಾಶ್ ನಾರಾಯಣರವರದ್ದು ಇರಲಿ. ಜೆ.ಹೆಚ್. ಪಟೇಲ್ ಅವರದ್ದು ಇರಲಿ. ರಾಮಕೃಷ್ಣ ಹೆಗಡೆಯವರದ್ದು ಇರಲಿ. ಎಸ್.ಆರ್. ಬೊಮ್ಮಾಯಿ ಅವರದ್ದು ಇರಲಿ, . . . .

(ಗೊಂದಲ)

ದಯಮಾಡಿ ತಾವು ಆ ಹೋಮ, ಹವನವನ್ನು ತಮ್ಮ ಮನೆಯಲ್ಲಿ ಮಾಡಿಕೊಳ್ಳಿ. ಕೃಷ್ಣ ಕಚೇರಿಯಲ್ಲಿ ದಯಮಾಡಿ ಮಾಡಬೇಡಿ. ತಾವು ಇಂಥ ಕೆಲಸಗಳನ್ನು ಮಾಡುವುದರಿಂದ ಮೌಢ್ಯಗಳನ್ನು ಬೆಳೆಸಿದಂತಾಗುತ್ತದೆ. ದಯಮಾಡಿ ತಾವು ಆ ಮೌಢ್ಯಗಳಿಂದ ಹೊರಗೆ ಬರಬೇಕು. ಒಳ್ಳೆಯ, ಆದರ್ಶಪ್ರಾಯರಾದ ಯುವಕರಾಗಬೇಕು. ಒಳ್ಳೆಯ ತತ್ವ ಸಿದ್ಧಾಂತಗಳನ್ನು ತಾವು ಮಾಡುತ್ತೀರಿ ಬಡವರ ಬಗ್ಗೆ ತಾವು ಮಾಡಬೇಕು. ಆದರೆ ಆ ವಿಚಾರಗಳು ಇಲ್ಲಿ ಕಾಣಿಸುತ್ತಿಲ್ಲ. ಹೀಗಾಗಿ ಇಂಥ ಏನೊಂದು 20 ತಿಂಗಳ ಆಡಳಿತದ ಹಂಚಿಕೆ ಆಟವಿದೆ. ಇದು ಈ ಹಾವು ಏಣಿಯಾಟ, ಇದ್ದ ಹಾಗೆ ಇದೆ ಮೊದಲನೇ ಸಾರಿ ತಾವು ವಿಧಾನಸಭಾ ಸದಸ್ಯರಾಗಿ ಕೊನೆಯ ಚೇರ್‌ನಲ್ಲಿ ಇದ್ದಿರಿ, ನಮ್ಮ ಶಾಸಕರು ಈ ಕವಡೆಯಾಟದಲ್ಲಿ ಮೇಲಕ್ಕೆ ಬಂದುಬಿಟ್ಟಿದ್ದೀರಿ. ಒಂದೇ ಸಾರಿ ನೀವು ಮೇಲಕ್ಕೆ ಬಂದುಬಿಟ್ಟಿದ್ದೀರಿ. ಇನ್ನು ಇಪ್ಪತ್ತು ತಿಂಗಳಾದ ಮೇಲೆ ನಿಮಗೆ ಬಿಜೆಪಿಯ ಹಾವು ಕಚ್ಚುತ್ತದೆ. ಮತ್ತೆ ನೀವು ಅಲ್ಲಿಗೆ ಕೆಳಕ್ಕೆ ವಾಪಸ್ ಹೋಗುತ್ತೀರಿ. ಇದು ಹಾವು ಏಣಿ ಆಟದ ಸರ್ಕಾರವಾಗಿದೆ. ನೀತಿ ನಿಯಮ ಇವೆಲ್ಲವನ್ನೂ ಪಾಲನೆ ಮಾಡಬೇಕಾಗಿದ್ದರೆ ತಾವು ವಿಧಾನಸಭೆಯನ್ನು ವಿಸರ್ಜನೆ ಮಾಡಿ. ಹೊಸ ಮ್ಯಾಂಡೇಟನ್ನು ಪಡೆಯೋಣ. ಹೊಸ ಮ್ಯಾಂಡೇಟನ್ನು ಪಡೆದರೆ, ಜನರು ನಿಮಗೆ ಬೆಂಬಲವನ್ನು ಕೊಟ್ಟರೆ ನೀವು ಅಧಿಕಾರಕ್ಕೆ ಬನ್ನಿರಿ. ನಮಗೆ ಬೆಂಬಲವನ್ನು ಕೊಟ್ಟರೆ ನಾವು ಬರುತ್ತೇವೆ. ಒಂದು ನೈತಿಕ ಸಿದ್ಧಾಂತದ ಆಧಾರದಮೇಲೆ ಇವತ್ತು ಈ ಸರ್ಕಾರ ನಡೆಯಬೇಕು. ಇವತ್ತು ಹಾಗೆ ನಡೆಯುತ್ತಿಲ್ಲ. ಇದಕ್ಕೆ ಸೂಕ್ತವಾಗಿ ಹೇಳುವುದಾದರೆ ದಯಮಾಡಿ ತಾವು ವಿಧಾನಸಭೆಯನ್ನು ವಿಸರ್ಜನೆ ಮಾಡಬೇಕು ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅವರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** :-- ದಯಮಾಡಿ ಎಲ್ಲಾ ಸಹಕರಿಸಿ. ಸಮಯ ಇಲ್ಲ. ಈಗಾಗಲೇ ರಾತ್ರಿ 10--45 ಗಂಟೆಯಾಗಿದೆ. ಮಾನ್ಯ ಉಪಮುಖ್ಯಮಂತ್ರಿಯವರು ಮಾತನಾಡಬೇಕು. ಆ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ದಯಮಾಡಿ ಸಹಕರಿಸಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಮಾತನಾಡಿ ಯಡಿಯೂರಪ್ಪನವರೇ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ವೈಜನಾಥ ಪಾಟೀಲರಿಗೆ ಐದು ನಿಮಿಷ ಅವಕಾಶ ಕೊಡಿ.

**ಅಧ್ಯಕ್ಷರು** : ಮಾನ್ಯ ಸಿದ್ದರಾಮಯ್ಯನವರೇ, ನೀವು ಮತ್ತು ಬಿ.ಆರ್. ಪಾಟೀಲರು ಸೇರಿ ನೀವು 1 ಗಂಟೆ 4 ನಿಮಿಷ ಅವರು ಒಂದು ಗಂಟೆ ಮೂರು ನಿಮಿಷ ಮಾತನಾಡಿದ್ದಾರೆ. ದಯಮಾಡಿ ಸಹಕರಿಸಿ. ಸಮಯ ನೋಡಿ.

**ಶ್ರೀ ಸಿದ್ದರಾಮಯ್ಯ** : ಐದು ನಿಮಿಷ ಕೊಡಿ.

**ಅಧ್ಯಕ್ಷರು** : 5 ನಿಮಿಷ ಕೊಟ್ಟರೆ 20 ನಿಮಿಷ ಮಾಡುತ್ತಾರೆ.

SRI SIDDARAMAIAH :- He is a senior Member of this House. Please give 5 minutes.

**ಅಧ್ಯಕ್ಷರು** : ಹೇಳುವುದನ್ನೆಲ್ಲಾ ಹೇಳಿದ್ದಾರೆ ಸಿದ್ದರಾಮಯ್ಯನವರೇ. ನೋಡಿ ಮಾನ್ಯ ವೈಜನಾಥ ಪಾಟೀಲರೇ, ಐದು ನಿಮಿಷದೊಳಗೆ ಮುಗಿಸದಿದ್ದರೆ ನಾನು ಬೆಲ್ ಹೊಡೆದುಬಿಟ್ಟು ಯಡಿಯೂರಪ್ಪನವರನ್ನು ಕರೆಯುತ್ತೇನೆ. ದಯಮಾಡಿ ಸಹಕರಿಸಿ.

**ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ)** : ಮಾನ್ಯ ಅಧ್ಯಕ್ಷರೇ, ಈ ದೇಶದ ಸ್ವಾತಂತ್ರ್ಯಕ್ಕಾಗಿ 1885 ರಲ್ಲಿ ಕಾಂಗ್ರೆಸ್ ಸ್ಥಾಪನೆಯಾಯಿತು. ದೇಶದ ಸ್ವಾತಂತ್ರ್ಯದ ಸಲುವಾಗಿ ಹೋರಾಟ ನಡೆಯಿತು. ಮುಂದೆ ಮಹಾತ್ಮಾಗಾಂಧಿಯವರು ದಕ್ಷಿಣ ಆಫ್ರಿಕಾದಿಂದ ನಂತರ ಆ ಪಕ್ಷಕ್ಕೆ ಒಂದು ವಿಶಾಲ ರೂಪ ಸಿಕ್ಕಿತು. ಒಳ್ಳೆಯ ಕಾರ್ಯಕ್ರಮ ಅವರ ನಾಯಕತ್ವದಲ್ಲಿ ಬರೀ ದೇಶದ ಸ್ವಾತಂತ್ರ್ಯ ಅಷ್ಟೇ ಅಲ್ಲ, ಜನಪರ ಕಾರ್ಯಕ್ರಮಗಳೂ ಕೂಡ ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ ಅವರು ತೆಗೆದುಕೊಂಡರು. ಹರಿಜನರೋದ್ಧಾರ, ಗ್ರಾಮೋದ್ಧಾರ, ಸ್ತ್ರೀಯೋದ್ಧಾರ ಇಂಥ ಅನೇಕ ಏಕೆಂದರೆ ದೇಶ ಸ್ವಾತಂತ್ರ್ಯವಾದ ಆನಂತರ ಯಾವ ತರಹ ಸಮಾಜವಿರಬೇಕು, ದೇಶದಲ್ಲಿ, ಇದೊಂದು ಕಲ್ಪನೆ ಗಾಂಧೀಜಿಯವರ ನೇತೃತ್ವದಿಂದ ಶುರುವಾಯಿತು. ಅದು ಶುರುವಾದ ಕೂಡಲೇ ಈ ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕು, ಆದರೆ ಸಾಮಾನ್ಯ ಜನರಿಗೆ ಸಿಗಬಾರದು ಎಂದು ಏನು ಪಟ್ಟಭದ್ರ ಹಿತಾಸಕ್ತಿಗಳು ಕಾಂಗ್ರೆಸ್‌ನಲ್ಲಿ ಇದ್ದರು. ಅವರು ಮತ್ತೆ ಕೆಲವರು ಈ ದೇಶದ ಸ್ವಾತಂತ್ರ್ಯದ ಬವ ಕೂಡಲೇ ಸ್ವಾತಂತ್ರ್ಯ ಯಾರ ಕೈಯಲ್ಲಿ ಇರಬೇಕು ? ಸಾಮಾನ್ಯ ಜನರ ಕೈಯಲ್ಲಿ ಅಲ್ಲ, ಘೇಶ್ವಾಯಿ ಅವರ ಕೈಯಲ್ಲಿ ಹೋಗಬೇಕು ಎನ್ನುವ ಒಂದು ತತ್ವದ ಜನ ಆ ಕಾಲಕ್ಕೆ ಇದ್ದರು. ಅದರ ಸಲುವಾಗಿ 1920ರಲ್ಲಿ ಗಾಂಧೀಜಿ ಅವರು ಇಲ್ಲಿಗೆ ಬಂದ ನಂತರ 1925ರಲ್ಲಿ ಈ ದೇಶದಲ್ಲಿ ಆರ್‌ಎಸ್‌ಎಸ್ ಸ್ಥಾಪನೆ ಆಯಿತು. ಒಳ್ಳೆಯ ಕಾಂಗ್ರೆಸ್ ಬೆಳೆಯುತ್ತಿತ್ತು. ಅದಕ್ಕೆ ಸಪೋರ್ಟ್ ಮಾಡಬೇಕಾಗಿತ್ತು. ಒಂದು ಪ್ರತ್ಯೇಕ ಸಂಸ್ಥೆ ಕಟ್ಟಿ ಅಂದಿನಿಂದಲೇ 1925 ರಿಂದ ದೇಶ ಸ್ವಾತಂತ್ರ್ಯ ಆಗುವ ತನಕ ಅವರ ಕೆಲಸ ಅಂದರೆ ಗಾಂಧೀಜಿ ಅವರನ್ನು ಟೀಕಿಸುವುದು ಅದು ಒಂದರಲ್ಲೇ ಕಾಲ ಕಳೆದರು. ಈ ದೇಶದ ಸ್ವಾತಂತ್ರ್ಯದಲ್ಲಿ ಯಾರೂ ಹೋರಾಡಲಿಲ್ಲ, ಮತ್ತು ಅವರು ಯಾರಿಗೂ ಹೊಡೆದಿಲ್ಲ. ಮೊದಲನೇ ಸಲ ಅವರು ಹೊಡೆದಿದ್ದು ಮಹಾತ್ಮಾಗಾಂಧೀಜಿ ಅವರಿಗೆ ಈ ದೇಶ ಸ್ವಾತಂತ್ರ್ಯ ಆದ ಮೇಲೆ. ಆ ನಂತರ ಕೂಡ, ದೇಶದ ಸ್ವಾತಂತ್ರ್ಯದ ನಂತರ 1952ರಲ್ಲಿ ಭಾರತೀಯ ಜನಸಂಘ ಎಂದು ಹೇಳಿ ಒಂದು ಪೊಲಿಟಿಕಲ್ ಪಾರ್ಟಿ ಕಟ್ಟಿ ಕೊಂಡರು. ಅದಕ್ಕೆ ಮುಂದೆ ಬರಬರುತ್ತಾ ಈ ದೇಶದಲ್ಲಿ ಕೆಲವು ಕಂಪಲಿಷನ್ಸ್ ಇದ್ದವು. ಪೊಲಿಟಿಕಲ್ ಕಂಪಲಿಷನ್ಸ್ ಇತ್ತು. ಒಂದು ಕಡೆ ಜೆಪಿ, ಲೋಹಿಯಾ ಅವರು ಕಾಂಗ್ರೆಸ್ ಅನ್ನು ಅಧಿಕಾರದಿಂದ ಇಳಿಸಬೇಕು, ಅಧಿಕಾರದಿಂದ ತೆಗೆಯಬೇಕು ಎಂಬ ಒಂದು ಪೊಲಿಟಿಕ್ಸ್ ಆಂಟಿ ಕಾಂಗ್ರೆಸಿಸಂ ಹೋರಾಟ ಈ ದೇಶದಲ್ಲಿ ಪ್ರಾರಂಭ ಆಯಿತು. 1965ರಲ್ಲಿ ಮೊದಲನೇ ಸಲ 9 ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಬಂದವು. ಆ ಸರ್ಕಾರದಲ್ಲಿ ಅಂದಿನ ಜನಸಂಘದವರೂ ಇದ್ದರು. ಅಂದಿನ ಸ್ವತಂತ್ರ ಪಾರ್ಟಿಯವರೂ ಇದ್ದರು. ಕಮ್ಯುನಿಸ್ಟರೂ ಇದ್ದರು, ಎಲ್ಲರೂ ಕೂಡ ಇದ್ದರು. ಆವಾಗ ಲೋಹಿಯಾ ಅವರಿಗೆ ಪ್ರಶ್ನೆ ಮಾಡುತ್ತಾರೆ. ಒಂದು ಕಡೆ ಕಮ್ಯುನಿಸ್ಟರು, ಮತ್ತೊಂದು ಕಡೆ ಜನಸಂಘದವರು. ಮುಂದೆ ಸರ್ಕಾರ ಬಂದ ನಂತರ ಯಾವ ತರಹ ನಡೆಸುತ್ತೀರಿ ? ಈ ತರಹ ಕಾಂಗ್ರೆಸ್ ಬೇಡ ಎಂದಾಗ ಅವರು ಅದೇ ಹೇಳಿದರು. ಅವಾಗ ಆಂಟಿ ಕಾಂಗ್ರೆಸಿಸಂ ಜೋರಾಗಿ ಇತ್ತು. ಒಂದು ಕಡೆ ಆರ್‌ಎಸ್‌ಎಸ್ ವಿರೋಧ. ಪ್ರಾಥಮಿಕವಾಗಿ ಸೋಷಿಯಲಿಸ್ಟರಿಗೆ ಆರ್‌ಎಸ್‌ಎಸ್ ವಿರೋಧ, ಮತ್ತೊಂದು ಕಡೆ ಕಾಂಗ್ರೆಸ್‌ಗೂ ವಿರೋಧ ಇತ್ತು. ಆದರೆ ಆವಾಗ ಲೋಹಿಯಾ ಅವರು ಹೇಳಿದ್ದರು. ಈಗ ನಂಬರ್ ಒನ್ ಎನಿಮಿ, ಜೊತೆ ಆರ್ ಎನಿಮಿಸ್, ಆದರೆ ಪೊಟೆನ್ಸಿಯಲ್ ಎನಿಮಿ ಅಂದರೆ ಕಾಂಗ್ರೆಸ್. ಕಾಂಗ್ರೆಸ್ ಅನ್ನು ಸೋಲಿಸಬೇಕು

ಎಂದು ಹೇಳಿ ಎಲ್ಲಾ ಪಕ್ಷದವರನ್ನೂ ಕೂಡಿಸಿ ಆಗ ಕಾಂಗ್ರೆಸ್ಸೇತರ ಸರ್ಕಾರಗಳು 9 ರಾಜ್ಯಗಳಲ್ಲಿ ಬಂತು. ಎಸ್‌ವಿಡಿ ಕೂಡಿಸಿ ಆಗ ಕಾಂಗ್ರೆಸ್ಸೇತರ ಸರ್ಕಾರಗಳು 9 ರಾಜ್ಯಗಳಲ್ಲಿ ಬಂತು. ಎಸ್‌ವಿಡಿ ಗವರ್ನಮೆಂಟ್ ಬಂತು. ಸಂಯುಕ್ತ ವಿಧಾಯಕ ದಳದ ಸರ್ಕಾರಗಳು 1967 ರಲ್ಲಿ ಬಂತು. ನಂತರ 9 ತಿಂಗಳು, 6 ತಿಂಗಳುಗಳಿಗೆ ಆ ಸರ್ಕಾರಗಳೆಲ್ಲಾ ಹೋದವು. ಮತ್ತೆ ಪುನ: ಜೆಪಿ ಅವರ ನೇತೃತ್ವದಲ್ಲಿ ಇವೆಲ್ಲಾ ಪಕ್ಷಗಳು ಒಂದಾಗಿ ಕೊನೆಗೆ ಜೈಲಿನಲ್ಲಿ ಜನತಾ ಪಾರ್ಟಿ ಹುಟ್ಟಿತು. ಅವಾಗ ಕೂಡ ಅದೇ ಪ್ರಶ್ನೆ ಬಂತು. ಆರ್‌ಎಸ್‌ಎಸ್ ಫ್ಯಾಸಿಸ್ಟ್ ಎಂದರೆ ಕಾಂಗ್ರೆಸ್ಸೂ ಫ್ಯಾಸಿಸ್ಟ್. ವಿಶೇಷವಾಗಿ ಆ ಕಾಲದಲ್ಲಿ 18 ತಿಂಗಳು ಎಮರ್ಜೆನ್ಸಿ ಈ ದೇಶದಲ್ಲಿ ತಂದರು. ಅದು ಫ್ಯಾಸಿಸ್ಟ್ ರೂಲ್. ಅದರ ವಿರುದ್ಧ ಜನತಾ ಪಾರ್ಟಿ ಕಟ್ಟಿದರು. ಜನತಾ ಪಾರ್ಟಿ ಕೇಂದ್ರದಲ್ಲಿ ಸರ್ಕಾರ ರಚನೆ ಮಾಡಿತು. ಅನೇಕ ರಾಜ್ಯಗಳಲ್ಲಿ ಜನತಾ ಪಾರ್ಟಿ ಅಧಿಕಾರಕ್ಕೆ ಬಂತು. ಆದರೆ ಎಲ್ಲೆಲ್ಲಿ ಬಿಜೆಪಿಯವರು ಅಥವಾ ಜನಸಂಘದವರು ಅಧಿಕಾರದಲ್ಲಿ ಇದ್ದರು, ಮುಖ್ಯಮಂತ್ರಿಯಾಗಿ ಇದ್ದರು, ಅಲ್ಲಿ ಯಾವಾಗಲೂ ರಾಯಟ್ಸ್ ಆಗುತ್ತಾ ಇರಲಿಲ್ಲ. ಎಲ್ಲಿ ಕರ್ಪೂರಿ ಠಾಕೂರ್ ಅಥವಾ ಬೇರೆಯವರು, ಸಮಾಜವಾದಿಗಳು ಅಧಿಕಾರದಲ್ಲಿ ಬಂದರು, ಅಲ್ಲಿ ರಾಯಿಟ್ಸ್ ಮಾಡುತ್ತಿದ್ದರು. ಅವರಿಗೆ ಬದನಾಮ್ ಮಾಡುವುದಕ್ಕೆ ಮಾಡುತ್ತಿದ್ದರು. ಒಬ್ಬ ಮಂತ್ರಿ ಹೋಮ್ ಮಿನಿಸ್ಟರ್ ಆರ್‌ಎಸ್‌ಎಸ್ ಸಂಬಂಧಿ ಇದ್ದರು ಎಂದರೆ ಅವರು ಎಲ್ಲೋ ಒಬ್ಬ ಮೈನಾರಿಟಿ ಗಲ್ಲಿಯಲ್ಲಿ ಒಂದು ಉರುಸ್ ತೆಗೆಯುವರು. ಬದ್‌ನಾಮ್ ಯಾರಿಗೆ ಹೋಗುವುದು ಸಮಾಜವಾದಿ ಸರ್ಕಾರಕ್ಕೆ , ಅಂದಿನ ಜನತಾ ಸರ್ಕಾರಕ್ಕೆ, ಇಂತಹ ಪ್ರ್ಯಾಕ್ಟೀಸ್ ಮಾಡಿದ್ದರಿಂದ ಮುಂದೆ ಪರಿಣಾಮ ಏನಾಯಿತು ಎಂದರೆ ಆ ಪಕ್ಷ ಒಡೆಯಿತು. ಒಂದು ಕಡೆ ಆರ್‌ಎಸ್‌ಎಸ್‌ನವರು ಲಾಠಿ ಹಿಡಿದುಕೊಂಡು ಗಲಾಟೆ ಮಾಡಲಿಕ್ಕೆ ಹೋಗುತ್ತಿದ್ದರು. ಮತ್ತೊಂದು ಕಡೆ ಮಂತ್ರಿಗಿರಿ ಸಹ ಹೋಗುತ್ತಿತ್ತು. ಇದರಿಂದ ಜನತಾ ಪಾರ್ಟಿ ಕೆಟ್ಟ ಹೆಸರು ತೆಗೆದುಕೊಳ್ಳುವ ಪರಿಸ್ಥಿತಿ ಬಂತು. ಆಗ ಮಧು ಲಿಮಯ್‌ರವರ ನೇತೃತ್ವದಲ್ಲಿ ಅವರು ಡ್ಯುಯಲ್ ಮೆಂಬರ್‌ಶಿಪ್‌ನ ಒಂಧು ಇಶ್ಯೂ ಹಬ್ಬಿಸಿದರು. ಡ್ಯುಯಲ್ ಮೆಂಬರ್‌ಶಿಪ್ ಇರಬಾರದು. ಯಾರು ಆರ್‌ಎಸ್‌ಎಸ್ ಮೆಂಬರ್ ಇರುತ್ತಾರೆ, ಅವರು ಜನತಾ ಪಾರ್ಟಿಯಲ್ಲಿ ಇರಬಾರದು. ಇದೇ ಇಶ್ಯೂ ಮೇಲೆ ಜನತಾ ಪಾರ್ಟಿ ಅವತ್ತು ಒಡೆದು ಬಿತ್ತು. ತಾತ್ವಿಕ ತಳಹದಿಯ ಮೇಲೆ ಒಡೆದು ಬಿತ್ತು. ಇವತ್ತು ಕರ್ನಾಟಕದಲ್ಲಿ ಮೊದಲನೇ ಸಲ ಈಗ ಸರ್ಕಾರ ರಚನೆ ಮಾಡುತ್ತಿದ್ದಾರೆ. ಒಂದು ಕಡೆ ಸೆಕ್ಯುಲರ್ ಎಂದು ಹೆಸರು ಇದೆ. ಪಾರ್ಟಿ ಹೆಸರೇ ಸೆಕ್ಯುಲರ್ (ಎಸ್) ಎಂದು ಇಟ್ಟಿದ್ದಾರೆ. ಮತ್ತೊಂದು ಕಡೆ ಬಿಜೆಪಿಯವರು ಇದ್ದಾರೆ. ನಮಗೂ ಕೂಡ ಇವತ್ತು ಹೆದರಿಕೆ ಇದೆ. ಮಾನ್ಯ ಕುಮಾರ ಸ್ವಾಮಿಯವರು ಇವರಿಗೆ ಬೇಗನೇ ಕರ್ನಾಟಕದಲ್ಲಿ ಈ ಜನತಾ ದಳ (ಎಸ್) ಎಂಬುವುದೋ ಅಥವಾ ಇವರನ್ನು ಬಹಳ ಬೇಗನೇ ಗ್ರಾಬ್ ಮಾಡುತ್ತಾರೆ. ಧ್ರಾಬ್ ಮಾಡಿ ಇಲ್ಲಿ ಒಂದು ಹೊಸ ಸರ್ಕಾರ ಬಿಜೆಪಿ ಸರ್ಕಾರ ಎಂದು ಖಾತ್ರಿ ಮಾಡುತ್ತಾರೆ.

**ಅಧ್ಯಕ್ಷರು** : ಮುಗಿಸಬೇಕು, ಟೈಮ್ ಆಯಿತು,

**ಶ್ರೀ ವೈಜನಾಥ ಪಾಟೀಲ್** : ಅವರ ಜೊತೆಯಿಂದ ಹೊರಗೆ ಬನ್ನಿ. ಆ ದೃಷ್ಟಿಯಿಂದ ತಮ್ಮ ವಿರುದ್ಧ ಮತ ಚಲಾಯಿಸಿ, ಈ ಸರ್ಕಾರ ಬೇಗನೇ ಹೋಗಬೇಕೆಂದು ವಿಶ್ವಾಸ ಮತದ ವಿರುದ್ಧ ಮತ ಚಲಾಯಿಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಸನ್ಮಾನ್ಯ ಅಧ್ಯಕ್ಷರೆ, ಒಳ್ಳೆಯ ಉಪಯುಕ್ತವಾದಂತಹ ಚರ್ಚೆ ಆಗಿದೆ. ಜನಾದೇಶದ ಹಿನ್ನೆಲೆಯಲ್ಲಿ ಜನಪರವಾದಂತಹ ಒಂದು ಮೈತ್ರಿ ಕೂಟ ಇವತ್ತು ಅಧಿಕಾರಕ್ಕೆ ಬಂದಿದೆ. ನಾನು ಮಾನ್ಯ ಧರ್ಮಸಿಂಗ್ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾರಣ ಅವರ ಸ್ನೇಹಿತರುಗಳು ಅಧಿಕಾರಕ್ಕೆ ಬಂದ ದಿವಸದಿಂದ ಅವರ ಕಾಲು ಎಳೆಯುವಂತಹ ಪ್ರಯತ್ನ ಮಾಡಿದರೂ ಸಹ ಅನೇಕ ರೀತಿಯ ಕಿರುಕುಳ ಕೊಟ್ಟರೂ ಸಹ ಸುಮಾರು 20 ತಿಂಗಳು ಆಡಳಿತದ ಒಂದು ಚುಕ್ಕಾಣಿ ಹಿಡಿದು ಮುಂದುವರೆದಿರುವಂಥದ್ದನ್ನು ನಾವೆಲ್ಲರೂ ಮೆಚ್ಚಬೇಕಾಗಿದೆ. ನಿಮ್ಮ ತಾಳ್ಮೆ, ಸಹನೆಯಿಂದ ಇಷ್ಟು ದಿವಸ ಈ ಸಮ್ಮಿಶ್ರ ಸರ್ಕಾರ ಆಡಳಿತದಲ್ಲಿ ಇತ್ತು, ಅಸ್ತಿತ್ವದಲ್ಲಿ ಇತ್ತು. ಇಲ್ಲದೇ ಇದ್ದರೆ ಸುಮಾರು 5–6 ತಿಂಗಳೂ ಸಹ ಆಡಳಿತದಲ್ಲಿ ಮುಂದುವರಿಯುವುದಕ್ಕೆ ಸಾಧ್ಯ ಆಗುತ್ತಿರಲಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ಸಂಗತಿ. ಮಾನ್ಯ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಎಲ್ಲಾ ರೀತಿಯ ಆಸೆ, ಆಮಿಷಗಳನ್ನು ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಒಡ್ಡಿದರೂ ಸಹ ಅದಕ್ಕೆ ಯಾವುದೇ ರೀತಿಯ ಆಸೆ, ಆಮಿಷಗಳಿಗೆ ಬಲಿ ಆಗದೇನೇ ಕೊಟ್ಟ ಮಾತಿನಂತೆ ಯಾವ ಹಂತದಲ್ಲೂ ವಿಚಲಿತರಾಗದೇನೇ 2004ರಲ್ಲಿ ಕೊಟ್ಟ ಜನಾದೇಶದಂತೆ ಒಂದು ಮನ್ನಣೆ ಕೊಟ್ಟು ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡು ಇವತ್ತು ಒಂದು ಸಮ್ಮಿಶ್ರ ಸರ್ಕಾರ ರಚನೆ ಆಗಿದೆ. ಮುಖ್ಯಮಂತ್ರಿಗಳ ದೂರದೃಷ್ಟಿ, ರಾಜಕೀಯ ಒಂದು ಮುತ್ಸದ್ಧಿತನ ಇವತ್ತು ಈ ಒಂದು ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣ ಆಗಿದೆ. ನಾನು ಇಲ್ಲಿ ನಿಂತು ಕರ್ನಾಟಕ ರಾಜ್ಯದ ಜನರಿಗೆ ಒಂದು ಭರವಸೆಯನ್ನು ಕೊಡಲು ಇಚ್ಛೇಪಡುತ್ತೇನೆ. 40 ತಿಂಗಳುಗಳ ಕಾಲ ನಮ್ಮ ಅವಧಿಯನ್ನು ಪೂರ್ಣ ಮಾಡುತ್ತೇವೆ. ಕಳೆದ 19–20 ತಿಂಗಳು ಅಭಿವೃದ್ಧಿ ಕಾರ್ಯದ ಕಡೆಗೆ ಗಮನ ಕೊಡಲಿಲ್ಲ ಎನ್ನುವಂತಹ ಭಾವನೆ ಏನು ಜನರಲ್ಲಿ ಮೂಡಿದೆ, ಶಾಸಕರಿಗೆ ಯಾವ ಮಾನ್ಯತೆ ಕೊಡಬೇಕಿತ್ತು, ಅದನ್ನು ಕೊಡದೇ, ಅಗತ್ಯ ಇರುವಂತಹ ಸಮಿತಿಗಳನ್ನು ರಚನೆ ಮಾಡದೇನೆ ಶಾಸಕರು ಅವರ ಕ್ಷೇತ್ರದಲ್ಲಿ ಅಭಿಮಾನದಿಂದ, ಗೌರವದಿಂದ ಕೆಲಸ ಮಾಡಲಿಕ್ಕೆ ಆಗದೇ ಏನು ಒಂದು ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿ ಇತ್ತು. ಅದನ್ನು ಹೋಗಲಾಡಿಸಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತಹ ಕಡೆ ವಿಶೇಷ ಗಮನವನ್ನು ಕೊಟ್ಟು ಕರ್ನಾಟಕ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ನಾವು ಶ್ರಮಿಸುತ್ತೇವೆ. ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಆಡಳಿತ ಪಕ್ಷದಲ್ಲಿದ್ದು ಬಹಳಷ್ಟು ಅನುಭವ ಅವರಿಗೆ ಇದೆ. 10-12 ವರ್ಷದವರೂ ಸಹಿತ ಅಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ಇಲ್ಲಿ ಆಡಳಿತ ಪಕ್ಷದಲ್ಲಿ ಕುಳಿತುಕೊಳ್ಳುವಂತಹ ನಮಗೆ ಮಾರ್ಗದರ್ಶನ ಮಾಡಿ ಈ ಕರ್ನಾಟಕ ರಾಜ್ಯದಲ್ಲಿ ಒಂದು ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ತಾವು ಎಲ್ಲಾ ರೀತಿಯ ಸಹಕಾರವನ್ನು ಕೊಡಬೇಕೆಂದು ಹೇಳಿ ನಾನು ಪ್ರಾರಂಭದಲ್ಲಿ ವಿನಂತಿ ಮಾಡುತ್ತೇನೆ. ಶಾಸಕಾಂಗ ಎನ್ನುವಂತಹದು ಒಂದು ರಾಜ್ಯದ ಬೌದ್ಧಿಕ ಮಂಟಪ. ಇಲ್ಲಿ ಆಗುವಂತಹ ಚರ್ಚೆ, ತೀರ್ಮಾನಗಳು,ನಾಡಿನ ಚಿಂತನೆಯನ್ನು ಪ್ರತಿಬಿಂಬಿಸಬೇಕು. ನಾವು ಮಾತನಾಡುವಂತಹ ಒಂದೊಂದು ಮಾತು, ನಮ್ಮ ಕ್ಷೇತ್ರದ ಜನರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಬಂದಿರುವಂತಹ ಅವರ ಪ್ರತಿನಿಧಿಗಳು ಎಂದು ನಾವು ಯೋಚನೆ ಮಾಡಿ ಇಲ್ಲಿ ಕೆಲಸವನ್ನು ಮಾಡಿದರೆ, ಬಹುಶ: ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ಚುನಾಯಿತ ಪ್ರತಿನಿಧಿಗಳ ಬಗ್ಗೆ ಏನು ಇತ್ತೀಚೆಗೆ ವಿಶ್ವಾಸ ಹೋಗುತ್ತಿದೆ ಅದನ್ನು ಮತ್ತೊಮ್ಮೆ ತುಂಬಲು ಸಹಕಾರಿ ಆಗಬಹುದು. ಆ ದಿಕ್ಕಿನಲ್ಲಿ ನಾವು ನೀವೆಲ್ಲಾ ಒಟ್ಟಾಗಿ

ಕೆಲಸ ಮಾಡೋಣ ಎಂದು ಹೇಳಿ ವಿನಂತಿಯನ್ನು ಮಾಡುತ್ತಿದ್ದೇನೆ. ಜನಾದೇಶದ ಹಿನ್ನೆಲೆಯಲ್ಲಿ ಜನಪರವಾದಂತಹ ಒಂದು ಮೈತ್ರಿ ಕೂಟ ಅಧಿಕಾರಕ್ಕೆ ಬಂದಿದೆ. ಈ ಮೈತ್ರಿಕೂಟಕ್ಕೆ ಒಂದೇ ಒಂದು ಉದ್ದೇಶ ರಾಜ್ಯದ ಪ್ರಗತಿ, ಜನರ ಬಗ್ಗೆ ಕಾಳಜಿ. ರಾಜ್ಯದ ಪ್ರಗತಿಯ ಸಲುವಾಗಿ ಒಂದು ಜನಪರ ಆಡಳಿತ. ನಮ್ಮ ಒಂದೇ ಒಂದು ಮಂತ್ರ, ಅಭಿವೃದ್ಧಿಯ ಮಂತ್ರ. ಜನಪರ ಆಡಳಿತ ಸ್ವಚ್ಛವಾಗಿರುತ್ತದೆ, ದಕ್ಷವಾಗಿರುತ್ತದೆ ಜನರ ಭಾವನೆಗಳಿಗೆ ಸ್ಪಂದಿಸುವಂಥ ಆಡಳಿತ ಕೊಡಬೇಕೆಂದು ಹೇಳಿ ನಾವು ನಿಶ್ಚಯವನ್ನು ಮಾಡಿದ್ದೇವೆ. ಈವರೆಗೆ ಜನರ ಸಮಸ್ಯೆಗೆ ಸ್ಪಂದಿಸದೇ ಇರುವಂಥ ಒಂದು ಸರ್ಕಾರ ಇತ್ತು ಎನ್ನುವ ಭಾವನೆ ಜನರಲ್ಲಿ ಮೂಡಿದೆ. ಇನ್ನು ಮುಂದೆ, ಜನರಿಗೆ ಸ್ಪಂದಿಸುವಂಥ ಸರ್ಕಾರವನ್ನು ಕೊಡುವಂಥ ಪ್ರಯತ್ನ ಮಾಡುತ್ತೇವೆ. ಬೆಂಗಳೂರು ನಂಬರ್ ಒನ್ ಸಿಟಿಯಾಗಬೇಕು. ಕರ್ನಾಟಕ ನಂಬರ್ ಒನ್ ರಾಜ್ಯವಾಗಬೇಕು ಎನ್ನುವಂಥಾದ್ದು ನಮ್ಮ ಸಮ್ಮಿಶ್ರ ಸರ್ಕಾರದ ಉದ್ದೇಶವಾಗಿದೆ. ಬಹಳ ಹೊತ್ತಿನಿಂದ ನಾನು ಗಮನಿಸುತ್ತಿದ್ದೇನೆ. ಆ ಕಡೆ ಕುಳಿತಂಥ ನಮ್ಮ ಸ್ನೇಹಿತರು ಮಾತನಾಡುವಂಥ ಒಂದೊಂದು ಸಂದರ್ಭದಲ್ಲೂ ಸಹ ಭಾರತೀಯ ಜನತಾ ಪಾರ್ಟಿಯನ್ನು ರಾಜ್ಯದ ಜನರ ಮುಂದೆ ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, 'ಕೋಮುವಾದಿಗಳು' ಎನ್ನುವ ಶಬ್ದವನ್ನು ಅನೇಕ ಬಾರಿ ಪ್ರಸ್ತಾಪ ಮಾಡುವಂಥ ಪ್ರಯತ್ನ ಮಾಡಿದ್ದಾರೆ. ಭಾರತೀಯ ಜನತಾ ಪಾರ್ಟಿ 2004 ಫಲಿತಾಂಶವನ್ನು ತಾವು ನೋಡಿದಾಗ, ಈ ರಾಜ್ಯದ ರೈತ, ಕೃಷಿ ಕಾರ್ಮಿಕ, ಪರಿಶಿಷ್ಟ ಜನಾಂಗದ ಪರ ಹೋರಾಡಿದ ಪರಿಣಾಮ ಜನರ ಪ್ರೀತಿ – ವಿಶ್ವಾಸವನ್ನು ಗಳಿಸಿದ್ದೇವೆ. ಭಾರತೀಯ ಜನತಾ ಪಾರ್ಟಿಯಿಂದ 79 ಜನ ಶಾಸಕರು ಗೆದ್ದರು. ಸುಮಾರು 18,20 ಕ್ಷೇತ್ರಗಳಲ್ಲಿ ಕೇವಲ 2, 3 ಸಾವಿರ ವೋಟ್‌ಗಳಲ್ಲಿ ನಮಗೆ ಹಿನ್ನಡೆಯಾಗಿರಬಹುದು. ಆದರೆ, ಭಾರತೀಯ ಜನತಾ ಪಾರ್ಟಿಯನ್ನು ನಂಬರ್ ಒನ್ ಸ್ಥಾನದಲ್ಲಿ ಜನ ಆಯ್ಕೆ ಮಾಡಿದರು. ನಾನು ನಮ್ಮ ಕಾಂಗ್ರೆಸ್‌ನ ಸ್ನೇಹಿತರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಯಾವ ನಿಮ್ಮ ಪಕ್ಷಕ್ಕೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಈ ಹಿಂದೆ ಸುಮಾರು 130 ಎಂಎಲ್‌ಎಗಳಿಗೂ ಹೆಚ್ಚು ಜನ ತಾವಿದ್ದಿರಿ. 2004 ರಲ್ಲಿ ಕೇವಲ 65ಕ್ಕೆ ತಾವು ತೃಪ್ತಿಪಟ್ಟುಕೊಳ್ಳಬೇಕಾಯಿತು. ನಿಜವಾಗಲೂ ಸಹ ನಮ್ಮ ಜೆಡಿ (ಎಸ್) ಸ್ನೇಹಿತರು ಅವತ್ತು ಬಹಿರಂಗವಾಗಿ ಯಾವ ನಮ್ಮ ಕಾಂಗ್ರೆಸ್‌ನವರು ಮಾಡಿರುವಂಥ ಅನೇಕ ಭ್ರಷ್ಟಾಚಾರದ ಹಗರಣಗಳ ಹಿನ್ನೆಲೆಯಲ್ಲಿ ನಮಗೆ ಅಧಿಕಾರ ಕೊಟ್ಟರೆ, ಅವರನ್ನು ಜೈಲ್‌ಗೆ ಕಳುಹಿಸುತ್ತೇವೆ ಎನ್ನುವಂಥ ಮಾತುಗಳನ್ನು ಜನರ ಮುಂದೆ ಹೇಳಿದಂಥದ್ದು ನಿಮಗೆ ನೆನಪಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಿದ್ದ ಮೇಲೆ, ಚುನಾವಣೆಯ ಫಲಿತಾಂಶ ಬಂದ ಮೇಲೆ ಯಾವಾಗ ಜನ ಕಾಂಗ್ರೆಸ್‌ನ್ನು ತಿರಸ್ಕಾರ ಮಾಡಿದ್ದು ಮನವರಿಕೆಯಾದ ಮೇಲೆ ತಾವು ಪ್ರತಿಪಕ್ಷದಲ್ಲಿ ಕುಳಿತುಕೊಳ್ಳುವಂಥ ಒಂದು ಧೈರ್ಯವನ್ನು ಮಾಡಿದ್ದರೆ, ಆ ನಿಶ್ಚಯ ಮಾಡಿದ್ದರೆ ಬಹುಶಃ ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ನಿಮಗೊಂದು ವಿಶ್ವಾಸ ಇದೆ ಎಂಬ ಭಾವನೆ ಜನರಲ್ಲಿ ಮೂಡುತ್ತಿತ್ತು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾನು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ಆಡಳಿತ ಪಕ್ಷಕ್ಕೆಷ್ಟು ಜವಾಬ್ದಾರಿ ಇದೆಯೋ, ವಿರೋಧ ಪಕ್ಷಕ್ಕೆ ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಇದೆ ಎಂಬ ಅರಿವಿನಿಂದ ಕೆಲಸ ಮಾಡಿದವರು ನಾವು. ಆದರೆ, ಖುರ್ಚಿಗಾಗಿ, ಆಡಳಿತ ಚುಕ್ಕಾಣಿಯನ್ನು ಹಿಡಿಯುವುದಕ್ಕೆ ಹಿಂಬಾಗಿಲಿನಿಂದ ಬರುವಂಥ ಪ್ರಯತ್ನ ಮಾಡಿದಿರಿ. ಅದರ ಫಲಿತಾಂಶ, ಪರಿಣಾಮ ಏನಾಗಿದೆ ಎನ್ನುವಂಥದ್ದು ಇವತ್ತು ನಿಮಗೆ ಮನವರಿಕೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ಕಟ್ಟಿರುವಂಥ ಈ ಪಕ್ಷವನ್ನು 'ಕೋಮುವಾದಿ ಪಕ್ಷ'

ಎಂದು ಹೇಳಿ ಮತ್ತೆ ಮತ್ತೆ ಪ್ರಸ್ತಾಪ ಮಾಡುವಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಈ ದೇಶದಲ್ಲಿ ಹಿಂದೂ, ಮುಸ್ಲಿಂ. ಕ್ರಿಶ್ಚಿಯನ್ ಒಂದೇ ತಾಯಿ ಮಕ್ಕಳಂತೆ ಬಾಳಬೇಕೆಂದು ಹೋರಾಟ ಮಾಡುತ್ತಿರುವಂಥ ಪಾರ್ಟಿ ಭಾರತೀಯ ಜನತಾ ಪಾರ್ಟಿ.

(ಗೊಂದಲ)

**ಶ್ರೀ ಹೆಚ್.ಡಿ. ಬಸವರಾಜು** : ಈ ದೇಶದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿ 5 ವರ್ಷ ಇದ್ದರು. ಈ ಸತ್ಯವನ್ನು ನೀವು ಮನಗಾಣಬೇಕು.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಒಂದು ನಿಮಿಷ. ಈ ಸದನದ ಕಾರ್ಯಕಲಾಪವನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಈ 11.00 ಗಂಟೆಯ ಸರಿ ರಾತ್ರಿಯಲ್ಲೂ ಸಹ ಜನ ವೀಕ್ಷಣೆ ಮಾಡುತ್ತಿದ್ದಾರೆ. ಅವರು ಮಾತನಾಡುವಂಥ ಕಾಲದಲ್ಲಿ ಮೌನವಾಗಿ ನಾವೆಲ್ಲ ಸುಮ್ಮನೆ ಕುಳಿತಿದ್ದೆವು. ಯಾವುದು ಸರಿ, ಯಾವುದು ಸುಳ್ಳು, ಯಾವುದು ಸತ್ಯವೆಂದು ಜನರು ತೀರ್ಮಾನ ಮಾಡುತ್ತಾರೆ. ಅದಕ್ಕೋಸ್ಕರ, ನಮ್ಮ ಆಡಳಿತ ಪಕ್ಷದ ಶಾಸಕರಿಗೆ ವಿನಂತಿ ಮಾಡುವಂಥದ್ದು, ದಯಮಾಡಿ, ಅವರು ಏನೇ ಮಧ್ಯದಲ್ಲಿ ಪ್ರಸ್ತಾಪ ಮಾಡಿದರೂ ನೀವು ಮೌನವಾಗಿದ್ದರೆ ಸಾಕು. ನಾನು ಉತ್ತರ ಕೊಡುತ್ತೇನೆ. ದಯಮಾಡಿ, ಶಾಂತವಾಗಿರಿ. ಸತ್ಯ ಯಾವಾಗಲೂ ಸಹ ನಮ್ಮನ್ನು ವಿರೋಧ ಮಾಡುವಂಥ ಜನರಿಗೆ ಅದು ಹಿಡಿಸುವುದಕ್ಕೆ ಸಾಧ್ಯವೇ ಇಲ್ಲ. ನಾನು ಏನು ಹೇಳಿದೆ ? ಭಾರತೀಯ ಜನತಾ ಪಾರ್ಟಿ ಈ ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಒಂದೇ ತಾಯಿ ಮಕ್ಕಳಂತೆ ಬಾಳಬೇಕೆನ್ನುವಂಥ ಹಂಬಲ ನಮಗಿದೆ ಎನ್ನುವಂಥ ಮಾತನ್ನು ಹೇಳಿದೆ. ಅದು ಸುಳ್ಳು ಎಂದು ನಿಮಗನ್ನಿಸಬಹುದು. ಆದರೆ, ರಾಜ್ಯದ ಜನ ಅದನ್ನು ಒಪ್ಪಿದ್ದಾರೆ. 79 ಜನ ಶಾಸಕರನ್ನು ಆಶೀರ್ವದಿಸಿದ್ದಾರೆ. ನಿಮ್ಮಿಂದ ನಾವು ಗೆಲ್ಲಲಿಲ್ಲ. ಜನಪರ ಹೋರಾಟದ ಪರಿಣಾಮ ಇವತ್ತು 79 ಜನ ಶಾಸಕರು ನಾವು ನಮ್ಮ ಸ್ವಂತ ಶಕ್ತಿಯ ಮೇಲೆ ಗೆದ್ದಿದ್ದೇವೆ.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಇದು ಗೌರವ ತರುವಂಥದ್ದಲ್ಲ.

**ಅಧ್ಯಕ್ಷರು** : ದಯಮಾಡಿ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಏಕೆ ಈ ತರಹ ಮಾಡುತ್ತೀರಿ ?

**ಶ್ರೀ ಬಿ.ಎಸ್. ಯಡಿಯೂರಪ್ಪ:** 18 ಜನ ಲೋಕಸಭಾ ಸದಸ್ಯರು ಗೆದ್ದಿದ್ದೇವೆ. 28 ಲೋಕಸಭಾ ಕ್ಷೇತ್ರದಲ್ಲಿ ನಮ್ಮ ಸ್ವಂತ ಶಕ್ತಿ ಮೇಲೆ ಗೆದ್ದಿದ್ದೇವೆ. ಇದನ್ನು ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಅಲ್ರಿ, 130 ಜನ ಕಾಂಗ್ರೆಸ್ ಎಂಎಲ್‌ಎ ಇದ್ದಂಥ ನೀವು 65ಕ್ಕೆ ಇಳಿದ ಮೇಲಾದರೂ ಪಾಠ ಕಲಿಯುತ್ತೀರಾ ಎಂದು ನಾನು ತಿಳಿದುಕೊಂಡಿದ್ದೆ. ಆದರೂ, ಏಕೆ ಹೀಗೆ ಮಾತನಾಡುತ್ತೀರಿ, ನನಗೇನೂ ಅರ್ಥವಾಗುತ್ತಿಲ್ಲ ಎಂದೆ.

**ಶ್ರೀ ಕೆ. ಶ್ರೀನಿವಾಸಗೌಡ:** ಒಂದು ನಿಮಿಷ ಯೀಲ್ಡ್ ಆದರೆ .... ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ನಾವು ಬಿಜೆಪಿಯವರು ಬಹಳವಾಗಿ ಸೆಕ್ಯುಲರ್ ಎಂದು ಹೇಳುತ್ತಿದ್ದಾರೆ.

ನನಗೆ ಸಂತೋಷ. ಸೆಕ್ಯುಲರ್ ಆಗಿ ಇರಬೇಕಾಗಿದೆ. ಅದಕ್ಕೆ ಈಗ ದೇವೇಗೌಡರ ನೇತೃತ್ವದ ಜನತಾದಳ ಜೆಡಿ(ಎಸ್), ಇವರದು ಬಿಜೆಪಿ (ಎಸ್‌ಎಸ್) ಎಂದು ಇಟ್ಟುಕೊಂಡು ಬಿಡೋಣ. ಅಂದರೆ, ಸ್ಟ್ರಿಕ್ಟ್ ಸೆಕ್ಯುಲರ್ ಪಾರ್ಟಿ. ಕುಮಾರಸ್ವಾಮಿ ನೇತೃತ್ವದ್ದು ಜೆಡಿ (ಸಿ) ಎಂದು ಇಟ್ಟುಕೊಂಡು ಬಿಡೋಣ. ಜನತಾ ದಳ ಕಮ್ಯೂನಲ್. ಈ ಮೂರಕ್ಕೂ ಸರಿ ಹೋಗುತ್ತದೆ. ಆವಾಗ ನೀವು ಹೇಳುವುದಕ್ಕೂ ಕೂಡ ಜೆಡಿ (ಎಸ್), ಬಿಜೆಪಿ (ಎಸ್‌ಎಸ್) ........

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು :** ಶ್ರೀನಿವಾಸಗೌಡರ ರಾಜಕೀಯ ದಾರಿ ಎಲ್ಲಿಂದ ಹೋಯಿತು ಅಂತ ಗೊತ್ತಾಗಲಿಲ್ಲ. ಶ್ರೀನಿವಾಸಗೌಡರ ರಾಜಕೀಯ ಉಗಮ ಎಲ್ಲಿಂದ ಎಂದು ಪಾಪ ಅವರು......

**(ಗೊಂದಲ)**

**ಅಧ್ಯಕ್ಷರು :** ದಯಮಾಡಿ ಕೇಳಿ. ಮಾನ್ಯ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಅಭಿಪ್ರಾಯ ಭೇದಗಳಿರಬಹುದು. ಆದರೆ, ಅವರ ವಿಚಾರವನ್ನು ಹೇಳುವುದಕ್ಕೇ ನೀವು ಅಡ್ಡಿಪಡಿಸಿದರೆ ಇದೇನಿದು?

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು :** ಕಾಂಗ್ರೆಸ್ ವಿದೇಶಿ ಎಂದು ಇಡಬೇಕು. ಸರಿಯಾಗುತ್ತದೆ.

**(ಗೊಂದಲ)**

**ಶ್ರೀ ಕೆ. ಶ್ರೀನಿವಾಸಗೌಡ :** ನನಗೂ ಕೂಡ ಇದರ ಆಗುಹೋಗುಗುಳು ಗೊತ್ತಿದೆ. ನಾನು ಅವರು ಯೀಲ್ಡ್ ಆಗದಿದ್ದರೆ ಮಾತನಾಡುತ್ತಿರಲಿಲ್ಲ. ನಾನು ಅವರನ್ನು ರಿಕ್ವೆಸ್ಟ್ ಮಾಡಿಕೊಂಡೆ, ಅವರು ಯೀಲ್ಡ್ ಆದರು. ಆಮೇಲೆ, ನಿಮ್ಮ ಪರ್ಮಿಷನ್ ತೆಗೆದುಕೊಂಡು ಮಾತನಾಡಿದ್ದೇನೆ. ಅದನ್ನು ಮಾನ್ಯ ಯಡಿಯೂರಪ್ಪನವರು .........

**ಅಧ್ಯಕ್ಷರು :** ಶ್ರೀನಿವಾಸಗೌಡರೆ, ಅವರ ಅಭಿಪ್ರಾಯವನ್ನು ಅವರು ಹೇಳುತ್ತಿದ್ದಾರೆ. ಅವರ ಪಾರ್ಟಿ ಸ್ಟ್ಯಾಂಡ್ ಅವರು ಹೇಳುತ್ತಿದ್ದಾರೆ. ಅದು ನಿಮಗೆ ಅಪ್ಯಾಯಮಾನ ಆಗದೇ ಇರಬಹುದು. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದನ್ನು ಕೇಳುವ ವ್ಯವಧಾನವಾದರೂ ಇರಬೇಕಲ್ಲಾ. ಪ್ರತಿಯೊಂದಕ್ಕೂ ಅಡ್ಡಿ ಮಾಡತಕ್ಕಂಥದ್ದು ..........

**(ಗೊಂದಲ)**

**HON'BLE SPEAKER** : No, No, this is not correct. ಯಡಿಯೂರಪ್ಪನವರೆ, ಹೇಳಿ. **ಶ್ರೀಬಿ.ಎಸ್. ಯಡಿಯೂರಪ್ಪ:** ಅಲ್ಲ,ಇವರ ಹೊಟ್ಟೆಯುರಿಗೆ, ಹೊಟ್ಟೆ ನೋವಿಗೆ ಕಾರಣವೇನೆಂದು ನನಗೆ ಗೊತ್ತಾಗುತ್ತಿಲ್ಲ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ :** ನಾನೇನಾದರೂ .....

**(ಗೊಂದಲ)**

**ಅಧ್ಯಕ್ಷರು :** ಕೇಳಿ. ಯಾಕೆ ಆ ತರಹ ಮಾಡುತ್ತಿದ್ದೀರಿ ?

**ಶ್ರೀ ಬಿ.ಎಸ್. ಯಡಿಯೂರಪ್ಪ:** ಆಡಳಿತ ಪಕ್ಷದಲ್ಲಿ ಕುಳಿತು ನಾಲ್ಕು ಮಾತು ಆಡುವುದಕ್ಕೆ ಶಾಂತ ರೀತಿಯಲ್ಲಿ ಸಹಕರಿಸುತ್ತೀರೆಂದು ನಾನಂದುಕೊಂಡಿದ್ದೇನೆ. ನಾವು ನಿಶ್ಚಯ ಮಾಡಿದ್ದೇವೆ. ನಿಮ್ಮ 18 ತಿಂಗಳ ಹಿಂದಿನ ಆಡಳಿತ ವೈಖರಿ ಬಗ್ಗೆ ಯಾವುದೇ ಪ್ರಸ್ತಾಪ ಮಾಡಬಾರದೆಂದು

ತೀರ್ಮಾನ ಮಾಡಿದ್ದೇವೆ. ಬರುವಂಥ ದಿವಸಗಳಲ್ಲಿ ನಾವೇನು ರಾಜ್ಯದ ಜನರಿಗೆ ಭರವಸೆಯನ್ನು ಕೊಟ್ಟಿದ್ದೇವೆ, ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಏನು ಟೀಕೆ –ಟಿಪ್ಪಣಿಗಳನ್ನು ಮಾಡಿದ್ದೇವೆ, ಅದನ್ನು ಅನುಷ್ಠಾನಕ್ಕೆ ತರುವಂಥ ಈ ಖುರ್ಚಿಯಲ್ಲಿ, ಈ ಜಾಗದಲ್ಲಿ ಕುಳಿತಾಗ .........

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ನೋಡಿ, ಏನು ಹೇಳಿದ್ದೇನೆ ಹೇಳಿ.

**ಅಧ್ಯಕ್ಷರು :** ಅವರು ಮಾತನಾಡಲಿ ಬಿಡಿ.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಏನು ಹೇಳಿದ್ದೇನೆ ಹೇಳಿ ?

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾವು ಹೇಳಿದ್ದಲ್ಲ.

**ಶ್ರೀ ಎಂ.ಪಿ ವೆಂಕಟೇಶ್ :** ಅವರು ಮಾತನಾಡುವಾಗ ನಾವು ಸುಮ್ಮನಿದೆವು. ಇದೇನು ಅಧ್ಯಕ್ಷರೆ ? ಈಗ 11 ಗಂಟೆ 10 ನಿಮಿಷವಾಗಿದೆ. ಇವರ ಟೈಂ ಮುಗಿಯುತ್ತಾ ಬಂದಿದೆ, ಏನು ಇವರ ಹುಚ್ಚು ?

**ಅಧ್ಯಕ್ಷರು ':** ಆಯಿತು, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಒಂದು ತಿಂಗಳಾದರೂ ಕಾಂಗ್ರೆಸ್‌ನವರಿಗೆ ತಡೆದುಕೊಳ್ಳಲಾಗುವುದಿಲ್ಲವಲ್ಲಾ.

(ಗೊಂದಲ)

**ಅಧ್ಯಕ್ಷರು :** ಕುಳಿತುಕೊಳ್ಳಿ. ಎಲ್ಲರೂ ಮಾತನಾಡಿ. ಎಲ್ಲರನ್ನೂ .........

(ಗೊಂದಲ)

**ಶ್ರೀ ಎ. ಕೃಷ್ಣಪ್ಪ :** ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಬೆಳಗ್ಗೆಯಿಂದ ಕೇಳಲಿಲ್ಲ. ಅರ್ಧ ನಿಮಿಷ. ಯಡಿಯೂರಪ್ಪನವರು ಹೇಳಿದ ಮಾತಿಗೆ, ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ ನೋಡಿ, Times of India, August 5 - Yediyurappa finds JDS Green Gross and Greener ಅಂತ. ಅದೇ ಅವರ ಮೂಲ ಸಿದ್ಧಾಂತ. ಇವತ್ತು ಅಪವಿತ್ರವಾದಂಥ ಒಂದು ಮಾರ್ಗಕ್ಕೆ ಹೋಗಿರುವುದು.

**ಅಧ್ಯಕ್ಷರು:** ಆಯಿತು.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಈಗ ತಾನೇ ಸನ್ಮಾನ್ಯ ಅಧ್ಯಕ್ಷರು ಒಂದು ಆದೇಶವನ್ನು ಕೊಟ್ಟರು. ಲ್ಯಾಂಡ್ ಸ್ಕ್ಯಾಮ್ ವಿಷಯದಲ್ಲಿ ಯಾವುದೇ Compromise ಮಾಡಿಕೊಳ್ಳದೇ ತನಿಖೆ ಮಾಡಬೇಕು ಎಂಬ ಆದೇಶವನ್ನು ಕೊಟ್ಟರು. ನೀವೇನು ಪತ್ರಿಕಾ ಹೇಳಿಕೆ ಕಳುಹಿಸಿಕೊಟ್ಟಿರೋ, ನಾನು ಅದರ ಬಗ್ಗೆಯೇ ಇಲ್ಲಿ ಹೇಳುತ್ತಿದ್ದೇನೆ. ನೋಡಿ, ಮಾನ್ಯ ಶಿವಕುಮಾರ್‌ರವರೆ, ನೀವು ನನ್ನ ಪ್ರತಿ ಮಾತಿಗೂ ಅಡ್ಡಿ ಮಾಡಬೇಕೆನ್ನುವಂತಿದ್ದರೆ, ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

**ಅಧ್ಯಕ್ಷರು :** ಯಾಕಪ್ಪ, ನೀವು ಕುಳಿತುಕೊಂಡೇ ಮಾತನಾಡುತ್ತಿದ್ದೀರಿ ? ನೀವೆಲ್ಲಾ ಹಿರಿಯ ಸದಸ್ಯರು. ಈ ತರಹ ನಡೆದುಕೊಳ್ಳುವುದು ಸರಿಯಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಶಿವಕುಮಾರ್‌ರವರೆ, ತಾವು ನನ್ನ ಪತ್ರಿಕಾ ಹೇಳಿಕೆಯನ್ನು ಕಳುಹಿಸಿಕೊಟ್ಟಿದ್ದೀರಿ. ನಾನು ತುಮಕೂರಿನಲ್ಲಿದ್ದಾಗ ಲ್ಯಾಂಡ್ ಸ್ಕ್ಯಾಮ್ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳಿದಾಗ, ಆ ಬಗ್ಗೆ ತನಿಖೆ ಮಾಡಿಸುತ್ತೇವೆ ಎಂದು ಹೇಳಿದ್ದೆ. ಮಾನ್ಯ ಅಧ್ಯಕ್ಷರು ಆದೇಶ ಕೊಟ್ಟರು, ಮಾನ್ಯ ಮುಖ್ಯಮಂತ್ರಿಗಳು ಒಂದು ಕ್ಷಣವೂ ತಡ ಮಾಡದೆ, ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದರು. ಇದರಲ್ಲಿ ವ್ಯತ್ಯಾಸ ಏನು ಇದೆ ? ಇದನ್ನು ಬಿಟ್ಟು ನಾನು ಬೇರೆ ಏನನ್ನು ಅಲ್ಲಿ ಹೇಳಿದ್ದೇನೆ. ಸ್ವಾಮಿ, ನಾನು ನಿಮ್ಮನ್ನು ಒಂದು ಮಾತು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಒಂದು ಕಾಲದಲ್ಲಿ ಕಾಂಗ್ರೆಸ್ ಪಾರ್ಟಿ ಪರವಾಗಿ ದೆಹಲಿಯಿಂದ ಒಂದು ಬಿ–ಫಾರಂ ತಂದರೆ, ಅದು ಲೋಕಸಭೆಗೆ ಇರಬಹುದು, ವಿಧಾನ ಸಭೆಗೆ ಇರಬಹುದು, ಅದು ನೂರಕ್ಕೆ ನೂರರಷ್ಟು ಗೆದ್ದೇ ಗೆಲ್ಲುತ್ತೇವೆ ಎನ್ನುವಂತಹ ಕಾಲ ಇತ್ತು. ಮೂರನೇ ಎರಡರಷ್ಟು ಮೆಜಾರಿಟಿ ನಿಮಗೆ ಇರುತ್ತಿತ್ತು. ಇವತ್ತು ಭಾರತೀಯ ಜನತಾ ಪಾರ್ಟಿಯವರಾದ ನಾವು ಈ ದೇಶದಲ್ಲಿ ಮೊದಲೇ ಸ್ಥಾನದಲ್ಲಿ ಇದ್ದೇವೆ. ಬಿ.ಜೆ.ಪಿ. ಯಿಂದ 138 ಎಂ.ಪಿ.ಗಳಿದ್ದಾರೆ, ಎನ್.ಡಿ.ಎ 42 ಜನ ಎಂ.ಪಿ.ಗಳು ಸೇರಿ ಒಟ್ಟು 180 ಜನ ಎಂ.ಪಿ.ಗಳು ನಾವಿದ್ದೇವೆ. 50 ಜನ ರಾಜ್ಯಸಭಾ ಸದಸ್ಯರಿದ್ದಾರೆ. ಬಿ.ಜೆ.ಪಿ. ಇವತ್ತು ಗುಜರಾತ್, ರಾಜಾಸ್ಥಾನ್, ಮಧ್ಯಪ್ರದೇಶ, ಛತ್ತೀಸ್‌ಘಡ್ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದೆ. ಬಿಹಾರ, ಒರಿಸ್ಸಾ, ನಾಗಾಲ್ಯಾಂಡ್ ಮತ್ತು ಈಗ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ಬಿ.ಜೆ.ಪಿ. ಪಾಲ್ಗೊಂಡಿದೆ. ಅಂದರೆ ಯಾವ ಪಾರ್ಟಿ ಐದು ರಾಜ್ಯಗಳಲ್ಲಿ ಸ್ವತಂತ್ರವಾಗಿ ಆಡಳಿತ ನಡೆಸುತ್ತಿದೆಯೋ, ಐದು ರಾಜ್ಯಗಳಲ್ಲಿ ಸಮ್ಮಿಶ್ರ ಸರ್ಕಾರ ನಡೆಸುತ್ತಿದೆಯೋ, ಆ ಪಾರ್ಟಿಯನ್ನು ಕೋಮುವಾದಿ ಎಂದು ಕರೆಯುವ ಧೈರ್ಯವನ್ನು ನೀವು ಮಾಡುತ್ತಿದ್ದೀರಿ. ಅಂದರೆ ಈ ದೇಶದ ಮತದಾರನ ತೀರ್ಮಾನಕ್ಕೆ ಅಗೌರವವನ್ನು ಸೂಚಿಸುತ್ತಾ, ಅವನನ್ನು ಅಪಮಾನ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಿ. ಎನ್ನುವಂತಹ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೋಮು ಸೌಹಾರ್ದತೆ ಬಗ್ಗೆ ನೀವು ಮಾತನಾಡಿದಿರಿ. ಮಾನ್ಯ ಧರ್ಮಸಿಂಗ್‌ರವರ ಬಗ್ಗೆ, ಮಾನ್ಯ ಖರ್ಗೆಯವರ ಬಗ್ಗೆ ನನಗೆ ಗೌರವ ಇದೆ. ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ನಾನು ಕೇಳುತ್ತೇನೆ. ಬಹಳ ಜನ ಚರ್ಚೆ ಮಾಡಿದರು, ಯುವಕರಾದ ಮಾನ್ಯ ರವಿಯವರು ಇದರ ಬಗ್ಗೆ ಹೋರಾಟ ನಡೆಸಿದ್ದಾರೆ, ದತ್ತ ಜಯಂತಿ ಬಗ್ಗೆ ಏನಾಗವಹುದು ಎಂದು ನೀವು ಪ್ರಶ್ನೆಯನ್ನು ಕೇಳಿದಿರಿ. ನಾನು ನಿಮ್ಮನ್ನು ಕೇಳುತ್ತೇನೆ. 2001ರ ಡಿಸೆಂಬರ್‌ನಲ್ಲಿ ಅಂದಿನ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದಂತಹ ಮಾನ್ಯ ಡಿ.ಬಿ.ಚಂದ್ರೇಗೌಡರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಸಮಕ್ಷಮ ದತ್ತಹೋಮವನ್ನು ಸರ್ಕಾರವೇ ಮಾಡಲಿಲ್ಲವೇ? ಅಂದರೆ ನೀವು ಮಾಡಿದರೆ ........

**ಶ್ರೀ ಧರ್ಮಸಿಂಗ್** : ಮಾನ್ಯ ಚಂದ್ರೇಗೌಡರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಅವರು ನಿಮ್ಮ ಜೊತೆಯಲ್ಲಿ ಹೋಮದಲ್ಲಿ ಕುಳಿತರು. ನಾನು ಅವರಿಗೆ ಹೇಳಿದ್ದೆ, ಅದಕ್ಕೇ ಅವರು ಸೋತರು. ಮತ್ತೇನು ತಾವು ಇಲ್ಲಿ ಬಿಹಾರ ಅಥವಾ ಮಧ್ಯಪ್ರದೇಶದ ಬಗ್ಗೆ ಹೇಳುತ್ತಿದ್ದೀರಿ, ಅದು ಇಲ್ಲಿ ಬೇಕಾಗಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಸಗೀರ್ ಅಹ್ಮದ್ ಏಕೆ ಸೋತರು ಎಂಬುದನ್ನು ತಾವು ಹೇಳುತ್ತಿಲ್ಲ. ಮಾನ್ಯ ಮೋಟಮ್ಮನವರು ಏಕೆ ಸೋತರು ?

**ಶ್ರೀ ಧರ್ಮಸಿಂಗ್** : ಅದನ್ನು ಬಿಡಿ. ಇವತ್ತು ಬಿಹಾರದ ಬಗ್ಗೆ ಮತ್ತು ಬೇರೆ ಕಡೆಯದರ ಬಗ್ಗೆ ತಾವು ಈಗ ಹೇಳುತ್ತಿದ್ದೀರಿ. ಅದನ್ನು ಬಿಡಿ. ಇತ್ತೀಚಿನ ದಿನಗಳಲ್ಲಿ ನಡೆದ ಜಿಲ್ಲಾ ಪಂಚಾಯಿತಿ

ಚುನಾವಣೆಯಲ್ಲಿ ನಿಮ್ಮ ಸ್ಥಿತಿ ಏನಾಗಿದೆ ? ಕಳೆದ 2004ರ ಚುನಾವಣೆ ಆಗಿರಬಹುದು ಅಥವಾ ಇತ್ತೀಚಿನ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ನಿಮ್ಮ ಸ್ಥಿತಿ ಏನಾಗಿದೆ

**ಶ್ರೀ ಸಿ.ಎಂ. ಉದಾಸಿ** : ಸನ್ಮಾನ್ಯ ಸಭಾಧ್ಯಕ್ಷರೆ, 1984ರ ಲೋಕಸಭಾ ಚುನಾವಣೆಯಲ್ಲಿ 27 ಸ್ಥಾನಗಳಲ್ಲಿ 25ರಲ್ಲಿ ಕಾಂಗ್ರೆಸ್‌ನವರು ಆಯ್ಕೆಯಾಗಿದ್ದರು. 1985ರಲ್ಲಿ ಮತ್ತೆ ವಿಧಾನ ಸಭೆಗೆ ಚುನಾವಣೆ ಆದಾಗ ಕಾಂಗ್ರೆಸ್ ಸ್ಥಿತಿ ಏನಾಗಿತ್ತು ಎಂಬುದನ್ನು ಅವರು ಆಲೋಚನೆ ಮಾಡಬೇಕು. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳ ರಿಸಲ್ಟ್ ಅನ್ನು ಹೇಳಿಕೊಂಡು, ನಾಳಿನ ವಿಧಾನ ಸಭೆ ಚುನಾವಣೆಗಳಲ್ಲಿ ಏನು ಆಗಬಹುದು ಎಂಬುದನ್ನು ಎಂದು ಊಹೆ ಮಾಡುವುದು ಸರಿಯಾದುದಲ್ಲ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ನಾನು ಏನು ಹೇಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಎಂದರೆ, ಮಾನ್ಯ ಚಂದ್ರೇಗೌಡರು ಚುನಾವಣೆಯಲ್ಲಿ ಸೋತರೋ ಅಥವಾ ಗೆದ್ದರೋ ಎಂಬ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಪ್ರಸ್ತಾಪ ಮಾಡುತ್ತಿರುವುದು, ಯಾವ ದತ್ತ ಜಯಂತಿ ಬಗ್ಗೆ ತಾವು ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದೀರೋ, ನಿಮ್ಮದೇ ಸರ್ಕಾರ ಇದ್ದಾಗ, ನಿಮ್ಮವರೇ ಆಗಿದ್ದಂತಹ ಜಿಲ್ಲಾ ಉಸ್ತುವಾರಿ ಸಚಿವರು, ಅಲ್ಲಿರುವಂತಹ ಜಿಲ್ಲಾಧಿಕಾರಿಗಳ ಸಮಕ್ಷಮ ದತ್ತ ಜಯಂತಿ, ಹೋಮ ಹವನಗಳನ್ನು ಮಾಡಿದರು. ಆಗ ಯಾವುದೇ ಟೀಕೆ ಟಿಪ್ಪಣಿಗಳು ಬರಲಿಲ್ಲ. ಭಾರತೀಯ ಜನತಾ ಪಾರ್ಟಿಯವರು ಅಥವಾ ಸಂಘ ಪರಿವಾರದ ಯಾವುದಾದರೂ ಸಂಘಟನೆಗಳು ಅಲ್ಲಿ ದತ್ತ ಹೋಮ, ಪೂಜೆ, ಪುನಸ್ಕಾರಗಳು ಆಗಬೇಕೆಂದರೆ, ಜಾತಿ ವಿಷ ಬೀಜ ಬಿತ್ತುತ್ತಿದ್ದೇವೆ ಎನ್ನುವಂತಹ ಭಾವನೆಯನ್ನೇನು ಮೂಡಿಸುತ್ತಿದ್ದೀರಿ, ಅದು ಸರಿಯಲ್ಲ. ನೀವು ಮಾಡಿದರೆ ಎಲ್ಲಾ ಸರಿ, ಸಂಘ ಪರಿವಾರ ಅಥವಾ ಭಾರತೀಯ ಜನತಾ ಪಾರ್ಟಿ ಮಾಡಿದರೆ ಅದು ಸರಿಯಲ್ಲ......

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಯಡಿಯೂರಪ್ಪನವರೆ, .........

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನು ಯೀಲ್ಡ್ ಆಗಿಲ್ಲ. ದಯವಿಟ್ಟು ಆಮೇಲೆ ಮಾತನಾಡಿ. I am sorry Sir. ನಾನು ಯೀಲ್ಡ್ ಆಗಿಲ್ಲ. ದಯವಿಟ್ಟು ಸಹಕರಿಸಿ. ನಾನು ನಿಮ್ಮನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಸ್ವಾತಂತ್ರ್ಯ ಬಂದ ತಕ್ಷಣ ಗುಜರಾತ್‌ನಲ್ಲಿದ್ದಂತಹ, ಅನೇಕ ಬಾರಿ ಆಕ್ರಮಣಕ್ಕೆ ಒಳಗಾಗಿದ್ದಂತಹ, ಜರ್ಜರಿತವಾಗಿದ್ದಂತಹ ಸೋಮನಾಥನ ದೇವಸ್ಥಾನವನ್ನು ಸರ್ದಾರ್ ಪಟೇಲ್‌ರವರು ಹೋಮ್ ಮಿನಿಸ್ಟರ್ ಆಗಿದ್ದಾಗ ಅದನ್ನು ಪುನರುಜ್ಜೀವಗೊಳಿಸಿ, ಆ ದೇವಾಲಯವನ್ನು ಕಟ್ಟಿಸಿದರಲ್ಲಾ, ಇಡೀ ದೇಶಕ್ಕೆ ಒಂದು ಚೈತನ್ಯವನ್ನು ತುಂಬಿದರಲ್ಲಾ, ಪರಿವರ್ತನೆಯನ್ನು ಮಾಡಿದರಲ್ಲಾ, ಅದು ಕೋಮುವಾದವೇ ? ದಿವಂಗತ ರಾಜೀವ್ ಗಾಂಧಿಯವರು ಪ್ರಧಾನಿಯಾಗಿದ್ದಾಗ, ಆಯೋಧ್ಯೆಯ ರಾಮಮಂದಿರದಲ್ಲಿನ ಪೂಜೆ ಪುನಸ್ಕಾರಗಳು ನಿಂತಿತ್ತು, ಆ ಮಂದಿರದ ಬಾಗಿಲು ಹಾಕಲಾಗಿತ್ತು, ಅವರು ಅದರ ಬೀಗ ತೆಗೆಸಿ, ಮುಜರಾಯಿ ಇಲಾಖೆಯಿಂದ ಪೂಜಾರಿಯನ್ನು ನೇಮಕ ಮಾಡಿ, ಅಲ್ಲಿ ಪೂಜೆಗೆ ವ್ಯವಸ್ಥೆಯನ್ನು ಮಾಡಿದರು. ಅದು ಕೋಮುವಾದವೇ? ಕೋಮುವಾದಿಗಳನ್ನು ದೂರ ಇಡುವುದಕ್ಕೋಸ್ಕರ ನಾವು ಸರ್ಕಾರ ರಚನೆ ಮಾಡಿದ್ದೇವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಈಗ ತಾನೇ ಹೇಳಿದರು. ನಾನು ಈ ಸದನದಲ್ಲಿ ಯಾರು ಕೋಮುವಾದಿಗಳು ಎನ್ನುವಂತಹ ಪ್ರಶ್ನೆಯನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ......

**ಒಬ್ಬ ಮಾನ್ಯ ಸದಸ್ಯರ** : ಕೋಮುವಾದಕ್ಕೂ ಕೋಮು ಸೌಹಾರ್ದಕ್ಕೂ ಒಂದಷ್ಟು difference ಇದೆ ಸಾರ್ ..........

**(ಗೊಂದಲ)**

**ಅಧ್ಯಕ್ಷರು** : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

**(ಗೊಂದಲ)**

**ಅಧ್ಯಕ್ಷರು** : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಈಶ್ವರಪ್ಪನವರೆ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಅಧ್ಯಕ್ಷರು** : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಯಡಿಯೂರಪ್ಪನವರೆ, ದಯವಿಟ್ಟು ಸ್ವಲ್ಪ ಕುಳಿತುಕೊಳ್ಳಿ. ಜನ ನಿಮ್ಮನ್ನೆಲ್ಲಾ ನೋಡುತ್ತಿದ್ದಾರೆ. ಬಹುಶಃ ಅವರು ಇಂತಹವರನ್ನು ನಾವು ಆರಿಸಿ ಕಳುಹಿಸಿದ್ದೇವಲ್ಲಾ ಎಂದು ಎದೆ ಬಡಿದುಕೊಳ್ಳುತ್ತಿರಬಹುದು. ದಯಮಾಡಿ, ನೀವು ಯಾವ ರೀತಿಯಲ್ಲಿ ವರ್ತನೆ ಮಾಡುತ್ತಿದ್ದೀರಿ ಎಂಬ ಬಗ್ಗೆ ಸ್ವಲ್ಪ ಕಣ್ಣು ಮುಚ್ಚಿಕೊಂಡು ಒಂದು ನಿಮಿಷ ವಿಚಾರ ಮಾಡಿ. ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಯಡಿಯೂರಪ್ಪನವರು ಮಾತನಾಡಲಿ. ಅವರ ಭಾಷಣದ ಮಧ್ಯೆ ಯಾರ interruptions ಇರಕೂಡದು.

**ಶ್ರೀ ಬಿ.ಎಸ್. ಯಡಿಯೂರಪ್ಪ**: ಇವತ್ತು ಈ ದೇಶದ ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೇನೇ ನಮ್ಮ ಮುಖನೇರಕ್ಕೆ ತಕ್ಕಂತೆ ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಮಾತನಾಡುವುದನ್ನು ಇನ್ನಾದರೂ ಕಡಿಮೆ ಮಾಡಿಕೊಳ್ಳಬೇಕು. ನಾವು ಪ್ರತಿನಿದಿಸುತ್ತಿರುವ ನಮ್ಮ ಕ್ಷೇತ್ರ ನಮ್ಮ ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಬೇಕು ಎಂಬ ಬಗ್ಗೆ ಚಿಂತನೆ ಮಾಡುತ್ತಿರುವಂಥ ಕಾಲವಿದು. ಭಾರತೀಯ ಜನತಾ ಪಾರ್ಟಿಯವರನ್ನು ಜಾತಿವಾದಿಗಳು ಎಂದು ಅಲ್ಪಸಂಖ್ಯಾತರನ್ನು ತೃಪ್ತಿಪಡಿಸಿ ಓಟ್ ಬ್ಯಾಂಕ್ ರಾಜಕಾರಣ ಮಾಡುವಂಥದ್ದು ಯಾರೊಬ್ಬರೂ ಮಾಡಬಾರದು. ಅದು ನಿಲ್ಲಬೇಕು. ಆಗಮಾತ್ರ ನಿಮ್ಮ ಮಾತಿಗೆ ಒಂದು ಗೌರವ ಬರುತ್ತದೆ. ಇವತ್ತು ಈ ದೇಶದಲ್ಲಿ ಕಾಮನ್ ಸಿವಿಲ್ ಕೋಡ್ ಜಾರಿಗೆ ಬರಬೇಕೆಂದು ನಾವು ಹೇಳುತ್ತಿದ್ದೇವೆ. ಎಲ್ಲಾ ನಾಗರೀಕರಿಗೂ ಒಂದೇ ಕಾನೂನು ಇರಬೇಕೆಂದು ಹೇಳಿದರೆ ಅದು ಜಾತಿವಾದವಾಗುತ್ತದೆಯೆ ?

**(ಗೊಂದಲ)**

ಯಾವುದು ಕೋಮುವಾದ ? ಕಾಂಗ್ರೆಸ್‌ನ ನಮ್ಮ ಸ್ನೇಹಿತರು ಕೇರಳ ಮತ್ತು ತ್ರಿಪುರಾಗಳಲ್ಲಿ ನೀವು ಯಾರ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದೀರಿ ? ಕೇರಳದಲ್ಲಿ ಮತೀಯ ಶಕ್ತಿಗಳೊಂದಿಗೆ ಕೈಜೋಡಿಸುತ್ತಿರತಕ್ಕವರು ನೀವೇ ತಾನೆ ?

ಶ್ರೀ ಎನ್. ಧರ್ಮಸಿಂಗ್ : ಮುಂದೆ ಜಾಯಿಂಟ್ ಸೆಷನ್ ಮಾಡುವುದಿದೆ, ಗೌರ್ನರ್ಸ್ ಅಡ್ರೆಸ್ ಇದೆ, ಆಗ ಎಲ್ಲಾ ಮಾತನಾಡೋಣವಂತೆ, ಇವತ್ತು ನಾವು ಏನೇನು ಮಾತನಾಡಿದ್ದೇವೆ ಅದರ ಬಗ್ಗೆ ಹೇಳಿ, ಮುಗಿಸೋಣ, ಏಕೆಂದರೆ ಈಗ ರಾತ್ರಿ 11.20 ಸಮಯವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಹೌದು, 12 ಗಂಟೆಯ ಮೇಲೆ ದೆವ್ವದ ಕಾಲವಲ್ಲವೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಒಬ್ಬರು ಹಿರಿಯ ಸದಸ್ಯರಾಗಿ ಒಬ್ಬ ಸಂಸತ್ ಸದಸ್ಯರಾಗಿದ್ದಿರಿ, ಭೂತ ಬರುವಂಥದ್ದು, ಭೂತ ಬಿಟ್ಟಿರುವ ಕೆಲಸ ಮಾಡುತ್ತಿರುವುದು ನೀವೇ ತಾನೆ? ನಿಮ್ಮ ಮನಬಂದಂತೆ ಕಳೆದ ಮೂರ್ನಾಕು ಗಂಟೆಗಳಿಂದ ಮಾತನಾಡಿದ್ದೀರಿ. ಅದಕ್ಕೆ ಉತ್ತರ ಕೊಡಲು ನಿಂತುಕೊಂಡರೆ ನಿಮಗದು ಸಹಿಸುವುದಕ್ಕಾಗುವುದಿಲ್ಲ. ವಿರೋಧ ಪಕ್ಷದ ನಾಯಕರಾದ ಮಾನ್ಯ ಧರ್ಮ್‌ಸಿಂಗ್‌ರವರನ್ನು ಕೇಳಲು ಇಚ್ಚೆ ಪಡುತ್ತೇನೆ, ಮುಸ್ಲಿಂ ಲೀಗ್ ನೆರವಿನೊಂದಿಗೆ ಕೇರಳಾದಲ್ಲಿ ಹಾಗೂ ಕೇಂದ್ರದಲ್ಲಿ ಸರ್ಕಾರ ರಚನೆ ಮಾಡಿರುವವರು ಯಾರು ? ಸಂಘಪರಿವಾರ ಬಗ್ಗೆ ಇಲ್ಲಿ ಬಹಳ ಮಾತನಾಡಿದಿರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಇದು ಹಳೆಯದೂ ಇಲ್ಲ, ಹೊಸದೂ ಅಲ್ಲ. ಅವರು.....

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಮೇಶ್‌ಕುಮಾರ್‌ರವರೆ, ನೀವು ಬಹಳ ಬುದ್ಧಿವಂತರು, ಸ್ಪೀಕರ್ ಆಗಿ ಕೆಲಸ ಮಾಡಿದ್ದೀರಿ, ಅದನ್ನು ನಾನು ಗಮನಿಸುತ್ತಿದ್ದೇನೆ, ಎಲ್ಲವನ್ನೂ ಹಗುರವಾಗಿ ತೆಗೆದುಕೊಳ್ಳುವಂಥ ಪ್ರಯತ್ನ ಮಾಡುತ್ತಿದ್ದೀರಿ. ಯಾವ ಸಂಘ ಪರಿವಾರದ ಬಗ್ಗೆ ಇಲ್ಲಿ ಹಗುರವಾಗಿ ಕೋಮುವಾದಿಗಳೆಂದು ಕರೆಯುತ್ತಿದ್ದೀರೋ ಅವರು ಮಾಡುತ್ತಿರುವ ಒಂದು ಒಳ್ಳೆಯ ಕೆಲಸದ ಬಗ್ಗೆ ನಿಮಗೇನಾದರೂ ಕಲ್ಪನೆ ಇದೆಯೆ ಎಂದು ಕೇಳಲು ಇಷ್ಟಪಡುತ್ತಿದ್ದೇನೆ. ಸಂಘ ಪರಿವಾರದ ಸುಮಾರು 67 ಸಾವಿರ ಕಾರ್ಯಕರ್ತರು ಗುಡ್ಡಗಾಡು ಪ್ರದೇಶದಲ್ಲಿ ಅವರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿ. ಕರ್ನಾಟಕದಲ್ಲಿ ಹಿಂದೂ ಸೇವಾ ಪ್ರತಿಷ್ಠಾನ ಸುಮಾರು 3400 ಪೂರ್ಣಾವಧಿ ಕಾರ್ಯಕರ್ತರು ಹಿಂದುಳಿದ ಪ್ರದೇಶಗಳಲ್ಲಿ ಸೇವಾ ಕಾರ್ಯವನ್ನು ಏನೂ ಅಪೇಕ್ಷೆಪಡದೇನೇ ಮಾಡುತ್ತಿದ್ದಾರೆ, ಯಾವುದೇ ರೆಮ್ಯುನರೇಷನ್ ಪಡೆಯದನೇ ಮಾಡುತ್ತಿದ್ದಾರೆ. ಈ ರೀತಿ ನೂರೆಂಟು ಸೇವಾ ಕೆಲಸವನ್ನು ಮಾಡುತ್ತಿರುವಂಥ ಸಂಸ್ಥೆಗಳ ಬಗ್ಗೆ ಹಗುರವಾಗಿ ಮಾತನಾಡುವಂಥ ಪ್ರಯತ್ನವನ್ನು ದಯಮಾಡಿ ಮಾಡಬೇಡಿ. ಕಳೆದ 25–30 ವರ್ಷದಿಂದ ಈ ರಾಜ್ಯದ ರೈತ, ಕೃಷಿ ಕಾರ್ಮಿಕರ ಬಗ್ಗೆ ಹೋರಾಟ ಮಾಡಿಕೊಂಡು ಬಂದಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದೆಲ್ಲಾ ನೀವು ಹೇಳುವುದನ್ನು ನೋಡಿದರೆ, ಟ್ರೈಬಲ್ ಏರಿಯಾದಲ್ಲಿ ನಮ್ಮ ಜನ ಇಷ್ಟು ಕೆಲಸ ಮಾಡುತ್ತಿದ್ದಾರೆ, ಸಂಘ ಸಂಸ್ಥೆಗಳು ಮಾಡುತ್ತಿದ್ದಾವೆ ಎಂದು ಹೇಳಿ ನಿಮ್ಮ ಹೇಳಿಕೆಯನ್ನು ನೋಡಿದಾಗ, ಪಟ್ಟಿಯನ್ನು ನೋಡಿದಾಗ ಐದು ರಾಜ್ಯದಲ್ಲಿ ನಾವೇ ಆಳುತ್ತಿದ್ದೇವೆ, ಇನ್ನೊಂದು ಐದು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಇದೆಯೆಂದು ಹೇಳಿ, ಈ

ರೀತಿ ಹೇಳಿದ್ದನ್ನು ನೋಡಿದರೆ ಇಡೀ ಸದನಕ್ಕೆ ಸ್ವಲ್ಪ ಹೆದರಿಸಿದಂತೆ ಕಾಣುತ್ತಿದೆ. ಅದರಲ್ಲಿ ಕುಮಾರಸ್ವಾಮಿಯವರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ನಾವಾಗಲೂ ಸಹ ದೊಡ್ಡ ಮೀನು ಸಣ್ಣ ಮೀನನ್ನು ನುಂಗುತ್ತದೆ. ಅದಕ್ಕೆ ದಯವಿಟ್ಟು ಹುಶಾರಾಗಿರಬೇಕು, ಹತ್ತು ರಾಜ್ಯದ ಪಟ್ಟಿ ಅವರು ತೋರಿಸಿದ್ದಾರೆ, ನಾನು ನನ್ನ ಶಕ್ತಿ ಇಷ್ಟಿದೆ, ನನಗೆ ಬಲ ಇಷ್ಟಿದೆ, ಅದಕ್ಕೆ ಹುಷಾರ್ ಎಂದು ಹೇಳುತ್ತಿದ್ದಾರೆ, ದಯವಿಟ್ಟು ಹುಷಾರಾಗಿರಿ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿಃ** ಮಾನ್ಯ ಅಧ್ಯಕ್ಷರೆ, I am on point of order.

**ಅಧ್ಯಕ್ಷರು :** ರಾಯರೆಡ್ಡಿಯವರೆ ಕುಳಿತುಕೊಳ್ಳಿ. ಸುಮ್ಮನೆ ಸಮಯ ಹಾಳು ಮಾಡಲು ಎಷ್ಟುಬೇಕೋ ಅಷ್ಟನ್ನು ಮಾಡುತ್ತಿದ್ದೀರಿ. ನೀವು ಹಿರಿಯ ಸದಸ್ಯರು, ನಿಮಗಿದು ಶೋಭೆ ತರುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿಃ** ಸಂವಿಧಾನದ ವಿರೋಧವಾಗಿ ಮಾತನಾಡುತ್ತಿದ್ದಾರೆ. I am on my point of order.

**ಅಧ್ಯಕ್ಷರುಃ** ಏನು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿಃ** ಸನ್ಮಾನ್ಯ ಅಧ್ಯಕ್ಷರೇ, He is a Deputy Chief Minister. He is not the Leader of opposition. ನೂತನವಾಗಿ ಅವರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಆದರೆ ಅವರು ಕೆಲವೊಂದು ಸಾರಿ ಮರೆತು ವಿರೋಧ ಪಕ್ಷದ ನಾಯಕನಾಗಿ ಮಾತನಾಡುತ್ತಿದ್ದಾರೆ. ಅವರು ಈಗ ಹೇಳುತ್ತಿದ್ದರು ಆರ್.ಎಸ್.ಎಸ್. ಬಗ್ಗೆ, ಹಿಂದೂ ಮಹಾ ಸಭಾದ ಬಗ್ಗೆ, ಏನೇನು ಮಾಡಿದ್ದೇವೆ ಎಂದು ಹೇಳಿದ್ದಾರೆ. ತಾವು ದಯಮಾಡಿ ಉಪ ಮುಖ್ಯಮಂತ್ರಿಗಳು, ಸಂವಿಧಾನದ ಮೇಲೆ ತಾವು ಪ್ರಮಾಣವಚನ ಸ್ವೀಕಾರ ಮಾಡಿದ್ದೀರಿ, ಸಂವಿಧಾನದಲ್ಲಿ ಏನು ಹೇಳುತ್ತದೆ ಪ್ರಿಯಾಂಬಲ್ ಸೆಕ್ಯುಲಾರಿಸಂ, What is secularism? The Constitution of India stands for Secular State. State has no official religion.

(ಗೊಂದಲ)

**ಅಧ್ಯಕ್ಷರು :** ಆಯಿತು. ಅದನ್ನು ಆಗಲೇ Quote ಮಾಡಿದ್ದಾರೆ. ಅದು ಡಿಸ್‌ಕಸ್ ಆಗಿದೆ, ತಾವು ಕುಳಿತುಕೊಳ್ಳಿ ದಯಮಾಡಿ.

**ಶ್ರೀ ಬಸವರಾಜ ರಾಯರೆಡ್ಡಿಃ** ಸಂವಿಧಾನದ ವಿರೋಧ ಇದು.

**ಅಧ್ಯಕ್ಷರುಃ** ತಾವು ದಯಮಾಡಿ ಕೂರಿ.

**ಶ್ರೀ ಬಸವರಾಜ ರಾಯರೆಡ್ಡಿಃ** ನನ್ನ ವಾದ ಇಷ್ಟೆ. ದಯಮಾಡಿ ಕೇಳಿ.

**ಅಧ್ಯಕ್ಷರುಃ** ಮಾನ್ಯ ರಾಯರೆಡ್ಡಿಯವರೆ, ಬೆಳಿಗ್ಗೆಯೆಲ್ಲಾ ಇದರ ಬಗ್ಗೆ ಎತ್ತಿದ್ದಾರೆ, ಚರ್ಚೆಯೆಲ್ಲಾ ಆಗಿದೆ, ಎಲ್ಲಾ ಆಗಿದೆ, ನೀವು ಮತ್ತೆ ಮತ್ತೆ ಅದನ್ನೆ ಎತ್ತುತ್ತಿದ್ದೀರಲ್ಲಾ ? ಮಾನ್ಯ ಯಡಿಯೂರಪ್ಪನವರೇ, ತಾವು ದಯಮಾಡಿ ಮಾತನಾಡಿ.

(ಗೊಂದಲ)

**ಶ್ರೀ ಜಿ.ಟಿ. ದೇವೇಗೌಡ:** ಮಾನ್ಯ ದೇವರಾಜ್ ಅರಸುರವರನ್ನು ತೆಗೆದವರು ನೀವು, ಮಾನ್ಯ ವೀರೇಂದ್ರಪಾಟೀಲರನ್ನು ತೆಗೆದವರು ನೀವು, ಮಾನ್ಯ ಧರ್ಮ್‌ಸಿಂಗ್‌ರವರನ್ನು ತೆಗೆದವರು ನೀವು. ಬೇರೆ ಯಾರು ತೆಗೆದಿದ್ದಾರೆ ? ಸೆಕ್ಯುಲಾರಿಸಂ ಬಗ್ಗೆ ಮಾತನಾಡುತ್ತೀರಿ, ಜಾತ್ಯಾತೀತತೆಯ ಬಗ್ಗೆ ಮಾತನಾಡುತ್ತೀರಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಇವತ್ತು ಈ ಸಮ್ಮಿಶ್ರ ಸರ್ಕಾರ ಈ ಸಂಪೃದ್ಧ ಕರ್ನಾಟಕ ನಿರ್ಮಾಣ.

**ಅಧ್ಯಕ್ಷರು:** ಮಾನ್ಯ ಸದಸ್ಯರಲ್ಲಿ ವಿನಂತಿ, ಈಗ ಸಮಯ ರಾತ್ರಿ 11–30 ಆಯಿತು. ಇವರು ಆದಮೇಲೆ ಸಭಾನಾಯಕರು ಉತ್ತರ ಕೊಡಬೇಕು. ದಯಮಾಡಿ ಇಂಟ್ರಪ್ಷನ್ ಮಾಡಬೇಡಿ, ದಯಮಾಡಿ ಸಹಕರಿಸಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಸುರಿತ ನಮ್ಮ ಕಾಂಗ್ರೆಸ್‌ನ ಹಿರಿಯ ಸದಸ್ಯರು ಆ ಕಡೆ ಕುಳಿತಾಗ ಇಲ್ಲಿ ಹೆಚ್ಚು ಗಂಭೀರವಾದಂಥ ಒಳ್ಳೆಯ ರೀತಿಯ ಚರ್ಚೆಗೆ ನೀವು ಅವಕಾಶ ಮಾಡಿಕೊಡುತ್ತೀರಿ ಎಂದು ನಾನು ಭಾವಿಸಿದ್ದೆ. ಆದರೆ ಇವತ್ತು ನಿಮ್ಮ ಧಾಟಿಯನ್ನು ನೋಡಿದಾಗ, ಮುಂದಿನ ಬೆಂಚ್‌ನ ಸಾಲಿನಲ್ಲಿ ಕುಳಿತಿರತಕ್ಕ ಹಿರಿಯರು ಇರುವಂಥ ಕಾಲದಲ್ಲೂ ಸಹ ಪ್ರತಿಯೊಂದು ಶಬ್ದಕ್ಕೆ ನೀವು ಟೀಕೆ ಮಾಡುವಂಥ ಪ್ರಯತ್ನ ಮಾಡುತ್ತಿದ್ದೀರಿ.

**ಶ್ರೀ ವಾಟಾಳ್ ನಾಗರಾಜ್:** ತಾವು ಎಲ್ಲರನ್ನೂ ಒಟ್ಟಿಗೆ ಸೇರಿಸಿ ಹೇಳುತ್ತಿದ್ದೀರಲ್ಲಾ ಏನಿದು?

**ಶ್ರೀ ಬಿ.ಎಸ್. ಯಡಿಯೂರಪ್ಪ:** ಭಾರತೀಯ ಜನತಾ ಪಾರ್ಟಿ ಜೆ.ಡಿ.ಎಸ್. ಈ ಸಮ್ಮಿಶ್ರ ಸರ್ಕಾರ ನೀವು ಆಶ್ಚರ್ಯ ಪಡುವ ರೀತಿಯಲ್ಲಿ ನಿಮ್ಮ 19–20 ತಿಂಗಳ ಆಡಳಿತ ವೈಖರಿಗೂ ಬರುವಂಥ ಐದಾರು ತಿಂಗಳಲ್ಲಿ ಈ ರಾಜ್ಯದ ಜನ ನೆಮ್ಮದಿಯಿಂದ ನಿಟ್ಟುಸಿರು ಬಿಡುವಂಥ ರೀತಿಯಲ್ಲಿ ಒಂದು ಬದಲಾವಣೆಯಾಗುತ್ತದೆ ಎನ್ನುವ ಭಾವನೆ ಮೂಡಿಸುವುದರ ಕಡೆ ವಿಶೇಷವಾದ ಗಮನವನ್ನು ನಾವು ಕೊಡುತ್ತೇವೆ. ಸ್ವಚ್ಛ, ದಕ್ಷ ಮತ್ತು ಪ್ರಾಮಾಣಿಕವಾದ ಆಡಳಿತವನ್ನು ನಾವು ಕೊಡುತ್ತೇವೆ. ಗ್ರಾಮೀಣ ರೈತ ನೆಮ್ಮದಿಯಿಂದ ಬದುಕುವಂಥ ವ್ಯವಸ್ಥೆ ಮಾಡಿಕೊಡುವ ಕಡೆ ಗಮನವನ್ನು ಕೊಡುತ್ತೇವೆ. ನಾಳೆ ಬರುವಂಥ ಬಡ್ಜೆಟ್, ನಾವು ಕೊಡುವಂಥ ಬಡ್ಜೆಟ್ ಈ ರಾಜ್ಯದ ರೈತ, ಕೃಷಿ ಕಾರ್ಮಿಕ, ನಿರುದ್ಯೋಗಿ ಯುವಕ ನೆಮ್ಮದಿಯಿಂದ ಬದುಕುವಂಥ ಒಂದು ಕಾರ್ಯಕ್ರಮವನ್ನು ರೂಪಿಸಿಬೇಕೆಂದು ನಾನು ಮತ್ತು ಮುಖ್ಯಮಂತ್ರಿಗಳು ಮಾತನಾಡಿದ್ದೇವೆ. ಕಳೆದ 18–19 ತಿಂಗಳು ಈ ರಾಜ್ಯದ ಅಭಿವೃದ್ಧಿಯ ಕಡೆ ತಾವು ಗಮನ ಕೊಡಲಿಲ್ಲ. ಆದರೆ ಇವತ್ತು ಬರುವಂಥ ಸಮ್ಮಿಶ್ರ ಸರ್ಕಾರ ಈ ರಾಜ್ಯದ ಜನ ನೆಮ್ಮದಿಯಿಂದ ಬದುಕುವಂಥ ವ್ಯವಸ್ಥೆ ಮಾಡುವ ಬಗ್ಗೆ ನಮಗೆ ವಿಶ್ವಾಸವಿದೆ. ಕನ್ನಡ ನಾಡಿನ ಜನರು ನಮಗೆ ಆಶೀರ್ವಾದವನ್ನು ಮಾಡಿದ್ದಾರೆ. ಮೊನ್ನೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡುವಂಥ ಕಾಲದಲ್ಲಿ ಸುಮಾರು ಲಕ್ಷ ಜನರೇನು ಬಂದಿದ್ದರು, ಆನಂದದಿಂದ ಏನು ಕುಣಿದು ಕುಪ್ಪಳಿಸುತ್ತಿದ್ದರು, ಇಡೀ ರಾಜ್ಯ ಈ ರೀತಿ ಬದಲಾವಣೆಯಾಗುತ್ತಿದೆ ಎಂದು ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಿದ್ದಾರೆ. ಆದ್ದರಿಂದ ದಯಮಾಡಿ ವಿರೋಧ ಪಕ್ಷ ನಿಂತು, ಕುಳಿತು ನೀವು ಸರಿಯಾಗಿ ಸಹಕಾರ ನೀಡಿದರೆ ಒಂದು ಒಳ್ಳೆಯ ಆಡಳಿತವನ್ನು ಕೊಡುತ್ತೇವೆ. ತಾವು ಸಹಕರಿಸಬೇಕು. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ

ಕರ್ನಾಟಕ ರಾಜ್ಯದಲ್ಲಿ ಒಂದು ಬದಲಾವಣೆಯನ್ನು ತರುತ್ತೇವೆ. ಜನಮೆಚ್ಚುವಂಥ ಆಡಳಿತವನ್ನು ಕೊಡುತ್ತೇವೆ ಎಂಬ ಭರವಸೆಯನ್ನು ಈ ನಾಡಿನ ಜನರಿಗೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ 10.30 ಗಂಟೆಯಿಂದ ರಾತ್ರಿ 11.30 ಗಂಟೆಯವರೆಗೆ ಸುದೀರ್ಘವಾಗಿ ಸದನದ ಎಲ್ಲಾ ಹಿರಿಯ ಅನುಭವ ಇರತಕ್ಕಂತಹ ಸದಸ್ಯರುಗಳು, ಕಾನೂನಿನಲ್ಲೆ ಪಾಂಡಿತ್ಯವನ್ನು ಹೊಂದಿರತಕ್ಕಂತಹ ಸದಸ್ಯರುಗಳು ಅವರ ವಾಗ್ಝರಿಯಲ್ಲಿ ಪಾಂಡಿತ್ಯವನ್ನು ಹೊಂದಿರತಕ್ಕಂತಹ ಸದಸ್ಯರುಗಳು ಈ ಒಂದು ಸಮ್ಮಿಶ್ರ ಸರ್ಕಾರದ ರಚನೆಯ ಹಿನ್ನೆಲೆಯಲ್ಲಿ ಮಾತನಾಡಿದ್ದಾರೆ. ಇದು ಒಂದು ಐತಿಹಾಸಿಕ ಚರ್ಚೆ ಎಂದಾದರೂ ಹೇಳಬಹುದು, ರಾಜ್ಯದ ಜನತೆ ಬೆಳಿಗ್ಗೆಯಿಂದಲೂ ದೂರದರ್ಶನದಲ್ಲಿ ಈ ಒಂದು ಕಾರ್ಯಕ್ರಮವನ್ನು ವೀಕ್ಷಣೆ ಮಾಡುತ್ತಿದ್ದಾರೆ. ಇವತ್ತಿನ ಈ ಚರ್ಚೆಯ ಆಗುಹೋಗುಗಳ ವಿಷಯದಲ್ಲಿ ಈ ರಾಜ್ಯದ ಜನತೆಗೆ ಈ ಸಂದರ್ಭದಲ್ಲಿ ತೀರ್ಮಾನವನ್ನು ಮಾಡುವುದಕ್ಕೆ ಬಿಡುವುದರ ಜೊತೆಗೆ, ನಾನು ಮೊದಲನೆಯದಾಗಿ ವಿರೋಧ ಪಕ್ಷದ ನಾಯಕರಾಗಿ ಸನ್ಮಾನ್ಯ ಧರ್ಮಸಿಂಗ್‌ರವರು ಏನು ನೇಮಕಗೊಂಡಿದ್ದಾರೆ ಅವರಿಗೆ ನಾನು ವೈಯಕ್ತಿಕವಾಗಿ ಹಾಗೂ ಸದನದ ಪರವಾಗಿ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಕಳೆದ 19 ತಿಂಗಳ ಕಾಂಗ್ರೆಸ್ ಮತ್ತು ನಮ್ಮ ಜೆಡಿಎಸ್ ಪಕ್ಷದ ಆಡಳಿತದ ಬಗ್ಗೆ ಹಲವಾರು ಸದಸ್ಯರುಗಳು ಅವರ ಭಾವನೆಗಳನ್ನು ವ್ಯಕ್ತಪಡಿಸಬೇಕಾದರೆ ಒಳ್ಳೆಯ ಕೆಲಸಗಳು ಏನು ಅತ್ಯುತ್ತಮ ಕೆಲಸಗಳನ್ನು ಮಾಡಿರತಕ್ಕಂಥದ್ದು, ಆಡಳಿತವನ್ನು ಅತ್ಯುತ್ತಮವಾಗಿ ನಡೆಸಿರತಕ್ಕಂಥದ್ದರ ಬಗ್ಗೆ ಏನು ಗಮನ ಚೆಲ್ಲಿದ್ದೀರಿ, ಈ ಸಂದರ್ಭದಲ್ಲಿ ನಾನು ಸದಸ್ಯರ ಭಾವನೆಗಳಿಗೆ ಧ್ವನಿಮಾಡಿಸುವುದಕ್ಕೆ ಸಿದ್ಧನಿದ್ದೇನೆ. ನಮ್ಮ ಹಿರಿಯರಾದ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಮತ್ತು ಎಂ.ಪಿ. ಪ್ರಕಾಶ್‌ರವರು, ಧರ್ಮಸಿಂಗ್‌ರವರ ಹೃದಯವಂತಿಕೆ ಬಗ್ಗೆ, ಧರ್ಮಸಿಂಗ್‌ರವರ ತಾಳ್ಮೆ ಬಗ್ಗೆ, ಧರ್ಮ್‌ಸಿಂಗ್‌ರವರ ಅನುಭವದ ಬಗ್ಗೆ ನಾವು ಈ ಭಾಗದಿಂದ ಏನು ಅವರಿಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದೆವು, ಅವರ ಜೊತೆಯಲ್ಲಿರತಕ್ಕಂತಹ ಸದಸ್ಯರುಗಳು ಈ ಒಂದು ವಿಶ್ವಾಸ ಮತದ ಬಗ್ಗೆ ಅವರ ಭಾವನೆಗಳನ್ನು ವ್ಯಕ್ತಪಡಿಸಬೇಕಾದರೆ, ಧರಮ್‌ಸಿಂಗ್‌ರವರ ಆಡಳಿತದ ಬಗ್ಗೆ ಅವರು ಹೆಚ್ಚಿನ ಒತ್ತನ್ನು ಕೊಡುವುದಕ್ಕಿಂತ ಹೆಚ್ಚಾಗಿ ಈ ಸಮ್ಮಿಶ್ರ ಸರ್ಕಾರ ರಚನೆಯಾಗಿತಕ್ಕಂತಹ ವಿಷಯದಲ್ಲಿ ಏನು ತತ್ವ ಸಿದ್ಧಾಂತಗಳು, ನಂಬಿಕೆ ಅಪನಂಬಿಕೆಗಳು, ನೈತಿಕತೆ ಮತ್ತು ಅನೈತಿಕತೆ ಬಗ್ಗೆ, ಹಾಗೂ ಹಾಸ್ಯದ ರೀತಿಯಲ್ಲಿ ಮೊನಚು ಮಾತುಗಳಲ್ಲಿ ಇವತ್ತು ಅವರ ಪ್ರೌಢಿಮೆಯನ್ನು ಪ್ರದರ್ಶನ ಮಾಡಿದ್ದಾರೆ, ನಾನು ಬೇರೆ ವಿಷಯಗಳ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಿಂದಿನ 19 ತಿಂಗಳುಗಳ ಆಡಳಿತದಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರು ನಮ್ಮ ಶಾಸಕಾಂಗ ಪಕ್ಷದ ನಾಯಕರಾಗಿ, ಎಂ.ಪಿ. ಪ್ರಕಾಶ್‌ರವರು ನಮ್ಮ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಏನು ಒಂದು ಬಜೆಟನ್ನು ಮಂಡನೆ ಮಾಡತಕ್ಕಂತಹ ಸಂದರ್ಭದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿರತಕ್ಕಂಥದ್ದು, ಇವತ್ತು ವಿರೋಧ ಪಕ್ಷದ ನಾಯಕರು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಒಎನ್‌ಜಿಸಿ ಯೋಜನೆ ಬಗ್ಗೆ, ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ, ಹಾಗೂ ಹಲವಾರು ಜನಪರವಾದ ಕಾರ್ಯಕ್ರಮಗಳನ್ನು ಕೊಡತಕ್ಕಂಥದ್ದಕ್ಕೆ ಏನು ಚಾಲನೆ ಕೊಟ್ಟೆವು ಎನ್ನುವ ಮಾತನ್ನು ಹೇಳಿದರು, ಆ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗತಕ್ಕಂತಹ ಜವಾಬ್ದಾರಿಯನ್ನು ಈ ಸರ್ಕಾರ ಹೊತ್ತಿಕೊಳ್ಳುತ್ತದೆ ಎಂದು

ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನನಗೆ ಹಿರಿಯರಾಗಿರತಕ್ಕಂತಹ ಧರ್ಮಸಿಂಗ್‌ರವರು ಸರ್ಕಾರ ರಚನೆ ಮಾಡಿರತಕ್ಕಂತಹ ಹಿನ್ನೆಲೆಯೊಳಗೆ ನಮ್ಮ ತಂದೆಯವರಿಗೆ ಆಗಿರತಕ್ಕಂತಹ ನೋವಿನ ಬಗ್ಗೆ ಅವರು ಭಾವನೆಗಳನ್ನು ವ್ಯಕ್ತಪಡಿಸಿದರು ಹೌದು, ನಮ್ಮ ತಂದೆಯವರಿಗೆ ನಾನು ನೋವು ಕೊಟ್ಟಿದ್ದೇನೆ. ಕೊಟ್ಟಂತಹ ಆ ಒಂದು ಘಟನೆಗೆ ಕಾರಣ ನಾನು ಇವತ್ತು ಕೆಲವು ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ 2004ರ ಚುನಾವಣೆಯ ಫಲಿತಾಂಶದ ಹಿನ್ನೆಲೆ ಒಳಗೆ ಸರ್ಕಾರವನ್ನು ರಚನೆ ಮಾಡಲಿಕ್ಕೆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದೆವು, ಆ ಸಂದರ್ಭದಲ್ಲಿ ಸನ್ಮಾನ್ಯ ಸಿಂಧ್ಯರವರು, ಸನ್ಮಾನ್ಯ ಸಿದ್ದರಾಮಣ್ಣನವರು, ಹಾಗೂ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ನಮ್ಮ ತಂದೆಯವರಾದ ದೇವೇಗೌಡರು ಕಾಂಗ್ರೆಸ್ ಪಕ್ಷದ ಹೈ ಕಮಾಂಡ್‌ನ ಹಾಗೂ ಅವರ ರಾಷ್ಟ್ರೀಯ ಅಧ್ಯಕ್ಷರೂ ಆದ ನನಗೆ ಹಿರಿಯರಾದ ಶ್ರೀಮತಿ ಸೋನಿಯಾ ಗಾಂಧೀಜಿಯವರ ಸಮ್ಮುಖದಲ್ಲಿ ಏನು ಐದು ದಿವಸಗಳ ಕಾಲ ಐದು ಬಾರಿ ಏನು ಚರ್ಚೆ ಮಾಡಿದರು, ಆ ಸಂದರ್ಭದಲ್ಲಿ ನಾನೇನೂ ಇರಲಿಲ್ಲ. ಆದರೆ ನನಗೆ ತಿಳಿದಂತಹ ವಿಷಯ, ಇವತ್ತು ನನಗೆ ಹಿರಿಯರಾದ ಖರ್ಗೆಜಿಯವರು ಮಹಾರಾಷ್ಟ್ರ ಪ್ಯಾಟ್ರನ್ ಬಗ್ಗೆ ಅವರು ಏನು ಅವರ ಭಾಷಣದಲ್ಲಿ ಹೇಳಿದರು, ಯಾರು ಹೆಚ್ಚಿಗೆ ಸಂಖ್ಯೆಯ ಸ್ಥಾನವನ್ನು ಗಳಿಸಿದ್ದೆವು ಅವರು ಮುಖ್ಯಮಂತ್ರಿಗಳಾಗತಕ್ಕಂಥದ್ದು ಎಂದು ಹೇಳಿ ಆ ಸಂದರ್ಭದಲ್ಲಿ ತೀರ್ಮಾನ ಮಾಡಿದೆವು ಎನ್ನತಕ್ಕಂತಹ ಮಾತನ್ನು ಹೇಳಿದರು, ಆದಾದ ನಂತರ ನಮ್ಮ ಈ ಭಾಗದಲ್ಲಿ ಇರತಕ್ಕಂತಹ ಸದಸ್ಯರುಗಳು ಆಗತಾನೆ ಚುನಾವಣೆಯಲ್ಲಿ ಹೋರಾಟ ಮಾಡಿ ಏನು ಗೆದ್ದು ಬಂದಿದ್ದರು, ಮತ್ತೊಮ್ಮೆ ಚುನಾವಣೆಗೆ ಹೋಗತಕ್ಕಂಥದ್ದಕ್ಕೆ ಮಾನಸಿಕವಾಗಿ ಅವರುಗಳೇನೂ ಸಿದ್ಧರಿರಲಿಲ್ಲ. ಆ ಸನ್ನಿವೇಶದಲ್ಲಿ ಅನಿವಾರ್ಯ ಪರಿಸ್ಥಿತಿಯೊಳಗೆ ನಾವೇನು ಸರ್ಕಾರವನ್ನು ರಚನೆ ಮಾಡಬೇಕಾಗಿ ಬಂದಿತು, ಆ ಸಂದರ್ಭದಲ್ಲಿ ಎಲ್ಲಾ ನಮ್ಮ ಸದಸ್ಯರುಗಳ ಭಾವನೆ, ಬಿಜೆಪಿ ಜೊತೆಯಲ್ಲಿ ಸರ್ಕಾರ ರಚನೆ ಮಾಡಬೇಕೆಂದು ಅವರೆಲ್ಲರ ವೈಯಕ್ತಿಕ ಅಭಿಪ್ರಾಯಗಳು ಇತ್ತು. ಆದರೆ ಅವತ್ತು ನಮ್ಮ ಪಕ್ಷದ ರಾಷ್ಟ್ರೀಯ ಘಟಕದ ಅಧ್ಯಕ್ಷರಾದ ಮಾನ್ಯ ದೇವೇಗೌಡರ ಹಾಗೂ ಎಂ.ಪಿ. ಪ್ರಕಾಶ್‌ರವರು, ಸಿಂಧ್ಯರವರು ಮತ್ತು ಸಿದ್ದರಾಮಯ್ಯನವರ ತೀರ್ಮಾನದ ಪ್ರಕಾರ ಬಿಜೆಪಿ ಜೊತೆ ಹೋಗತಕ್ಕಂಥದ್ದಕ್ಕೆ ಈಗೇನು ಇಲ್ಲಿ ಸಿದ್ಧಾಂತ, ತತ್ವ ಮತ್ತು ಸೆಕ್ಯುಲರ್ ಮತ್ತು ಕಮ್ಯುನಲ್ ಸಿದ್ಧಾಂತಗಳ ಬಗ್ಗೆ ನಾವು ಏನು ಚರ್ಚೆಗಳನ್ನು ಮಾಡುತ್ತಿದ್ದೇವೆ, ಆ ಸಂದರ್ಭದಲ್ಲಿ ನಮ್ಮ ನಾಯಕರುಗಳ ಒಂದು ಮನವಿಗೆ ಎಲ್ಲರೂ ಓಗೊಟ್ಟು ಮನಸ್ಸಿನಲ್ಲದಿದ್ದರೂ ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜೊತೆಯಲ್ಲಿ ತೆಗೆದುಕೊಂಡು ಕೆಲಸ ಮಾಡುವ ಬಗ್ಗೆ ತೀರ್ಮಾನ ಮಾಡಿದೆವು. ನಾವು ಯಾವ ಸೂತ್ರಗಳನ್ನೂ ಕೊಟ್ಟಿರಲಿಲ್ಲ. ಕಾಂಗ್ರೆಸ್ ಪಕ್ಷದ ನಾಯಕರುಗಳೇ ಕೆಲವು ಸೂತ್ರವನ್ನು ಏನು ಇಟ್ಟರು ಆ ಸೂತ್ರದ ಪ್ರಕಾರ ಅವರ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನ ಮತ್ತು ನಮ್ಮ ಪಕ್ಷಕ್ಕೆ ಉಪ ಮುಖ್ಯಮಂತ್ರಿ ಸ್ಥಾನದ ಬಗ್ಗೆ ತೀರ್ಮಾನಗಳಾದವು, ಆ ಸಂದರ್ಭದಲ್ಲಿ ಸಿದ್ದರಾಮಣ್ಣನವರು ಹೇಳಿದ್ದು ಸತ್ಯ. ಅವರು ಆ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳಾಗುವುದಕ್ಕೂ ಸಿದ್ಧರಿರಲಿಲ್ಲ. ಆದರೆ ಎಲ್ಲಾ ನಮ್ಮ ಸ್ನೇಹಿತರುಗಳ ಒತ್ತಡದಲ್ಲಿ ಅವರನ್ನು ಒಪ್ಪಿಸತಕ್ಕಂಥದ್ದಕ್ಕೆ ನಾವು ಅಂತಿಮವಾಗಿ ಯಶಸ್ಸನ್ನು ಕಂಡೆವು, ರಾಜಭವನದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಮಾಡುವುದಕ್ಕೆ ಏನು ಕಾರ್ಯಕ್ರಮ ನಿಗದಿಯಾಯಿತು, ಅವತ್ತಿನ ದಿವಸದಿಂದಲೇ ಪ್ರಾರಂಭವಾಯಿತು. ಸಿದ್ದರಾಮಣ್ಣನವರನ್ನು ಮುಖ್ಯಮಂತ್ರಿ ಮಾಡಲು

ದೇವೇಗೌಡರೇ ಒಪ್ಪಲಿಲ್ಲ, ದೇವೇಗೌಡರು ಬಲವಂತ ಮಾಡಿದ್ದರೆ ನಾವು ಬಿಟ್ಟು ಕೊಡಲಿಕ್ಕೆ ಸಿದ್ಧರಿದ್ದೆವು ಎಂದು ಹೇಳಿ. ಸಿದ್ದರಾಮಣ್ಣನವರ ಮನಸ್ಸಿನಲ್ಲಿಯೂ ತಪ್ಪು ಅಭಿಪ್ರಾಯ ಮೂಡಿಸುವುದಕ್ಕೆ ಏನು ಕೆಲವು ಸನ್ನಿವೇಶಗಳು ಉದ್ಭವವಾದವು ಅದರ ಬಗ್ಗೆ ನಾನು ಈಗ ಇಲ್ಲಿ ವಿಸ್ತಾರವಾಗಿ ಚರ್ಚೆ ಮಾಡುವುದು ಅನಾವಶ್ಯಕ. ಈಗಾಗಲೇ ಇಷ್ಟೊಂದು ಸಮಯ ಆಗಿದೆ, ಅದಕ್ಕೆ ನಾನು ಹೆಚ್ಚಿಗೆ ಈ ವಿಷಯವನ್ನು ಚರ್ಚೆ ಮಾಡದೆ, ಖಾತೆಗಳ ಹಂಚಿಕೆ ಮಾಡತಕ್ಕಂತಹ ವಿಷಯದಲ್ಲಿ ಮಹಾರಾಷ್ಟ್ರದ ಸೂತ್ರವನ್ನು ಏನು ಸೂತ್ರ ಏರ್ಪಾಡು ಮಾಡಿದರು ಆಗ ಪ್ರಾರಂಭವಾಯಿತು. ಇವತ್ತು ಸನ್ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುತ್ತಾ ನಾವು 27ನೇ ತಾರೀಖು ಸಾಯಂಕಾಲ ಐದು ಗಂಟೆಯವರೆಗೆ ಅವರ ಬಗ್ಗೆ ವಿಶ್ವಾಸ ಇತ್ತು ಕಾಯುತ್ತಾ ಇದ್ದೆವು ಎಂದು ಒಂದು ಮಾತನ್ನು ಹೇಳಿದರು. ನಾನು ತಮಗೆ ಇವತ್ತು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ, ಈ ಸರ್ಕಾರ ರಚನೆ ಆದ ದಿವಸದಿಂದಲೂ ನಮ್ಮಲ್ಲಿ ಏನಾದರೂ ವಿಶ್ವಾಸ ಮೂಡಿತ್ತಾ ಎನ್ನುವುದನ್ನು ಕೇಳುವುದಕ್ಕೆ ಬಯಸುತ್ತೇನೆ. ಏನು ಖಾತೆಗಳ ಹಂಚಿಕೆ ಮಾಡುವುದರಲ್ಲಿ ಮಹಾರಾಷ್ಟ್ರದಲ್ಲಿ ಏನು ನಿಮ್ಮ ಸೂತ್ರ ಇದೆ ಆ ಸೂತ್ರವನ್ನು ಅಳವಡಿಸೋಣ ಎಂದು ಹೇಳಿದ್ದಿರಿ, ಖಾತೆ ಹಂಚಿಕೆಯಲ್ಲಿಯೇ ಮತ್ತೆ ನೀವು ಎಡವಿದಿರಿ. ಅಲ್ಲಿ ಪ್ರಾರಂಭ ಆಗಿದ್ದು, ಸಚಿವ ಸಂಪುಟದ ವಿಸ್ತರಣೆಯನ್ನು ಮಾಡತಕ್ಕದ್ದಕ್ಕೆ ಸುಮಾರು 8 ತಿಂಗಳುಗಳ ಕಾಲ ವಿಳಂಬ ಆಯಿತು. ಆ ಸಂದರ್ಭದಲ್ಲಿ ರೆಸಾರ್ಟ್ ರಾಜಕೀಯದ ಬಗ್ಗೆ ಏನು ಈ ಸಭೆಯಲ್ಲಿ ಚರ್ಚೆ ನಡೆಯುತ್ತಿತ್ತು ಹೌದು, ಇತ್ತೀಚಿನ ದಿನಗಳಲ್ಲಿ ರೆಸಾರ್ಟ್ ರಾಜಕಾರಣವನ್ನೇ ಮಾಡಬೇಕಾಗುತ್ತದೆ. ನಾನು ಅದಕ್ಕೆ ಭಯಬೀಳತಕ್ಕ ಪ್ರಶ್ನೆ ಇಲ್ಲ. ಎಲ್ಲಾದರೂ ಒಂದು ಕಡೆ ನಾವು ಸೇರಬೇಕು. ನಾವು ಸೇರಬೇಕಾದರೆ ಒಂದು ಜಾಗ ಬೇಕಾಗುತ್ತದೆ. ನಾವು ಕುಳಿತು ಏನು ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಏನು ಘಟನೆಗಳು ನಡೆಯಿತು ಎಂಬ ಬಗ್ಗೆ ನಾನು ಆ ಘಟನಾವಳಿಗಳನ್ನು ಪುನರಾವರ್ತನೆ ಮಾಡಲು ಹೋಗುವುದಿಲ್ಲ. ಇವತ್ತು ನಮ್ಮ ನಂಬಿಕೆಯ ಬಗ್ಗೆ, ಇವತ್ತೇನು ಪ್ರಶ್ನೆ ಇಟ್ಟಿದ್ದೀರಿ, ನಾನು ನಿಮಗೆ ಕೇಳುತ್ತೇನೆ, ಈ ಸಮ್ಮಿಶ್ರ ಸರ್ಕಾರ ರಚನೆ ಆದ ದಿವಸದಿಂದ ಯಾವತ್ತಾದರೂ ಒಂದು ದಿವಸ ಈ ಎರಡೂ ಪಕ್ಷಗಳ ಶಾಸಕರನ್ನು ಒಟ್ಟಿಗೇ ಸೇರಿಸಿ ಒಂದು ಸಭೆಯನ್ನು ಕರೆಯಿರಿ ಎಂದು ಆಗ ಮುಖ್ಯಮಂತ್ರಿಗಳಾಗಿದ್ದ, ಹಿರಿಯರಾಗಿದ್ದಂತಹ ಶ್ರೀ ಧರ್ಮಸಿಂಗ್ ಅವರನ್ನು ನಾನು ಎರಡು ಮೂರು ಬಾರಿ ಮನವಿ ಮಾಡಿದ್ದೆ. ಆ ಒಂದು ಎರಡೂ ಪಕ್ಷಗಳಲ್ಲಿರತಕ್ಕಂಥ ಒಂದು ಸುದೀರ್ಘ ರಾಜಕಾರಣದ ಒಂದು ಪರಸ್ಪರ ಹೋರಾಟದ ಮನೋಭಾವ ಏನು ಇತ್ತು ಅಂತಹ ಒಂದು ಸನ್ನಿವೇಶದಲ್ಲೂ ನಾವು ನಿಮಗೆ ಇಲ್ಲಿ ಸಹಕಾರ ಕೊಟ್ಟಿದ್ದೆವು. ಈ ಎರಡೂ ಪಕ್ಷಗಳ ಸದಸ್ಯರಲ್ಲಿ ಮತ್ತು ಎರಡೂ ಪಕ್ಷದ ಕಾರ್ಯಕರ್ತರುಗಳಲ್ಲಿ ಹೊಂದಾಣಿಕೆ ಮಾಡತಕ್ಕಂಥ ಒಂದು ಸನ್ನಿವೇಶ ನಿರ್ಮಾಣ ಮಾಡಲಿಕ್ಕೆ ಆಗಲೇ ಇಲ್ಲ. ದಿನನಿತ್ಯದ ಪತ್ರಿಕಾ ಹೇಳಿಕೆಗಳು. ನಮ್ಮಿಂದ ಏನು ತಪ್ಪಾಗಿದೆ ? ನಿಮ್ಮಿಂದ ಏನು ತಪ್ಪಾಗಿದೆ ಎನ್ನುವುದರ ಬಗ್ಗೆ ನಾನು ಈ ಸಂದರ್ಭದಲ್ಲಿ ಹೆಚ್ಚಿನ ಸಮಯ ತೆಗೆದುಕೊಳ್ಳಲು ಹೋಗುವುದಿಲ್ಲ. ಚುನಾವಣೆ ನಂತರ ಅದರಲ್ಲೂ ಏನು ಒಂದು ವಿಚಾರ ಇದೆ ಅಹಿಂದಾ ವಿಷಯಕ್ಕೆ ನಾನು ಬರಲಿಕ್ಕೆ ಬಯಸುತ್ತೇನೆ. ಎರಡು ಮಾತುಗಳಲ್ಲಿ ಮುಗಿಸುತ್ತೇನೆ. ಸನ್ಮಾನ್ಯ ಸಿದ್ದರಾಮಣ್ಣನವರನ್ನು ಅಹಿಂದಾ ಕಾರ್ಯಕ್ರಮವನ್ನು ಮಾಡತಕ್ಕದ್ದಕ್ಕೆ ಅವರು ಚಾಲನೆ ಕೊಟ್ಟಿದ್ದರಿಂದ ಅವರನ್ನು ಪಕ್ಷದಿಂದ ಹೊರಗೆ ಹಾಕತಕ್ಕ ಕೆಲಸ ಆಯಿತು, ನನಗೆ ನೋಟೀಸೂ ಕೊಡದೇ ಶಿಸ್ತಿನ ಕ್ರಮ ತೆಗೆದುಕೊಂಡರು ಎಂದು ಏನು ಅವರು ಹೇಳಿದರು, ನಾನು ಈ ಸಂದರ್ಭದಲ್ಲಿ

ಸದನದಲ್ಲೇ ಅದರ ಬಗ್ಗೆ ಹೆಚ್ಚಿನ ಚರ್ಚೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಮಹದೇವಪ್ಪನವರು ಏನು ದೆಹಲಿಯಿಂದ ಬಂದು ಚರ್ಚೆಯನ್ನು ಮಾಡಲು ಬಂದರು. ಮಾನ್ಯ ಸಿದ್ಧರಾಮಣ್ಣನವರು ಅಲ್ಲಿ ದೆಹಲಿಯಲ್ಲಿಯೇ ಉಳಿದುಕೊಂಡರು. ಅವತ್ತೇನು ಚರ್ಚೆಗಳಾಯಿತು ಎಂಬ ಬಗ್ಗೆ ಈ ಸದನದಲ್ಲಿ ನಾನು ಹೇಳಬೇಕಾದ ಅವಶ್ಯಕತೆ ಏನೂ ಇಲ್ಲ. ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇವತ್ತು ಶಿಸ್ತು ಮತ್ತು ಈ ಪಕ್ಷವನ್ನು ಒಡೆಯತಕ್ಕ ಕೆಲಸವನ್ನು ನಾವು ಮಾಡಿದ್ದೇವೆಂದು ಏನು ಹೇಳುತ್ತಾರೆ ನಾವು ಪಕ್ಷವನ್ನು ಒಡೆಯತಕ್ಕಂಥ ಕೆಲಸವನ್ನು ಮಾಡಿಲ್ಲ. ನಾವು ಪಕ್ಷವನ್ನು ಉಳಿಸತಕ್ಕಂಥ ಕೆಲಸವನ್ನು ಇವತ್ತು ಮಾಡಿದ್ದೇವೆ, ಈ ಒಂದು ತೀರ್ಮಾನದಿಂದ ಎಂದು ಹೇಳಬಯಸುತ್ತೇನೆ. ಇವತ್ತು ಮಾನ್ಯ ಶ್ರೀರಾಮರೆಡ್ಡಿಯವರು ಸದನದಲ್ಲಿ ಅವರು ಅವರ ಪಾತ್ರವನ್ನು ನಿರ್ವಹಿಸತಕ್ಕದ್ದರಲ್ಲಿ ಯಾವುದೇ ರೀತಿಯ ಸಂದರ್ಭದಲ್ಲೂ ಅವರು ನಿರ್ಲಿಪ್ತರಾಗದೇ ಸದನದ ಚಟುವಟಿಕೆಗಳಲ್ಲಿ ಗಂಭೀರವಾಗಿ ಭಾಗವಹಿಸಿದ್ದಾರೆ. ನಾನು ಹೇಳಿದಂತಹ ಸೆಕ್ಯುಲರ್ ಪದದ ಅರ್ಥವನ್ನು ಇನ್ನೂ ಹುಡುಕುತ್ತಿದ್ದೇನೆಂದು ನಾನು ಹೇಳಿದಂತಹ ವಿಷಯದ ಬಗ್ಗೆ ಬಹಳ ವಿಸ್ತಾರವಾಗಿ ಅವರು ಮಾತನಾಡಿದರು. ನಾನು ಆ ಸೆಕ್ಯುಲರ್ ಪದದ ಬಗ್ಗೆ ಅರ್ಥ ಗೊತ್ತಿಲ್ಲ ಎಂದು ಹೇಳಿದ್ದು ಸಂವಿಧಾನದಲ್ಲಿ ರಚನೆ ಆಗಿರತಕ್ಕ ಸೆಕ್ಯುಲರ್ ಪದದ ಬಗ್ಗೆ ಅಲ್ಲ. 1994ನೇ ಇಸವಿಯ ನಂತರ ಬಾಬರಿ ಮಸೀದಿಯನ್ನು ಏನು ಒಡೆದರು, ಅದನ್ನು ಒಡೆದ ನಂತರ ಈ ದೇಶದಲ್ಲಿ ಕೋಮುವಾದಿ ಮತ್ತು ಜಾತ್ಯಾತೀತ ಸಿದ್ಧಾಂತಗಳ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ಪ್ರಾರಂಭ ಆಯಿತು. ಈ ಸಿದ್ಧಾಂತಗಳ ಬಗ್ಗೆ ನಾನು ಆ ಸಂದರ್ಭದಲ್ಲಿ ನಾನು ಅರ್ಥವನ್ನು ಹುಡುಕುತ್ತಿದ್ದೇನೆಂದು ಹೇಳಿದನೇ ಹೊರತು, ಸಂವಿಧಾನದಲ್ಲಿರತಕ್ಕಂಥ ಸೆಕ್ಯುಲರ್ ಅರ್ಥವನ್ನು ನಾನು ಪ್ರಶ್ನೆ ಮಾಡಲಿಲ್ಲ ಎಂದು ತಮಗೆ ಸ್ಪಷ್ಟೀಕರಣವನ್ನು ಕೊಡಲು ಬಯಸುತ್ತೇನೆ. ಇವತ್ತು ಮಾನ್ಯ ದೇವೇಗೌಡರ ವಿಷಯದಲ್ಲಿ, ನಮ್ಮ ಕುಟುಂಬದ ವಿಷಯದಲ್ಲಿ, ನನ್ನ ವಿಷಯದಲ್ಲೂ ಇವತ್ತು ಸನ್ಮಾನ್ಯ ಶಿವಕುಮಾರ್ ಅವರು ಡಾಕ್ಟರೇಟ್ ಕೊಡಬಹುದು ಎಂದು ಹೇಳಿದರು. ದಯವಿಟ್ಟು ನನಗೆ ಡಾಕ್ಟರೇಟ್ ಬೇಕಿಲ್ಲ. ನಮ್ಮ ತಂದೆಯವರಿಗೂ ಡಾಕ್ಟರೇಟ್ ಪದವಿಯನ್ನು ಕೃಷಿ ವಿಶ್ವವಿದ್ಯಾಲಯದವರು ಕೊಟ್ಟಿದ್ದರು. ಅದನ್ನು ಅವರು ಇವತ್ತಿನವರೆಗೂ ಸ್ವೀಕಾರ ಮಾಡಲಿಲ್ಲ. ನಾನು ಇವತ್ತು ಈ ಸದನದಲ್ಲಿ ಮಾತನಾಡಬೇಕಾದರೆ ಇಂತಹ ಒಂದು ದಿನ ಬರುತ್ತದೆ ಎಂದು ನನ್ನ ಕನಸು ಮನಸ್ಸಿನಲ್ಲೂ ನೆನಪಿರಲಿಲ್ಲ. ನಿಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನು ಇಲ್ಲಿಗೆ ಪ್ರಥಮ ಬಾರಿಗೆ ಶಾಸಕನಾಗಿ ಬಂದ ನಂತರ, ಸದನದ ಕಾರ್ಯಕಲಾಪಗಳಲ್ಲಿ ಗಮನವನ್ನೂ ಹರಿಸಲಿಕ್ಕೆ ನನಗೆ ಅವಕಾಶ ಇರಲಿಲ್ಲ. ಕೊನೆಯ ಸಾಲಿನಲ್ಲಿಯೇ ನಾನು ಕೊಡುತ್ತಿದ್ದೆ. ಸದನದಲ್ಲಿ ನಾನು ಸಮಯ ಕಳೆದಿರತಕ್ಕದ್ದು ಬಹಳ ಕಡಿಮೆ. ಇವತ್ತು ನನಗೆ ಅನುಭವದಲ್ಲೂ ಕೊರತೆ ಇದೆ. ವಯಸ್ಸಿನಲ್ಲೂ ಕಿರಿಯನಾಗಿದ್ದೇನೆ. ಇವತ್ತೇನು ತಾವೆಲ್ಲಾ ಉತ್ತಮ ರೀತಿಯಲ್ಲಿ ಹಲವಾರು ಸಲಹೆಗಳನ್ನು ಇಲ್ಲಿ ಇಟ್ಟಿದ್ದೀರಿ. ಈ ಸಮ್ಮಿಶ್ರ ಸರ್ಕಾರವನ್ನು ನಾನು ನಡೆಸತಕ್ಕ ಸಂದರ್ಭದಲ್ಲಿ ನೀವು ಕೊಟ್ಟಿರತಕ್ಕಂಥ ಎಲ್ಲಾ ರೀತಿಯ ಸಲಹೆಗಳನ್ನು ನಾನು ಈ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ನೀವು ಮಾಡಿರತಕ್ಕ ಟೀಕೆಗಳು ಇರಬಹುದು, ಹಾಸ್ಯದ ರೀತಿಯಲ್ಲಿ ನಿಮ್ಮ ಮಾತುಗಳನ್ನು ವ್ಯಕ್ತಪಡಿಸಿರತಕ್ಕದ್ದು ಇರಬಹುದು, ಅದನ್ನು ಸಮಾನವಾಗಿ ನಾನು ಸ್ವೀಕಾರ ಮಾಡಲಿಕ್ಕೆ ಸಿದ್ಧನಿದ್ದೇನೆ. ಇವತ್ತು ಮಾನ್ಯ ದೇವೇಗೌಡರ ಸುದೀರ್ಘ ರಾಜಕಾರಣದ ಸಿದ್ಧಾಂತದ ಬಗ್ಗೆ, ಅವರ ಸೆಕ್ಯುಲರ್ ಐಡಿಯಾಲಜಿ ಬಗ್ಗೆ, ಇವತ್ತು ಈ ರಾಜ್ಯದಲ್ಲಿ ಈ ದೇಶದಲ್ಲಿ ಈ ಒಂದು ಹೊಸ ಪರ್ಯಾಯ ವ್ಯವಸ್ಥೆಯನ್ನು

ತರತಕ್ಕ ಹಿನ್ನೆಲೆಯೊಳಗೆ ಅವರ ಸಿದ್ಧಾಂತದ ಬಗ್ಗೆ ಇವತ್ತೇನು ಜನಗಳಲ್ಲಿ ಅಪನಂಬಿಕೆ ಮೂಡತಕ್ಕಂಥ ಒಂದು ವಾತಾವರಣ ಏನು ನಿರ್ಮಾಣ ಆಗಿದೆ. ಅದರ ಬಗ್ಗೆ ಹೇಳುತ್ತೇನೆ. ಇವತ್ತು ಮಾನ್ಯ ರಮೇಶ್ ಕುಮಾರ್ ಅವರು ರಾಮಾಯಣದ, ಮಹಾಭಾರತದ ಘಟನೆಗಳನ್ನಾ ಪಾತ್ರಗಳ ಬಗ್ಗೆ ಹೇಳಿದರು. ಈ ದೇಶದ ಇತಿಹಾಸ ಹಾಗೂ ವಿಶ್ವದ ಇತಿಹಾಸಗಳ ಬಗ್ಗೆ ಇವತ್ತೇನು ಚರ್ಚೆ ಮಾಡಿದ್ದೀರಿ. ನಾನು ಅಷ್ಟೊಂದು ಸುದೀರ್ಘವಾಗಿ ಇತಿಹಾಸವನ್ನು ಅರಿತುಕೊಳ್ಳದಿದ್ದರೂ ಒಂದು ಗ್ರಾಮೀಣ ಪ್ರದೇಶದ ಹಿನ್ನೆಲೆಯೊಳಗೆ ಬಂದಿದ್ದೇನೆ. ನಾನು ಯಾವುದೇ ರೀತಿಯ ವಿದ್ಯೆಯಲ್ಲೂ ಅತಿ ಬುದ್ಧಿವಂತಿಕೆಯ ವಿದ್ಯೆಯನ್ನು ಕಲಿತಿರತಕ್ಕವನಲ್ಲ. ಆದರೆ ಮಾನವ ಜೀವಿಗೆ ಇರಬೇಕಾದಂತಹ ಮಾನವೀಯತೆಯನ್ನು ಅಳವಡಿಸಿಕೊಂಡು ಬಂದಿರತಕ್ಕಂಥ ಒಂದು ವಾತಾವರಣದಲ್ಲಿ ಬಂದಿರತಕ್ಕವನು ಎಂದು ತಮಗೆ ಹೇಳಬಯಸುತ್ತೇನೆ. ಇವತ್ತು ನೀವು ದಶರಥನ ಘಟನೆಯನ್ನು ನಮ್ಮ ಮುಂದೆ ಇಟ್ಟಿರಿ. ಶ್ರೀರಾಮಚಂದ್ರ ಏನು ವನವಾಸಕ್ಕೆ ಹೋಗಬೇಕಾಗಿ ಬಂತು, ತಂದೆಗೆ ಕೊಟ್ಟಂತಹ ವಚನವನ್ನು ಪಾಲಿಸಲಿಕ್ಕೆ ವನವಾಸಕ್ಕೆ ಹೋಗಬೇಕಾಗಿ ಬಂತು. ಆ ವಿಷಯದ ಬಗ್ಗೆ ನಾನು ಈಗ ಹೇಳಬೇಕಾಗುತ್ತದೆ. ಹೌದು, ಇವತ್ತು ನಮ್ಮ ತಂದೆ ದಶರಥನ ಸ್ಥಾನದಲ್ಲಿದ್ದು, ನಾನು ಅಲ್ಲಿಗೆ ಹೋಲಿಕೆ ಮಾಡಲಿಕ್ಕೆ ಹೋಗುವುದಿಲ್ಲ. ಇವತ್ತು ಕಲಿಯುಗದಲ್ಲಿ, ಕಲಿಯುಗದ ರಾಜಕಾರಣದಲ್ಲಿ ಅಂತಹ ಒಂದು ಸನ್ನಿವೇಶ ಏನು ಇವತ್ತು ಈ ರಾಜ್ಯದಲ್ಲಿ ಉದ್ಭವ ಆಗಿದೆ. ನನಗೂ ನಮ್ಮ ತಂದೆಗೂ ಒಂದಿಷ್ಟು ಚರ್ಚೆ ಅಯಿತು. ದಯವಿಟ್ಟು ಈ ಒಂದು ಆಕಸ್ಮಿಕವಾದ ಒಂದು ಸನ್ನಿವೇಶದ ಒತ್ತಡದಲ್ಲಿ ನೀನು ನಿನ್ನ ಸ್ನೇಹಿತರ ಜೊತೆಗೆ ಹೋಗಿದ್ದೀಯ ದಯವಿಟ್ಟು ನನ್ನ ಗೌರವವನ್ನು ಉಳಿಸು ಎಂದು ಕೇಳಿದರು. ಯಾವುದೇ ಕಾರಣಕ್ಕೂ ನೀನು ಈ ವಿಷಯದಲ್ಲಿ ಮುಂದುವರಿಯಬಾರದು ಎಂದು ಹೇಳಿದರು. ನಾನು ಯೋಚನೆ ಮಾಡಿದೆ. ಏಕೆಂದರೆ ನಾನು ಒಂದು ಚಿಕ್ಕ ವಯಸ್ಸಿನಲ್ಲಿ ಬೇರೆ ಇತಿಹಾಸಗಳನ್ನು ಓದದೇ ಇದ್ದರೂ ರಾಮಾಯಣ, ಮಹಾಭಾರತವನ್ನು ಓದಿದ್ದೇನೆ? ಏನು ನಮ್ಮ ತಂದೆಯವರು ಅವರ ಜೀವನದಲ್ಲೇ ಈ ಸೆಕ್ಯುಲರ್ ಐಡಿಯಾಲಜಿಯನ್ನು ಉಳಿಸಿಕೊಳ್ಳಬೇಕು ಎಂದು ಹೇಳಿ, ಅವರ ಸುದೀರ್ಘ ರಾಜಕಾರಣದಲ್ಲಿ ಏನು ಹೋರಾಟವನ್ನು ಮಾಡಿಕೊಂಡು ಬಂದರು. ಆ ಸೆಕ್ಯುಲರ್ ಐಡಿಯಾಲಜಿ ಇವತ್ತು ನಮ್ಮ ತಂದೆಯವರೆಗೆ ಕೈಕೇಯಿ ಆಗಿ ಆ ಸ್ಥಾನದಲ್ಲಿ ಬಂದು ನಿಂತಿದೆ, ಆ ಸೆಕ್ಯುಲರ್ ಐಡಿಯಾಲಜಿಯ ವ್ಯಾಮೋಹದಲ್ಲಿ ನಮ್ಮ ತಂದೆಯವರು ಏನು ಈ ಒಂದು ಬಿಜೆಪಿಯವರ ಜೊತೆ ಸೇರಿ ಸರ್ಕಾರವನ್ನು ಮಾಡಬಾರದು ಎಂದು ಒತ್ತಡವನ್ನು ತಂದರು. ಅನುಮಾನಗಳು ಏನಾಯಿತು? ನನಗೆ ಒಂದು ಕಡೆ ನಮ್ಮ ತಂದೆಯವರ ಸಿದ್ಧಾಂತಗಳನ್ನು ಉಳಿಸಬೇಕಾದಂತಹ ಒಂದು ಜವಾಬ್ದಾರಿ ನನಗೆ ಇತ್ತು. ಇವತ್ತು ತಾವು ಮಹಾಭಾರತದ ಪಾತ್ರಗಳ ಬಗ್ಗೆ ಹೇಳಿದಿರಿ. ಏನು ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಆದ ನಂತರ ಕಾಂಗ್ರೆಸ್ ಪಕ್ಷದ ಕೆಲವು ನಾಯಕರುಗಳು ಚುನಾವಣೆಗೆ ಹೋಗತಕ್ಕ ಬಗ್ಗೆ ಸರ್ಕಾರದಿಂದ ಬೆಂಬಲವನ್ನು ವಾಪಸ್ ಪಡೆಯುವ ಬಗ್ಗೆ ಪ್ರತಿದಿನ ಹೇಳಿಕೆಗಳನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದರು. ಆ ಹಿನ್ನೆಲೆಯೊಳಗೆ ಮಾನ್ಯ ದೇವೇಗೌಡರು ರಾಷ್ಟ್ರಮಟ್ಟದ ಅಧ್ಯಕ್ಷರಾಗಿದ್ದರು; ನಾವು ಈ ಸಂದರ್ಭದಲ್ಲಿ ಚುನಾವಣೆಗೆ ಹೋಗುವುದು ಸೂಕ್ತವೆಂದು ಹೇಳಿ ನಮ್ಮ ಪಕ್ಷದ ಸದಸ್ಯರುಗಳ ಮೇಲೆ ಏನು ಒತ್ತಡವನ್ನು ತರಲು ಪ್ರಾರಂಭ ಮಾಡಿದರು, ಆಗ ನಮ್ಮ ಪಕ್ಷದಲ್ಲಿದ್ದಂತಹ ಶಾಸಕರುಗಳನ್ನು ನೀವು ನಮ್ಮ ಜೊತೆಗೆ ಬರುವುದಾದರೆ ಚುನಾವಣೆಗೆ ಹೋಗತಕ್ಕದ್ದಕ್ಕೆ ಅವಕಾಶ ಕೊಡುವುದಿಲ್ಲ ನೀವು ನಮ್ಮ ಜೊತೆ ಕೈಜೋಡಿಸಿ

ಎಂದು ಇನ್ನೊಂದು ಕಡೆ ಅವರುಗಳ ಮನಸ್ಸನ್ನು ಕೆಡಿಸುವುದಕ್ಕೆ ಹೊರಟರು. ಇಂತಹ ಒಂದು ಸನ್ನಿವೇಶದಲ್ಲೆ ನಮ್ಮ ಪಕ್ಷದ ಎಲ್ಲಾ ಶಾಸಕರುಗಳು ಅವರ ಜೀವನದಲ್ಲೆ ಯಾವುದೇ ರೀತಿಯಲ್ಲಿ ರಾಷ್ಟ್ರೀಯ ಘಟಕದ ಅಧ್ಯಕ್ಷರ ವಿರುದ್ಧ ಯಾವುದೇ ತೀರ್ಮಾನವನ್ನು ಮಾಡದಿರಬಹುದು, ಅವರ ಎದುರಿನಲ್ಲೆ ಒಂದೇ ಒಂದು ಧ್ವನಿಯನ್ನು ಎತ್ತಿ ಮಾತನಾಡದೇ ಇರುವಂತಹ ಭಾವನೆಯನ್ನು ಏನು ಹೊಂದಿದ್ದರು, ಅಂತಹ ಭಾವನೆಯನ್ನು ಇಟ್ಟುಕೊಂಡವರು ಇವತ್ತು ಇಂತಹ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಇವತ್ತು ಬಿಜೆಪಿ ಪಕ್ಷದ ಸದಸ್ಯರು ಕಾರಣರಲ್ಲ, ಅದು ತಮ್ಮಿಂದ ಆದಂತಹ ಕಾರಣ ಎಂದು ಹೇಳಬೇಕಾಗುತ್ತದೆ. ಹಲವಾರು ಸನ್ನಿವೇಶಗಳನ್ನು ತಾವು ಹೇಳಿದಿರಿ. ಇದು ನಿನ್ನೆಮೊನ್ನೆ ಪ್ರಾರಂಭವಾಗಿದ್ದಂಥಾದ್ದು ಅಲ್ಲ. ಇದು ಬಿಜೆಪಿ ಮತ್ತು ನಮ್ಮ ಪಕ್ಷದ ಕೆಲವರು ಪರ್ಯಾಯ ಸರ್ಕಾರವನ್ನು ಮಾಡುವಂತಹ ವಿಚಾರದಲ್ಲಿ ಮೊದಲಿನಿಂದಲೂ ನಡೆಯುತ್ತಿತ್ತು ಎಂದು. ನಾನು ಇವತ್ತು ನೇರವಾಗಿ ಹೇಳುತ್ತೇನೆ, 2004 ರಲ್ಲೆ ಫಲಿತಾಂಶ ಬಂದತಕ್ಷಣ ಬಿಜೆಪಿ ಪಕ್ಷದ ಕೇಂದ್ರದ ನಾಯಕರಾದಂತಹ ಶ್ರೀ ಅರುಣ್ ಜೇಟ್ಲಿಯವರು ಹಾಗೂ ನಾನು ಭೇಟಿ ಮಾಡಿದ್ದೆವು. ಅವರು, ಓರಿಸ್ಸಾದಲ್ಲಿ ಏನು ನವೀನ್ ಪಟ್ನಾಯಕ್ ಮತ್ತು ಬಿಜೆಪಿ ಪಕ್ಷ ಸಮ್ಮಿಶ್ರ ಸರ್ಕಾರವನ್ನು ನಡೆಸುತ್ತಿದೆ, ಆ ಮಾದರಿಯಲ್ಲಿ ನಾವು ನಿಮ್ಮನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಕ್ಕೆ ಸಿದ್ಧರಿದ್ದೇವೆ. ನಿಮ್ಮ ತಂದೆಯವರ ಶಕ್ತಿ ನಮಗೆ ಗೊತ್ತಿದೆ. ನೀವು ನಮ್ಮ ಜೊತೆ ಸರ್ಕಾರವನ್ನು ಮಾಡುವಂತಹ ವಿಚಾರದಲ್ಲಿ ದಯವಿಟ್ಟು ತೀರ್ಮಾನವನ್ನು ಮಾಡಬೇಕೆಂದು ನನಗೆ ಹೇಳಿದರು. ಆಗ ನಾನು ಆ ಸಂದರ್ಭದಲ್ಲಿ ಅವರಿಗೆ ಒಂದು ಮಾತನ್ನು ಹೇಳಿದೆ. ಯಾವುದೇ ಕಾರಣಕ್ಕೂ ನಾನು ನಮ್ಮ ತಂದೆಯವರ ಸಿದ್ಧಾಂತದ ವಿರುದ್ಧವಾಗಿ ತೀರ್ಮಾನವನ್ನು ಮಾಡುವುದಕ್ಕೆ ಸಿದ್ಧನಿಲ್ಲ. ತಕ್ಷಣ ಅಧಿಕಾರಕ್ಕೆ ಹೋಗಿ ಕೂರಬೇಕೆನ್ನುವ ವ್ಯಾಮೋಹ ಕೂಡ ನನಗೆ ಇಲ್ಲ. ನನ್ನ ಪಕ್ಷವನ್ನು ಸಂಘಟನೆ ಮಾಡಬೇಕು, ನಾನು ಸುಮಾರು 10 ವರ್ಷಗಳ ಕಾಲ ಅಧಿಕಾರಕ್ಕೆ ಆಸೆಯನ್ನು ಪಡುವುದಿಲ್ಲವೆಂದು ಅವರಿಗೆ ನೇರವಾಗಿ ಹೇಳಿ ಕಳುಹಿಸಿದೆ. ಈ ಪದಗಳನ್ನು ನಾನು ಹಲವಾರು ವೇದಿಕೆಗಳಲ್ಲೂ ಕೂಡ ಹೇಳಿದ್ದೇನೆ. ಇವತ್ತು ನಾನು ನಿಮಗೆ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಿದ್ಧರಾಮಣ್ಣನವರು ಏನು ಅಹಿಂದ ಹೆಸರಿನಲ್ಲಿ ಮಾಡತಕ್ಕಂಥ ಕಾರ್ಯಕ್ರಮಕ್ಕೆ ನನ್ನ ವಿರೋಧ ಇಲ್ಲ. ಇವತ್ತು ತುಳಿತಕ್ಕೆ ಒಳಗಾಗಿರತಕ್ಕಂಥ ವರ್ಗಗಳಿಗೆ ಧ್ವನಿಯಾಗಿ ನಿಂತು ಕೆಲಸ ಮಾಡುವಂಥಾದ್ದಕ್ಕೆ ಅದರ ಬಗ್ಗೆ ನಾನು ಯಾವುದೇ ರೀತಿಯ ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ಸಿದ್ಧನಿಲ್ಲ. ಅವರು ಕೆಲವೊಂದು ಪದಗಳನ್ನು ಹೇಳಿದರು. ನನ್ನ ಮನಸ್ಸಿನಲ್ಲಿ ಇರುವಂತಹ ತೀರ್ಮಾವನ್ನು ಮಾಡುವುದಕ್ಕೆ ನಾನು ಯಾರಿಗೂ ಗುಲಾಮನಲ್ಲ. ನನ್ನದೇ ಆದಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದರು. ಅವರು ಹೇಳಿರುವಂತಹ ಮಾತನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಅದರಲ್ಲಿ ಎರಡನೇ ಮಾತಿಲ್ಲ. ಆದರೆ ಮಾನ್ಯ ಶಿವಕುಮಾರ್‌ರವರು ಇವತ್ತೇನು ಕೆಲವು ಮಾತುಗಳನ್ನು ಹೇಳಿದರು. ಸನ್ಮಾನ್ಯ ಸಿಂಧ್ಯರವರು, ಎಂ.ಪಿ. ಪ್ರಕಾಶ್ ಹಾಗೂ ಸಿದ್ಧರಾಮಣ್ಣನವರು ಈ ಮೂರು ಜನರನ್ನು ಬಲಿ ತೆಗೆದುಕೊಂಡು, ಎಲ್ಲಾ ಸಿದ್ಧಾಂತಗಳನ್ನು ಗಾಳಿಗೆ ತೂರಿ, ಇವತ್ತು ಅಧಿಕಾರವನ್ನು ಹಿಡಿಯತಕ್ಕಂಥ ಒಂದೇ ಒಂದು ದೃಷ್ಟಿಯಿಂದ ಕಾನ್ಸಿಫರೆನ್ಸಿ ಬಗ್ಗೆ ಇವತ್ತು ಡಾಕ್ಟರೇಟ್ ಪದವಿಯನ್ನು ಕೊಡಿಸಬೇಕೆಂದು ಹೇಳಿದರು, ಆದರೆ ನನಗೆ ಪದವಿಯನ್ನು ಕೊಡಬೇಕಾಗಿರುವವರು ಈ ರಾಜ್ಯದ ಜನತೆ. ಇವತ್ತು ನೀವು ಚುನಾವಣೆಗೆ ಹೋಗಬೇಕೆಂದು ಹೇಳಿದರಿ. ಚುನಾವಣೆಗೆ ಹೋಗೋಣ, ಅದಕ್ಕೆ ಸಮಯ ಬರುತ್ತದೆ. ಅಹಿಂದ ಹೆಸರಿನಲ್ಲೆ

ಕಾರ್ಯಕ್ರಮಗಳನ್ನು ಏನು ಪ್ರಾರಂಭ ಮಾಡಿದರು, ಅದರಲ್ಲಿ ಇದ್ದಂತಹ ಘೋಷಣೆ "ಅಂದು ದೇವರಾಜ್ ಅರಸು, ಇಂದು ಸಿದ್ಧರಾಮಯ್ಯ "ಆ ಘೋಷಣೆಯನ್ನು ಪ್ರಾರಂಭ ಮಾಡಿ, ಸಭೆಗಳನ್ನು ಮಾಡುವಂಥಾದ್ದರಲ್ಲಿ ವೇದಿಕೆ ಮೇಲೆ ಭಾಗವಹಿಸತಕ್ಕಂಥ ಪ್ರಮುಖರು ಯಾರಿದ್ದರು, ಅವತ್ತು ದೇವರಾಜು ಅರಸು ಅವರ ರಾಜಕೀಯುವನ್ನು ಅಂತ್ಯಗೊಳಿಸುವಂಥಾದ್ದಕ್ಕೆ ಮೂಲ ಕಾರಣಕರ್ತರಾಗಿದ್ದರೋ ಅವರೇ ಆ ವೇದಿಕೆ ಮೇಲೆ ಇದ್ದರು. ಮಾನ್ಯ ಸಿದ್ಧರಾಮಣ್ಣನವರನ್ನು ಈವತ್ತು ಅದೇ ರೀತಿ ಬಲಿಪಶು ಆಗಲಿಕ್ಕೆ ಮಾಡಿದರು ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ :- ಕಾಂಗ್ರೆಸ್‌ನವರಾಗಲಿ, ಬೇರೆ ಯಾವುದೇ ಪಾರ್ಟಿಯವರಾಗಲಿ, ನನ್ನನ್ನಾಗಲಿ ಅಥವಾ ಬೇರೆ ಯಾರನ್ನೂ ಕೂಡ ಬಲಿಪಶುವನ್ನಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕುಮಾರಸ್ವಾಮಿಯವರನ್ನೂ ಕೂಡ ಯಾರು ಬಲಿಪಶು ಮಾಡುವುದಕ್ಕಾಗುವುದಿಲ್ಲ. ಅಹಿಂದ ಸಂಘಟನೆನೇ ಬೇರೆ ಇದೆ. ಅದೊಂದು ಸಾಮಾಜಿಕ ಚಳುವಳಿ. It is not a political party. ಅವರು ಹುಬ್ಬಳ್ಳಿಯಲ್ಲಿ ಸಮಾವೇಶ ಮಾಡಿ ನನ್ನನ್ನು ಕರೆದಿದ್ದರು, ಬೇರೆಯವರನ್ನು ಕರೆದಿದ್ದರು. ಅಲ್ಲಿಗೆ ನಾವು ಹೋದೆವು ಹೊರತು ನಾವು ಕಾಂಗ್ರೆಸ್‌ನವರ ಕಿತಾಪತಿ ಮೇಲೆ ಅಥವಾ ಕಾಂಗ್ರೆಸ್‌ನವರ ಹೇಳಿಕೆ ಮೇಲೆ ಅಲ್ಲಿಗೆ ಹೋಗಿದ್ದೆವು ಎನ್ನುವಂತಹ ಭಾವನೆ ಅಥವಾ ಕಲ್ಪನೆ ಇದೆಯಲ್ಲಾ, ಅದು ನಿಜವಾದುದಲ್ಲ. ಮತ್ತು ಅದನ್ನು ಮಾಡಿದ್ದು ಯಾರ ವಿರುದ್ಧವೂ ಅಲ್ಲ. ಪಕ್ಷದ ವಿರುದ್ಧ ಅಲ್ಲ, ಸಮ್ಮಿಶ್ರ ಸರ್ಕಾರದ ವಿರುದ್ಧವಲ್ಲ, ದೇವೇಗೌಡರ ವಿರುದ್ಧ ಅಲ್ಲ. ಅದು ಯಾರ ವಿರುದ್ಧನೂ ಅಲ್ಲ. ಆದುದರಿಂದ ಅದನ್ನು ದೊಡ್ಡದು ಮಾಡಿಕೊಂಡು ಅಹಿಂದ ಸಮಾವೇಶದಲ್ಲಿ ಭಾಗವಹಿಸಿದ್ದೇ ಒಂದು ಮಹಾಪರಾಧ, ಹಿಂದುಳಿದವರ ಪರವಾಗಿ ಮಾತನಾಡಿದ್ದೇ ದೊಡ್ಡ ಅಪರಾಧ ಎಂದು ತೀರ್ಮಾನ ಮಾಡಿ ನನಗೆ ಶಿಸ್ತಿನ ಕ್ರಮ ತೆಗೆದುಕೊಂಡರಲ್ಲಾ ಅದು ನ್ಯಾಯಯುತವಾದುದ್ದಲ್ಲ, ಕಾನೂನುಬಾಹಿರವಾದುದು, ಅದನ್ನು ಮಾಡಬಾರಬಾರದಾಗಿತ್ತು, ಅದನ್ನು ಮಾಡಿದ್ದು ನನ್ನನ್ನು ರಾಜಕೀಯವಾಗಿ ಮುಗಿಸುವುದಕ್ಕೋಸ್ಕರ ತೆಗೆದುಕೊಂಡ ನಿರ್ಣಯವೇ ಹೊರತು ಬೇರೆ ಯಾವುದೇ ಉದ್ದೇಶದಿಂದ ಅಲ್ಲ. ನಾನು ಯಾರಿಗೋ ಬಲಿಪಶುವಾಗುವುದಕ್ಕೆ ನಾನು ಸಣ್ಣಮಗುವಲ್ಲ. ನಾನು 25 ವರ್ಷಗಳಿಂದ ಕರ್ನಾಟಕದ ರಾಜಕಾರಣವನ್ನು ನೋಡುತ್ತಿದ್ದೇನೆ. ಎಲ್ಲಾ ಲೀಡರುಗಳು. ಎಲ್ಲಾ ಪಕ್ಷದ ಲೀಡರುಗಳನ್ನು ನೋಡಿದ್ದೇನೆ. ಅನೇಕ ಮುಖಂಡರುಗಳ ಜೊತೆ ಕೆಲಸ ಮಾಡಿದ್ದೇನೆ. I know who is who; what is what ಎಂದು. ನನ್ನನ್ನು ಬಲಿಪಶುವನ್ನಾಗಿ ಅವರು ಮಾಡುವುದಕ್ಕಾಗುವುದಿಲ್ಲ; ನಾನೂ ಬಲಿಪಶು ಆಗುವುದಿಲ್ಲ. ಆ ತರಹ ಅವರಿಂದ ನಾನೇನೂ ಆದೆ, ಅದರಿಂದ ಹೀಗಾಯಿತು ಎನ್ನುವುದು ಸರಿಯಲ್ಲ.

ಒಬ್ಬ ಮಾನ್ಯ ಸದಸ್ಯರು : ಬಿಜಾಪುರದ ಬಿಜೆಪಿ ಎಂಪಿಯವರಾದ ಯತ್ನಾಳ್‌ರವರು ಕೂಡ ಹುಬ್ಬಳಿ ಸಮಾರಂಭಕ್ಕೆ ಬಂದಿದ್ದರು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಬಲಿಪಶುವನ್ನಾಗಿ ಯಾರನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಕ್ಕೆ ಆ ಮಾತನ್ನು ನಾನು ಹೇಳಿದ್ದು ಏಕೆಂದರೆ ಬಲಿಪಶುವನ್ನಾಗಿ ನಾವು ಮಾಡಿದೆವು ಎಂದು ಪದ ಬಳಸಿದರು ಅದಕ್ಕೋಸ್ಕರ ಆ ಮಾತನ್ನು ಹೇಳಿದ್ದು. ನನ್ನ ಮೇಲೆ ಅನುಮಾನಗಳನ್ನು ಯಾವ ರೀತಿ ಪಟ್ಟರು ಎನ್ನುವುದಕ್ಕೆ ಪುರಾವೆಗಳು ನನ್ನ ಹತ್ತಿರ ಇದೆ. ನಿಮ್ಮ

ಚರ್ಚೆಗಳು ಯಾವ ರೀತಿಯಾಗಿದೆ ಎನ್ನುವುದರ ಬಗ್ಗೆ ಎಲ್ಲೆಲ್ಲಿ ಏನೇನು ಸಭೆಗಳು ನಡೆಯಿತು ಎನ್ನುವುದನ್ನು ಮತ್ತೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ಕೂಡ ಇಲ್ಲ. ಇವತ್ತು ಯಾರದ್ದು ತಪ್ಪು ಯಾರು ಒಪ್ಪು ಎನ್ನುವುದನ್ನು ನಮ್ಮ ಆತ್ಮಸಾಕ್ಷಿಗೆ ನಾವೇ ಉತ್ತರ ಕೊಡುವಂತಹ ಕೆಲಸವನ್ನು ಮಾಡಿಕೊಳ್ಳೋಣವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಮುಖ್ಯಮಂತ್ರಿ ಆಗುವುದಕ್ಕೆ ಚಿತಾವಣೆ ನಡೆಸುತ್ತಿದ್ದೇನೆಂದು ಹೇಳಿ ನಿಮಗೆ ಬೆಂಬಲ ನೀಡುತ್ತಿರುವವರೇ ಏನು ಕೆಲವರು ಭಾವನೆ ವ್ಯಕ್ತಪಡಿಸಿದರು, ಮುಂದೆ ಈ ಪಕ್ಷದಲ್ಲಿ ಇದ್ದರೆ, ಯಾವುದೇ ಕಾರಣಕ್ಕೆ ಮುಂದಿನ ದಿನಗಳಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮಾನ್ಯ ಸಿದ್ಧರಾಮಣ್ಣನವರನ್ನು ಮುಖ್ಯಮಂತ್ರಿ ಮಾಡುವುದಕ್ಕೆ ಬಿಡುವುದಿಲ್ಲ. ದುಡಿಸಿಕೊಳ್ಳುತ್ತಾರೆ, ನಾವು ಯಾವುದೇ ಕಾರಣಕ್ಕೂ ಅವರ ಜೊತೆ ಹೋಗತಕ್ಕಂಥಾದ್ದು ಸೂಕ್ತವಲ್ಲವೆಂದು ಏನು ಚರ್ಚೆಯಾಗಿದೆ ಅದಕ್ಕೆ ಸಂಬಂಧಪಟ್ಟಂತೆ ನಾನು ಹೆಸರನ್ನು ಹೇಳುವುದಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ಈ ಒಂದು ವಿಷಯದಲ್ಲಿ ಯಾರು ತಪ್ಪುಗಳನ್ನು ಮಾಡಿದ್ದಾರೆ ಯಾರು ಸರಿಯಾಗಿ ನಡೆದುಕೊಂಡಿದ್ದಾರೆ ಎನ್ನುವ ಕಾರಣದಿಂದಲೇ ನಾನೇನು ಇವತ್ತು ಆತ್ಮಸಾಕ್ಷಿಗೆ ಮತವನ್ನು ಎಲ್ಲರೂ ಕೊಡಬಹುದು ಎಂದು ಹೇಳಿದ್ದೇನೆ. 27ನೇ ತಾರೀಖು ವಿಶ್ವಾಸ ಮತದ ಬಗ್ಗೆ ತಾವೇನು ಹೇಳಿದಿರಿ, ಮಾನ್ಯ ದೇವೇಗೌಡರು ಸರ್ಕಾರವನ್ನು ಉಳಿಸಬೇಕೆಂದು ಹೇಳಿ ಹೊರಟಾಗ ನಿಮ್ಮ ಪಕ್ಷದಿಂದಲೇ ಕೆಲವು ಸಲಹೆಗಳ ಬಗ್ಗೆ ಕುಳಿತು ಚರ್ಚೆ ಮಾಡಿದಿರಿ, ಆ ಸಂದರ್ಭದಲ್ಲಿ ನಮ್ಮ ತಂದೆಯವರಿಗೆ ಒಂದು ಮಾತನ್ನು ಹೇಳಿದೆ. ಇವತ್ತು ಧರ್ಮಸಿಂಗ್‌ರವರನ್ನು ರಾಜೀನಾಮೆ ಕೊಡಿಸುವುದರಲ್ಲಿ ಕಾಂಗ್ರೆಸ್ ಪಕ್ಷ ತೀರ್ಮಾನ ಮಾಡುವುದಾದರೆ, ನಮಗೆ ಅದರ ಅವಶ್ಯಕತೆ ಇಲ್ಲ, ಆದರೆ ನಾವು ಇವತ್ತು ವಿರೋಧ ವ್ಯಕ್ತಪಡಿಸುತ್ತಿರುವಂಥಾದ್ದು ಈ ಒಂದು ವಾತಾವರಣ ಬರುವುದಕ್ಕೆ ಕಾರಣ ಕಾಂಗ್ರೆಸ್ ಪಕ್ಷದ ನಡವಳಿಕೆಯೇ ಹೊರತು ಮಾನ್ಯ ಧರ್ಮಸಿಂಗ್‌ರವರ ನಡವಳಿಕೆಯಲ್ಲವೆಂದೂ ಕೂಡ ನಾನು ಸ್ಪಷ್ಟೀಕರಣ ಮಾಡಿದ್ದೇನೆ. ಇಂತಹ ಒಂದು ಸನ್ನಿವೇಶಕ್ಕೆ ಬರುವಂತಹ ಸಂದರ್ಭದಲ್ಲಿ ಮಾನ್ಯ ರಾಮಸ್ವಾಮಿಯವರು ಮಾತನಾಡುವಾಗ ನಿಮ್ಮ ಭಾಗದಿಂದ ಒಂದು ಪ್ರಶ್ನೆಯನ್ನು ಹಾಕಿದರು. ನೀವು ದೇವೇಗೌಡರ ಪರವೋ ಅಥವಾ ಕುಮಾರಸ್ವಾಮಿ ಅವರ ಪರವೋ ಎಂದು. ನಾನು ನಿಮ್ಮನ್ನು ಕೇಳುವುದಕ್ಕೆ ಬಯಸುತ್ತೇನೆ ಸೆಕ್ಯುಲರ್ ಸಿದ್ಧಾಂತದ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಆ ವ್ಯಾಮೋಹದಲ್ಲಿ ನಮ್ಮ ತಂದೆಯವರು ಕಳೆದ ಚುನಾವಣೆಯಲ್ಲೆ ನೀವೇನು 65 ಸ್ಥಾನಕ್ಕೆ ಇಳಿದಿರಿ, ನೀವು ಸರ್ಕಾರದ ಆಡಳಿತವನ್ನು ನಡೆಸಬೇಕಾದರೆ ಚರ್ಚೆ ಮಾಡುತ್ತಿದ್ದೀರಿ ಬಿಜೆಪಿಗೆ ಅವತ್ತು ಮತವನ್ನು ಕೊಟ್ಟು ಜನರು ಆಶೀರ್ವಾದ ಮಾಡಲಿಲ್ಲ, ನಮಗೆ 35 ಪರ್ಸೆಂಟ್ ಮತ ಬಂದಿತು ಎಂದು ಹೇಳಿದಿರಿ. ನಿಮ್ಮ ವಿರುದ್ಧವಾಗಿ ಎಲ್ಲಾ ಪಕ್ಷಗಳಿಂದ ಸೇರಿ ಎಷ್ಟು ಮತ ಬಂತು ಎನ್ನುವುದನ್ನು ಹೇಳಲಿಲ್ಲ. 35 ಪರ್ಸೆಂಟ್ ನಿಮಗೆ ಹೆಚ್ಚಿನ ಮತ ಬಂದಿರಬಹುದು. ಆದರೆ ನಿಮ್ಮ ವಿರುದ್ಧವಾಗಿ 65 ಪರ್ಸೆಂಟ್ ಮತ ಕೊಟ್ಟಿರುವುದನ್ನು ನೀವು ಯೋಚನೆ ಮಾಡಲಿಲ್ಲ. ಅದು ಯಾವ ಪಕ್ಷಕ್ಕಾದರೂ ಕೊಡಲಿ ಕಳೆದ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ ಬಹುಮತ ಬರದೇ ಇರುವಂತಹ ವಿಚಾರಕ್ಕೆ ನಾನು ಹೆಚ್ಚು ವಿಶ್ಲೇಷಣೆ ಇದರಲ್ಲೆ ಯಾರು ಹೆಚ್ಚು ಯಾರು ಕಡಿಮೆ ಎಂದು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ತಂದೆಯವರು ನಿಮ್ಮ ಜೊತೆ ಸಹಕಾರ ಕೊಟ್ಟರು. ಸೆಕ್ಯುಲರ್ ಐಡೆಂಟಿಟಿಯನ್ನು ಉಳಿಸಬೇಕೆಂದು ತೀರ್ಮಾನ ಮಾಡಿ ನಿಮ್ಮ ಜೊತೆ ಹೊರಟಾಗ ನೀವೇನು ಪ್ರಶ್ನೆ ಇಲ್ಲಿ ನಮ್ಮ

ಮುಂದೆ ಇಟ್ಟಿರಿ, ನೀವು ದೇವೇಗೌಡರ ಪರವೋ, ಕುಮಾರಸ್ವಾಮಿ ಪರವೋ ಎಂದು. ಇವತ್ತು ಆ ಸೆಕ್ಯೂಲರ್ ಹೆಸರಿನಲ್ಲಿ ಏನು ಸಹಕಾರವನ್ನು ನಮ್ಮ ತಂದೆಯವರು ಕೊಟ್ಟರು. ಇವತ್ತು ನಮ್ಮ ಕುಟುಂಬವನ್ನು ಒಡೆಯುವಂತಹ ಕೆಲಸವನ್ನು ಮಾಡಿರುವಂತಹ ಕೀರ್ತಿ ನಿಮಗೇ ಬರುತ್ತದೆಂದು ತಮಗೆ ಹೇಳಬಯಸುತ್ತೇನೆ. ಇದು ಸತ್ಯ, ಇದನ್ನು ತಾವು ಇಲ್ಲೇ ಹೇಳಿದ್ದಿರಲ್ಲಾ, ನೀವು ನಮ್ಮ ಶಾಸಕರನ್ನು ನೀವು ದೇವೇಗೌಡರ ಪರವೊ, ಕುಮಾರಸ್ವಾಮಿಯ ಪರವೊ, ಎಂಬ ಪ್ರಶ್ನೆಯನ್ನು ಉಪಯೋಗ ಮಾಡುವುದಾದರೆ, ನಾನು ಅದಕ್ಕೇ ಹೇಳುತ್ತಿದ್ದೇನೆ. ಇವತ್ತು ನೀವು ಹೇಳುತ್ತೀರಿ. ಬಿಜೆಪಿ ಮತ್ತು ಜೆಡಿಎಸ್‌ನ ಸರ್ಕಾರದ ರಚನೆಯಿಂದ ಇಡೀ ರಾಜ್ಯದಲ್ಲಿ ಅಲ್ಪಸಂಖ್ಯಾತರು, ದಲಿತರು, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿ ಆತಂಕಕ್ಕೆ ಒಳಗಾಗಿದ್ದಾರೆ ಎಂದು ಆದರೆ ನಾನು ನಿಮ್ಮನ್ನು ಕೇಳಬಯಸುವುದೇನೆಂದರೆ, ನೀವು ಆತಂಕಕ್ಕೆ ಒಳಗಾಗಿದ್ದಿರೋ, ಇಲ್ಲ ಆ ಜನರು ಆತಂಕಕ್ಕೆ ಒಳಗಾಗಿದ್ದಾರೋ ಎಂದು ಕೇಳಬಯಸುತ್ತೇನೆ. ಇವತ್ತು ನನ್ನ ಕ್ಷೇತ್ರವಾದ ರಾಮನಗರದಲ್ಲಿ, ಇವತ್ತು 35 ರಿಂದ 40 ಸಾವಿರ ಅಲ್ಪಸಂಖ್ಯಾತರ ವರ್ಗದವರು ಇದ್ದಾರೆ. ನಾನು ತೆಗೆದುಕೊಂಡಿರುವಂತಹ ನಿರ್ಧಾರ ಸರಿ ಇದೆಯೆಂದು ಇವತ್ತು ಅಲ್ಲಿನ ಜನರು ನನಗೆ ಆಶೀರ್ವಾದವನ್ನು ಮಾಡಿದ್ದಾರೆ. ನಾನು ಅಲ್ಲಿ ದರ್ಗಾಕ್ಕೆ ಹೋಗಿದ್ದೆ. ಇವತ್ತು ಅಲ್ಪ ಸಂಖ್ಯಾತರಿಗೆ, ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ವರ್ಗದವರಿಗೆ ಈ ಸರ್ಕಾರದಿಂದ ರಕ್ಷಣೆ ಸಿಗುತ್ತದೆಯೆ ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಿದ್ದೀರಿ. ಅದಕ್ಕೆ ನಾನು ನಿಮ್ಮನ್ನು ಒಂದು ಮಾತನ್ನು ಕೇಳಬಯಸುತ್ತೇನೆ. ಇವತ್ತು ನಮ್ಮ ನಾಯಕರುಗಳ ಬಗ್ಗೆ ತಾವುಗಳು ಅನುಕಂಪವನ್ನು ತೋರಿಸುತ್ತೀದ್ದೀರಿ. ಅವರನ್ನು ನಾವು ಬಲಿಪಶುಗಳಾಗಿ ಮಾಡಿ ಬಿಟ್ಟೆವು ಎಂದು. ಆದರೆ ಹಿಂದೆ ಮಾನ್ಯ ವೀರೇಂದ್ರಪಾಟೀಲರನ್ನು ಅಧಿಕಾರದಿಂದ ಅವತ್ತು ಕೆಳಗೆ ಇಳಿಸಬೇಕಾದರೆ, ಚನ್ನಪಟ್ಟಣ ಮತ್ತು ರಾಮನಗರದ ಗಲಭೆಯನ್ನು ಯಾರು ಮಾಡಿದ್ದು ? ಅಲ್ಪ ಸಂಖ್ಯಾತರು ಮತ್ತು ಮತೀಯ ಅಮಾಯಕ ಜನಗಳ ಬಗ್ಗೆ ಅವತ್ತು ಇದು ನಡೆದಿರುವಂತಹ ಘಟನೆಯಾಗಿದೆ. ಇವತ್ತು ಹಿಂದುಳಿದವರ ಅಧಿಕಾರವನ್ನು ಕಿತ್ತುಕೊಂಡರು ಎಂದು ಹೇಳುತ್ತಿದ್ದೀರಿ. ಶ್ರೀಮಾನ್ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ, ನಾವುಗಳು ಯಾರು ಚೇರನ್ನು ಎತ್ತಿಕೊಂಡು ಹೊಡೆಯುವುದಕ್ಕೆ ಹೋಗಲಿಲ್ಲ. ಅದು ನಮ್ಮ ಕಣ್ಣು ಮುಂದೆ ಇದೆ. ಅದುದರಿಂದ ಈ ತತ್ವ, ಸಿದ್ಧಾಂತಗಳ ಬಗ್ಗೆ ಇವತ್ತು ಬೆಳಿಗ್ಗೆಯಿಂದ ಈ ಸದನದಲ್ಲಿ ಚರ್ಚೆಯನ್ನು ಮಾಡಿದ್ದೀರಿ. ಈ ಸೆಕ್ಯುಲರ್ ಕಮ್ಯುನಲ್ ಬಗ್ಗೆ ಏನು ಬೆಳಿಗ್ಗೆಯಿಂದ ಚರ್ಚೆ ಮಾಡಿದ್ದೀರಿ. ಹೌದು, ನಾನು ಹೇಳಿದೆ, ನನಗೆ ಯಾವ ಸಿದ್ಧಾಂತ ಇಲ್ಲವೆಂದು ಹೇಳಿದೆ, ನಾನು ನನ್ನದೇ ಆದಂತಹ ತತ್ವ, ಸಿದ್ಧಾಂತಗಳು ಇದೆಯೆಂದು ಹೇಳಿದೆ. ನಾನು ಇಂತಹ ಒಂದು ತೀರ್ಮಾನವನ್ನು ಮಾಡಬೇಕಾದರೆ, ಒಂದು ಕಡೆಗೆ ಹೊಸದಾಗಿ ಆಯ್ಕೆಯಾಗಿರುವಂತಹ ಸುಮಾರು 100–110 ಜನ ಶಾಸಕರು ಮೊದಲನೆ ಬಾರಿಗೆ ಆಯ್ಕೆ ಆಗಿದ್ದಾರೆ. ಮಾನ್ಯ ರಾಜೇಂದ್ರನ್‌ರವರು ಬಹಳ ಹಾಸ್ಯದಿಂದ ಕೂಡಿದ ವಾಸ್ತವಂಶಕ್ಕೆ ಇಳಿದು ಮಾತನಾಡಿದಂತಹ ಮಾತುಗಳನ್ನು ನೆನಪು ಮಾಡಿಕೊಳ್ಳಬಯಸುತ್ತೇನೆ. ಇವತ್ತು ಚುನಾವಣೆಗೆ ಹೋಗಲು ಯಾವ ಶಾಸಕರೂ ತಯಾರಿಲ್ಲವೆಂದು ಹೇಳಿದ್ದಾರೆ. ಇವತ್ತು ಹೊಸದಾಗಿ ಆಯ್ಕೆಯಾಗಿರುವಂತಹ ಶಾಸಕರುಗಳು ಅವರ ಕ್ಷೇತ್ರಗಳಲ್ಲಿ, ಅಲ್ಲಿ ಜನರು ಬಯಸುವಂತಹ ಕಾರ್ಯಕ್ರಮಗಳನ್ನು ನಾವು ಕೊಡುವುದಕ್ಕೆ ಇನ್ನೂ ಆಗಿಲ್ಲ. ಇವತ್ತು ದೊಡ್ಡವರಿಗೆ ಚುನಾವಣೆಯನ್ನು ಮಾಡಬೇಕೆಂಬ ಖುಷಿ ಇರಬಹುದು. ಇಲ್ಲಿ ಮೊದಲನೆಯ ಬಾರಿಗೆ ಗೆದ್ದು ಬಂದು ಹಿಂದೆ ಏನು

ಕುಳಿತ್ತಿದ್ದಾರೆ, ಅವರಿಗೆ ರಕ್ಷಣೆಯನ್ನು ಕೊಡಬೇಕೆಂದು ನನ್ನನ್ನು ಆಯ್ಕೆ ಮಾಡಿದರು. ನಾನು ಹೆದರಿ ಓಡಿಹೋಗುತ್ತೇನೆಂದು, ನನ್ನ ರೂಮನ್ನು ಕಾದುಕೊಂಡು, ರಕ್ಷಣೆ ಮಾಡಿಕೊಂಡು, ತಂದೆಯವರ ಹತ್ತಿರ ಹೋಗಲು ಶಾಸಕರು ಅವಕಾಶವನ್ನು ಕೊಡಲಿಲ್ಲ. ಇವತ್ತು ಈ ತೀರ್ಮಾನವನ್ನು ಮಾಡುವುದರಲ್ಲಿ, ಇಲ್ಲಿ ನಾನು ಈ ಜಾಗದಲ್ಲಿ ಅಧಿಕಾರದ ಆಸೆ, ಅಧಿಕಾರದ ದಾಹ, ಎಂದು ನೀವು ಹೇಳುತ್ತೀರಿ ನೀವು ಮುಖ್ಯಮಂತ್ರಿಯ ಪದವಿಯೇ ಬೇಕೆಂದು ತೆಗೆದುಕೊಂಡಾಗ, ನಿಮಗೆ ಅಧಿಕಾರದ ದಾಹ ಇರಲಿಲ್ಲ. ನಾನು ಇಲ್ಲಿ, ಇವತ್ತು ಇವರೆಲ್ಲಾ ಸೇರಿ ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆಂದರೆ, ನಮಗೆ ಅಧಿಕಾರದ ದಾಹ. ಇವತ್ತು ನೈತಿಕತೆ ಮತ್ತು ಅನೈತಿಕತೆಯ ಬಗ್ಗೆ ಮಾತನಾಡುತ್ತೀರಿ. ಅದಕ್ಕೆ ನಾನು ತಮ್ಮಲ್ಲಿ ಒಂದು ಪ್ರಶ್ನೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ಒಂದು ಗುಲಾಬಿ ಗಿಡ ಇದೆ, ಅದರಲ್ಲಿ ಹೂವು ಏನು ಇದೆ, ಮುಳ್ಳು ಏನು ಇದೆ. ಇಲ್ಲಿ ನಾವು ಆ ಗುಲಾಬಿ ಹೂವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನೋಡಿದಾಗ ಆ ಗುಲಾಬಿ ಹೂವು ನಮಗೆ ಕಾಣುತ್ತದೆ. ಆ ಮುಳ್ಳನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ನೋಡಿದಾಗ ಆ ಮುಳ್ಳೇ ನಮಗೆ ಕಾಣುವುದು. ಅದೇ ರೀತಿಯಲ್ಲಿ ನೀವು ಇವತ್ತು ನೈತಿಕತೆ ಮತ್ತು ಅನೈತಿಕತೆ ಬಗ್ಗೆ ಏನು ಚರ್ಚೆಯನ್ನು ಮಾಡಿದ್ದೀರಿ. ಅದು ನಿಮ್ಮ ನಿಮ್ಮ ಭಾವನೆಯಲ್ಲಿ ಏನು ವ್ಯಕ್ತ ಪಡಿಸಿದ್ದೀರಿ. ನಾನು ಅದರ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನೈತಿಕತೆ ಮತ್ತು ಅನೈತಿಕತೆಯ ಬಗ್ಗೆ ಮಾತನಾಡುವಂಥಾದ್ದಕ್ಕೆ ಇವತ್ತು ಯಾರಲ್ಲೂ ಆ ಮೌಲ್ಯಗಳು ಉಳಿದಿಲ್ಲ. ಇವತ್ತು ಸುದೀರ್ಘವಾದ ರಾಜಕಾರಣವನ್ನು ನೋಡಿದಾಗ, ಇವತ್ತು ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂಥವರ ಬಗ್ಗೆಯೂ ನಾವು ಚರ್ಚೆಯನ್ನು ಮಾಡುತ್ತೇವೆ. ಇವತ್ತು ಎಲ್ಲರೂ ಮಾಡುತ್ತಿರುವಂಥಾದ್ದು, ಅಧಿಕಾರಕ್ಕೋಸ್ಕರವೆಂದು ನಾನು ಹೇಳಬಯಸುತ್ತೇನೆ. ಇವತ್ತು ಹೋರಾಟ, ಮತ್ತು ಘೋಷಣೆಗಳನ್ನು ಏನು ಮಾಡುತ್ತೇವೆ. ಅದರ ಹಿಂದಿನ ಉದ್ದೇಶವಿರುವಂಥಾದ್ದು, ಅಧಿಕಾರಕ್ಕೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಸುನಾಮಿ ಅಲೆಯ ಬಗ್ಗೆ ಹೇಳಿದರು. ಈ ಸುನಾಮಿ ಅಲೆಗೂ ಮತ್ತು ಸಮ್ಮಿಶ್ರ ಸರ್ಕಾರದ ರಚನೆಗೂ, ನೀವು ಏನು ಸಂಬಂಧವನ್ನು ಕಲ್ಪಿಸಿದ್ದೀರಿ. ಈ ಸಂಬಂಧವನ್ನು ಕಲ್ಪಿಸಿರುವಂಥಾದ್ದು, ಆ ಸುನಾಮಿ ಅಲೆ, ಇವತ್ತು ಇಲ್ಲಿ ಸರ್ಕಾರ ರಚನೆ ಮಾಡುವಂತಹ ವಿಷಯದಲ್ಲಿ, ನಮ್ಮ ವಿರುದ್ಧವಾಗಿ ಇಲ್ಲಿ ಏನು ಚರ್ಚೆ ಮಾಡಿದ್ದೀರಿ. ಆ ಸುನಾಮಿ ಅಲೆ ನಿಮ್ಮನ್ನು ಕೊಚ್ಚಿಕೊಂಡು ಹೋಗುತ್ತಕ್ಕಂಥ ದಿನ ಬರುತ್ತದೆ, ಏನೋ ಎಂದು ಏಕೆ ಹೇಳಿದ್ದಿರೋ ಗೊತ್ತಿಲ್ಲ. ಏಕೆಂದರೆ ನೀವು ಈ ಸುನಾಮಿ ಅಲೆಗೂ ಮತ್ತು ಈ ಸಮ್ಮಿಶ್ರ ಸರ್ಕಾರಕ್ಕೂ ಏನು ಹೊಂದಾಣಿಕೆಯನ್ನು ಮಾಡಿದ್ದೀರಿ. ನಾನು ಅದಕ್ಕಿಂತ ಹೆಚ್ಚಿಗೆ ಏನು ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ವಾಟಾಳ್ ನಾಗರಾಜ್** : ಮಾನ್ಯ ಮುಖ್ಯಮಂತ್ರಿಯವರು ಶಾಪವನ್ನು ಹಾಕಿದರೆ ನಮ್ಮ ಗತಿ ಏನಾಗಬೇಕು ?

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ನಾನು ಶಾಪವನ್ನು ಹಾಕುತ್ತಿಲ್ಲ. ನೀವು ಏತಕ್ಕೆ ಆ ಪದ ಹೇಳಿದಿರೊ ನನಗೆ ಗೊತ್ತಿಲ್ಲ. ಆ ದೇವರು ಏತಕ್ಕೆ ಆ ಪದವನ್ನು ನುಡಿಸಿದನೋ, ಗೊತ್ತಿಲ್ಲ.

**ಶ್ರೀ ವಾಟಾಳ್ ನಾಗರಾಜ್** : ನೀವು ಶಾಪ ಹಾಕುವುದಕ್ಕೆ ಶುರು ಮಾಡಿದರೆ, ನಮ್ಮ ಏನು ಗತಿಯಾಗಬೇಕು?

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಅದನ್ನು ನೀವು ಬಯಸುತ್ತಿರುವುದು, ನಾನಲ್ಲ.

**ಶ್ರೀ ವಾಟಾಳ್ ನಾಗರಾಜ್** : ನೀವು ಇಲ್ಲಿ ಮುಖ್ಯಮಂತ್ರಿಯಾಗಿದ್ದುಕೊಂಡು ಈ ರೀತಿ ಶಾಪವನ್ನು ಹಾಕಿದರೆ, ಹೇಗೆ ? ನಾವು ನಿಮ್ಮಿಂದ ಏನು ನಿರೀಕ್ಷೆಯನ್ನು ಮಾಡಿದ್ದೇವೆಂದರೆ ಮುಂದಿನ ದಿವಸಗಳಲ್ಲಿ ರಾಜ್ಯಕ್ಕೆ ಏನೇನು ಅಭಯವನ್ನು ಕೊಡುತ್ತಿದ್ದೀರಿ, ಏನೇನು ಉತ್ತರಗಳನ್ನು ಕೊಡುತ್ತಿದ್ದೀರಿ, ಅದನ್ನು ಬಿಟ್ಟು ನಿಮ್ಮನ್ನೆಲ್ಲಾ ಕೊಚ್ಚಿಕೊಂಡು ಹೋಗುತ್ತದೆಂಬ ಶಾಸವನ್ನು ಹಾಕುತ್ತಿದ್ದೀರಲ್ಲಾ, ಇದು ಏನು ? ಇದು ಸರಿಯಲ್ಲ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ನೀವೇ ಹೋಲಿಕೆ ಮಾಡಿದ್ದಕ್ಕೆ ನಾನು ಹೇಳಿದೆ. ನೀವು ಚೆನ್ನಾಗಿರಲಿ ಎಂದೇ ಬಯಸುತ್ತೇವೆ.

**ಶ್ರೀ ವಾಟಾಳ್ ನಾಗರಾಜ್** : ನಿಮ್ಮ ಹೃದಯವೇ ಒಂದು, ಮಾತೇ ಒಂದು. ಈ ತರಹ ಆಗುತ್ತಿದೆ

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ನೀವು ಹೋಲಿಕೆ ಮಾಡಿದ್ದಕ್ಕೆ ನಾನು ಹೇಳಿದೆ, ನೀವು ಚೆನ್ನಾಗಿರಿ ಎಂದು ಬಯಸುತ್ತೇನೆ. ಆದರೆ ಇನ್ನು ಒಂದು ವಿಷಯ, ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾವು ಬೆಳಿಗ್ಗೆಯಿಂದಲೂ ತತ್ವ, ಸಿದ್ಧಾಂತಗಳು, ಸೆಕ್ಯೂಲರ್, ಕ್ರಿಮಿನಲ್, ಚರ್ಚೆಯಾಗಿರುವಂಥಾದ್ದು. ಇದು ಅವರವರ ಮನೋಭಾವಕ್ಕೆ ಬಿಟ್ಟು ಬಿಡೋಣ, ಅದು ಯಾವ ರೀತಿಯಾಗಿ ಮಾಡಬೇಕೆಂದು ಅವರಿಗೆ ಬಿಡೋಣ. ಇವತ್ತು ನಮ್ಮ ತಂದೆಯವರ ವಿಷಯದಲ್ಲಿ ನೀವು ಏನು ವಿಶ್ವಾಸದ ಬಗ್ಗೆ ಮಾತನಾಡಿದ್ದೀರಿ. ನಮ್ಮ ತಂದೆಯವರು ಕೊನೆಯ ನಿಮಿಷದವರೆಗೂ ಪ್ರಯತ್ನಪಟ್ಟಿರುವಂಥಾದ್ದು ಸತ್ಯ. ಅದರಲ್ಲಿ ಯಾವುದೇ ರೀತಿಯಲ್ಲೂ ಸದನದಲ್ಲಿ ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ಇವತ್ತು ನೀವು ಆಂಟಿಡಿಫೆಕ್ಷನ್ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ. 10ನೇ ವಿಧಾನಸಭೆಯೊಳಗೆ ಆಂಟಿಡಿಫೆಕ್ಷನ್ ಬಗ್ಗೆ ಒಂದು ನೋಟೀಸ್ ಏನು ಇಷ್ಯೂ ಆಯಿತು. ಆ ಸಂದರ್ಭದಲ್ಲಿ ಸುಮಾರು 15 ತಿಂಗಳುಗಳ ಕಾಲ ರೂಲಿಂಗ್ ಅನ್ನು ಕೊಟ್ಟಿರಲಿಲ್ಲ. 11ನೇ ವಿಧಾನಸಭೆಯಲ್ಲಿ ದಿನಾಂಕ :13.12.2002ರಲ್ಲಿ ಸದನದಲ್ಲಿ ಏನು ಆ ಪ್ರಶ್ನೆಯನ್ನು ಇಟ್ಟರು. ದಿನಾಂಕ : 30.1.2004ರವರೆಗೂ ಸದನದಲ್ಲಿ ಏನೂ ರೂಲಿಂಗ್ ಕೊಡಲಿಲ್ಲ. ಈಗ ತಕ್ಷಣದಲ್ಲಿ ನಿಮಗೆ ಬೇಕಾಗಿದೆ. ಇದು ಇಲ್ಲಿ ನಡೆದುಕೊಂಡು ಬಂದಿದೆ.

**ಶ್ರೀ ಕೆ. ಶ್ರೀನಿವಾಸಗೌಡ** : ಅವತ್ತು ಕೋರ್ಟಿಗೆ ಹೋಗಿರಲಿಲ್ಲ,

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ನಾನು ಅದಕ್ಕೆ ಏನೂ ಅಂಜಿಕೊಂಡು ಇಲ್ಲ. ನಾವು ಕಾನೂನಿಗೆ ತಲೆ ಬಾಗಿಸುವುದಕ್ಕೆ ಸಿದ್ಧ ಇದ್ದೇವೆ. ಈಗ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು, ಶ್ರೀ ವಾಟಾಳ್ ನಾಗರಾಜ್‌ರವರು, ಇವತ್ತು ಕಾನೂನನ್ನು ರಕ್ಷಣೆ ಮಾಡುವಂಥಾದ್ದರಲ್ಲಿ ಇಷ್ಟೊಂದು ಮುತುವರ್ಜಿಯನ್ನು ವಹಿಸಿದ್ದಾರೆ. ಅಥಕ್ಕೆ ಈ ಸಂದರ್ಭದಲ್ಲಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀವಾದರೂ ಕಾನೂನಿನ ರಕ್ಷಣೆ ಮಾಡುವಂತಹ ಜವಾಬ್ದಾರಿಯನ್ನು ಏನು ಹೊತ್ತುಕೊಂಡಿದ್ದೀರಿ. ಅದಕ್ಕೆ ನಾನು ವಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ನಮ್ಮ ಸರ್ಕಾರದ ವಿಷಯದಲ್ಲಿ ಏನು ಅನುಮಾನವನ್ನು ಪಟ್ಟಿದ್ದೀರಿ. ನೀವು ಎಲ್ಲಾ ನನಗಿಂತ ಹಿರಿಯರು ಇದ್ದೀರಿ. ನಾನು ಈ ಸಂದರ್ಭದಲ್ಲಿ ನಿಮ್ಮೆಲ್ಲರ ಅನುಭವವನ್ನು, ಇವತ್ತು ನೀವು ಸರ್ಕಾರದಲ್ಲಿದ್ದಾಗ ಜನಪರ ಕಾರ್ಯಕ್ರಮಗಳಿಗೆ ಏನು ಚಾಲನೆಯನ್ನು ಕೊಟ್ಟಿದ್ದಿರಿ. ತಾವು ದಯಮಿಟ್ಟು ನನಗೆ ಸಲಹೆಗಳನ್ನು ಕೊಡಿ. ನಾವು ಒಳ್ಳೆಯ

ಕಾರ್ಯಕ್ರಮಗಳನ್ನು ಕೊಡುವಂಥಾದ್ದಕ್ಕೆ ನಿಮ್ಮೆಲ್ಲರ ಸಹಕಾರವನ್ನು ಪಡೆಯುತ್ತೇನೆ. ಇವತ್ತು ನಮ್ಮ ಉಪಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು. ತಾವು ದತ್ತಪೀಠದ ಪ್ರಶ್ನೆಯನ್ನು ಏನು ನಮ್ಮ ಮುಂದೆ ಇಟ್ಟಿದ್ದೀರಿ. ಇವತ್ತು ನಾವು ಯಾವ ದಿಕ್ಕಿನಲ್ಲಿ ಹೋಗುತ್ತೇವೆಂಬ ಬಗ್ಗೆಅವರು ಹೇಳಿದರು. ಇವತ್ತು ಈ ರಾಜ್ಯದಲ್ಲಿರುವಂತಹ ಅತ್ಯಂತ ಕಡು ಬಡವನಿಗೂ ಆರ್ಥಿಕ ಕಾರ್ಯಕ್ರಮಗಳನ್ನು ನಿರೂಪಿಸುವಂಥಾದ್ದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ನೀವು ಇವತ್ತು ಸಿದ್ಧಾಂತದ ಬಗ್ಗೆ ಹೇಳಿದ್ದೀರಿ. ನೀವು ಏನಾದರೂ ಒಂದು ಸಿದ್ದಾಂತವನ್ನು ಇಟ್ಟುಕೊಳ್ಳಬೇಕೆಂದು ಹೇಳಿದ್ದೀರಿ. ಹೌದು ನನ್ನದೂ ಒಂದು ಸಿದ್ದಾಂತ ಇದೆ, ನಾನು ಒಬ್ಬ ಶಾಸಕನಾಗಿ, ನನಗೆ ಆಗಿರುವಂತಹ ಒಂದೆರಡು ಅನುಭವಗಳನ್ನು ನಿಮ್ಮ ಮುಂದೆ ಹೇಳಲೇ ಬೇಕು. ಇವತ್ತು ಸ್ವಾತಂತ್ರ್ಯ ಬಂದು 58 ವರ್ಷಗಳಾದರೂ, ನಾನು ಶಾಸಕನಾಗಿ ಮೊದಲನೆಯ ದಿವಸವೇ ಒಂದು ಘಟನೆಯನ್ನು ನೋಡಿದೆ. ನನ್ನ ಕ್ಷೇತ್ರದಲ್ಲೇ ಕುಂಬಾರ ಸಮಾಜಕ್ಕೆ ಸೇರಿದಂತಹ ಒಬ್ಬ ಹೆಣ್ಣು ಮಗಳು, ಅವಳ ಗಂಡ ಬೆಂಗಳೂರಿನಲ್ಲಿ ಕಾಮಾಕ್ಷಿಪಾಳ್ಯದಲ್ಲಿ ಕೂಲಿ ಕೆಲಸ ಮಾಡಬೇಕಾದರೆ ಆಕಸ್ಮಿಕವಾಗಿ ತೀರಿಕೊಂಡ. ಆ ಹೆಣ್ಣುಮಗಳಿಗೆ ತಂದೆಯೂ ಇಲ್ಲ, ಅಣ್ಣತಮ್ಮಂದಿರೂ ಇಲ್ಲ, ತಾಯಿ ಒಬ್ಬಳು ಮಾತ್ರ ಇದ್ದಾಳೆ. ಅವಳಿಗೆ ಯಾವ ಆಸ್ತಿಯೂ ಇರಲಿಲ್ಲ. ಅವಳು ನನ್ನ ಮುಂದೆ ಬಂದು ನಿಂತದ್ದು ಒಂದು ಘಟನೆ. ಅದೇ ರೀತಿ, ಸನ್ಮಾನ್ಯ ಶಿವಕುಮಾರ್‌ರವರ ಕಾನ್‌ಸ್ಟಿಟ್ಯೂಯೆನ್ಸಿನಲ್ಲಿ ನಾನು ಚುನಾವಣೆಯಲ್ಲಿ ಸೋತಾಗ, ಲಿಂಗಾಯಿತ ಸಮಾಜಕ್ಕೆ ಸೇರಿದಂಥ ಒಬ್ಬ ಹೆಣ್ಣುಮಗಳು ಬಂದಿದ್ದಳು. ಅವಳ ತಾಯಿ ಟೀ ಶಾಪ್ ಇಟ್ಟುಕೊಂಡು ಜೀವನವನ್ನು ಮಾಡುತ್ತಿದ್ದಳು. ಅವಳ ತಂದೆ ಕುರುಡ. ಅವಳು ತನ್ನ ಪರಿಸ್ಥಿತಿಯನ್ನು ನನ್ನ ಮುಂದೆ ಬಂದು ಹೇಳಿದಳು. ಇವತ್ತು ಇಂಥ ವಾಸ್ತವಾಂಶಗಳನ್ನು ಅರಿತೇ ಈ ತೀರ್ಮಾನ ಮಾಡಬೇಕಾದರೆ ಇನ್ನೊಬ್ಬರ ಮುಖಾಂತರ ಹೇಳಿ ನಾನು ಕೆಲಸ ಮಾಡಬೇಕಾಗುತ್ತದೆ. ಇವತ್ತು, ಅಂಥ ಕುಟುಂಬಗಳಿಗೆ ಕಾರ್ಯಕ್ರಮಗಳನ್ನು ಕೊಡಲು ಆಗುವುದಿಲ್ಲ, ಈ ಸರ್ಕಾರದಲ್ಲಿ ಅಂಥವುಗಳನ್ನು ಮಾಡಲು ನನಗೆ ಶಕ್ತಿಯಿಲ್ಲ ಎಂದಾಗ, ನಾನು ನನ್ನ ಸಂಬಳವನ್ನು ಸಂಪೂರ್ಣವಾಗಿ ಅಂಥ ಕುಟುಂಬಳಿಗೆ ಕೊಡುವಂಥ ಕೆಲಸವನ್ನು ರಾಮನಗರದಲ್ಲಿ ಪ್ರಾರಂಭ ಮಾಡಿದ್ದೇನೆ, ಅದೇ ರೀತಿ ಇವತ್ತು ನಾನು ಈ ಜಾಗದಲ್ಲಿ ನಿಂತು ಹೇಳುತ್ತಿದ್ದೇನೆ, ಕಡುಬಡವರು, ಅವರು ಯಾವುದೇ ವರ್ಗಕ್ಕೆ ಸೇರಿರಲಿ, ಅವರನ್ನು ಆರ್ಥಿಕವಾಗಿ ಮೇಲೆ ತರತಕ್ಕಂಥ ಕಾರ್ಯಕ್ರಮಗಳನ್ನು ಕೊಡತಕ್ಕಂಥಾದ್ದಕ್ಕೆ ಇವತ್ತು ಯುವಜನರಿಗೆ ಆತ್ಮಸ್ಥೈರ್ಯವನ್ನು ಕೊಟ್ಟು, ಯಾವ ರೀತಿಯಲ್ಲಿ ಅವರು ತಮ್ಮ ಸ್ವಂತ ದುಡಿಮೆಯಿಂದ ಜೀವನವನ್ನು ಮಾಡಬೇಕು, ಅಂಥ ಕಾರ್ಯಕ್ರಮಗಳಿರಬಹುದು, ಕೃಷಿಗೆ ಸಂಬಂಧಪಟ್ಟಹಾಗೆ ಇರಬಹುದು, ನೀರಾವರಿ ಕಾರ್ಯಕ್ರಮಗಳಿರಬಹುದು, ಅವುಗಳನ್ನು ಮಾಡುತ್ತೇವೆ. ಇವತ್ತು ನೀವು ಕೆಲವು ವಿಷಯಗಳಲ್ಲಿ ನಮ್ಮ ಬಗ್ಗೆ ಅನುಮಾನವನ್ನು ಪಟ್ಟಿದ್ದೀರಿ. ನಮಗೆ ಸುಮಾರು 4–5 ತಿಂಗಳ ಅವಕಾಶವನ್ನು ಕೊಡಿ. ಬಿ.ಜೆ.ಪಿ. ಮತ್ತು ಜೆ.ಡಿ.(ಎಸ್) ಪಕ್ಷದ ಸರ್ಕಾರ . . . .

**ಒಬ್ಬ ಮಾನ್ಯ ಸದಸ್ಯರು** : 40 ತಿಂಗಳು ಕೊಡುತ್ತೇವಲ್ಲಾ, 4–5 ತಿಂಗಳು ಏಕೆ ?

**ಶ್ರೀ ಹೆಚ್. ಡಿ. ಕುಮಾರಸ್ವಾಮಿ** : 40 ತಿಂಗಳೂ ಇರುತ್ತೇವೆ. ಏನು ವರಿ ಮಾಡಿಕೊಳ್ಳಬೇಡಿ. ನೀವು ಅನುಮಾನ ಪಟ್ಟಿದ್ದೀರಲ್ಲಾ. ಆ ಅನುಮಾನಗಳಿಗೆ ನಾವು ಉತ್ತರ ಕೊಡಬೇಕಲ್ಲಾ, ಆ ನಿಮ್ಮ ಅನುಮಾನಗಳನ್ನು ನೀಗಿಸಬೇಕಲ್ಲಾ ನಾವು.

**ಶ್ರೀ ಡಿ.ಕೆ. ಶಿವಕುಮಾರ್** : ಯಡಿಯೂರಪ್ಪನವರ ಬಗ್ಗೆ ಅನುಮಾನ ನನಗೆ. ಏನು ಮಾಡುತ್ತಾರೋ ಅಂತ ಅಷ್ಟೇ.

**ಶ್ರೀ ಹೆಚ್. ಡಿ. ಕುಮಾರಸ್ವಾಮಿ** : ಇವತ್ತು ಯಡಿಯೂರಪ್ಪನವರ ಬಗ್ಗೆ ನೀವು ಅನುಮಾನ ಪಡುತ್ತಿದ್ದೀರಿ, ಈ ಸರ್ಕಾರವನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ, ಇವತ್ತು ಈ ಭಾಗದಲ್ಲಿ ಕುಳಿತಿರಕ್ಕಂಥ ಎರಡೂ ಪಕ್ಷಗಳ ಶಾಸಕರು ಸಹೋದರ ಮನೋಭಾವದಲ್ಲಿ ಒಟ್ಟಿಗೆ ಸಭೆಯನ್ನು ನಡೆಸಿ ಈ ಸದನಕ್ಕೆ ಬಂದಿದ್ದು, ಇವತ್ತು ನಿಮಗೆ ಮಾತನ್ನು ಕೊಡಲಿಕ್ಕೆ ಬಯಸುತ್ತೇನೆ, ಇವತ್ತು ಉಪಮುಖ್ಯಮಂತ್ರಿಗಳು ಏನು ಒಂದು ಮಾತಿನಲ್ಲಿ ವ್ಯಕ್ತಪಡಿಸಿದ್ದಾರೆ, ಯಾವುದೇ ರೀತಿಯ ಮತೀಯ ಗಲಭೆಗಳಿರಬಹುದು, ಕೋಮು ಸೌಹಾರ್ದದ ಬಗ್ಗೆ ಧಕ್ಕೆ ಬರದೇ ಇರತಕ್ಕಂಥ ರೀತಿಯಲ್ಲಿ ಈ ಸರ್ಕಾರವನ್ನು ನಡೆಸಲಿಕ್ಕೆ ಎರಡೂ ಪಕ್ಷಗಳವರಾದ ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ, ಇವತ್ತು ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಏನು ಕಾರ್ಯಕ್ರಮಗಳನ್ನು ಕೊಡಬೇಕು ಹಿಂದಿನ ಸರ್ಕಾರದಲ್ಲಿ ರೈತರಿಗೆ ಕೆಲವೊಂದು ಏನು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಮುಂದುವರೆಸತಕ್ಕಂಥಾದ್ದು, ವಸತಿ ಇಲಾಖೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡತಕ್ಕಂಥಾದ್ದು ಮುಂತಾದ ಕಾರ್ಯಕ್ರಮಗಳನ್ನು ಮುಂದುವರೆಸುತ್ತೇವೆ. ಇದರಲ್ಲಿ ಯಾವುದೇ ಅನುಮಾನಗಳು ಬೇಡ. ಇವತ್ತು ಅಧ್ಯಕ್ಷರು ವಿಶ್ವಾಸಮತವನ್ನು ಪಡೆಯಲು ಏನು ಅವಕಾಶವನ್ನು ಕೊಟ್ಟಿದ್ದರು, ದಯವಿಟ್ಟು ಈ ವಿಶ್ವಾಸಮತಕ್ಕೆ ನಿಮ್ಮೆಲ್ಲರ ಬೆಂಬಲವನ್ನು ಈ ಸಂದರ್ಭದಲ್ಲಿ ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಕುಮಾರಸ್ವಾಮಿಯವರು ಏನು ಹೇಳಿಕೆಯನ್ನು ಕೊಟ್ಟರು, ಅದರಲ್ಲಿ ಬಹಳ ಬೋಲ್ಡ್ ಆಗಿ, ಧೈರ್ಯವಾಗಿ ಕೆಲವು ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ. ಅದನ್ನು ನಾವು ಮೆಚ್ಚುತ್ತೇವೆ, ಅವರ ಧೈರ್ಯಕ್ಕೆ. ಒಂದು ಮಾತನ್ನು ಅವರು ಸ್ಪಷ್ಟಪಡಿಸಿದರು. 2004 ರಲ್ಲಿ ಚುನಾವಣೆಯಾದ ಮೇಲೆ ಪ್ರಥಮ ಬಾರಿಗೆ ನಾನು ಜೈಟ್ಲಿಂಯವರನ್ನು ಭೇಟಿಯಾಗಿದ್ದೆ, ಅವರು ನನಗೆ, ನೀವು ಮುಖ್ಯಮಂತ್ರಿಯಾಗು ಮತ್ತು ಯಾವ ರೀತಿಯಾಗಿ ಓರಿಸ್ಸಾದಲ್ಲಿ ಬಿ.ಜೆ.ಡಿ. ಮತ್ತು ಅಲ್ಲಿರತಕ್ಕಂಥ ಬಿ.ಜೆ.ಪಿ. ಯವರಿಬ್ಬರೂ ಸೇರಿ ಸರ್ಕಾರ ಮಾಡಿದ್ದಾರೆ, ಅದೇ ರೀತಿಯಾಗಿ ಸರ್ಕಾರವನ್ನು ರಚನೆ ಮಾಡಬೇಕು ಎನ್ನುವಂಥ ಮಾತು ಪ್ರಪ್ರಥಮ ಬಾರಿಗೆ ಪ್ರಾರಂಭವಾಗಿ ಇವತ್ತು ಕೊನೆಯಾಯಿತು, ಇವತ್ತು ಅದು ಮುಗಿಯುತ್ತಿದೆ. ಇದೊಂದು ಸಂತೋಷದ ಸಂಗತಿ. ಇಲ್ಲದಿದ್ದರೆ, ಕಾಂಗ್ರೆಸ್‌ನವರು ಹೀಗೆ ಮಾಡಿದರು, ಹೆರ್‍ಯಾಸ್‌ಮೆಂಟ್, ಹೀಗೆ ಎಂದು ಹೇಳಿಕೊಂಡು ಬಂದಿದ್ದರು. ಎರಡನೆಯದು, ರೆಸಾರ್ಟ್‌ನಲ್ಲಿದ್ದು, ಅನೇಕ ಜನ ಶಾಸಕರು ಒತ್ತಡ ತಂದು ........

**(ಗೊಂದಲ)**

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಕಾಂಗ್ರೆಸ್‌ನವರೇ ಕಾರಣಕರ್ತರು, ನಮ್ಮ ಮನೆ ಒಡೆಯುವುದಕ್ಕೆ ಕಾರಣಕರ್ತರು, ನಮ್ಮ ಪಕ್ಷ ಒಡೆಯುವುದಕ್ಕೆ ಕಾರಣಕರ್ತರು ಎಂದು ಹೇಳಿದ್ದಾರಲ್ಲಾ, ಅದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ. ಏಕೆಂದರೆ, ಅವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಒಂದು ಚಕಾರ ಶಬ್ದವನ್ನೂ ಮಾತನಾಡಲಿಲ್ಲ. ನಮಗೆ ನೀವು ಅವಕಾಶ ಕೊಟ್ಟಿದ್ದರಿಂದ, ಈಗ ನಾನೂ ಹೇಳಬೇಕಲ್ಲವೇ? ಈಗ ಅವರೇ ಹೇಳಿದ್ದಾರೆ, ಶಾಸಕರ ಒತ್ತಡದ ಮೇರೆಗೆ ಶಾಸಕರೇ ನನಗೆ, ನಾನು

ಮುಖ್ಯಮಂತ್ರಿಯಾಗಬೇಕೆಂದು ಹೇಳಿ ಕೇಳಿಕೊಂಡಿದ್ದಾರೆ, ಚುನಾವಣೆ ಬೇಡ ಎಂದು ಹೇಳಿ ಅವರೆಲ್ಲರೂ ಒತ್ತಡ ತಂದಿದ್ದಾರೆ, ನಾನು 10 ವರ್ಷ ಮುಖ್ಯಮಂತ್ರಿಯಾಗುವುದಿಲ್ಲ, ಯಾರಾದರೂ ಆಗಲಿ ಎಂದು ಹೇಳಿದ್ದೆ, ಆದರೆ ಒತ್ತಡದಿಂದ ಇದನ್ನು ಮಾಡಿದ್ದೇನೆ ಮತ್ತು ಚುನಾವಣೆ ಬರುತ್ತದೆ ಎಂದು ಎಲ್ಲರ ಅಭಿಪ್ರಾಯ ಇದ್ದ ಕಾರಣ ಇದಕ್ಕೆ ನಾನು ಮನ್ನಣೆ ಕೊಟ್ಟು ಇವತ್ತು ಸ್ವೀಕಾರ ಮಾಡಿದ್ದೇನೆ ಎಂದು ಎರಡನೆಯ ಅಂಶವನ್ನು ಹೇಳಿದ್ದಾರೆ. ಮೂರನೆಯ ಸತ್ಯವನ್ನು ಏನು ಹೇಳಿದ್ದಾರೆಂದರೆ, ನಮ್ಮ ಮನೆಯಲ್ಲಿ ನೀವು ಒಡಕು ಉಂಟು ಮಾಡುತ್ತಿದ್ದೀರಿ, ಕುಮಾರಸ್ವಾಮಿಯ ಪಾರ್ಟಿಯನ್ನು ಮತ್ತು ದೇವೇಗೌಡರ ಪಾರ್ಟಿಯನ್ನು ಎಂದು ಹೇಳಿದ್ದಾರೆ. ಕುಮಾರಸ್ವಾಮಿ ದೇವೇಗೌಡರ ಪಾರ್ಟಿ ಅನ್ನುವುದು ಇಲ್ಲಿ ಬರಲಿಲ್ಲ, ಪ್ರಸ್ತಾಪ ಏನು ಬಂತು ಎಂದರೆ, ದೇವೇಗೌಡರು ಸೈದ್ಧಾಂತಿಕವಾಗಿ ಸೆಕ್ಯುಲರ್ ಪಾರ್ಟಿಗೆ ಸಪೋರ್ಟ್ ಮಾಡುತ್ತಿದ್ದಾರೆ, ತಮಗೂ ಕೂಡ ಈ ಒತ್ತಡ ತಂದಿದ್ದಾರೆ, ತಾವೂ ಕೂಡ ಈ ಮಾತನ್ನು ಒಪ್ಪಿಕೊಂಡಿರಿ, ಅದಕ್ಕಾಗಿ ಇವತ್ತು ಇಲ್ಲಿನ ಅನೇಕ ಸದಸ್ಯರು, ದೇವೇಗೌಡರ ಸೆಕ್ಯುಲರ್ ಪಾರ್ಟಿಯಾಗಿ ಅವರ ಸಿದ್ಧಾಂತದ ಪ್ರಕಾರ ಇದ್ದಾರೋ ಅಥವಾ ಒತ್ತಡಕ್ಕೆ ಮಣಿದು ನೀವು ಮುಖ್ಯಮಂತ್ರಿಗಳಾಗಬೇಕು ಇವತ್ತು ನೀವು ಆ ಸಿದ್ಧಾಂತವನ್ನು ಬಿಟ್ಟು ತಾವೇನು ಅವರ ಜೊತೆಯಲ್ಲಿ ಹೋಗುತ್ತಿದ್ದೀರಿ, ಈ ಗುಂಪಿಗೆ ಸೇರಿದ್ದಾರೋ ಎನ್ನುವುದನ್ನು ಕೇಳಿದ್ದಾರೆಯೇ ಹೊರತಾಗಿ ಬೇರೆ ಏನೂ ಇಲ್ಲ. ಆದ್ದರಿಂದ, ನನಗೆ ಸಂತೋಷವಾಗಿದೆ, ಇವತ್ತು ಕುಮಾರಸ್ವಾಮಿಯವರೇ ಬಹಿರಂಗಪಡಿಸಿ, ಸ್ಪಷ್ಟವಾಗಿ ಹೇಳಿ, ಮೊದಲಿನಿಂದಲೇ ನಿಮ್ಮ ಜೊತೆಯಲ್ಲಿ ಹೊಂದಾಣಿಕೆ ಇರಲಿಲ್ಲ, ನೀವು ನಾವು ಯಾವಾಗ ಕೂಡಿದ್ದೇವೆ, ನಿಮಗೂ ನಮಗೂ ಮನಸ್ಸು ಕೂಡಲೇ ಇಲ್ಲ, ನಮ್ಮ ಮನಸ್ಸು ಮೊದಲಿನಿಂದ ಬಿ.ಜೆ.ಪಿ. ಜೊತೆಯಲ್ಲೇ ಇತ್ತು ಎನ್ನತಕ್ಕಂಥ ಮಾತನ್ನು ಏನು ಹೇಳಿದ್ದಾರೆ, ಇದು ಬಹಳ ಒಳ್ಳೆಯದು, ಇದು ಇಡೀ ರಾಜ್ಯದ ಜನತೆಗೆ ಗೊತ್ತಾಗಲಿ, ದೇಶದ ಜನತೆಗೆ ಗೊತ್ತಾಗಲಿ, ಯಾವ ಕಾರಣಕ್ಕಾಗಿ ಇವತ್ತು ಅವರು ಈ ಸಂಬಂಧವನ್ನು ಕಳಚಿಕೊಂಡಿದ್ದಾರೆ ಎನ್ನತಕ್ಕಂಥಾದ್ದು ಗೊತ್ತಾಗಲಿ. ಅದಕ್ಕಾಗಿ, ದಯವಿಟ್ಟು ಈ ಸಂಬಂಧವನ್ನು ಬೆಳೆಸಿಕೊಂಡು ಮುಂದುವರೆಯಲಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ನಾನು ಸತ್ಯವನ್ನು ಹೇಳಿದ್ದೇನೆ. ಅದರಲ್ಲಿ ಯಾರ ಮುಲಾಜು ಇಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಒಂದು ನಿಮಿಷ, ಹೇಳುತ್ತೇನೆ ಕೇಳಿ. ನನಗೆ ದೇಶಪಾಂಡೆಯವರು ಒಂದು ಮಾತನ್ನು ಹೇಳಿದರು, ಆತುರ ಬಿದ್ದಿರಿ ಎಂದು ಹೇಳಿದರು, ಆತುರ ಬೀಳಲಿಲ್ಲ. 20 ತಿಂಗಳು ನೀವು ಕೊಟ್ಟಂಥ ನೋವನ್ನೆಲ್ಲಾ ಸಹಿಸಿಕೊಂಡು ನಿಮ್ಮ ಜೊತೆ ಸಹಕಾರ ಕೊಟ್ಟಿದ್ದೇವೆ. ಅದನ್ನು ನೀವು ಹೇಳಬೇಕು. ನೀವು ಏನು ಮಾಡಿದಿರಿ, ಯಾವ ರೀತಿ ನಡೆದುಕೊಂಡಿರಿ ಎನ್ನುವುದನ್ನು ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳಾಗಿದ್ದವರ ಬಗ್ಗೆ ನಾನು ಹೇಳುತ್ತಿಲ್ಲ. ಅವರ ಬಗ್ಗೆ ನಾನು ಏನೂ ಹೇಳುತ್ತಿಲ್ಲ. ಕಾಂಗ್ರೆಸ್ ಪಕ್ಷದ ಬಗ್ಗೆ ನಾನು ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ನಾನೂ ನಮ್ಮ ಪಕ್ಷದ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ನಾವೂ ತೀರ್ಮಾನ ಮಾಡಿದ್ದೇವೆ. ನಿಮ್ಮ ಪಕ್ಷ ನಿಮಗೆ ಹೇಗೆ ಮುಖ್ಯವೋ, ಹಾಗೆ ನಮ್ಮ ಪಕ್ಷ

ನಮಗೆ ಮುಖ್ಯ. 20 ತಿಂಗಳು ಮೌನವಾಗಿ ಇದ್ದೆವು. ನಾವೇನೂ ಆತುರ ಪಡಲಿಲ್ಲ. 20 ತಿಂಗಳು ನಿಮಗೆ ಅವಕಾಶ ಕೊಟ್ಟೆವು. ಆ 20 ತಿಂಗಳ ಅವಕಾಶವನ್ನು ನೀವು ಸರಿಯಾಗಿ ಉಪಯೋಗ ಮಾಡಿಕೊಳ್ಳಲಿಲ್ಲ.

(ಗೊಂದಲ)

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು : ಇಲ್ಲಿಯವರೆಗೆ ವಿಶ್ವಾಸ ಮತದ ವಿಚಾರದಲ್ಲಿ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಕೆಳಕಂಡ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :-

"ಈ ಸದನವು ಶ್ರೀ ಹೆಚ್. ಡಿ. ಕುಮಾರಸ್ವಾಮಿಯವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

(ಗೊಂದಲ)

ಅಧ್ಯಕ್ಷರು : ಯಾರಾದರೂ ಒಬ್ಬರು ಮಾತನಾಡಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ನಾವು ಡಿವಿಜನ್ ಮಾಡಬೇಕೆಂದು ಕೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಸಭಾನಾಯಕರು ಇಲ್ಲವೇನು ? ಇಲ್ಲಿ ಏನೋ ಡಿವಿಷನ್ ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಡಿವಿಜನ್ ಮಾಡಿ.

(ಗೊಂದಲ)

ಅಧ್ಯಕ್ಷರು: ಬೆಲ್ ಹಾಕಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟಿರುವಂಥ ಒಂದು petition ತಮ್ಮ ಮುಂದೆ ಇದೆ. ಮತಕ್ಕೆ ಹಾಕುವ ಮೊದಲು ಅದನ್ನು ತೆಗೆದುಕೊಳ್ಳಬೇಕು. ನಾವು petition ಹಾಕಿದ್ದೇವೆ. ಆ petition ಬಗ್ಗೆ ತಾವು ತೀರ್ಮಾನ ಮಾಡಬೇಕೆಂದು ಹೈಕೋರ್ಟ್‌ನಲ್ಲಿ ಹೇಳಿದ್ದಾರೆ. ನಮ್ಮ petition ಗೆ ruling ಕೊಟ್ಟು ನೀವು ಮತಕ್ಕೆ ಹಾಕಿ. ನಮ್ಮ petition ಗೆ ruling ಕೊಟ್ಟು ನೀವು ಮತಕ್ಕೆ ಹಾಕಬೇಕು. ಇಲ್ಲದಿದ್ದರೆ ಅದು ಅಕ್ರಮವಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ನಿಮಗೆ ಕೊಟ್ಟಂಥ ಅರ್ಜಿ ಏನಾಯಿತು ? ಮೊದಲು ನಮ್ಮ ಅರ್ಜಿಗೆ ಉತ್ತರ ಕೊಡಿ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿರಿ.

(ಗೊಂದಲ)

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರೇ,

(ಗೊಂದಲ)

**ಅಧ್ಯಕ್ಷರು:** ನೀವು petition ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವ ಹಾಗಿಲ್ಲ.

(ಗೊಂದಲ)

**ಶ್ರೀ ವಾಟಾಳ್ ನಾಗರಾಜ್:** ನಾನು ತಮ್ಮ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

**ಅಧ್ಯಕ್ಷರು :** ಮಾನ್ಯ ಮುಖ್ಯ ನ್ಯಾಯಾಲಯದವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

**ಶ್ರೀ ವಾಟಾಳ್ ನಾಗರಾಜ್:** ನಾವು ಮನವಿ ಮಾಡುತ್ತಿದ್ದೇವೆ. ನಾವು ಕೊಟ್ಟಂಥ petition ಏನಾಯಿತು ?

(ಗೊಂದಲ)

**ಅಧ್ಯಕ್ಷರು :** ಕುಳಿತುಕೊಳ್ಳಿರಿ. ನನಗೆ ಗೊತ್ತಿದೆ. ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

(ಗೊಂದಲ)

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ನಾವು ಕೊಟ್ಟಂಥ ಅರ್ಜಿಗೆ ಮೊದಲು ರೂಲಿಂಗ್ ಕೊಡಿ. ನಂತರ ಮತಕ್ಕೆ ಹಾಕಿ ಅಷ್ಟೆ.

(ಗೊಂದಲ)

ಪ್ರಸ್ತಾವ ಏನೆಂದರೆ :

**" ಈ ಸದನವು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತ ಪಡಿಸುತ್ತದೆ."**

**ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು ):** ನಾನು ಡಿವಿಜನ್‌ಗೆ ಒತ್ತಾಯಿಸುತ್ತೇನೆ.

**ಸಭೆಯನ್ನು ವಿಭಜಿಸಲಾಯಿತು**

**ಅಧ್ಯಕ್ಷರು :** ವಿಭಜಿಸಿದಾಗ ಫಲಿತಾಂಶ ಹೀಗಿದೆ.

ಹೌದು – 138

ಇಲ್ಲ – 66

ಸೂಚನೆಯು "ಹೌದು" ಎನ್ನುವವರ ಪರವಾಗಿದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಶ್ವಾಸಮತ ಕೋರುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು.**

**ಅಧ್ಯಕ್ಷರು :** ಇಂದು ಬೆಳಗ್ಗೆಯಿಂದ ಇಷ್ಟು ಹೊತ್ತಿನವರೆಗೆ ಸದನದ ನಡವಳಿಕೆಗಳನ್ನು ನಡೆಸಲು ನನ್ನೊಂದಿಗೆ ಸಹಕರಿಸಿದ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು, ಸದನದ ಎಲ್ಲಾ ಸದಸ್ಯರು, ವಿವಿಧ ಮಾಧ್ಯಮಗಳ ಪ್ರತಿನಿಧಿಗಳು, ಅಧಿಕಾರಿಗಳು, ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ದಿನದ ನಡವಳಿಕೆಗಳನ್ನು ದೂರದರ್ಶನದಲ್ಲಿ ನೇರವಾಗಿ ಬಿತ್ತರಿಸಲು ಕ್ರಮ ಕೈಗೊಂಡ ನಿರ್ದೇಶಕರಿಗೂ ಸಹ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ದಿನಾಂಕ 9–2–2006 ರ ಬೆಳಿಗ್ಗೆ 00.32 ಗಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

*****